ಸಂಸ್ಕಾರ ತರಂಗಿಣೀ

ಪುಷ್ಪ – 15

ಮೊದಲಬಾರಿಗೆ ಕನ್ನಡದಲ್ಲಿ

ಭಾಷ್ಯಸಹಿತ ಆಪಸ್ತಂಬೀಯ ಅಪರಸೂತ್ರ –
ಕಪರ್ದೀಯ ಕಾರಿಕೆ – ವೈದ್ಯನಾಥೀಯ ಸ್ಮೃತಿಮುಕ್ತಾಫಲ –
ಯಲ್ಲಾಜೀಯ ಅನುಧರ್ಮಶಾಸ್ತ್ರ – ಸಾಯಣಾಚಾರ್ಯರ
ಮಂತ್ರಾರ್ಥ ಹಾಗೂ ಪ್ರಯೋಗಗಳನ್ನೊಳಗೊಂಡ

ಯಜುರ್ವೇದ ಪಿತೃಮೇಧಕಾಂಡ

ಭಾಗ – 2

ಶ್ರೀಮತಿ ಭಾರತೀ ಶರ್ಮಾ
ಅಕ್ಷರ ಜೋಡಣೆ

ವೇ॥ಬ್ರ॥ ಶ್ರೀ ಎ.ಸಿ. ಶಕ್ತಿಧರ ಶರ್ಮಾ
ಅನುವಾದಕ ಲೇಖಕರು
ಮತ್ತು ಪ್ರಕಾಶಕರು

ವಿದ್ವಾನ್ ವೇ॥ಬ್ರ॥ ಶ್ರೀ
ಚಂದ್ರಶೇಖರ ಶರ್ಮಾ ಅವಧಾನಿಗಳು
ಸಂಚಾಲಕರು

ವಿದ್ವಾನ್ ವೇ॥ಬ್ರ॥
ಶ್ರೀ ಶಿವಕುಮಾರ ಅವಧಾನಿಗಳು
ಮಾರ್ಗದರ್ಶಕರು

ವಿದ್ವಾನ್ ವೇ॥ಬ್ರ॥
ಶ್ರೀ ಕಿರಣ ಅವಧಾನಿಗಳು
ಪ್ರಧಾನ ಮಾರ್ಗದರ್ಶಕರು

ವೇದವೇದಾಂಗ
ವಿದ್ವಾನ್ ವೇ॥ಬ್ರ॥ ಶ್ರೀ ಅಶ್ವತ್ಥನಾರಾಯಣ ಅವಧಾನಿಗಳು
ಮಾರ್ಗದರ್ಶಕರು

ವಿದ್ವಾನ್ ವೇ॥ಬ್ರ॥
ಶ್ರೀ ವೆಂಕಟೇಶ ಅವಧಾನಿಗಳು
ಸಲಹೆಗಾರರು

ವಿದ್ವಾನ್ ವೇ॥ಬ್ರ॥
ಶ್ರೀ ಮೀನಾಕ್ಷೀಸುಂದರ ಘನಪಾಠಿಗಳು
ಮಾರ್ಗದರ್ಶಕರು

ಸಂಸ್ಕಾರ ತರಂಗಿಣೀ

ಪುಷ್ಪ – 15

ಮೊದಲಬಾರಿಗೆ ಕನ್ನಡದಲ್ಲಿ

ಭಾಷ್ಯಸಹಿತ ಆಪಸ್ತಂಬೀಯ ಅಪರಸೂತ್ರ –
ಕಪರ್ದೀಯ ಕಾರಿಕೆ – ವೈದ್ಯನಾಥೀಯ ಸ್ಮೃತಿಮುಕ್ತಾಫಲ
– ಯಲ್ಲಾಜೀಯ ಅನುಧರ್ಮಶಾಸ್ತ್ರ –
ಸಾಯಣಾಚಾರ್ಯರ ಮಂತ್ರಾರ್ಥ ಹಾಗೂ
ಪ್ರಯೋಗಗಳನ್ನೊಳಗೊಂಡ

ಯಜುರ್ವೇದ ಪಿತೃಮೇಧಕಾಂಡ

ಭಾಗ – 2

–: ವಿಷಯ ಸೂಚಿ :–

ಗ್ರಂಥನಾಮ – I
ವಿಷಯಸೂಚಿ – II
ಗುರುವಂದನೆ – IV
ಕೃತಜ್ಞತೆಗಳು – V
ಸಂಪಾದಕೀಯ – VI
ನಮ್ಮ ಪ್ರಕಟಣೆಗಳು – VII
ಹಿರಿಯರ ನುಡಿ – ವೇ॥ಬ್ರ॥ ಶ್ರೀ ಮಾರ್ಕಂಡೇಯಾವಧಾನಿಗಳು – IX
ಪ್ರಾಸ್ತಾವಿಕ ನುಡಿ – ಡಾ॥ವೇ॥ಬ್ರ॥ ಶ್ರೀಸುಬ್ರಾಯ ವಿ. ಭಟ್ಟರು – XII
ಸಂಪಾದಕರ ಮಾತು – ವೇ॥ಬ್ರ॥ ಶ್ರೀ ಎ.ಸಿ. ಶಕ್ತಿಧರ ಶರ್ಮರು – XVI
1. ಯಜುರ್ವೇದ ಅಪರಪ್ರಯೋಗ :– **1 - 42**
1 ನಗ್ನಪ್ರಚ್ಛಾದನಶ್ರಾದ್ಧ 1
2 ನಿತ್ಯವಿಧಿ ((ಶಿಲಾಸ್ಥಾಪನ, ವಾಸೋದಕ, ತಿಲೋದಕ, ಪಿಂಡಪ್ರದಾನ, ಏಕೋತ್ತರವೃದ್ಧಿಶ್ರಾದ್ಧ)) 7
3 ನವಶ್ರಾದ್ಧ 18
4 ಅಸ್ಥಿಸಂಚಯನ 24
5 ವೇದಿಕಾರಾಧನ ಪ್ರಭೂತಬಲಿ 31
6 ಅಸ್ಥಿಪ್ರಕ್ಷೇಪಣ 38
2. ಕಪರ್ದೀಯ ಅಪರಕಾರಿಕಾವಳಿ :– **43**
3. ಭಾಷ್ಯಸಹಿತ ಆಪಸ್ತಂಬೀಯ ಅಪರಸೂತ್ರ :– **56**
4. ವೈದ್ಯನಾಥೀಯ ಸ್ಮೃತಿ ಮುಕ್ತಾಫಲ :– **93 - 139**
1 ಪರ್ಯುಷಿತ ಪ್ರಾಯಶ್ಚಿತ್ತಂ – 93
2 ಶವಸ್ಯೋಪಹತ ಪ್ರಾಯಶ್ಚಿತ್ತಂ – 97
3 ನಿಶಾದಿ ಮರಣೇ ಪ್ರಾಯಶ್ಚಿತ್ತಂ – 98
4 ಸರ್ಪಹತಸ್ಯ ಪ್ರಾಯಶ್ಚಿತ್ತಂ – 99
5 ಅಶನ್ಯಾದಿ ದುರ್ಮರಣೇ ಪ್ರಾಯಶ್ಚಿತ್ತಂ 99
6 ದಾಹಾದಿ ಪ್ರೇತಕರ್ತಾರಃ – 101
7 ಯಮಲಯೋರ್ಜ್ಯೇಷ್ಠಸ್ಯ ನಿರ್ಣಯಃ – 106
8 ಔರಸಾಭಾವೇ ದತ್ತಾದಯಃ – 109

9 ಬ್ರಹ್ಮಚಾರಿಣಃ ಸಂಸ್ಕಾರಾಧಿಕಾರಃ – 112
10 ಅನುಪನೀತಸ್ಯಾಪಿ ಪಿತೃ ಸಂಸ್ಕಾರಾಧಿಕಾರಃ – 116
11 ದೀಕ್ಷಾಮಧ್ಯೇ ಮಾತಾಪಿತೃ ಸಂಸ್ಕಾರಾಧಿಕಾರಃ – 122
12 ವಿವಾಹಾದಿ ಕರ್ಮಮಧ್ಯೇ ಪಿತ್ರೋರ್ಮೃತೌ ತು ವಿಶೇಷಃ – 124
13 ಕ್ರಮೇಣ ಪ್ರೇತಕಾರ್ಯ ಕರ್ತೃ ವಿಷಯಃ – 124
14 ಔರಸಾದಿ ಲಕ್ಷಣಂ – 127
15 ಅತ ಏವ ಪುತ್ರಿಕಾಪುತ್ರಸ್ಯ ಪೌತ್ರಸಾಮ್ಯಂ ಉಕ್ತಂ – 131
5. ಯಲ್ಲಾಜೀಯ ಅನುಧರ್ಮಶಾಸ್ತ್ರ :– **140 - 207**
1 ಸ್ಥಳಭ್ರಂಶಜ ಪ್ರಾಯಶ್ಚಿತ್ತಂ 140
2 ಅಸ್ಥಿ ಚ ಭೃಗ್ವಾದೌ ವಿಧಿಃ – 145
3 ಶಿಲಾಲಕ್ಷಣಂ – 146
4 ಮೃತಾಗ್ನಿಹೋತ್ರಸ್ಯ ಪ್ರಯೋಗಃ – 147
5 ಪುನರ್ದಹನ ಪ್ರಯೋಗಃ – 151
6 ಸ್ಮಶಾನೇ ಶ್ರೌತಾಗ್ನೇಃ ನಾಶೇ – 154
7 ಅಗ್ನಿಚಿತಃ ಮೃತಸ್ಯ ಲೋಷ್ಟಚಿತೇಃ ಪ್ರಯೋಗಃ – 154
8 ಇಷ್ಟಕಾಚಯನಂ – 170
9 ಬ್ರಹ್ಮಮೇಧ ಸಂಗ್ರಹ ಕಾರಿಕಾಃ – 178
10 ಅಗ್ನಿಗುಪ್ತಿ ಹೋಮಃ – 180
11 ಪಲಾಶವಿಧಿಃ (ಪ್ರತಿಕೃತದಾಹ ಕ್ರಮಃ) 182
12 ಅಜ್ಞಾನಮೃತೌ (ಕಕ್ಷದಹನಂ) 184
13 ಪಿತೃಮೇಧ ಸಂಸ್ಕಾರಲೋಪಃ – 185
14 ಆಹಿತಾಗ್ನೇಃ ದುರ್ಮರಣ ವಿಷಯಃ – 187
15 ದುರ್ಮರಣ ಪ್ರಾಯಶ್ಚಿತ್ತಂ– 191
16 ದಾಹಾದ್ಯಾಶೌಚಂ – 200
17 ದುರ್ಮೃತಸ್ಯ ದಾಹಾದ್ಯಾಶೌಚಂ 201
18 ದುರ್ಮೃತಸ್ಯ ಸಂಸ್ಕಾರ ವಿಶೇಷಃ 202
19 ಬುದ್ಧಿಪೂರ್ವೇ 204
20 ಅಶಕ್ತೌತು 205
21 ಬುದ್ಧಿಪೂರ್ವಕ ಮರಣೇ – 206
6. ಸಾಯಣಾಚಾರ್ಯರ ಮಂತ್ರಾರ್ಥ :– **208 - 220**

ಗುರುವಂದನೆ

ಯಜ್ಞದೇಹ ಯಜುಶ್ಶಾಖಾ ಕಲ್ಪಸೂತ್ರ ಪ್ರವರ್ತಕ: ।
ಸಕಲಾಮ್ನಾಯವಿಜ್ಞೇಯಾತ್ ಆಪಸ್ತಂಬೋ ಮಹಾಮುನಿ: ॥
ಬೋಧಾಯನೋ ಯಂ ಭಗವಾನ್ ಮುಖ್ಯಶಿಷ್ಯಮಚೀಕರತ್ ।
ವಿಪಶ್ಚಿದ್ದಾಶತಾನ್ ಮೇಧಾಂ ಆಪಸ್ತಂಬಃ ಸ ಮೇ ಮುನಿ: ॥
ಸಂತಃ ತತ್ಸೂತ್ರಗಂಭೀರ ವ್ಯಾಖ್ಯಾಪ್ರಖ್ಯಾತ ವೈಭವಾ: ।
ಕಪರ್ದಿ ಧೂರ್ತಸ್ವಾಮ್ಯಾದ್ಯಾ: ಜೇಜೀಯಂತಾಂ ವಿಮತ್ಸರಾ: ॥
ಪ್ರಾಚೀನೇಷು ನಿಬಂಧನೇಷು ಗಹನಾನ್ ಸಂಗೃಹ್ಯಚಾರ್ಥಾನ್ ಬಹೂನ್ ।
ಅಲ್ಪಜ್ಞೇನ ವಿಧಾಸ್ಯತೇ ಪರಮಯಂ ವಿದ್ವಜ್ಜನಾನುಗ್ರಹಾತ್ ॥
ಧೀರಾ ಗ್ರಂಥಮಿಮಂ ವಿಲೋಕ್ಯ ಸುಧಿಯೋ ದೋಷಾನಪಾಸ್ಯಾದರಾತ್ ।
ನೀರಕ್ಷೀರನಯೇನ ಸದ್ಗುಣಗಣಾನ್ ಗೃಹ್ಣಂತ್ವಿತಿ ಪ್ರಾರ್ಥಯೇ ॥
ಜಗದ್ಗುರೂಣಾಂ ಕರುಣಾ ಅವಧೂತಾನುಗ್ರಹಶ್ಚಿರಂ ।
ಧನ್ಯೋಸ್ಮಿ ಶಕ್ತಿಧರೋಽಹಂ ಸುಲಬ್ಧೌಯುಗಪದ್ಮಯಾ ॥

॥ ಅವಧೂತ ಶ್ರೀ ಚಂದ್ರಶೇಖರಭಾರತೀ ಪರಮಹಂಸ ಜಗದ್ಗುರವೇ ನಮಃ ॥

॥ ಪೂಜ್ಯ ಶ್ರೀ ಭಾರತೀತೀರ್ಥ ಜಗದ್ಗುರು ಸಾರ್ವಭೌಮಾಯ ನಮಃ ॥

॥ ಶ್ರೀ ವಿಧುಶೇಖರಭಾರತೀ ಪರಮಹಂಸ ಜಗದ್ಗುರವೇ ನಮಃ॥
ಜಗದ್ಗುರು ಶ್ರೀ ಆದಿಶಂಕರಾಚಾರ್ಯ ಮಹಾಸಂಸ್ಥಾನಮ್,
ಶಾರದಾಪೀಠಮ್, ಶೃಂಗೇರಿ

॥ ವಾತ್ಸಲ್ಯನಿಧಿ ಅವಧೂತ ಶ್ರೀವೇಂಕಟಾಚಲಸದ್ಗುರವೇ ನಮಃ ॥
(ಎಲ್ಲವೂ ನಿನ್ನದಯ್ಯ ನನ್ನದೇನೂ ಇಲ್ಲವಯ್ಯಾ ಗುರುನಾಥ)

॥ ಮೈ ಫಕೀರ್ ಹೂಂ, ತೂ ಹೆ ಮಾಲಿಕ್, ಜೋಲೀ ಮೇರಿಭರ್‌ದಿ ॥

ಕೃತಜ್ಞತೆಗಳು

ಪವಿತ್ರವಾದ ಈ ಜ್ಞಾನಮಾರ್ಗದ ಕೈಂಕರ್ಯದಲ್ಲಿ ಸದಾ ನಮ್ಮೊಂದಿಗಿದ್ದು ಪ್ರೋತ್ಸಾಹಿಸುತ್ತಾ ಧಾರ್ಮಿಕ ಶ್ರದ್ಧೆಯೊಂದಿಗೆ, ಸಾಮಾಜಿಕ ಕಳಕಳಿಯ ಬದ್ಧತೆಯನ್ನು ತೋರುತ್ತಿರುವ ಈ ಮಹನೀಯರನ್ನು ಸ್ಮರಿಸುವುದು ನಮ್ಮ ಕರ್ತವ್ಯವಾಗಿದೆ. ಇವರೆಲ್ಲರಿಗೂ ಶ್ರೀ ಗುರುನಾಥರ ಸಾನ್ನಿಧ್ಯದ ಅನುಭೂತಿಯು ಸದಾಕಾಲ ಸಿಗುತ್ತಿರಲೆಂದು ನಾವು ಪ್ರಾರ್ಥಿಸುತ್ತೇವೆ.

1. **ಶ್ರೀಯುತ ಪದ್ಮಶ್ರೀ ವಿ.ಆರ್. ಗೌರೀಶಂಕರ್,**
   ಆಡಳಿತಾಧಿಕಾರಿಗಳು, ಜಗದ್ಗುರು ಶಾರದಾಪೀಠ ಮಹಾಸಂಸ್ಥಾನಮ್, ಶೃಂಗೇರಿ.

2. **ಪೂಜ್ಯ ಶ್ರೀ ಅದ್ವೈಯಾನಂದೇಂದ್ರ ಸ್ವಾಮಿಗಳು,** ಅದ್ವೈತಾಶ್ರಮ ಬೆಂಗಳೂರು.

3. **ಶ್ರೀಯುತ ವಿದ್ವಾನ್, ಮಾರ್ಕಂಡೇಯ ಅವಧಾನಿಗಳು**
   ಬೃಹಸ್ಪತ್ಯಾಚಾರ್ಯರು, ಮತ್ತೂರು.

4. **ವಿದ್ವಾನ್ ಡಾ॥ ಸುಬ್ರಾಯ ವಿ. ಭಟ್,** ಮೀಮಾಂಸಾ ಶಾಸ್ತ್ರ
   ಪ್ರಾಧ್ಯಾಪಕರು, ರಾಜೀವ್‌ಗಾಂಧಿ ಕೇಂದ್ರೀಯ ಸಂಸ್ಕೃತ ವಿದ್ಯಾಪೀಠ, ಶೃಂಗೇರಿ.

5. **ವೇದಬ್ರಹ್ಮ ಶ್ರೀಯುತ ಭಾನುಪ್ರಕಾಶ ಶರ್ಮರು,** ಶ್ರೀರಂಗಪಟ್ಟಣ.

6. **ಶ್ರೀಯುತ ಸುಬ್ರಹ್ಮಣ್ಯ ಪ್ರಸಾದ್‌ರವರು,** ಎಸ್.ಎಲ್.ಎನ್. ರೇಡಿಯೋಸ್

7. **ಶ್ರೀಯುತ ಗಣೇಶ್‌ರವರು,** ಉದ್ಯಮಿಗಳು, ಬೆಂಗಳೂರು.

8. **ಶ್ರೀಮತಿ ಶಾಂತಲಕ್ಷ್ಮಿ ಶರ್ಮಾ,** ಅಗ್ರಹಾರ

ಈ ಗ್ರಂಥವು ಹೊರಬರಲು ಕಾರಣರಾದ ಎಲ್ಲಾ ಮಹನೀಯರಿಗೂ ಕೃತಜ್ಞತೆಗಳು

ಸಂಪಾದಕೀಯ

ಸಂಪಾದಕರು, ಅನುವಾದಕ ಲೇಖಕರು ಮತ್ತು ಪ್ರಕಾಶಕರು

ವೇದಬ್ರಹ್ಮ ಶ್ರೀ ಎ.ಸಿ. ಶಕ್ತಿಧರ ಶರ್ಮಾ, ದೂ : 9686497982

ಸಂಚಾಲಕರು :

ವೇ॥ಬ್ರಾ॥ ಶ್ರೀ ವಿದ್ವಾನ್ ಚಂದ್ರಶೇಖರ ಶರ್ಮಾ ಅವಧಾನಿಗಳು, ಅಗ್ರಹಾರ.

ಪ್ರಧಾನ ಮಾರ್ಗದರ್ಶಕರು :

ವೇ॥ ಬ್ರಾ॥ ಶ್ರೀ ವಿದ್ವಾನ್ ಕಿರಣ ಅವಧಾನಿಗಳು, ಮತ್ತೂರು.

ಮಾರ್ಗದರ್ಶಕರು :

ವೇದವೇದಾಂಗ ವಿದ್ವಾನ್ ವೇ॥ ಬ್ರಾ॥ ಶ್ರೀ ಅಶ್ವತ್ಥನಾರಾಯಣ ಅವಧಾನಿಗಳು, ಮತ್ತೂರು.
ವೇ॥ ಬ್ರಾ॥ ಶ್ರೀ ವಿದ್ವಾನ್ ಮೀನಾಕ್ಷೀ ಸುಂದರ ಘನಪಾಠಿಗಳು,ಶ್ರೀಮಠ, ಶೃಂಗೇರಿ
ವೇ॥ ಬ್ರಾ॥ ಶ್ರೀ ವಿದ್ವಾನ್ ಶಿವಕುಮಾರ ಅವಧಾನಿಗಳು, ಮತ್ತೂರು.
ವೇ॥ ಬ್ರಾ॥ ಶ್ರೀ ವಿದ್ವಾನ್ ವೇಂಕಟೇಶ ಅವಧಾನಿಗಳು, ರಾಮನಾಥಪುರ.

ಅಕ್ಷರಜೋಡಣೆ	:	ಶ್ರೀಮತಿ ಭಾರತೀಶರ್ಮಾ, ವೇ॥ ಬ್ರಾ॥ ಶ್ರೀ ಶಕ್ತಿಧರಶರ್ಮಾ
ವರ್ಷ	:	ಮಾರ್ಚ್ 2020 (ವಿಕಾರಿಸಂವತ್ಸರ, ಫಾಲ್ಗುಣಮಾಸ)
ಪ್ರತಿಗಳು	:	500
ಪುಟಗಳು	:	XX + 220 = 240
ಪುಸ್ತಕದ ಅಳತೆ	:	ಡೆಮ್ಮಿ 1/8
ಪೇಪರ್	:	80 ಜಿ.ಎಸ್.ಎಂ. ಎನ್.ಎಸ್. ಮ್ಯಾಪ್ಲಿತೊ
ಹಕ್ಕುಗಳು	:	ಸಂಪೂರ್ಣ ಲೇಖಕರದ್ದು
ಮೌಲ್ಯ	:	**'ಅಮೂಲ್ಯ'**
ಪ್ರೋತ್ಸಾಹಯುತ ಕಾಣಿಕೆ	:	ರೂ. 210/–
ಮುದ್ರಕರು		ಶೃಂಗೇರಿಮಠ, ಬೆಂಗಳೂರು.

ಶ್ರೀ ಚೈತನ್ಯ ಗುರುನಾಥ ಪ್ರಕಾಶನದವರ ಪ್ರಕಟಣೆಗಳು

1. **ಅನುಷ್ಠಾನ ತರಂಗಿಣೀ**
   (ನಿತ್ಯ ಪೂಜಾವಿಧಿ, ಯತಿ ಆರಾಧನಾಪ್ರಯೋಗ ಮತ್ತು ಅವಧೂತಗೀತೆ ಶ್ಲೋಕ ಮತ್ತು ಅರ್ಥಸಹಿತ)
2. **ಸಂಸ್ಕಾರತರಂಗಿಣೀ ಪುಷ್ಪ – 1** (ಪುಂಸವನ ಮತ್ತು ಸೀಮಂತೋನ್ನಯನ)
3. **ಸಂಸ್ಕಾರತರಂಗಿಣೀ ಪುಷ್ಪ – 2**
   (ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ ಮತ್ತು ಅನ್ನಪ್ರಾಶನ)
4. **ಸಂಸ್ಕಾರತರಂಗಿಣೀ ಪುಷ್ಪ – 3**
   (ಚೂಡಾಕರ್ಮ – ಅಕ್ಷರಾರಂಭ ಮತ್ತು ಉಪನಯನ)
5. **ಸಂಸ್ಕಾರತರಂಗಿಣೀ ಪುಷ್ಪ – 4**
   (ಸಖರಾಯಪಟ್ಟಣದ ಪೂಜ್ಯ ಅವಧೂತ ಶ್ರೀ ವೇಂಕಟಾಚಲ ಸದ್ಗುರುನಾಥ ಮಹಾತ್ಮರ ಅಮೃತವಾಣಿ, ಭವದ್ಗೀತೆಯಲ್ಲಿ ಕರ್ಮಭಾಗದ ವಿಚಾರ, ವ್ರತಚತುಷ್ಟಯ, ಸಮಾವರ್ತನ, ವಿವಾಹ, ಗರ್ಭಾಧಾನ)
6. **ಸಂಸ್ಕಾರತರಂಗಿಣೀ ಸರಣಿಯ ಪುಷ್ಪ – 5**
   ಅನುಷ್ಠಾನ ತರಂಗಿಣೀ–ದ್ವಿತೀಯ ಮುದ್ರಣ
   (ಸಖರಾಯಪಟ್ಟಣದ ಪೂಜ್ಯ ಅವಧೂತ ಶ್ರೀ ವೇಂಕಟಾಚಲ ಸದ್ಗುರುನಾಥ ಮಹಾತ್ಮರ ಅಮೃತವಾಣಿ, ನಿತ್ಯ ಪೂಜಾವಿಧಿ, ಗುರುಗೀತಾ ಪಾರಾಯಣ ಕ್ರಮ ಅರ್ಥಸಹಿತ, ಯತಿ ಆರಾಧನಾ ಪ್ರಯೋಗ ಮತ್ತು ಅವಧೂತ ಗೀತೆ ಶ್ಲೋಕ ಮತ್ತು ಅರ್ಥಸಹಿತ)
7. **ವೇದನಾದ ಸಂಗಮ DVD ಭಾಗ – 1**
   (ಪ್ರಪ್ರಥಮಬಾರಿಗೆ ಧ್ವನಿಸುರುಳಿಯಲ್ಲಿ ಕೃಷ್ಣಯಜುರ್ವೇದ ತೈತ್ತಿರೀಯ ಶಾಖೆಯ ಬ್ರಾಹ್ಮಣ, ಆರಣ್ಯಕ, ಸಂಹಿತೆ, ಕ್ರಮ, ಘನ, ಉದಕಶಾಂತಿ ಮಂತ್ರಗಳು ಹಾಗೂ ದೇವರನಾಮ, ಕೀರ್ತನೆಗಳು.)
8. **ಸಂಸ್ಕಾರತರಂಗಿಣೀ ಪುಷ್ಪ – 6**
   (ಅನುಜ್ಞೆ, ಸಂಕಲ್ಪ, ಪುಣ್ಯಾಹ, ನಾಂದೀ, ಅಂಕುರಾರೋಪಣ, ರಕ್ಷಾಬಂಧನ, ಅಗ್ನಿಮುಖ {ಹೋಮ})
9. **ಸಂಸ್ಕಾರತರಂಗಿಣೀ ಪುಷ್ಪ – 7**
   (ಸ್ನಾನ, ಸರಳ ಶಾಸ್ತ್ರೀಯ ಸಂಧ್ಯಾವಂದನೆ, ಅಗ್ನಿಪುನಸ್ಸಂಧಾನ, ಔಪಾಸನ, ಬ್ರಹ್ಮಯಜ್ಞ, ವೈಶ್ವದೇವ, ವಿಧುರಾಗ್ನಿ ಸಂಧಾನ, ತರ್ಪಣ ಕ್ರಮ, ಯಜ್ಞೋಪವೀತ ಧಾರಣ ಕ್ರಮ,ಭೋಜನ ಪರಿಷೇಚನ ಕ್ರಮ)

10. **ಸಂಸ್ಕಾರತರಂಗಿಣೀ ಪುಷ್ಪ 1, 2 ದ್ವಿತೀಯ ಮುದ್ರಣ**
11. **ಸಂಸ್ಕಾರತರಂಗಿಣೀ ಪುಷ್ಪ – 3 ದ್ವಿತೀಯ ಮುದ್ರಣ**
12. **ಸಂಸ್ಕಾರತರಂಗಿಣೀ ಪುಷ್ಪ – 8**
    (ಉಪಾಕರ್ಮ, ಪ್ರಾಯಶ್ಚಿತ್ತ ಪ್ರಕರಣ, ಆಪಸ್ತಂಬ ಗೃಹ್ಯಸೂತ್ರದಲ್ಲಿ ಬರುವ ಪತಿಪತ್ನಿಯರ ಅನ್ಯೋನ್ಯವಿಚಾರ, ಶೀಘ್ರ ಮತ್ತು ಸುಲಭ ಪ್ರಸವವಿಚಾರ, ಕುಷ್ಠ, ಕ್ಷಯಾದಿರೋಗ ನಿವಾರಣಾ ವಿಚಾರ ಹಾಗೂ ಇನ್ನಿತರ ವಿಶೇಷ ವಿಚಾರಗಳು)
13. **ವೇದನಾದ ಸಂಗಮ DVD – 2**
    (ಭಜನೆ, ದೇವರನಾಮಗಳು, ಕಲಿಕಾ ವಿಧಾನದಲ್ಲಿ ಯಜುರ್ವೇದ ಸಂಧ್ಯಾವಂದನೆ ಮತ್ತು ನೈಜಧಾರ್ಮಿಕತೆ ಎಂಬ ವಿಷಯದ ಉಪನ್ಯಾಸ)
14. **ಸಂಸ್ಕಾರತರಂಗಿಣೀ ಪುಷ್ಪ – 9** (ಆಪಸ್ತಂಬೋಕ್ತ ಗೃಹನಿರ್ಮಾಣ – ಗೃಹ ಪ್ರವೇಶ ಮತ್ತು ಸ್ನಾನ, ಸಂಧ್ಯಾವಂದನೆ, ವೈಶ್ವದೇವ, ಬಲಿಹರಣ, ಪಂಚಮಹಾ ಯಜ್ಞಗಳಲ್ಲಿ ಬರುವ ಮಂತ್ರಗಳು ಮತ್ತು ಅವುಗಳಿಗೆ ಭಾಷ್ಯಾರ್ಥ)
15. **ಸಂಸ್ಕಾರತರಂಗಿಣೀ ಪುಷ್ಪ– 10**
    (ಧರ್ಮಸಂದೇಶ–ಸಂಸ್ಕೃತಿ, ಆಚಾರ, ಧರ್ಮಶಾಸ್ತ್ರಗಳ ವಿಶೇಷ ಸ್ವಾರಸ್ಯ ವಿಚಾರಗಳು)
16. **ಸಂಸ್ಕಾರತರಂಗಿಣೀ ಪುಷ್ಪ –11** (ಪ್ರಾಯಶ್ಚಿತ್ತ ಸರ್ವಶಾಂತಿ ಸಂಗ್ರಹ–ಭಾಗ–1)
17. **ಸಂಸ್ಕಾರತರಂಗಿಣೀ ಪುಷ್ಪ – 10 – ದ್ವಿತೀಯ ಮುದ್ರಣ**
18. **ಸಂಸ್ಕಾರತರಂಗಿಣೀ ಪುಷ್ಪ – 12 ಪ್ರೇತಕಾಂಡ ಭಾಗ–1**
    (ಶ್ರೀ ವೈದ್ಯನಾಥೀಯ ಸ್ಮೃತಿ ಮುಕ್ತಾಫಲ ಮತ್ತು ಶ್ರೀ ಎಲ್ಲಾಜೀಯ ಅನುಧರ್ಮ ಶಾಸ್ತ್ರ ಹಾಗೂ ವೆಂಕಟರಾಮಾವಧಾನೀಯ ಪ್ರಯೋಗ ರತ್ನಾಕರ)
19. **ಸಂಸ್ಕಾರತರಂಗಿಣೀ ಪುಷ್ಪ – 13 ಪಿತೃಮೇಧಕಾಂಡ ಭಾಗ–1**
    (ಶ್ರೀ ಯಜುರ್ವೇದ ಆಪಸ್ತಂಬ ಅಪರಸೂತ್ರ, ಗೋಪಾಲ + ಕಪರ್ದಿ ಭಾಷ್ಯ, ಕಾರಿಕೆ, ಪ್ರಯೋಗ ಮತ್ತು ಮಂತ್ರಗಳಿಗೆ ಸಾಯಣಭಾಷ್ಯ)
20. **ಸಂಸ್ಕಾರತರಂಗಿಣೀ ಪುಷ್ಪ – 4 – ದ್ವಿತೀಯ ಮುದ್ರಣ**
    (ವ್ರತಚತುಷ್ಟಯ – ಸಮಾವರ್ತನ – ವಿವಾಹ – ಗರ್ಭಾಧಾನ ಮತ್ತು ಮಂತ್ರಗಳಿಗೆ ಶ್ರೀ ಹರದತ್ತರ ಭಾಷ್ಯಾರ್ಥ ಮತ್ತು ಸೂತ್ರ – ಕಾರಿಕೆ – ಪ್ರಯೋಗ)
21. **ಸಂಸ್ಕಾರತರಂಗಿಣೀ ಪುಷ್ಪ – 14 –**
    (ಪ್ರಾಯಶ್ಚಿತ್ತ ಸರ್ವಶಾಂತಿ ಸಂಗ್ರಹ–ಭಾಗ–2)

ಹಿರಿಯರ ನುಡಿ

ಶ್ರೀ ಶಾರದಾ ಗುರು ಅನುಗ್ರಹ ಪಡೆದ ಶ್ರೀ ಶಕ್ತಿಧರ ಶರ್ಮ ನಮ್ಮ ನಾಡಿನ ಒಂದು ಶಕ್ತಿಯೇ ಸೈ. ಅವರ ಪರಿಶ್ರಮದಿಂದ ಪುರೋಹಿತರಿಗೆ ಮತ್ತು ಪ್ರಯೋಕ್ತೃಗಳಿಗೆ ಹಾಗೂ ಕರ್ಮಭಾಗದಲ್ಲಿ ಶ್ರದ್ಧೆಯಿರುವ ಎಲ್ಲರಿಗೂ ಸಂಸ್ಕಾರ ತರಂಗಿಣೀ ಎಂಬ ಪೂರ್ವ ಪ್ರಯೋಗ ಪುಸ್ತಕ ಬಂದದ್ದು ತುಂಬಾ ಉಪಕಾರವಾಗಿದೆ. ಈ ಕೈಪಿಡಿಯು ಜೊತೆಯಲ್ಲಿದ್ದರೆ ಗುರುವೇ ಜೊತೆಯಲ್ಲಿದ್ದಂತೆ. ನಿಮಗೆ ಯಾವ ವಿಷಯ ಬೇಕು? ಋಷಿವಾಕ್ಯ ಬೇಕೇ, ಕಪರ್ದಿಮುನಿಯ ಕಾರಿಕೆ ಇದೆ. ಸೂತ್ರಕಾರರ ವಾಕ್ಯ ಬೇಕೇ, ಆಪಸ್ತಂಬ ಗೃಹ್ಯಸೂತ್ರ ವಾಕ್ಯ ಇದೆ. ಪ್ರಯೋಗ ಬೇಕೇ, ಅಜಸ್ರಾಗ್ನಿ ಧಾರಕರೂ ಹಾಗೂ ಕರ್ಮಠರೂ ನಡೆಸಿಕೊಂಡು ಬಂದಿರುವ, ಸರಳಮಂತ್ರಾನುಪೂರ್ವಿ ಪ್ರಯೋಗ ಇದೆ.

ಅಲ್ಲದೆ ಕಪರ್ದಿಕಾರಿಕೆ – ಅದರ ಕನ್ನಡ ಅರ್ಥ...., ಆಪಸ್ತಂಬ ಗೃಹ್ಯಸೂತ್ರ – ಅದರ ಕನ್ನಡ ಸರಳ ಅನುವಾದ ...., ಪ್ರಯೋಗ ಅದರ ತಿಳಿ ಕನ್ನಡ ಅರ್ಥ...., ಈ ರೀತಿಯ ಶೈಲಿ ಇವರ ಎಲ್ಲಾ ಪುಸ್ತಕಗಳಲ್ಲೂ ಬಂದಿರುವುದೇ ವಿಶೇಷತೆಯ ಲಕ್ಷಣವಾಗಿದೆ.

ಈಗಾಗಲೇ ಪುಂಸವನ, ಸೀಮಂತ, ಜಾತಕರ್ಮ, ನಾಮಕರಣ, ಉಪನಿಷ್ಕ್ರಮಣ, ಅನ್ನಪ್ರಾಶನ, ಚೂಡಾಕರ್ಮ, ಅಕ್ಷರಾರಂಭ, ಉಪನಯನ, ವ್ರತಚತುಷ್ಟಯ, ಸಮಾವರ್ತನ, ವಿವಾಹ, ಗರ್ಭಾಧಾನ, ಸರಳ ಪೂಜಾಕ್ರಮ, ವಿಸ್ತಾರ ಪೂಜಾಕ್ರಮ, ಅವಧೂತ ಗೀತೆ, ಗುರುಗೀತೆ, ಯತಿ ಆರಾಧನಾ ಪ್ರಯೋಗ, ಸಂಕಲ್ಪ, ಪುಣ್ಯಾಹ, ನಾಂದಿ, ಅಂಕುರಾರೋಪಣ, ರಕ್ಷಾಬಂಧನ, ಅಗ್ನಿಮುಖ (ಹೋಮ), ಸ್ನಾನ, ಸರಳ ಶಾಸ್ತ್ರೀಯ ಸಂಧ್ಯಾವಂದನೆ, ಔಪಾಸನ, ಅಗ್ನಿಪುನಸ್ಸಂಧಾನ, ಬ್ರಹ್ಮಯಜ್ಞ, ವೈಶ್ವದೇವ, ತರ್ಪಣಕ್ರಮ, ಭೋಜನವಿಷಯ, ಯಜ್ಞೋಪವೀತ ಧಾರಣ ವಿಚಾರ, ಉಪಾಕರ್ಮ, ಗೃಹಪ್ರವೇಶ, ಪ್ರಾಯಶ್ಚಿತ್ತ ಪ್ರಕರಣ, ಇಷ್ಟೂ ಕರ್ಮಗಳನ್ನು ಒಳಗೊಂಡಂತಹ ಹನ್ನೊಂದು ಗ್ರಂಥಗಳು ಸಮಾಜಕ್ಕೆ ಬಂದಾಗಿದೆ. ಹಾಗೂ ಇವುಗಳಲ್ಲಿ ಮೊದಲ ಎಂಟು ಪುಸ್ತಕಗಳು ದ್ವಿತೀಯ ಮುದ್ರಣವನ್ನೂ ಕಂಡಿವೆ.

ಮತ್ತೂ ಮುಂದಿನವುಗಳಲ್ಲಿ ಅಂತ್ಯೇಷ್ಟಿ, ಶ್ರಾದ್ಧ, ಷೋಡಶ ಸಂಸ್ಕಾರಗಳಲ್ಲಿ ಬರುವ ಅಷ್ಟೂ ಮಂತ್ರಗಳಿಗೆ ಕನ್ನಡದಲ್ಲಿ ಭಾಷ್ಯ ಮತ್ತು ಅರ್ಥ ಇಷ್ಟೂ ಪುಸ್ತಕಗಳು ಬರಲಿಕ್ಕಿವೆ. ಇದಲ್ಲದೆ ಪ್ರಪ್ರಥಮ ಬಾರಿಗೆ ಸುವ್ಯವಸ್ಥಿತ (ಡಿಜಿಟಲ್ ಸ್ಟುಡಿಯೋ ರೆಕಾರ್ಡಿಂಗ್) ಡಿ.ವಿ.ಡಿ. ಧ್ವನಿ ಸುರುಳಿಗಳಲ್ಲಿ ಕೃಷ್ಣಯಜುರ್ವೇದ ತೈತ್ತಿರೀಯ ಶಾಖೆಯ ಸಂಪೂರ್ಣ ಬ್ರಾಹ್ಮಣ – ಆರಣ್ಯಕ – 7 ಕಾಂಡಗಳಿಂದ 102 ಸಂಹಿತಾ ಅನುವಾಕ – ಅವುಗಳಿಗೆ ಕ್ರಮಪಾಠ – 100 ಕ್ಕೂ ಹೆಚ್ಚು ಮಂತ್ರಗಳಿಗೆ ಘನಪಾಠ ಹಾಗೂ ಶರ್ಮರ ಮಡದಿಯಾದ ಚಿ. ಸೌ. ಭಾರತಿಯವರಭಾವ ಪ್ರಧಾನವಾದ ಉತ್ತಮ ಶಾರೀರದಿಂದ 150 ಕ್ಕೂ ಹೆಚ್ಚು ಭಜನೆ, ದೇವರನಾಮಗಳನ್ನು –'ವೇದನಾದ ಸಂಗಮ' ಎಂಬ ಹೆಸರಿನಿಂದ ಶರ್ಮಾ ದಂಪತಿಗಳು ಹೊರತಂದು, ವೇದ ನಾದಗಳನ್ನು ಹೇಳುವವರಿಗೆ ಮಾತ್ರವಲ್ಲದೆ ಕೇಳುವವರಿಗೂ 'ಶ್ರುತಂ ಹರತಿ ಪಾಪಾನಿ ತಥಾ ಆರೋಗ್ಯಂ ಪ್ರಯಚ್ಛತಿ' ಎಂಬ ಸ್ಮೃತಿ ವಾಕ್ಯದಂತೆ ಆರೋಗ್ಯ ಹಾಗೂ ಯಶಸ್ಸನ್ನು ಪಡೆಯುವ ಉತ್ತಮ ಅವಕಾಶವನ್ನು ಒದಗಿಸಿದ್ದಾರೆ.

ಇದಲ್ಲದೆ ಶೃಂಗೇರಿ ಶಾರದಾಪೀಠ ಸಂಸ್ಥಾನದವರು ಕನ್ನಡ, ತೆಲಗು, ತಮಿಳು, ಇಂಗ್ಲೀಷ್ ಭಾಷೆಗಳಲ್ಲಿ ಬಿಡುಗಡೆ ಮಾಡಿರುವ, ಶಂಕರಾಚಾರ್ಯರ ಜೀವನ ಚರಿತ್ರೆಯನ್ನು ನಿಖರವಾಗಿ ತಿಳಿಸುವ ' ಸಾಕ್ಷ್ಯಚಿತ್ರ'ದಲ್ಲಿ ಶಂಕರಾಚಾರ್ಯರ ಪಾತ್ರವನ್ನು ಶರ್ಮರು ಅಚ್ಚುಕಟ್ಟಾಗಿ ನಿರ್ವಹಿಸಿರುತ್ತಾರೆ. ಹಾಗೂ ಶ್ರೀಮಠದವರು ಸಮಾಜದ ಸಮಸ್ತ ಜನರಿಗೂ ಕಲಿಕೆಗೆ ಅನುಕೂಲವಾಗುವಂತೆ ಹೊರತಂದಿರುವ 'ಶ್ರೀ ಲಲಿತಾ ಸಹಸ್ರನಾಮ', 'ಶ್ರೀ ವಿಷ್ಣು ಸಹಸ್ರನಾಮ' ಧ್ವನಿ ಸುರುಳಿಗಳಲ್ಲೂ ಮತ್ತು ನಿತ್ಯ ಪೂಜೆಗಳಿಗೆ ಅಗತ್ಯವಾಗಿ ಬೇಕಾದ ಮಂತ್ರ ಭಾಗಗಳಾದ ರುದ್ರ, ಚಮಕ, ಪುರುಷಸೂಕ್ತ, ಶ್ರೀ ಸೂಕ್ತ, ನಾರಾಯಣ ಸೂಕ್ತ, ದುರ್ಗಾ ಸೂಕ್ತಗಳಿರುವ ಧ್ವನಿ ಸುರುಳಿಗಳಲ್ಲೂ ಶರ್ಮರು ತಮ್ಮ ಸ್ಪಷ್ಟ ಹಾಗೂ ಸುಶ್ರಾವ್ಯ ಕಂಠಸಿರಿಯನ್ನು ಒದಗಿಸಿರುತ್ತಾರೆ.

ಅಲ್ಲದೆ ಬೆಂಗಳೂರಿನ ಪ್ರತಿಷ್ಠಿತ ಶ್ರೀ ಸೀತಾರಾಮಾಂಜನೇಯ ವೇದಪಾಠ ಶಾಲೆಯವರು, ಶೃಂಗೇರಿ ಜಗದ್ಗುರು ಮಹಾ ಸ್ವಾಮಿಗಳವರ ಆದೇಶ ಹಾಗೂ ಸೂಚನೆಯಂತೆ ಕೊಡಲ್ಪಡುವ ಗೌರವ ಸನ್ಮಾನಕ್ಕೆ 2004ರಲ್ಲಿ ಶ್ರೀಯುತ ಶರ್ಮರು 'ವೇದಭೂಷಣ' ಎಂಬ ಬಿರುದಿನೊಂದಿಗೆ ಭಾಜನಾಗಿರುತ್ತಾರೆ ಹಾಗೂ 2012ರಲ್ಲಿ

ಶಿವಮೊಗ್ಗ ನಗರದ ವೈದಿಕ ಪರಿಷತ್ ವತಿಯಿಂದಲೂ ಮತ್ತು ದೆಹಲಿಯ ಭಾರತೀಯ ಜ್ಯೋತಿರ್ವಿಜ್ಞಾನ ಸಂಸ್ಥೆಯಿಂದಲೂ ಹಾಗೂ 2013ರಲ್ಲಿ ರೋಟರಿ ಸಂಸ್ಥೆಯಿಂದಲೂ ಮತ್ತೂ 2019ರಲ್ಲಿ ಮೈಸೂರಿನ ಅರ್ಜುನ ಗುರೂಜೀ ಅವರಿಂದ 'ಗುರುಸೇವಾ ರತ್ನ' ಸನ್ಮಾನಕ್ಕೂ ಭಾಜನರಾಗಿರುತ್ತಾರೆ.

ಈ ಎಲ್ಲಾ ಸಾಹಸ ಕೆಲಸಗಳಿಗೆ ಪ್ರೇರಕ ಶಕ್ತಿ ಯಾವುದೋ ನಾನರಿಯೇ? ಬಹುಶ: ಈ ಪುಸ್ತಕ ಕಾರ್ಯಗಳಲ್ಲಿ ಕಂಡುಬರುವ ಗುರು ನಿಷ್ಠೆ–ಭಕ್ತಿಗಳೇ ಆಂತರ್ಯದ ಶಕ್ತಿಯಾಗಿರಬೇಕು. ಇವನ್ನೆಲ್ಲಾ ಮಾಡುತ್ತಿರುವುದು ಸಾಹಸೀ, 38 ರ ವಯೋಮಾನದ ತರುಣ, ಜಾಣ ವೇ.ಬ್ರ.ಶ್ರೀ. ಎ.ಸಿ. ಶಕ್ತಿಧರ ಶರ್ಮ.ಇವರ ಶ್ರಮಕ್ಕೆ ಬೆಲೆ ಕಟ್ಟಲಾರೆ.ಈ ಕಾರ್ಯಕ್ಕೆ ಶ್ರೀಮಾನ್ ಚಂದ್ರಶೇಖರ ಶರ್ಮಾರವರು ಅಗ್ರಹಾರ (ಶ್ರೀಯುತ ಶರ್ಮರ ತಂದೆಯವರು), ಶ್ರೀಮಾನ್ ವೇಂಕಟೇಶ ಅವಧಾನಿಗಳು ರಾಮನಾಥಪುರ ಇವರುಗಳ ಸಲಹೆ ಪಡೆದಿದ್ದಾರೆ. ಅಲ್ಲದೇ ಮತ್ತೂರಿನ ತರುಣ ಅಧ್ವರ್ಯು ಶ್ರೀಮಾನ್ ಶಿವಕುಮಾರ ಅವಧಾನಿ, ತರುಣ ವಿದ್ವಾನ್ ಶ್ರೀಮಾನ್ ಕಿರಣ ಅವಧಾನಿ ಇವರುಗಳ ಪ್ರೀತಿ, ವಾತ್ಸಲ್ಯ ಯುಕ್ತ ಅಮೂಲ್ಯ ಮಾರ್ಗದರ್ಶನ ಪಡೆದಿದ್ದಾರೆ.

ಪುರೋಹಿತರ ಅಭಾವದಲ್ಲಿ, ಮಂತ್ರಾಧ್ಯಯನ ಆದವರೆಲ್ಲಾ ಈ ಪುಸ್ತಕಗಳ ಸಹಾಯದಿಂದ, ಒದಗಿಬರುವ ಸಂಸ್ಕಾರ ಮಂಗಳ ಕಾರ್ಯಗಳನ್ನು (ಶಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯ ವ್ಯವಸ್ಥಿತೌ) ಎಂಬಂತೆ ಶಾಸ್ತ್ರೀಯ ತಿಳುವಳಿಕೆಯನ್ನು ಪಡೆದು ಯಥಾ ವಿಧಿಯಂತೆ ನಡೆಸಬಹುದಾಗಿದೆ. ಪ್ರತಿಯೊಬ್ಬರ ಮನೆಯಲ್ಲೂ ಈ ಸಂಸ್ಕಾರ ತರಂಗಿಣೀ ಪುಸ್ತಕಗಳಿದ್ದರೆ ಪ್ರತಿ ಮನೆಯಲ್ಲೂ ಒಬ್ಬ ಪುರೋಹಿತರು ಇದ್ದಂತೆ, ಏಕೆಂದರೆ ಕರ್ಮಾಚರಣೆಯ ವಿಚಾರದಲ್ಲಿ, ಪ್ರತಿಯೊಬ್ಬರೂ ಶಾಸ್ತ್ರೀಯ ತಿಳುವಳಿಕೆಯನ್ನು ಹೊಂದುವುದು ಅತ್ಯಂತ ಅವಶ್ಯಕವೂ, ಅಧಿಕಾರಯುತವೂ ಆಗಿದೆ. ಈ ದೃಷ್ಟಿಯಲ್ಲಿ ಈ ಪುಸ್ತಕಗಳು ತ್ರಿಮತಸ್ಥ ಬ್ರಾಹ್ಮಣರಿಗೂ ಅವಶ್ಯ ಸಂಗ್ರಾಹ್ಯವೇ ಆಗಿದೆ. ಶ್ರೀ ಶಕ್ತಿಧರ ಶರ್ಮರು ಶೃಂಗೇರಿ ಗುರುಪೀಠದಲ್ಲಿ ಇದ್ದುಕೊಂಡು ಅಧ್ಯಯನ ಮಾಡಿದವರು, ಇವರಿಂದ ಇನ್ನೂ ಅನೇಕ ಜನೋಪಕಾರಕ ಪುಸ್ತಕಗಳು ಬರಲೀ ಎಂದು ಆಶೀರ್ವದಿಸುತ್ತೇನೆ.

–ಇತಿ ಶಮ್–

ವೇ॥ ಬ್ರ॥ ಶ್ರೀ ಮಾರ್ಕಂಡೇಯಾವಧಾನಿ, ಮತ್ತೂರು, ಶಿವಮೊಗ್ಗ

ಪ್ರಾಸ್ತಾವಿಕ ನುಡಿ

ಭಾರತೀಯ ಸನಾತನ ವೈದಿಕ ಸಂಸ್ಕೃತಿಯ ಜೀವಾಳವೇ ವೇದಗಳು. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳಲ್ಲಿ ಮೊದಲಿನ ಮೂರು ಸಾಧನಗಳು ಹಾಗೂ ಕೊನೆಯದಾದ ನಿತ್ಯ ನಿರತಿಶಯ ಸುಖ ಸ್ವರೂಪವಾದ ಮೋಕ್ಷವು ಸಾಧಿಸಲ್ಪಡಬೇಕಾದದ್ದು, ಅದನ್ನು ಸಾಧಿಸಿದಾಗಲೇ ಮನುಷ್ಯ ಜೀವನ ಸಾರ್ಥಕವಾಗುವುದು. ಅದಕ್ಕೆ ಧರ್ಮವೇ ಮೂಲ ಎಂಬುದಾಗಿ ಬೋಧಿಸಿ, ಅವುಗಳ ಸ್ವರೂಪ ಹಾಗೂ ಪ್ರಾಪ್ಯುಪಾಯವನ್ನು ತಿಳಿಸಿ ಮನುಷ್ಯನನ್ನು ಅಧ್ಯಾತ್ಮದೆಡೆಗೆ ಒಯ್ಯುವ ಏಕಮಾತ್ರ ಸಾಧನವಾಗಿರುವುದರಿಂದ ವೇದಗಳು ಪರಮ ಪೂಜನೀಯವಾದವುಗಳು.

ವೇದವಿಹಿತವಾದ ಯಾಗಾದಿ ಕರ್ಮಗಳೇ ಧರ್ಮ. ಧರ್ಮವೇ ಶ್ರೇಯಸ್ಸಾಧನ. ವೇದದಲ್ಲಿ ತಿಳಿಸಿದ ಈ ಯಜ್ಞಯಾಗಾದಿಗಳನ್ನು ಅರ್ಥಜ್ಞಾನ ಸಹಿತವಾಗಿ ಶ್ರದ್ಧೆಯಿಂದ ಕ್ರಮವಾಗಿ ಅನುಷ್ಠಾನ ಮಾಡಿದಾಗ ವಿಹಿತವಾದ ಫಲವನ್ನು ದೊರಕಿಸಿಕೊಡುತ್ತದೆ ಎಂಬುದು ಆರ್ಷ ಸಿದ್ಧಾಂತ.

ವೇದದ ತಾತ್ಪರ್ಯಾರ್ಥವನ್ನೇ ನಿರ್ಣಯಿಸಲು ಹೊರಟ ಪೂರ್ವಮೀಮಾಂಸಾ ಶಾಸ್ತ್ರದಲ್ಲಿ ಸೂತ್ರಕಾರರಾದ ಜೈಮಿನೀ ಮಹರ್ಷಿಗಳೂ ಸಹ 'ಚೋದನಾ ಲಕ್ಷಣೋsರ್ಥೋ ಧರ್ಮ:' ಎಂಬುದಾಗಿ ವೇದದಲ್ಲಿ ತಿಳಿಸಿದ ಶ್ರೇಯಸ್ಸಧನೀಭೂತವಾದ ಯಾಗಾದಿಗಳೇ ಧರ್ಮವೆಂದು ತಿಳಿಸಿ, ವೇದದ ತಾತ್ಪರ್ಯಾರ್ಥವನ್ನೇ ಬಹು ವಿಸ್ತಾರವಾಗಿ ವಿಮರ್ಶಿಸಿದ್ದಾರೆ. ಮೀಮಾಂಸಾ ಭಾಷ್ಯಕಾರರಾದ ಶಬರ ಸ್ವಾಮಿಗಳೂ ಸಹ 'ಸ ಹಿ ನಿಶ್ರೇಯಸೇನ ಪುರುಷಂ ಸಂಯುನಕ್ತೀತಿ ಪ್ರತಿಜಾನೀಮಹೇ' ಎಂಬುದಾಗಿ ಧರ್ಮವೇ ಐಹಿಕ ಮತ್ತು ಆಮುಷ್ಮಿಕ ಸುಖ ಸಾಧನವೆಂದು ಸ್ಪಷ್ಟಪಡಿಸಿದ್ದಾರೆ.

ವೇದದಲ್ಲಿ ವಿಹಿತವಾದ ಧರ್ಮವೆಂಬುದಾಗಿ ಪ್ರಚುರಪಡಿಸಿದ ಯಾಗಾದಿ ರೂಪವಾದ ಕರ್ಮಗಳನ್ನು ಪ್ರಧಾನವಾಗಿ ನಿತ್ಯ, ನೈಮಿತ್ತಿಕ, ಮತ್ತು ಕಾಮ್ಯವೆಂಬುದಾಗಿ ಮೂರು ವಿಧವಾಗಿ ವಿಭಾಗಿಸಿದ್ದಾರೆ. ರಾಜಾಜ್ಞೆಯಂತೆ ನಿಯಮೇನ ಮಾಡಲೇಬೇಕಾದದ್ದಾಗಿ ವಿಹಿತವಾದ ಕರ್ಮಗಳು – ನಿತ್ಯಕರ್ಮಗಳು. ಉದಾ– ಸಂಧ್ಯಾವಂದನೆ, ಔಪಾಸನೆ, ಅಗ್ನಿಹೋತ್ರಾದಿಗಳು. ಪಾಪಕ್ಷಯವೇ ಈ ಕರ್ಮಗಳ ಫಲ.

ನಿಮಿತ್ತ ಒದಗಿದಾಗ ನಿಯಮೇನ ಮಾಡಲೇಬೇಕಾದ ಕರ್ಮಗಳು – ನೈಮಿತ್ತಿಕ ಕರ್ಮಗಳು. ಉದಾ– ಗ್ರಹಣ ಪ್ರಯುಕ್ತವಾದ ಸ್ನಾನಾದಿಗಳು, ಮಗು ಹುಟ್ಟಿದಾಗ

ಮಾಡಬೇಕಾದ ವೈಶ್ವಾನರೇಷ್ಟಿ ಮೊದಲಾದ ಶ್ರೌತಸ್ಮಾರ್ತ ಕರ್ಮಗಳು, ಈ ಕರ್ಮಗಳಿಗೂ ಪಾಪಕ್ಷಯವೇ ಫಲ.

ಪಶುಪುತ್ರಾದಿ ಐಶ್ವರ್ಯ ಕಾಮನೆಯಿಂದ ಅನುಷ್ಠಾನ ಮಾಡುವ ಕರ್ಮಗಳು – ಕಾಮ್ಯಕರ್ಮಗಳು. ಉದಾ– ಸೋಮಯಾಗ, ಕಾರೀರೀಷ್ಟಿ, ಪೌಷ್ಟಿಕಾದಿ ಸ್ಮೃತ್ಯುಕ್ತಕರ್ಮಗಳು, ಇವುಗಳಿಗೆ ಆಯಾವಿಧಿ ವಾಕ್ಯಗಳಲ್ಲಿ ಅಥವಾ ಪ್ರಕರಣಗಳಲ್ಲಿ ತಿಳಿಸಿದ ಸ್ವರ್ಗಾದಿಗಳೇ ಫಲ.

ಈ ಎಲ್ಲವನ್ನೂ ಅರ್ಥಜ್ಞಾನ ಪುರಸ್ಸರ, ವಿಧಿವತ್ತಾಗಿ ಆಚರಿಸಿದಾಗಲೇ ವಿಹಿತವಾದ ಫಲ ದೊರಕುವುದು. ಆಗಲೇ ಅಧ್ಯಯನ ಮಾಡಿದ ವೇದವು ಸಫಲವಾಗುವುದು. ಅಂದರೆ ಮೊದಲು ವೇದಾಧ್ಯಯನ, ನಂತರ ಅಧ್ಯಯನ ಮಾಡಿದ ವೇದದ ಅರ್ಥಜ್ಞಾನ, ಅರ್ಥಜ್ಞಾನ ತಿಳಿದು ಕರ್ಮಾನುಷ್ಠಾನ, ಅದರಿಂದ ಪಾಪಕ್ಷಯ, ಸ್ವರ್ಗಾದಿ ಸಿದ್ಧಿ. ಹಾಗಾಗಿಯೇ ವೇದಗಳ ಅರ್ಥಜ್ಞಾನ, ಉಚ್ಚಾರಣೆ, ವೇದವಿಹಿತ ಕರ್ಮಾನುಷ್ಠಾನದ ಸ್ವರೂಪ ಪರಿಚಯಾದಿಗಳಿಗೆ ಅನಿವಾರ್ಯವಾದ ವೇದದ ಆರು ಅಂಗಗಳನ್ನು ಅಧ್ಯಯನ ಮಾಡಬೇಕೆಂದು, 'ನಿಷ್ಕಾರಣೋ ಷಡಂಗೋ ವೇದೋ ಅಧ್ಯೇಯೋಜ್ಞೇಯಶ್ಚ' ಇತ್ಯಾದಿ ಶ್ರುತಿಗಳು ತಿಳಿಸುತ್ತಿವೆ. ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೌತಿಷ, ಕಲ್ಪ ಇವು ವೇದದ ಆರು ಅಂಗಗಳು.

ಯಜ್ಞಗಳ ಅನುಷ್ಠಾನ ವಿಧಾನವನ್ನು (ಸ್ವರೂಪ) ತಿಳಿಸುವ ಗ್ರಂಥವೇ ಕಲ್ಪ. ಯಾಗಗಳ ಪ್ರಯೋಗ (ಅನುಷ್ಠಾನ)ವನ್ನೇ ತಿಳಿಸುವುದರಿಂದ ಈ ಗ್ರಂಥಗಳಿಗೂ ಪ್ರಯೋಗ ಗ್ರಂಥಗಳು ಎಂದು ಹೆಸರು ಬಂದಿದೆ. ಸಂಜ್ಞಾ, ಪರಿಭಾಷಾದಿಗಳಿಂದ ಅವುಗಳ(ಯಾಗಗಳ) ಲಕ್ಷಣವನ್ನು ತಿಳಿಸುವ ಸೂತ್ರಗಳಿಗೆ ಕಲ್ಪಸೂತ್ರಗಳು ಎಂದು ಹೆಸರು.

ಈ ಕಲ್ಪಗಳು ಬೇರೆ ಬೇರೆ ವೇದ ಶಾಖೆಗಳಲ್ಲಿ ಬೇರೆ ಬೇರೆಯಾಗಿವೆ, ಹಾಗೆಯೇ ಒಂದೇ ಶಾಖೆಯಲ್ಲೂ ಅನೇಕ ಸೂತ್ರಗಳು ಕಾಣಸಿಗುತ್ತವೆ. ಋಕ್ ಶಾಖಾನುಯಾಯಿಗಳಿಗೆ – ಆಶ್ವಲಾಯನ ಕಲ್ಪಸೂತ್ರ, ಸಾಮವೇದಿಗಳಿಗೆ – ದ್ರಾಹ್ಯಾಯಣ ಸೂತ್ರ, ಯಜುರ್ವೇದದಲ್ಲೂ ಶುಕ್ಲ ಯಜುಶ್ಶಾಖೆಯಲ್ಲಿ ಭಿನ್ನ ಸೂತ್ರಗಳು ಹಾಗೂ ತೈತ್ತಿರೀಯ ಯಜುಶ್ಶಾಖೆಯಲ್ಲಿ – ಬೋಧಾಯನೀಯ, ಆಪಸ್ತಂಬೀಯ, ಹಿರಣ್ಯಕೇಶೀಯ ಕಲ್ಪಸೂತ್ರಗಳು ಈಗ ಪ್ರಚಲಿತವಿರುವ ಮುಖ್ಯ ಕಲ್ಪಸೂತ್ರಗಳು. ಈ ಕಲ್ಪಸೂತ್ರಗಳ ಪರಂಪರೆಯನ್ನೇ ಗೋತ್ರಪ್ರವರವನ್ನು ಉಚ್ಚರಿಸುವಾಗ ಹೇಳುವ ಸೂತ್ರಗಳು ತಿಳಿಸುತ್ತವೆ.

ಶ್ರೌತಸೂತ್ರ, ಗೃಹ್ಯಸೂತ್ರ, ಧರ್ಮಸೂತ್ರ ಮತ್ತು ಯಜುರ್ವೇದ ಕಲ್ಪದಲ್ಲಿ ಶುಲ್ಬಸೂತ್ರ – ಇವುಗಳ ಸಮುದಾಯವನ್ನೇ ಕಲ್ಪಸೂತ್ರ ಎಂದು ಕರೆದಿದ್ದಾರೆ. ಶ್ರೌತ ಸೂತ್ರಗಳು, ಸಾಕ್ಷಾತ್‌ಶ್ರೌತಕರ್ಮಗಳ ಅನುಷ್ಠಾನ ಪ್ರಕಾರವನ್ನು ಮತ್ತು ಸಂಬಂಧಿಸಿದ ಮಂತ್ರವಿನಿಯೋಗಾದಿಗಳನ್ನು ತಿಳಿಸುತ್ತವೆ. ಗೃಹ್ಯ ಸೂತ್ರಗಳು, ಗೃಹಸ್ಥರು ಅನಷ್ಠಾನಮಾಡ ಬೇಕಾದ ಯಾಗಗಳನ್ನು, ಔಪಾಸನಾಗ್ನಿಯಲ್ಲಿ ಮಾಡುವ ಕರ್ಮಗಳನ್ನು, ಮತ್ತು ಉಪನಯನವೇ ಮೊದಲಾದ ಸಂಸ್ಕಾರಗಳ ಅನುಷ್ಠಾನ ಕ್ರಮವನ್ನು ತಿಳಿಸುತ್ತವೆ. ಧರ್ಮ ಸೂತ್ರಗಳು, ಯಜಮಾನ–ಋತ್ವಿಜರುಗಳಿಗೆ ಸಂಬಂಧಿಸಿದ ನಿಯಮಗಳನ್ನು, ಬ್ರಾಹ್ಮಣ–ಕ್ಷತ್ರಿಯಾದಿ ವರ್ಣಗಳಿಗೆ ಸಂಬಂಧಿಸಿದ ಧರ್ಮಪಾಲನೆಯ ಬಗ್ಗೆ, ಬ್ರಹ್ಮಚರ್ಯಾದಿ ಆಶ್ರಮ ಧರ್ಮಗಳು ಮತ್ತು ಸಮಸ್ತ ಮನುಕುಲಕ್ಕೆ ಸಂಬಂಧಿಸಿದ ಎಲ್ಲಾ ಸಾಮಾನ್ಯಧರ್ಮ ವಿಚಾರಗಳನ್ನೂ ತಿಳಿಸುತ್ತವೆ. ಶುಲ್ಬ ಸೂತ್ರಗಳು, ಯಜ್ಞಾನುಷ್ಠಾನಕ್ಕೆ ಉಪಯುಕ್ತವಾದ ಯಜ್ಞಶಾಲಾ ನಿರ್ಮಾಣ ಸಂಬಂಧಿ ವಿಚಾರಗಳನ್ನು ತಿಳಿಸುತ್ತವೆ.

ಹೀಗೆ ಈ ಎಲ್ಲಾ ವಿಭಾಗಗಳೂ ಸಾಕ್ಷಾತ್ತಾಗಿ, ಅಥವಾ ಪರಂಪರೆಯಿಂದ ಯಜ್ಞಗಳ ಅನುಷ್ಠಾನದ ಸಂಬಂಧವನ್ನು ಹೊಂದಿವೆ, ಹಾಗಾಗಿಯೇ ಇವುಗಳಿಗೆ ಏಕವಾಕ್ಯತೆ ಇದೆ.

ಆಪಸ್ತಂಬ ಕಲ್ಪ ಸೂತ್ರದಲ್ಲಿ ಹೇಳುವುದಿದ್ದರೆ – ಮೊದಲನೇ ಪ್ರಶ್ನೇ ಸರ್ವಕರ್ಮ ಸಾಧಾರಣ ಪರಿಭಾಷಾ ಸೂತ್ರಗಳು. ಎರಡರಿಂದ ಇಪ್ಪತ್ತನಾಲ್ಕನೇ ಪ್ರಶ್ನೆಗಳವರೆಗೆ(23 ಪ್ರಶ್ನೆಗಳು) ಶ್ರೌತ ಸೂತ್ರಗಳು. ಮುಂದಿನ ಮೂರು ಪ್ರಶ್ನೆಗಳು (25,26,27) ಗೃಹ್ಯ ಸೂತ್ರಗಳು. ಈ ಮೂರರಲ್ಲಿ ಕೊನೆಯದು (27ನೇ ಪ್ರಶ್ನೆ) ಪಿತೃಮೇಧ ಸೂತ್ರಗಳು. 28,29 ನೇ ಪ್ರಶ್ನೆಗಳು ಧರ್ಮ ಸೂತ್ರಗಳು. 30ನೇ ಪ್ರಶ್ನೆ ಶುಲ್ಬ ಸೂತ್ರಗಳು. ಹೀಗೆ ಒಟ್ಟಿಗೆ 30 ಪ್ರಶ್ನಾತ್ಮಕವಾದದ್ದು ಆಪಸ್ತಂಬ ಕಲ್ಪಸೂತ್ರ.

ಅವುಗಳಲ್ಲಿ ಸ್ಮಾರ್ತಕರ್ಮಗಳೂ ಮತ್ತು ಏಕಾಗ್ನಿ ಸಾಧ್ಯವಾದ (ಔಪಾಸನಾಗ್ನಿಯಲ್ಲಿ ನಿರ್ವಹಿಸುವ), ಉಪನಯನಾದಿ ಸಂಸ್ಕಾರಗಳ ಪ್ರಯೋಗವನ್ನು, ಸಂಬಂಧಿಸಿದ ಸೂತ್ರ ಮತ್ತು ಕಪರ್ದಿಕಾರಿಕೆಗಳನ್ನು ಸಂಗ್ರಹಿಸಿ ಕನ್ನಡದಲ್ಲಿ ಭಾವಾನುವಾದವನ್ನು ತಿಳಿಸಿ, ಸಂಸ್ಕಾರ ತರಂಗಿಣೀ ಎಂಬ ಹೆಸರಿನಲ್ಲಿ ಗ್ರಂಥವನ್ನು ಪ್ರಕಟಿಸಿ ಹೊರತರುತ್ತಿದ್ದಾರೆ ನಮ್ಮ ವೇದಬ್ರಹ್ಮ ಶ್ರೀಯುತ ಶಕ್ತಿಧರ ಶರ್ಮರು. ಸ್ಮಾರ್ತಕರ್ಮಗಳಿಗೆಲ್ಲಾ ಮೂಲ ಆಧಾರ ಗೃಹ್ಯಸೂತ್ರಗಳು. ಕಪರ್ದಿ ಸ್ವಾಮಿಗಳು ಕಾರಿಕಾರೂಪದಲ್ಲಿ ಪ್ರಯೋಗವನ್ನು ತಿಳಿಸಿದ್ದಾರೆ.

ಇವುಗಳ ಆಧಾರದ ಮೇಲೆ ವಿಧಿವತ್ತಾಗಿ ಪ್ರಯೋಗವನ್ನೂ ತಿಳಿಸಿ ಅನುಷ್ಠಾನ ಮಾಡುವ ಕ್ರಮವನ್ನೂ ಈ ಗ್ರಂಥಗಳಲ್ಲಿ ತಿಳಿಸಿಕೊಟ್ಟಿದ್ದಾರೆ.

ಆಪಸ್ತಂಬ ಪ್ರಯೋಗ ಗ್ರಂಥವು ಬೇರೆ ಬೇರೆ ವಿದ್ವಾಂಸರಿಂದ ಅನೇಕ ಪ್ರಕಾಶನಗಳಲ್ಲಿ ಉಪಲಬ್ಧವಿದ್ದರೂ, ಆಯಾ ಪ್ರಕರಣಗಳಿಗೆ ಸಂಬಂಧಿಸಿದ ಕಾರಿಕೆ, ಮೂಲ ಗೃಹ್ಯಸೂತ್ರ ಸಹಿತವಾಗಿ ಪ್ರಕಟಿತವಾದ ಪ್ರಯೋಗಗ್ರಂಥ ಇಲ್ಲವೇಇಲ್ಲ ಎಂಬುವಷ್ಟು ಅತಿವಿರಳ. ಇದೇ ಈ ಗ್ರಂಥಮಾಲಿಕೆಯ ವಿಶೇಷ ಲಕ್ಷಣವಾಗಿದೆ. ಗೃಹ್ಯಸೂತ್ರಗಳ ಅಧ್ಯಯನ ಕ್ರಮವೂ ಈಗ ನಮ್ಮಲ್ಲಿಲ್ಲ, ಹೀಗಿರುವಾಗ ಶ್ರೀಯುತ ಶರ್ಮರು ಈ ವಿಶಿಷ್ಟವಾದ ಪ್ರಕಾಶನಕ್ಕೆ ವಹಿಸಿದ ಶ್ರಮವು ಅತ್ಯಮೂಲ್ಯ.

ಇದು ವೈದಿಕ ಸಮಾಜಕ್ಕೆ ತುಂಬಾ ಉಪಯುಕ್ತವಾದದ್ದು. ವೈದಿಕರಿಗೆ, ಪ್ರಯೋಗದ ಮೂಲಪ್ರಮಾಣವಾದ ಸೂತ್ರ, ಕಾರಿಕೆಗಳನ್ನು ತಿಳಿದುಕೊಳ್ಳಲು ಆಸಕ್ತರಾದ ಜಿಜ್ಞಾಸುಗಳಿಗೆ, ವಿದ್ಯಾರ್ಥಿಗಳಿಗೆ, ಸಮಸ್ತ ಆಸ್ತಿಕ ಬಂಧುಗಳಿಗೆ ಈ ಗ್ರಂಥಗಳು ತುಂಬಾ ಉಪಯುಕ್ತವಾಗಿವೆ. ಕರ್ಮಜ್ಞಾನವನ್ನು ಹೊಂದಿ, ಅನುಷ್ಠಾನವನ್ನು ಮಾಡಿದಾಗ ಮಾತ್ರ ಆ ವೈದಿಕ ಕರ್ಮ ವಿಶೇಷಫಲವನ್ನೇ ಕೊಡುವುದೆಂದು ಶಾಸ್ತ್ರಗಳೇ ತಿಳಿಸುತ್ತಿವೆ.

ಇವರಿಂದ ಇನ್ನೂ ಹೆಚ್ಚಿನ ಸನಾತನ ಪರಂಪರೆಯ ಸೇವೆ ನಡೆಯಲು, ಇವರಿಗೆ ಹಾಗೂ ಈ ವಿಷಯದಲ್ಲಿ ಅಮೂಲ್ಯ ಮಾರ್ಗದರ್ಶನ ನೀಡುತ್ತಿರುವ ಮಹನೀಯರಾದ ವಿದ್ವಾನ್, ಶ್ರೀಮಾನ್ ಶಿವಕುಮಾರ ಅವಧಾನಿಗಳಿಗೂ ಮತ್ತು ವಿದ್ವಾನ್, ಶ್ರೀಮಾನ್ ಕಿರಣ ಅವಧಾನಿಗಳಿಗೂ ಆಯುಷ್ಯ, ಆರೋಗ್ಯ ಮತ್ತು ಭಾಗ್ಯವನ್ನು ಅನುಗ್ರಹಿಸಲೆಂದು ವೇದಮಾತೆಯಾದ ಶಾರದಾಂಬೆ ಮತ್ತು ಜಗದ್ಗುರುಗಳ ಸನ್ನಿಧಿಯಲ್ಲಿ ಪ್ರಾರ್ಥಿಸುತ್ತೇನೆ.

ವಿದ್ವಾನ್, ವೇದಬ್ರಹ್ಮಶ್ರೀ, ಡಾ – ಸುಬ್ರಾಯ ವಿ ಭಟ್
ಪ್ರಾಧ್ಯಾಪಕರು, ಮೀಮಾಂಸಾಶಾಸ್ತ್ರ ವಿಭಾಗ,
ರಾಜೀವಗಾಂಧಿ ಕೇಂದ್ರೀಯ ಸಂಸ್ಕೃತ ವಿದ್ಯಾಪೀಠಂ, ಶೃಂಗೇರಿ.

ಸಂಪಾದಕರು ಮಾತು...

ಈ ಜಗತ್ತಿನಲ್ಲಿರುವ ಎಲ್ಲ ವಿಚಾರಗಳಿಗೂ ಆಧಾರ, ಕರ್ಮಭಾಗದ ಪಿತೃಗಳಾದ ಋಷಿಗಳೇ ಹೊರತು, ದೇಹಭಾವದ ಅಂದರೆ ಶರೀರವನ್ನು ಕೊಟ್ಟಂತಹ ಪಿತೃಗಳಲ್ಲ. ಏಕೆಂದರೆ ನಮಗಿಂತ ಮೊದಲು ಭೂಮಿಗೆ ಬಂದಿರುತ್ತಾರಾದ್ದರಿಂದ ಹಾಗೂ ನಮ್ಮ ದೇಹವು ಭೂಮಿಗೆ ಬರಲು ಅವಕಾಶ ಮಾಡಿರುತ್ತಾರಾದ್ದರಿಂದ ಅವರು ನಮಗೆ ಹಿರಿಯರು, ಪಿತೃಗಳು, ಆದರಣೀಯರು. ಹಾಗೂ ಈ ಎಲ್ಲಾ ಕೃತಜ್ಞತೆ – ಉನ್ನತಗೌರವ – ಆದರಗಳು ಅವರುಗಳಿಗೆ ಸಿಗಲೇಬೇಕು, ಮತ್ತೂ ಕಿರಿಯರಾದವರು ಕೊಡಲೇಬೇಕು, ಸಂದೇಹವೇ ಇಲ್ಲ !.

ಆದರೆ, ಅವರೆಂದಿಗೂ (ದೇಹಭಾವದ ಪಿತೃಗಳು) ಅತ್ಯಂತ ಸೂಕ್ಷ್ಮವಾದ, ಗೂಢವಾದ, ವಿಸ್ತಾರವಾದ ಜ್ಞಾನದ ರಾಶಿಯ ಕರ್ತೃವಾಗಲೂ, ಆಧಾರವಾಗಲೂ ಸಾಧ್ಯವೇ ಇಲ್ಲ !!. ಏಕೆಂದರೆ ಅವರುಗಳೂ ಸಹ ಅವರವರ ಜನ್ಮಾಂತರದ ಪಾಪಪುಣ್ಯಗಳ ಫಲಗಳನ್ನು ಅನುಭವಿಸಲು ಬಂದಿರುವವರೇ ಆಗಿರುತ್ತಾರೆ. ಹಾಗಾಗಿಯೇ ನಾವುಗಳು ನಮಸ್ಕಾರ ಮಾಡುವಾಗ ಹೇಳುವ ಪ್ರವರದಲ್ಲಿ, ಜನ್ಮಕ್ಕೆ ಕಾರಣರಾದ ತಂದೆ, ಅಜ್ಜ, ಮುತ್ತಜ್ಜರ ಹೆಸರುಗಳನ್ನು ಹೇಳುವುದಿಲ್ಲ!, ಬದಲಿಗೆ ಕರ್ಮ ಭಾಗದ ಪಿತೃಗಳಾದ, ನಮ್ಮ ಪರಂಪರೆಯ ಮಹರ್ಷಿಗಳ ಹೆಸರುಗಳನ್ನು (ನಾವು ಅವರ ಪರಂಪರೆಯವರು ಎಂದು) ಹೇಳುವುದು. ಹಾಗಾಗಿ ಇಂದು ನಾವುಗಳು ನೋಡುತ್ತಿರುವ, ಹಾಗೆಯೇ ಕೇಳುತ್ತಿರುವ ಅನೇಕ ರೀತಿಯ ಸಮುದಾಯಗಳ ಭಿನ್ನಭಿನ್ನ ನಡವಳಿಕೆಗಳನ್ನು **'ಇದೇ ನಮ್ಮ ಸಂಪ್ರದಾಯ – ಆಚಾರ'** ಎಂಬ ಬ್ರಹ್ಮಾಸ್ತ್ರದಂತಹ ವಾಕ್ಯಗಳಿಂದ ಅವರುಗಳು ಮಾಡಿಕೊಳ್ಳುವ ಯಾವ ಸಮರ್ಥನೆಗೂ ಬೆಲೆಯಿಲ್ಲ.

ಏಕೆಂದರೆ, ಕರ್ಮಭಾಗದ ಪಿತೃಗಳಾದ, ಸಹಸ್ರ ಸಹಸ್ರ ವರ್ಷಗಳು ಭಗವಂತನನ್ನು ಧ್ಯಾನಿಸಿ, ಮಂತ್ರದ್ರಷ್ಟಾರರಾದ ಋಷಿಪುಂಗವರು ಶಾಸ್ತ್ರ ಗ್ರಂಥಗಳನ್ನು ಭಗವಂತನ ಸೂಚನೆಯಂತೆ ರಚಿಸಿ, ಸಮಸ್ತ ಲೋಕಕ್ಕೆ ಏನನ್ನು ಆದೇಶಿಸಿ ಉಪದೇಶಿಸಿದ್ದಾರೋ ಆ ನಡವಳಿಕೆಗಳನ್ನು, ಆ ನಿಯಮಗಳನ್ನು, ಮನುಷ್ಯರು ತಲತಲಾಂತರ ವರ್ಷಗಳಿಂದ ಅವಿಚ್ಛಿನ್ನವಾಗಿ ಚಾಚೂತಪ್ಪದೆ ಅನುಸರಿಸುವಂತಹ

ಪ್ರಕ್ರಿಯೆಗೇ – ಅಂತಹ ವ್ಯವಸ್ಥಿತವಾದ ನಡವಳಿಕೆಗೆ **ಸಂಪ್ರದಾಯ – ಆಚಾರ** ಎಂದು ಹೆಸರೇ ಹೊರತು, ನಾವು ನೀವು ಕಲ್ಪಿಸಿಕೊಂಡು ಆಚರಿಸುವಂತಹ, ಶಾಸ್ತ್ರಗಳಲ್ಲಿಲ್ಲದಿರುವ – ಶಾಸ್ತ್ರಗಳಿಗೆ ಪೂರಕವಲ್ಲದ ಹಾಗೂ ಶಾಸ್ತ್ರವಿರೋಧವಾದ ಯಾವ ಕ್ರಿಯೆಗಳಿಗೂ **ಸಂಪ್ರದಾಯ** ಎಂದು ಹೇಳಲು ಬರುವುದಿಲ್ಲ!!.

ಏಕೆಂದರೆ ಋಷಿಗಳಿಂದ ರಚಿತವಾಗಿರುವ ಸಕಲ ಶಾಸ್ತ್ರಗ್ರಂಥಗಳೂ ಕೂಡ ಕೇವಲ ಆಯಾ ವೇದಗಳು – ಆ ವೇದಗಳ ಶಾಖೆಗಳು – ವೇದದ ಅರ್ಥ ಹಾಗೂ ಅಂಗಗಳನ್ನು ಮಾನದಂಡವಾಗಿ ಇಟ್ಟುಕೊಂಡು, ಅವುಗಳನ್ನು ಅನುಸರಿಸಿ ರಚನೆಯಾಗಿವೆಯೇ ಹೊರತು, ಇಂದಿನ ಸಮಾಜದಲ್ಲಿ ಕಂಡುಬರುವ ಯಾವುದೇ ಮತ, ಸಮುದಾಯ, ಒಳಪಂಗಡಗಳನ್ನು, ಉದಾಹರಣೆಗೆ : ಸಂಕೇತಿಗಳನ್ನು – ಹವ್ಯಕರನ್ನು – ಕಮ್ಮೆಗಳನ್ನು – ಮಾಧ್ವರನ್ನು – ಸ್ಮಾರ್ತರನ್ನು – ಐಯ್ಯಂಗಾರರನ್ನು – ದ್ರಾವಿಡರನ್ನು – ಆಂಧ್ರದವರನ್ನು – ನಮ್ಮೂರಿನ ಪುರೋಹಿತರನ್ನು – ನಿಮ್ಮೂರಿನ ಪುರೋಹಿತರನ್ನು – ವೇದಶಾಸ್ತ್ರಗಳ ಬಗ್ಗೆ ಏನೂ ಗೊತ್ತಿಲ್ಲದ, ಆದರೆ ವಯಸ್ಸಿ(ದೇಹದಲ್ಲಿ)ನಲ್ಲಿ ಹಿರಿಯರಾದ ಹೆಂಗಸರು ಅಥವಾ ಗಂಡಸರನ್ನು.....!!!, ಹೀಗೆ ಇಂತಹ ಯಾವ ಮಾನದಂಡಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ನಮ್ಮ ಒಂದೇಒಂದು ಶಾಸ್ತ್ರಗ್ರಂಥವೂ ಸಹ ರಚನೆಯಾಗಿಲ್ಲ ಎಂಬುದನ್ನು ನಾವು ಮೊದಲು ಅರಿತುಕೊಳ್ಳಬೇಕು.

ಅಲ್ಲದೇ, ಭಗವಂತನು ತನ್ನ ಮೂಲಕ ರಚಿತವಾಗಿರುವ ಶಾಸ್ತ್ರಗಳನ್ನು ಕೇವಲ ಅನುಸರಿಸಲು ಮಾತ್ರ ಮನುಷ್ಯರಿಗೆ ಅವಕಾಶವನ್ನು ಕೊಟ್ಟಿದ್ದಾನೆಯೇ ಹೊರತು ಅದನ್ನು ಮೀರಲು ಅವಕಾಶ ಕೊಟ್ಟಿಲ್ಲ. ಹಾಗಾಗಿಯೇ ಗೀತೆಯಲ್ಲಿ ಕೃಷ್ಣನು,

ತಸ್ಮಾತ್ ಶಾಸ್ತ್ರಂ ಪ್ರಮಾಣಂತೇ ಕಾರ್ಯಾಕಾರ್ಯ ವ್ಯವಸ್ಥಿತೌ ।
ಜ್ಞಾತ್ವಾ ಶಾಸ್ತ್ರ ವಿಧಾನೋಕ್ತಂ ಕರ್ಮಕರ್ತುಮಿಹಾರ್ಹಸಿ ॥

ಅಂದರೆ, ತಪ್ಪು– ಸರಿ, ನ್ಯಾಯ–ಅನ್ಯಾಯ ಈ ವಿಷಯಗಳಲ್ಲಿ ಶಾಸ್ತ್ರಗಳೇ ಪ್ರಮಾಣವಾಗಿವೆ ಎಂದು ಹೇಳಿರುವುದು. ಹಾಗೆಯೇ,

ವೇದೋಕ್ತ: ಪ್ರಥಮೋ ಧರ್ಮೋ ಧರ್ಮಶಾಸ್ತ್ರೇಷು ಚಾಪರ: ।
ಶಿಷ್ಟಾಚಾರ ಸ್ಮೃತೀಯಸ್ತು ತ್ರಿವಿಧಂ ಧರ್ಮಲಕ್ಷಣಂ ॥
ಮತ್ತೂ
ಶ್ರುತಿಃ ಸ್ಮೃತಿ ವಿರೋಧೇ ಶ್ರುತಿಃ ಗರೀಯಸಿ ।
ಸ್ಮೃತಿಸ್ಸಂಪ್ರದಾಯ ವಿರೋಧೇ ಸ್ಮೃತಿಃ ಗರೀಯಸಿ ॥

ಅಂದರೆ – ವೇದಗಳಲ್ಲಿ ಹೇಳಿದ ಧರ್ಮವೇ ಮುಖ್ಯ, ಅದಕ್ಕೇ ಮೊದಲ ಪ್ರಾಶಸ್ತ್ಯ । ಧರ್ಮಶಾಸ್ತ್ರಗಳಲ್ಲಿ ಹೇಳಿರುವುದಕ್ಕೆ 2ನೇ ಆದ್ಯತೆ । ಶಿಷ್ಟಾಚಾರಕ್ಕೆ 3ನೇ ಆದ್ಯತೆ, ಅದೂ ಶ್ರುತಿ, ಸ್ಮೃತಿ, ಪುರಾಣಾದಿಶಾಸ್ತ್ರಗಳು ಒಪ್ಪುವಂತಹ (ವಿರೋಧವಲ್ಲದ) ಅಥವಾ ತತ್ಕಾಲದಲ್ಲಿ ಯಾವುದೇ ಶಾಸ್ತ್ರದ (ಋಷಿವಾಕ್ಯ) ಆಧಾರವಾಕ್ಯಗಳು ಸಿಗದಿದ್ದಾಗ ಮಾತ್ರ 3 ನೇ ಆದ್ಯತೆಯಾಗಿ ಶಿಷ್ಟಾಚಾರವನ್ನು ಒಪ್ಪಿಕೊಳ್ಳಬಹುದು ॥ ಮತ್ತೂ ವೇದಕ್ಕೂ ಹಾಗೂ ಧರ್ಮಶಾಸ್ತ್ರದಿ ಸ್ಮೃತಿಗಳಿಗೂ ಪರಸ್ಪರವಿರೋಧ ಕಂಡುಬಂದಾಗ, ವೇದಕ್ಕೇ ಆದ್ಯತೆಯೆಂದೂ ಮತ್ತೂ ಸ್ಮೃತಿಗಳಿಗೂ ಹಾಗೂ ಲೋಕದ ನಡವಳಿಕೆಗಳಿಗೂ(ಆಚರಣೆ) ಪರಸ್ಪರವಿರೋಧ ಕಂಡುಬಂದರೆ, ಆಗ ಸ್ಮೃತಿವಾಕ್ಯಗಳಿಗೇ ಆದ್ಯತೆ ಇರಬೇಕು, ಇದು ಸನಾತನ ಪರಂಪರೆಯ ಮೂಲ ವ್ಯವಸ್ಥೆಯಾಗಿದೆ ॥

ವೇದೋನಿತ್ಯಮಧೀಯತಾಂ ತದುದಿತಃ ಕರ್ಮಸ್ವಾನುಷ್ಠೀಯತಾಮ್ ।

ಎಂದು ಶಂಕರಾಚಾರ್ಯರು ಆದೇಶಿಸಿದ್ದಾರೆ. ಇದರ ಅರ್ಥ, ವೇದವನ್ನು ಮೊದಲು ಅಧ್ಯಯನ ಮಾಡಿ ಅರ್ಥಜ್ಞಾನವನ್ನು ತಿಳಿಯಿರಿ ಹಾಗೂ ಅದರಲ್ಲಿ ಹೇಳಿರುವಂತೆಯೇ ಕರ್ಮಗಳನ್ನು (ಕೆಲಸ) ಆಚರಿಸಿರಿ ॥ ಇನ್ನು,

ಯಸ್ಯ ನಾಸ್ತಿ ಸ್ವಯಂ ಪ್ರಜ್ಞಾ ಶಾಸ್ತ್ರಂ ತಸ್ಯ ಕರೋತಿ ಕಿಮ್ ।
ಲೋಚನಾಭ್ಯಾಂ ವಿಹೀನಸ್ಯ ದರ್ಪಣ: ಕಿಂ ಕರಿಷ್ಯತಿ ॥

ಅಂದರೆ, ಯಾವಾತನಿಗೆ ಸ್ವಯಂ ಪ್ರಜ್ಞೆ ಇರುವುದಿಲ್ಲವೋ, ಅವನಿಗೆ ಶಾಸ್ತ್ರವು ಏನನ್ನು ತಾನೇ ಮಾಡುತ್ತದೆ. 2 ಕಣ್ಣುಗಳೂ ಇಲ್ಲದವನಿಗೆ ಕನ್ನಡಿಯು ತಾನೇ ಏನನ್ನು

ಮಾಡುತ್ತದೆ. ಮನುಷ್ಯನಿಗೆ ಶಾಸ್ತ್ರಜ್ಞಾನವು ಅತ್ಯವಶ್ಯಕ, ಸ್ವಂತ ಬುದ್ಧಿಯಿಂದ ಶಾಸ್ತ್ರವನ್ನು ವಿವೇಚಿಸಿ, ಮುಕ್ತವಾಗಿ ಒಪ್ಪಿಕೊಳ್ಳುವಂತಹ ಮನೋಧರ್ಮವನ್ನು ಬಳಸಿಕೊಳ್ಳ ಬೇಕು. ಶಾಸ್ತ್ರಗಳು ಮನುಷ್ಯರಿಗೆ ಒಳಿತನ್ನು ಮಾಡುವುದಕ್ಕಾಗಿಯೇ ಹೊರಟಿವೆ. ಶಾಸ್ತ್ರಗ್ರಂಥಗಳು ಋಷಿಗಳ ತಪಸ್ಸಿನ ಫಲರೂಪಗಳು. ಮುಮುಕ್ಷುಗಳಿಗೆ ಇವು ದಾರಿದೀಪಗಳಾಗಿವೆ. ಮೋಕ್ಷವು ಒಂದೆರಡು ಜನ್ಮಗಳಲ್ಲಿ ಸಿದ್ಧಿಸುವಂತಹದ್ದಲ್ಲ, ಮನುಷ್ಯನು ಅದನ್ನು ಪಡೆಯಲು ಪ್ರತಿಜನ್ಮದಲ್ಲಿಯೂ ಪ್ರಯತ್ನಶೀಲನಾಗಿರಬೇಕು. ಹೀಗೆ ಪ್ರಯತ್ನಶೀಲನಾಗ ಬೇಕಾದರೆ ಶಾಸ್ತ್ರಗಳು ಅತ್ಯವಶ್ಯಕ. ಅವುಗಳನ್ನು ಧಿಕ್ಕರಿಸಿದರೆ, ಕುರುಡನು ಕನ್ನಡಿಯನ್ನು ತಿರಸ್ಕರಿಸಿದಂತೆ ಆಗುತ್ತದೆ. ಸರ್ವಸ್ಯ ಲೋಚನಂ ಶಾಸ್ತ್ರಂ – ಎನ್ನುವಂತೆ ನಮ್ಮ ಬದುಕಿನ ಸಾರ್ಥಕತೆಗೆ ಶಾಸ್ತ್ರವೆಂಬ ಕಣ್ಣುಬೇಕು, ಅದಿಲ್ಲದಿದ್ದರೆ ಅವನು ಕುರುಡನೇ ಸರಿ.

ಕೊನೆಯದಾಗಿ –

'ಅವಶ್ಯಂ ಪಿತರಾಚಾರಂ!' ಹೌದು ಕರ್ಮಮಾರ್ಗದ ವಿಷಯದಲ್ಲಿ ಅವಶ್ಯವಾಗಿ ನಮ್ಮ ಪಿತೃಗಳ ಆಚಾರವನ್ನು, ನಡವಳಿಕೆಗಳನ್ನು ಅನುಸರಿಸಬೇಕು, ಅದೇ ಸಂಪ್ರದಾಯ–ಆಚಾರ. ಆದರೆ ಯಾವ ಪಿತೃಗಳ?, ಅಂದರೆ ಕರ್ಮಪಿತೃಗಳಾದ ಋಷಿಗಳ ವಚನಗಳನ್ನು ಮೊದಲು ಅಧ್ಯಯನ ಮಾಡಿ, ಹಾಗೆಯೇ ಅರ್ಥಜ್ಞಾನ ತಿಳಿದು, ನಂತರ ನಿಷ್ಕಾಮವಾಗಿ ಕರ್ಮಾಚರಣೆಯನ್ನು ಮಾಡಿದರೆ, ಅದರಿಂದ ಚಿತ್ತಶುದ್ಧಿ, ತನ್ಮೂಲಕ ಬ್ರಹ್ಮಜ್ಞಾನ (ಸಚ್ಚಿದಾನಂದ ಸ್ವರೂಪ) ಪ್ರಾಪ್ತಿಯಾಗುತ್ತದೆ.

ಪ್ರಸ್ತುತ,

ಈ ಗ್ರಂಥದಲ್ಲಿರುವ, ಅಪರಸೂತ್ರಗಳಾಗಲೀ – ಭಾಷ್ಯಗಳಾಗಲೀ – ವೈದ್ಯನಾಥೀಯಸ್ಮೃತಿಯಾಗಲೀ – ಯಲ್ಲಾಜೀಯಧರ್ಮಶಾಸ್ತ್ರವಾಗಲೀ ಮತ್ತು ಸಾಯಣಾಚಾರ್ಯರ ಮಂತ್ರಭಾಷ್ಯವಾಗಲೀ, ನಮ್ಮ ಕನ್ನಡಭಾಷೆಗೆ ಈವರೆಗೂ ಸಹಾ ಬಂದಿರಲಿಲ್ಲ. ಮತ್ತೊಂದು ದಾಖಲೆಯೆಂದರೆ, ಇವಿಷ್ಟೂ ಅಮೂಲ್ಯ ವಿಷಯಗಳು "ಒಂದೇ ಗ್ರಂಥ ಕೈಪಿಡಿಯಲ್ಲಿ" ಪ್ರಪಂಚದ ಯಾವುದೇ ಭಾಷೆಗಳಲ್ಲಿಯೂ ಪ್ರಕಟವಾಗಿಲ್ಲ.

ಈ ದೃಷ್ಟಿಯಲ್ಲಿ ನಮ್ಮ ಈ ಗ್ರಂಥರತ್ನವು ಅತ್ಯಂತ ಮಹತ್ವಪೂರ್ಣದ್ದಾಗಿದ್ದು, ಸಾರಸ್ವತ ವಿದ್ವತ್ ಲೋಕದಲ್ಲಿ ಅತಿದೊಡ್ಡ ಮೈಲಿಗಲ್ಲಾಗಿದೆ.

ಎರಡುವರ್ಷಗಳ ಹಿಂದೆ, ನಮ್ಮದೇ ಪ್ರಕಟಣೆಯಾದ ಸಂಸ್ಕಾರತರಂಗಿಣೀ ೧೨ + ೧೩ ನೇ ಪುಷ್ಪಗಳು ಈ ವಿಷಯಗಳ ಮೊದಲನೆಯ ಭಾಗವಾಗಿದ್ದು, ಇದೀಗ ಸಂಸ್ಕಾರತರಂಗಿಣೀ ಸರಣಿಯ ೧೫ ನೆಯ ಸಂಚಿಕೆಯಲ್ಲಿ "ಪಿತೃಮೇಧಕಾಂಡ" ಎಂಬ ಹೆಸರಿನಿಂದ ೨ ನೆಯ ಭಾಗವಾಗಿ ಹೊಸವಿಷಯಗಳೊಂದಿಗೆ ಈ ಗ್ರಂಥರತ್ನವು ಪ್ರಕಟಗೊಳ್ಳುತ್ತಿದೆ.

ಈ ಗ್ರಂಥವು ಈ ರೂಪಕ್ಕೆ ಬರಲು ಕಾರಣೀಭೂತರಾದಂತಹ ನಮ್ಮ ಎಲ್ಲಾ ಮಾರ್ಗದರ್ಶಕ ವಿದ್ವಾಂಸರುಗಳಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಮತ್ತೂ ವಾತ್ಸಲ್ಯದಿಂದ ವಿಶೇಷ ಮಾರ್ಗದರ್ಶನವನ್ನು ನೀಡುತ್ತಿರುವ **ವಿದ್ವಾಂಸರಾದ, ಅಗ್ನಿಹೋತ್ರಿಗಳಾದ ಶ್ರೀಮಾನ್ ಕಿರಣಾವಧಾನಿಗಳಿಗೆ** ಈ ಸಂದರ್ಭದಲ್ಲಿ ಸಾಷ್ಟಾಂಗ ಪ್ರಣಾಮಗಳನ್ನು ಸಲ್ಲಿಸುತ್ತಿದ್ದೇನೆ.

ಇಂತಹ ಅವಕಾಶವನ್ನು ನಮಗೆ ದೊರಕಿಸಿಕೊಟ್ಟಂತಹ ಪೂಜ್ಯ ಅವಧೂತ ಮಹಾತ್ಮರಾದ ಶ್ರೀ ವೆಂಕಟಾಚಲ ಸದ್ಗುರುಗಳ ಸಂಕಲ್ಪವೇ ಈ ಎಲ್ಲಾ ಆಗುಹೋಗುಗಳಿಗೂ ಮೂಲ ಕಾರಣವು.

ಇಂತಹ ಗ್ರಂಥವನ್ನು ಜ್ಞಾನಮಾರ್ಗದ ಜಿಜ್ಞಾಸುಗಳು, ಋಷಿವಾಕ್ಯದಲ್ಲಿ ಗೌರವವನ್ನು ಹೊಂದಿರುವವರು ಹಾಗೂ ಆಸಕ್ತರು ಸಂಗ್ರಹಿಸಿ ತನ್ಮೂಲಕ ಜ್ಞಾನಮಾರ್ಗದ ಈ ಕೆಲಸಕ್ಕೆ ಸಹಕರಿಸಬೇಕಾಗಿ ವಿನಂತಿಸುತ್ತೇವೆ.

ವೇದಬ್ರಹ್ಮ ಶ್ರೀ ಎ.ಸಿ ಶಕ್ತಿಧರ ಶರ್ಮರು
ಸಂಪಾದಕರು ಹಾಗೂ ಪ್ರಕಾಶಕರು
ಮಾರ್ಚ್ – 2020

1. ಯಜುರ್ವೇದ ಅಪರಪ್ರಯೋಗಃ

ಸೂಚನೆ

((ನಮ್ಮ ಸಂಸ್ಕಾರತರಂಗಿಣೀ ೧೩ ನೇ ಪುಷ್ಪದಲ್ಲಿ, ಸತ್ತ ಕ್ಷಣದಿಂದ ಹಿಡಿದು ದಹನ ಮತ್ತು ನಗ್ನಪ್ರಚ್ಛಾದನಶ್ರಾದ್ಧದವರೆಗಿನ ಪ್ರಯೋಗಗಳನ್ನು ಯಥಾವಿಧಿಯಾಗಿ ಕೊಡಲಾಗಿದ್ದು, ಈಗ ಈ ೧೫ ನೇ ಪುಷ್ಪದಲ್ಲಿ ನಗ್ನಪ್ರಚ್ಛಾದನಶ್ರಾದ್ಧ ಹಾಗೂ ನಿತ್ಯವಿಧಿಗಳಾದ ಶಿಲಾಸ್ಥಾಪನ – ವಾಸೋದಕ – ತಿಲೋದಕ – ಪಿಂಡಪ್ರದಾನ – ಏಕೋತ್ತರವೃದ್ಧಿಶ್ರಾದ್ಧ ಹಾಗೂ ಬೆಸದಿನಗಳಲ್ಲಿ ಮಾತ್ರ ಮಾಡುವ ನವಶ್ರಾದ್ಧ ಮತ್ತೂ ಅಸ್ಥಿಸಂಚಯನಗಳ ಪ್ರಯೋಗಗಳನ್ನೂ ಮುದ್ರಿಸಲಾಗಿದೆ.))

ನಗ್ನಪ್ರಚ್ಛಾದನಶ್ರಾದ್ಧಕ್ಕೆ ಬೇಕಾಗುವ ಸಾಮಗ್ರಿಗಳು

೩ ಬಾಳೆಎಲೆ – ೨ ಪಂಚಪಾತ್ರೆ – ೨ ಉದ್ಧರಣೆ – ೧ ಟವಲ್ – ೧ ಕಟ್ಟು ದರ್ಭೆ – ೧ ಮುಷ್ಟಿ ತುಳಸಿ – ೨೫೦ ಗ್ರಾಂ ಅಕ್ಕಿ – ೨೫೦ ಗ್ರಾಂ ಎಳ್ಳು – ೨೫೦ ಗ್ರಾಂ ಹೆಸರುಕಾಳು – ೧೦ ರೂ ನೋಟು ೧೦ – ೧೦ ರೂ ಕಾಯಿನ್ ೧೦ – ೧ ಕಲಶ(ಚೊಂಬು) – ೧ ಉದಕುಂಭದಾನಕ್ಕಾಗಿ ಹೊಸ ಕಲಶ (ಚೊಂಬು) ದೀಪದಾನಕ್ಕಾಗಿ ೨ ಹೊಸ ದೀಪಗಳು – ೧೦೦ ಗ್ರಾಂ ತುಪ್ಪ – ೧ ಕಟ್ಟು ದೀಪದಬತ್ತಿ – ೧ ಬೆಂಕಿಪೆಟ್ಟಿಗೆ ೩ ಅಡಿಕೆಪಟ್ಟೆ ಬೌಲ್ – ೩ ಅಡಿಕೆಪಟ್ಟೆ ತಟ್ಟೆ – ೨ ಲೀಟರ್ ನೀರು.

1. ನಗ್ನಪ್ರಚ್ಛಾದನಶ್ರಾದ್ಧಂ

((ದಹನವಾದನಂತರ, ಸೂರ್ಯಾಸ್ತದ ಒಳಗೇ ಇದನ್ನು ಮಾಡಲು ಸಮಯಾವಕಾಶವಿದ್ದಲ್ಲಿ, ಸ್ಮಶಾನದಿಂದ ಹೊರಬಂದು ಸ್ನಾನವನ್ನು ಮಾಡಿದ ನಂತರ, ಏಕವಸ್ತ್ರದಲ್ಲಿ, ಸ್ಮಶಾನದ ಗಡಿಯ ಆಚೆ ಒಂದುಭಾಗದಲ್ಲಿ ಈ ನಗ್ನಪ್ರಚ್ಛಾದನಶ್ರಾದ್ಧವನ್ನು ಮಾಡಬೇಕು ಅಥವಾ ನಿತ್ಯವಿಧಿಗಳನ್ನು ಮಾಡುವ ಜಾಗದಲ್ಲಿ ಮಾಡಿದರೂ ದೋಷವಿಲ್ಲ. ದಹನವಾದದಿನ ಸೂರ್ಯಾಸ್ತದ ಒಳಗೆ ಇದನ್ನು ಮಾಡಲು ಆಗದಿದ್ದಲ್ಲಿ, ಆಗ ಮರುದಿನ ಹಗಲಲ್ಲಿ ಇದನ್ನು ಮಾಡಬೇಕು))

ಉಪವೀತಂ । ಬ್ರಹ್ಮದಂಡಂ ಚರಿತ್ವಾ । ಪ್ರಾಣಾನಾಯಮ್ಯ ।

ಉಪವೀತಿಯಾಗಿ । ಬ್ರಹ್ಮದಂಡವನ್ನು ಮಾಡಿ । ಪ್ರಾಣಾಯಾಮವನ್ನು ಮಾಡಬೇಕು ॥

ಅನುಜ್ಞೆ –

ಪ್ರಾಚೀನಾವೀತಂ । .....ಗೋತ್ರಸ್ಯ(ಗೋತ್ರಾಯಾಃ), ...ಶರ್ಮಣಃ(ದಾಯಾಃ), ಪ್ರೇತಸ್ಯ(ಪ್ರೇತಾಯಾಃ) ಲಜ್ಜಾ ನಿರ್ಹರಣಾರ್ಥಂ, ಶ್ರೀಮಹಾವಿಷ್ಣು ಪ್ರೀತ್ಯರ್ಥಂ, ನಗ್ನಪ್ರಚ್ಛಾದನಶ್ರಾದ್ಧಂ ಆಮರೂಪೇಣ ಕರ್ತುಂ, ಮುಖ್ಯಕಾಲೋಭೂತ್ವಾ, ಉಪವೀತಂ। ಅಧಿಕಾರ ಸಂಪದಸ್ತ್ವಿತಿ ಭವಂತೋಬ್ರುವಂತು ॥ ಅಧಿಕಾರ ಸಂಪದಸ್ತು ॥

ಪ್ರಾಚೀನಾವೀತಿಯಾಗಿ ಮೇಲೆ ತಿಳಿಸಿದಂತೆ ಹೇಳಿ, ಆಮರೂಪವಾದ ನಗ್ನಪ್ರಚ್ಛಾದನ ಶ್ರಾದ್ಧಕ್ಕೆ ಬ್ರಾಹ್ಮಣರಲ್ಲಿ ಒಪ್ಪಿಗೆಯನ್ನು ಉಪವೀತಿಯಾಗಿ ಕೇಳಬೇಕು ॥

ಸಂಕಲ್ಪ –

...ಪುಣ್ಯತಿಥೌ । ಪ್ರಾಚೀನಾವೀತಂ । .....ಗೋತ್ರಸ್ಯ(ಗೋತ್ರಾಯಾಃ), ...ಶರ್ಮಣಃ(ದಾಯಾಃ), ಪ್ರೇತಸ್ಯ(ಪ್ರೇತಾಯಾಃ) ಲಜ್ಜಾ ನಿರ್ಹರಣಾರ್ಥಂ, ಶ್ರೀಮಹಾವಿಷ್ಣು ಪ್ರೀತ್ಯರ್ಥಂ, ನಗ್ನಪ್ರಚ್ಛಾದನಶ್ರಾದ್ಧಂ ಆಮರೂಪೇಣ ಕರಿಷ್ಯೇ ॥

ಉಪವೀತಿಯಾಗಿಯೇ ಸಂಕಲ್ಪವನ್ನು ಆರಂಭಿಸಿ । ಪ್ರಾಚೀನಾವೀತಿಯಾಗಿ ನಗ್ನಪ್ರಚ್ಛಾದನಶ್ರಾದ್ಧಕ್ಕೆ ಮೇಲಿನಂತೆ ಸಂಕಲ್ಪಮಾಡಬೇಕು ॥

ಪರ್ಣೇ ವಸ್ತ್ರೇ ವಾ ಮುದ್ಗಮಿಶ್ರಿತ, ತಂಡುಲಾನ್ ನಿಧಾಯ । ತದುಪರಿ ಏಕದರ್ಭೇಣ ಪವಿತ್ರಂ ಕೃತ್ವಾ । ದಕ್ಷಿಣಾಗ್ರಂ ನಿಧಾಯ । ದಕ್ಷಿಣಾಭಿಮುಖಃ ॥

ಎಲೆ ಅಥವ ಬಟ್ಟೆಯಲ್ಲಿ ಅಕ್ಕಿ ಮಿಶ್ರಿತವಾದ ಹೆಸರುಕಾಳನ್ನು ಇಟ್ಟು । ಅದರ ಮೇಲೆ ೧ ದರ್ಭೆಯ ಪವಿತ್ರವನ್ನು । ದಕ್ಷಿಣಾಗ್ರವಾಗಿಟ್ಟು । ದಕ್ಷಿಣಾಭಿಮುಖವಾಗಿ ಕುಳಿತುಕೊಂಡು ॥

ಇಹಲೋಕಂ ಪರಿತ್ಯಜ್ಯ ಗತೋಽಸಿ(ಗತಾಸಿ) ಪರಮಾಂಗತಿಮ್ ।

ಮನಸಾ ವಾಯುರೂಪೇಣ ಕುಶೇ ತ್ವಾಂ ಯೋಜಯಾಮ್ಯಹಮ್ ॥

ಓಂ ಆಯಾಹಿ ಪ್ರೇತ(ಪ್ರೇತೇ) । ಸೋಮ್ಯಾ(ಸೋಮ್ಯೇ) ಗಂಭೀರೈಃ । ಪಥಿಭಿಃ ಪೂರ್ವ್ಯೈರ್ಃ ॥ ಪ್ರಜಾಮಸ್ಮಭ್ಯಂ । ದದದ್ರಯಿಂ ಚ (ದದತೋರಯಿಂ ಚ) । ದೀರ್ಘಾಯುತ್ವಂ ಚ । ಶತಶಾರದಂ ಚ ॥

ಈ ಮೇಲಿನ ಶ್ಲೋಕ ಮತ್ತು ಮಂತ್ರವನ್ನು ಹೇಳಿ ॥

ಆಯಾಹಿ ಪ್ರೇತ(ಪ್ರೇತೇ), ...ಗೋತ್ರ(ಗೋತ್ರೇ), ...ಶರ್ಮನ್(ಅಮ್ಮದೇ), ಪಿತಃ(ಮಾತಃ) ಅಸ್ಮಿನ್ ಕೂರ್ಚೇ ಏಷಕ್ಷಣಂ ಉಪತಿಷ್ಠತು ॥

...ಗೋತ್ರಂ(ಗೋತ್ರಾಂ), ...ನಾಮಧೇಯಂ(ಅಮ್ಮದಾಂ), ಪ್ರೇತಂ(ಪ್ರೇತಾಂ) ಆವಾಹನಂ ಉಪತಿಷ್ಠತು ॥

...ಗೋತ್ರಸ್ಯ(ಗೋತ್ರಾಯಾಃ), ...ನಾಮಧೇಯಸ್ಯ (ಅಮ್ಮದಾಯಾಃ), ಪ್ರೇತಸ್ಯ(ಪ್ರೇತಾಯಾಃ) ಆಸನಂ ಉಪತಿಷ್ಠತು ॥

...ಗೋತ್ರಾಯ(ಗೋತ್ರಾಯ್ಯೈ), ...ನಾಮಧೇಯಾಯ(ಅಮ್ಮದಾಯ್ಯೈ), ಪ್ರೇತಾಯ(ಪ್ರೇತಾಯ್ಯೈ), ಪಾದ್ಯಂ ಉಪತಿಷ್ಠತು ॥

ಅರ್ಘ್ಯಂ ಉಪತಿಷ್ಠತು ॥ ಆಚಮನಂ ಉಪತಿಷ್ಠತು ॥ ಸ್ನಾನಂ ಉಪತಿಷ್ಠತು ॥ ತಿಲಾಃ ಉಪತಿಷ್ಠಂತು ॥ ದರ್ಭಪತ್ರಾಣ್ಯುಪತಿಷ್ಠಂತು ॥ ಸಕಲಾಭಿಧಾನಾನ್ಯುಪತಿಷ್ಠಂತು ॥

ಆಯಾಹಿ ಮಂತ್ರವನ್ನು ಈ ಮೇಲಿನಂತೆ ಹೇಳಿ । ಆ ದರ್ಭೆಯಪವಿತ್ರಕ್ಕೆ ಆವಾಹನ, ಆಸನಾದಿಗಳನ್ನು ಮಾಡಬೇಕು ॥

ಉಪವೀತಂ । ಯಥಾಶಕ್ತಿ ಹಿರಣ್ಯಂ ನಿಧಾಯ । ಗಾಯತ್ರ್ಯಾ ಪ್ರೋಕ್ಷ್ಯ । ಪ್ರಾಚೀನಾವೀತಂ । ಅಪ್ರದಕ್ಷಿಣಂ ಪರಿಷಿಚ್ಯ । ಆಮದ್ರವ್ಯಂ ಸ್ಪೃಷ್ಟ್ವಾ ॥

ಉಪವೀತದಿಂದ । ಯಥಾಶಕ್ತಿ ಹಣವನ್ನು ಇಟ್ಟು । ಗಾಯತ್ರೀಮಂತ್ರದಿಂದ ಆ ಆಮದ್ರವ್ಯಕ್ಕೆ (ಅಕ್ಕಿ ಮತ್ತು ಹೆಸರುಕಾಳಿಗೆ) ನೀರನ್ನು ಪ್ರೋಕ್ಷಿಸಿ । ಪ್ರಾಚೀನಾವೀತಿಯಾಗಿ । ಅಪ್ರದಕ್ಷಿಣೆಯಾಗಿ ಪರಿಷೇಚನ ಮಾಡಿ । ಆಮದ್ರವ್ಯವನ್ನು ಮುಟ್ಟಿಕೊಂಡು ಈ ಕೆಳಗಿನ ಮಂತ್ರವನ್ನು ಹೇಳಬೇಕು ॥

ಓಂ ಪೃಥಿವೀ ತೇ । ಪಾತ್ರಂ ದ್ಯೌಃ । ಅಪಿಧಾನಂ । ಬ್ರಹ್ಮಣಸ್ತ್ವಾ । ಮುಖೇ ಜುಹೋಮಿ । ಬ್ರಾಹ್ಮಣಾನಾಂ ತ್ವಾ । ಪ್ರಾಣಾಪಾನಯೋರ್ಜುಹೋಮಿ । ಅಕ್ಷಿತಮಸಿ । ಮೈಷಾಂ(ಮಾಸಾಂ) ಕ್ಷೇಷ್ಠಾಃ । ಅಮುತ್ರಾಮುಷ್ಮಿನ್ಲೋಕೇ ॥

ಓಂ ಇದಂ ವಿಷ್ಣುಃ । ವಿಚಕ್ರಮೇ । ತ್ರೇಧಾ । ನಿದಧೇಪದಂ । ಸಮೂಢಮಸ್ಯ । ಪಾಗ್ಂಸುರೇ ॥

ಇದಮಿದಂ ನಗ್ನಪ್ರಚ್ಛಾದನ ಶ್ರಾದ್ಧದ್ರವ್ಯಂ ಆಮಂ ರಕ್ಷಸ್ವ । ಪ್ರೇತೋ(ಪ್ರೇತಾ) ದೇವತಾ । ...ಗೋತ್ರಸ್ಯ(ಗೋತ್ರಾಯಾಃ), ...ನಾಮಧೇಯಸ್ಯ(ನಾಮ್ನ್ಯಾಃ), ಪ್ರೇತಸ್ಯ(ಪ್ರೇತಾಯಾಃ) ನಗ್ನಪ್ರಚ್ಛಾದನಶ್ರಾದ್ಧೇ, ...ಗೋತ್ರಾಯ(ಗೋತ್ರಾಯೈ), ...ಶರ್ಮಣೇ(ದಾಯೈ) ಪ್ರೇತಾಯ(ಪ್ರೇತಾಯೈ) ಇದಮಿದಂ ಆಮದ್ರವ್ಯಂ, ಸದಕ್ಷಿಣಾಕಂ, ಪ್ರೇತ ತೃಪ್ತ್ಯೈಚೋಪತಿಷ್ಠಂತು । ಗದಾಧರಃ ಪ್ರೀಯತಾಂ, ಇತಿ ತುಳಸೀದಳಂ ಆಮೇ ದತ್ವಾ । ಅನೇನ ಪ್ರೇತಾಪ್ಯಾಯನಮಸ್ತ್ವಿತಿ ಭವಂತೋ ಬ್ರುವಂತು । ಪ್ರೇತಾಪ್ಯಾಯನಮಸ್ತು ಇತಿ ಪ್ರತಿವಚನಂ ॥

ನಂತರ ಈ ಮೇಲೆ ವಿಧಿಸಿದಂತೆ ಹೇಳಿ । ದಕ್ಷಿಣೆಸಹಿತ ಆಮದ್ರವ್ಯವನ್ನು ತುಳಸಿಯೊಂದಿಗೆ, ಪ್ರೇತಕ್ಕೆ ದತ್ತ(ಕೊಟ್ಟು) ಮಾಡಿ । ಪ್ರೇತತೃಪ್ತಿಯಾಯಿತೆಂದು ಬ್ರಾಹ್ಮಣರಿಂದ ಹೇಳಿಸಬೇಕು ॥

ಉಪವೀತಂ । ಪ್ರೇತಸ್ಯ(ಪ್ರೇತಾಯಾಃ) ನಗ್ನಪ್ರಚ್ಛಾದನಶ್ರಾದ್ಧಕರ್ಮ ಸಾಂಗತಾಫಲ ಸಿದ್ಧಿದ್ವಾರಾ ಪ್ರೇತಸ್ಯ(ಪ್ರೇತಾಯಾಃ) ವಸ್ವಾದಿ ಪುಣ್ಯಲೋಕಾವಾಪ್ತ್ಯರ್ಥಂ, ಪ್ರೇತತ್ವ ವಿಮೋಚನಾರ್ಥಂ, ಶ್ರೀಮಹಾವಿಷ್ಣುಪ್ರೀತ್ಯರ್ಥಂ, ದೀಪ – ಉದಕುಂಭ ದಾನಾನಿ ದೇಯಾನಿ ॥

ನಂತರ ಉಪವೀತಿಯಾಗಿ । ಮೊದಲದಿನದ ಔರ್ಧ್ವದೈಹಿಕಕರ್ಮದ ಸಾಂಗತಾಫಲಸಿದ್ಧಿಗಾಗಿ ಹಾಗೂ ಪ್ರೇತತ್ವ ವಿಮೋಚನಾರ್ಥವಾಗಿ, ದೀಪ – ಉದಕುಂಭಗಳನ್ನು ದಾನ ಮಾಡಬೇಕು ॥

ದೀಪದಾನ ಶ್ಲೋಕ

ಜ್ಞಾನ ಪ್ರಕಾಶಕಂ ದೀಪಂ ಜ್ಞಾನವೃದ್ಧಿಕರಂ ಪರಂ ।

ಪ್ರೇತಸ್ಯ ಜ್ಞಾನಸಿದ್ಧ್ಯರ್ಥಂ ಅತಶ್ಶಾಂತಿ ಪ್ರಯಚ್ಛ ಮೇ ॥

ಉದಕುಂಭದಾನ ಶ್ಲೋಕ

ಪಾನೀಯಂ ಪಾವನಂ ಶ್ರೇಷ್ಠಂ ಸರ್ವದಾನೋತ್ತಮೋತ್ತಮಮ್ ।

ಸರ್ವೇಷಾಂ ಪ್ರಾಣಮಾಹಾರಂ ಅತಶ್ಶಾಂತಿಂ ಪ್ರಯಚ್ಛ ಮೇ ॥

ಬ್ರಾಹ್ಮಣೇಭ್ಯೋ ದಾನಾನಿ ದತ್ವಾ । ಇಮಾನಿ ನಮಮ । ಪ್ರಾಚೀನಾವೀತಿಭೂತ್ವಾ । ಇಮಾನಿ ಸ್ವೀಕೃತ್ಯ, ...ಗೋತ್ರಸ್ಯ(ಗೋತ್ರಾಯಾಃ), ...ಶರ್ಮಣಃ(ದಾಯಾಃ) ಪ್ರೇತಸ್ಯ(ಪ್ರೇತಾಯಾಃ) ಮರಣಕಾಲೇ, ದಹನಕಾಲೇ ಚ ಸಂಭಾವಿತಾನಾಂ ಮಂತ್ರ, ತಂತ್ರ, ದ್ರವ್ಯ, ಭಕ್ತಿ, ಶ್ರದ್ಧಾ, ರಾಹಿತ್ಯೇನ – ಸಂಭಾವಿತಾನಾಂ ಚ ದೋಷಾಣಾಂ ಅಪನೋದನದ್ವಾರಾ, ...ಗೋತ್ರಸ್ಯ(ಗೋತ್ರಾಯಾಃ), ...ಶರ್ಮಣಃ(ದಾಯಾಃ) ಪ್ರೇತಸ್ಯ(ಪ್ರೇತಾಯಾಃ) ಅಕ್ಷಯ್ಯ ಪುಣ್ಯಲೋಕಾವಾಪ್ತಿರಸ್ತ್ವಿತಿ, ಶ್ರೀಮಹಾವಿಷ್ಣುಃ ಸುಪ್ರೀತೋ ವರದೋಭವತು ಇತ್ಯನುಗೃಹ್ಣಂತು । ಇತಿ ಪ್ರಾರ್ಥಯೇತ್ ॥ ತಥಾಸ್ತು ಇತಿ ಪ್ರತಿವಚನಂ ॥

ಮೇಲೆ ಹೇಳಿದ ಶ್ಲೋಕದಿಂದ ಬ್ರಾಹ್ಮಣರಿಗೆ ದೀಪದ ಹಾಗೂ ಉದಕುಂಭ ದಾನಗಳನ್ನು ಮಾಡಿ। ಪ್ರಾಚೀನಾವೀತಿಯಾಗಿ, ಮೇಲೆ ಹೇಳಿರುವಂತೆ ಬ್ರಾಹ್ಮಣರನ್ನು ಪ್ರಾರ್ಥಿಸಬೇಕು ॥ ಬ್ರಾಹ್ಮಣರು ಆಶೀರ್ವದಿಸಬೇಕು ॥

****

2 ನಿತ್ಯವಿಧಿಃ

ಸೂಚನೆ

ರಾತ್ರೌದಾಹೇ – ಏಕೋತ್ತರವೃದ್ಧಿಶ್ರಾದ್ಧಂ, ನವಶ್ರಾದ್ಧಂ, ತಿಲೋದಕಂ ಚ ನ ಕರ್ತವ್ಯಂ। ಪರದಿನೇ ಕಾರ್ಯಂ ॥

ದಹನದ ದಿನವೇ ಸೂರ್ಯಾಸ್ತದ ಒಳಗೆ ನಿತ್ಯವಿಧಿಗಳಾದ – ಶಿಲಾಸ್ಥಾಪನ, ವಾಸೋದಕ, ತಿಲೋದಕ, ಪಿಂಡಪ್ರದಾನ, ಏಕೋತ್ತರವೃದ್ಧಿಶ್ರಾದ್ಧಗಳನ್ನು ಹಾಗೂ ನವಶ್ರಾದ್ಧವನ್ನೂ ಆರಂಭಿಸಬೇಕು। ಒಂದುವೇಳೆ ಸೂರ್ಯಾಸ್ತದ ಒಳಗೆ ಮಾಡಲು ಆಗದಿದ್ದ ಪಕ್ಷದಲ್ಲಿ, ಮರುದಿನ ಮಾಡಬೇಕು। ವಸ್ತ್ರಸಹಿತ ಸ್ನಾನಮಾಡಿ, ಒದ್ದೆಬಟ್ಟೆಯಲ್ಲೇ ಈ ನಿತ್ಯವಿಧಿಗಳನ್ನು ಮಾಡಬೇಕು ॥

ಬೇಕಾದ ಸಾಮಗ್ರಿಗಳು

೩ ಬಾಳೆಎಲೆ – ೨ ಪಂಚಪಾತ್ರೆ – ೨ ಉದ್ಧರಣೆ – ೧ ಟವಲ್ – ೨ ಕಟ್ಟು ದರ್ಭೆ – ೧ ಮುಷ್ಟಿ ತುಳಸಿ – ೧ ಬಿಳಿಬಣ್ಣದ ಕಲ್ಲು – ೨ ಚಮಚ ಮಣ್ಣು – ೧೦೦ ಎಮ್. ಎಲ್. ಎಳ್ಳೆಣ್ಣೆ – ೨ ಚಮಚ ಸೀಗೇಪುಡಿ – ೨ ಚಮಚ ಮೊಸರು – ೧ ಲೋಟ ಹಾಲು – ೨೫೦ ಗ್ರಾಂ ಅಕ್ಕಿ – ೨೫೦ ಗ್ರಾಂ ಎಳ್ಳು – ೧೦ ರೂ ನೋಟು ೧೦ – ೧೦ ರೂ ಕಾಯಿನ್ ೧೦ – ೧ ಕಲಶ(ಚೊಂಬು) – ೧೦೦ ಗ್ರಾಂ ತುಪ್ಪ – ೩ ಅಡಿಕೆಪಟ್ಟೆ ಬೌಲ್ – ೩ ಅಡಿಕೆಪಟ್ಟೆ ತಟ್ಟೆ – ೨ ಲೀಟರ್ ನೀರು.

ಅನುಜ್ಞೋ –

ಉಪವೀತಂ । ಬ್ರಹ್ಮದಂಡಂ ಚರಿತ್ವಾ । ಪ್ರಾಚೀನಾವೀತಂ । ...ಗೋತ್ರಸ್ಯ(ಗೋತ್ರಾಯಾಃ), ...ಶರ್ಮಣಃ(ದಾಯಾಃ) ಪ್ರೇತಸ್ಯ(ಪ್ರೇತಾಯಾಃ) ಪ್ರೇತತ್ವ ವಿಮೋಕಾರ್ಥಂ, ಮರಣದಿನಾದಾರಭ್ಯ ಅದ್ಯ ಪ್ರಥಮೇಽಹನಿ ಶಿಲಾಸ್ಥಾಪನ –

ವಾಸೋದಕ – ತಿಲೋದಕಾನಿ ಕರ್ತುಂ ಮುಖ್ಯಕಾಲೋ ಭೂತ್ವಾ, ಅಧಿಕಾರ ಸಂಪದಸ್ತ್ವಿತಿ ಭವಂತೋಬ್ರುವಂತು । ಅಧಿಕಾರ ಸಂಪದಸ್ತು ಇತಿ ಪ್ರತಿವಚನಂ ॥

ಉಪವೀತಿಯಾಗಿ । ಮೇಲೆ ಹೇಳಿರುವಂತೆ ಬ್ರಹ್ಮದಂಡವನ್ನು(ದಕ್ಷಿಣೆಯಿಟ್ಟು) ಮಾಡಿ । ಪ್ರಾಚೀನಾವೀತಿಯಾಗಿ । ಮೇಲಿನಂತೆ ಬ್ರಾಹ್ಮಣರಲ್ಲಿ ಅನುಜ್ಞೆಯನ್ನು ಕೇಳಬೇಕು ॥

ಸಂಕಲ್ಪ –

ಉಪವೀತಂ । ಓಂಓಂಓಂ ಶ್ರೀ ಗೋವಿಂದ ಗೋವಿಂದ ಗೋವಿಂದ ...ಪುಣ್ಯತಿಥೌ । ಪ್ರಾಚೀನಾವೀತಂ । ...ಗೋತ್ರಸ್ಯ(ಗೋತ್ರಾಯಾಃ), ...ಶರ್ಮಣಃ(ದಾಯಾಃ), ಪ್ರೇತಸ್ಯ(ಪ್ರೇತಾಯಾಃ), ಪ್ರೇತತ್ವ ವಿಮೋಕಾರ್ಥಂ, ಮರಣದಿನಾದಾರಭ್ಯ ಅದ್ಯ ಪ್ರಥಮೇऽಹನಿ ದಹನಜನಿತ ತಾಪೋಪಶನಾರ್ಥಂ, ತೃಷ್ಣೋಪಶಮನಾರ್ಥಂ, ವಸ್ವಾದಿ ಪುಣ್ಯಲೋಕಾವಾಪ್ತ್ಯರ್ಥಂ, ಶಿಲಾಸ್ಥಾಪನ, ವಾಸೋದಕ, ತಿಲೋದಕಾನಿ ಕರಿಷ್ಯೇ ॥

ಉಪವೀತಿಯಾಗಿ । ಮೇಲಿನಂತೆ ಸಂಕಲ್ಪವನ್ನು ಆರಂಭಿಸಿ । ಪ್ರಾಚೀನಾವೀತಿಯಾಗಿ, ಮೇಲೆ ಇರುವಂತೆ ಸಂಕಲ್ಪವನ್ನು ಮುಂದುವರೆಸಿ, ಶಿಲಾಸ್ಥಾಪನ – ವಾಸೋದಕ – ತಿಲೋದಕ ಕರ್ಮಗಳಿಗೆ ಸಂಕಲ್ಪವನ್ನು ಮಾಡಬೇಕು ॥

ಶಿಲಾಸ್ಥಾಪನಂ –

ದಕ್ಷಿಣಾಗ್ರಾನ್ ದರ್ಭಾನಾಸ್ತೀರ್ಯ । ತತ್ರ ಶಿಲಾಂ ಸಂಸ್ಥಾಪ್ಯ ।

ದಕ್ಷಿಣಾಗ್ರವಾಗಿ ದರ್ಭೆಗಳನ್ನು ಹರಡಿ । ಅವುಗಳಮೇಲೆ, ೪ ಇಂಚು ಅಗಲ, ೪ ಇಂಚು ಉದ್ದ ಹಾಗೂ ಹೆಬ್ಬೆಟ್ಟುಗಾತ್ರದಷ್ಟು ದಪ್ಪದ ಲಕ್ಷಣವಿರುವ ಬಿಳಿಬಣ್ಣದ ಕಲ್ಲನ್ನು ಇಟ್ಟು ॥

ಇಹಲೋಕಂ ಪರಿತ್ಯಜ್ಯ ಗತೋಽಸಿ(ಗತಾಸಿ) ಪರಮಾಂ ಗತಿಂ ।

ಮನಸಾ ವಾಯುರೂಪೇಣ ಶಿಲಾಯಾಂ ಯೋಜಯಾಮ್ಯಹಮ್ ॥

ಓಂ ಆಯಾಹಿ ಪ್ರೇತ(ಪ್ರೇತೇ) । ಸೋಮ್ಯಾ(ಸೋಮ್ಯೇ) ಗಂಭೀರೈಃ । ಪಥಿಭಿಃ ಪೂರ್ವ್ಯೈರ್ಃ ॥ ಪ್ರಜಾಮಸ್ಮಭ್ಯಂ । ದದದ್ರಯಿಂ ಚ(ದದತೋರಯಿಂ ಚ) । ದೀರ್ಘಾಯುತ್ವಂ ಚ । ಶತಶಾರದಂ ಚ ॥

ಇತಿ ಮಂತ್ರಮುಚ್ಚಾರ್ಯ ।

...ಗೋತ್ರ(ಗೋತ್ರೇ), ...ಶರ್ಮನ್(ಅಮ್ಮದೇ), ಪ್ರೇತ(ಪ್ರೇತೇ) ಏಷ ಕ್ಷಣಂ ಉಪತಿಷ್ಠತು, ಇತಿ ತಿಲದರ್ಭೈಃ ಸಂಪೂಜ್ಯ ।

ಮೇಲಿನ ಶ್ಲೋಕ ಮತ್ತು ಮಂತ್ರಗಳಿಂದ ಶಿಲೆಗೆ ಪ್ರೇತನನ್ನು ಆವಾಹನೆ ಮಾಡಿ । ತಿಲ, ದರ್ಭೆಗಳಿಂದ ಆವಾಹಿತ ಶಿಲೆಗೆ ಪೂಜಿಸಿ ॥

...ಗೋತ್ರಂ(ಗೋತ್ರಾಂ), ...ಶರ್ಮಾಣಂ(ದಾಂ), ಪ್ರೇತಂ(ಪ್ರೇತಾಂ) ಆವಾಹನಂ ಉಪತಿಷ್ಠತು ।

...ಗೋತ್ರಸ್ಯ(ಗೋತ್ರಾಯಾಃ), ...ಶರ್ಮಣಃ(ದಾಯಾಃ), ಪ್ರೇತಸ್ಯ(ಪ್ರೇತಾಯಾಃ) ಆಸನಂ ಉಪತಿಷ್ಠತು ।

...ಗೋತ್ರಾಯ(ಗೋತ್ರಾಯ್ಯೈ), ...ಶರ್ಮಣೇ(ದಾಯ್ಯೈ), ಪ್ರೇತಾಯ(ಪ್ರೇತಾಯ್ಯೈ) ಪಾದ್ಯಂ ಉಪತಿಷ್ಠತು ।

ಅರ್ಘ್ಯಂ ಉಪತಿಷ್ಠತು । ಆಚಮನಂ ಉಪತಿಷ್ಠತು । ಅಶುಚಿ ಪರಿಹಾರಾರ್ಥಂ ಮೃದಾಸ್ನಾನಂ ಉಪತಿಷ್ಠತು । ಅಂಜನಾಭ್ಯಂಜನಂ ಉಪತಿಷ್ಠತು । ಸ್ನಾನೀಯಚೂರ್ಣಂ ಉಪತಿಷ್ಠತು । ಶುದ್ಧಸ್ನಾನಂ ಉಪತಿಷ್ಠತು । ತಿಲಾ ಉಪತಿಷ್ಠಂತು । ದರ್ಭಪತ್ರಾಣಿ

ಉಪತಿಷ್ಠಂತು । ಸಕಲಾಭಿಧಾನಾನ್ಯುಪತಿಷ್ಠಂತು ॥

ಮೇಲೆ ಹೇಳಿರುವಂತೆ ಆವಾಹನ, ಆಸನ, ಪಾದ್ಯ, ಅರ್ಘ್ಯ, ಆಚಮನ, ಮಣ್ಣಿನಸ್ನಾನ, ಎಣ್ಣೆಸ್ನಾನ ಇತ್ಯಾದಿ ಮೇಲಿರುವ ಉಪಚಾರಗಳನ್ನು ಮಾಡಬೇಕು ॥

ವಾಸೋದಕಂ –

ಕನಿಷ್ಠ ಪುರಸ್ಸರಂ । ವಾಸಂ ಗೃಹೀತ್ವಾ । ...ಗೋತ್ರಸ್ಯ(ಗೋತ್ರಾಯಾಃ), ...ಶರ್ಮಣಃ(ದಾಯಾಃ) ಪ್ರೇತಸ್ಯ(ಪ್ರೇತಾಯಾಃ) ಪ್ರೇತತ್ವ ವಿಮೋಕಾರ್ಥಂ, ಮರಣದಿನಾದಾರಭ್ಯ ಅದ್ಯ ಪ್ರಥಮೇ ಅಹನಿ, ...ಗೋತ್ರಾಯ(ಗೋತ್ರಾಯೈ), ...ಶರ್ಮಣೇ(ದಾಯೈ), ...ಪ್ರೇತಾಯ(ಪ್ರೇತಾಯೈ), ದಹನ ಜನಿತ ತಾಪೋಪಶಮನಾರ್ಥಂ, ಪ್ರಥಮೇऽಹನಿ ಏತತ್ ವಾಸೋದಕಂ ಉಪತಿಷ್ಠತು । ಏವಂ ತ್ರಿಃ ॥

ಕರ್ತೃಗಳಲ್ಲಿ ಸಣ್ಣವನಿಂದ ಆರಂಭಿಸಿ, ಎಡಮಂಡಿಯಮೇಲೆ ದಕ್ಷಿಣಾಭಿಮುಖವಾಗಿ ಕುಳಿತು । ಎಡಭುಜದಲ್ಲಿ ಬಟ್ಟೆಯನ್ನು ಹಾಕಿಕೊಂಡು । ಈ ಮೇಲೆ ಇರುವಂತೆ ಹೇಳಿ । ಆ ಶಿಲೆಯಮೇಲೆ ಬಟ್ಟೆಯಿಂದ ನೀರು ಬೀಳುವಂತೆ, ಬಟ್ಟೆಯನ್ನು ಹಿಂಡಿ ನೀರನ್ನು ಬೀಳಿಸಬೇಕು । ಈ ರೀತಿ ೩ ಸಲ ಮಾಡಬೇಕು ॥

ತಿಲೋದಕಂ –

ಕನಿಷ್ಠ ಪುರಸ್ಸರಂ । ವಾಮಭುಜೇ ವಾಸಃ ಧೃತ್ವಾ । ತಿಲ, ದರ್ಭಾನ್ ಗೃಹೀತ್ವಾ । ...ಗೋತ್ರಾಯ(ಗೋತ್ರಾಯೈ), ...ಶರ್ಮಣೇ(ದಾಯೈ), ಪ್ರೇತಾಯ(ಪ್ರೇತಾಯೈ), ತೃಷ್ಣೋಪಶಮನಾರ್ಥಂ, ಆಪ್ಯಾಯನಾರ್ಥಂ, ಏತತ್ ತಿಲೋದಕಂ ಉಪತಿಷ್ಠತು । ಏವಂ ತ್ರಿಃ ॥

ಕರ್ತೃಗಳಲ್ಲಿ ಸಣ್ಣವನಿಂದ ಆರಂಭಿಸಿ, ಎಡಮಂಡಿಯಮೇಲೆ ದಕ್ಷಿಣಾಭಿಮುಖವಾಗಿ ಕುಳಿತು । ಮೇಲೆ ಇರುವಂತೆ ಹೇಳಿ, ಎಳ್ಳು, ದರ್ಭೆಗಳನ್ನು ೩ ಸಲ ಶಿಲೆಯಮೇಲೆ ಹಾಕಬೇಕು ॥

(((ಏವಂ ಪ್ರಥಮೇಽಹನಿ ತ್ರಿಃ, ದ್ವಿತೀಯೇಽಹನಿ ಚತ್ವಾರಿ, ತೃತೀಯೇಽಹನಿ ಪಂಚ, ಚತುರ್ಥೇಽಹನಿ ಷಟ್ ಆವೃತ್ತಿಃ । ಇತ್ಥಂ ಏಕೋತ್ತರವೃದ್ಧಿಂ ಕುರ್ವನ್ ದಶಾಹ ಪರ್ಯಂತಂ, ವಾಸೋದಕಂ – ತಿಲೋದಕಂ ಚ ದದ್ಯಾತ್)))

(((ಹೀಗೆ, ಮೊದಲದಿನ ೩, ಎರಡನೇದಿನ ೪, ಮೂರನೇದಿನ ೫, ಹೀಗೆ ೧೦ ದಿನಗಳೂ ಒಂದೊಂದು ಸಂಖ್ಯೆಯನ್ನು ಹೆಚ್ಚಿಸುತ್ತಾ, ವಾಸೋದಕ ಮತ್ತು ತಿಲೋದಕಗಳನ್ನು ಕೊಡಬೇಕು)))

ಪಿಂಡಪ್ರದಾನಂ –

ಅನುಜ್ಞಾ –

ಉಪವೀತಂ । ಬ್ರಹ್ಮದಂಡಂ ಧರಿತ್ವಾ । ಪ್ರಾಚೀನಾವೀತಂ । ...ಗೋತ್ರಸ್ಯ(ಗೋತ್ರಾಯಾಃ), ಶರ್ಮಣಃ(ದಾಯಾಃ), ಪ್ರೇತಸ್ಯ(ಪ್ರೇತಾಯಾಃ), ಪ್ರೇತತ್ವ ವಿಮೋಕಾರ್ಥಂ, ಮರಣದಿನಾದಾರಭ್ಯ ಅದ್ಯ ಪ್ರಥಮೇಽಹನಿ ಕ್ಷುತ್ ಉಪಶಮನಾರ್ಥಂ, ಯಥಾ ಅವಯವ ನಿಷ್ಪತ್ತ್ಯರ್ಥಂ, ಪಿಂಡಪ್ರದಾನಂ ಕರ್ತುಂ ಮುಖ್ಯಕಾಲೋಭೂತ್ವಾ, ಉಪವೀತಂ ಅಧಿಕಾರ ಸಂಪದಸ್ತ್ವಿತಿ ಭವಂತೋಬ್ರುವಂತು ॥ ತಥಾಸ್ತು ಇತಿ ಪ್ರತಿವಚನಂ ॥

ಉಪವೀತಿಯಾಗಿ । ಬ್ರಹ್ಮದಂಡವನ್ನು ಮಾಡಿ(ದಕ್ಷಿಣೆಯನ್ನಿಟ್ಟು) । ಪ್ರಾಚೀನಾವೀತಿಯಾಗಿ । ಮೇಲೆ ಇರುವಂತೆ ಅನುಜ್ಞೆಯನ್ನು ಕೇಳಬೇಕು ॥

ಸಂಕಲ್ಪಃ –

ಉಪವೀತಂ । ಓಂಓಂಓಂ.....ಪುಣ್ಯತಿಥೌ । ಪ್ರಾಚೀನಾವೀತಂ । ...ಗೋತ್ರಸ್ಯ(ಗೋತ್ರಾಯಾಃ), ಶರ್ಮಣಃ(ದಾಯಾಃ), ಪ್ರೇತಸ್ಯ(ಪ್ರೇತಾಯಾಃ), ಪ್ರೇತತ್ವ ವಿಮೋಕಾರ್ಥಂ, ಮರಣದಿನಾದಾರಭ್ಯ ಅದ್ಯ ಪ್ರಥಮೇಽಹನಿ ಕ್ಷುತ್ ಉಪಶಮನಾರ್ಥಂ, ಯಥಾ ಅವಯವ ನಿಷ್ಪತ್ತ್ಯರ್ಥಂ, ಪಿಂಡಪ್ರದಾನಂ ಕರಿಷ್ಯೇ ॥

ಉಪವೀತಿಯಾಗಿ । ಸಂಕಲ್ಪವನ್ನು ಆರಂಭಿಸಿ । ಪ್ರಾಚೀನಾವೀತಿಯಾಗಿ ಸಂಕಲ್ಪವನ್ನು ಮುಂದುವರೆಸಿ । ಪ್ರೇತನ ಹಸಿವಿನ ನಿವಾರಣೆಗಾಗಿ ಮತ್ತು ಅವಯವಗಳ ಉತ್ಪತ್ತಿಗಾಗಿ ಪಿಂಡಪ್ರದಾನವನ್ನು ಮಾಡುತ್ತೇನೆಂದು ಸಂಕಲ್ಪಿಸಬೇಕು ॥

ದರ್ಭಾನಾಸ್ತೀರ್ಯ । ತದುಪರಿ ತಿಲೋದಕಂ ದತ್ವಾ । ...ಗೋತ್ರಸ್ಯ(ಗೋತ್ರಾಯಾಃ), ಶರ್ಮಣಃ(ದಾಯಾಃ), ಪ್ರೇತಸ್ಯ(ಪ್ರೇತಾಯಾಃ), ಪ್ರೇತತ್ವ ವಿಮೋಕಾರ್ಥಂ, ಮರಣದಿನಾದಾರಭ್ಯ ಅದ್ಯ ಪ್ರಥಮೇಽಹನಿ ಕ್ಷುತ್ ಉಪಶಮನಾರ್ಥಂ, ಯಥಾ ಅವಯವ ನಿಷ್ಪತ್ತ್ಯರ್ಥಂ, ಏಷ ಪಿಂಡ ಉಪತಿಷ್ಠತು । ತದುಪರಿ ತಿಲೋದಕಂ ಉಪತಿಷ್ಠತು । ದಧ್ಯುಪತಿಷ್ಠತು । ಘೃತಂ ಉಪತಿಷ್ಠತು । ಕ್ಷೀರಂ ಉಪತಿಷ್ಠತು । ತುಳಸೀದಳಂ ಉಪತಿಷ್ಠತು । ತಿಲಾ ಉಪತಿಷ್ಠಂತು । ದರ್ಭಪತ್ರಾಣಿ ಉಪತಿಷ್ಠಂತು । ಸಕಲಾಭಿಧಾನಾನ್ಯುಪತಿಷ್ಠಂತು ।

ದಕ್ಷಿಣಾಗ್ರವಾಗಿ ದರ್ಭೆಗಳನ್ನು ಹರಡಿ । ಅದರಮೇಲೆ ತಿಲೋದಕವನ್ನು ಬಿಟ್ಟು । ಮೇಲೆ ಇರುವಂತೆ ಹೇಳಿ, ಪಿಂಡವನ್ನು ಇಟ್ಟು । ಅದರಮೇಲೆ ತಿಲೋದಕ – ಮೊಸರು – ತುಪ್ಪ – ಹಾಲು – ತುಳಸಿ – ಎಳ್ಳುಗಳನ್ನು ಮೇಲೆ ಇರುವಂತೆ ಹೇಳಿ ಹಾಕಬೇಕು ॥

ಉಪವೀತಂ । ವೀರ್ಯ ನಿಷ್ಪತ್ತ್ಯರ್ಥಂ, ದಕ್ಷಿಣಾ ಉಪತಿಷ್ಠಂತು । ಪ್ರಾಚಾನಾವೀತಿ । ನಮಸ್ಕಾರಃ ಉಪತಿಷ್ಠತು । ಬಲ್ಯಾದೌ ತಿಲೋದಕಂ ಉಪತಿಷ್ಠತು । ಸಾಯಂ ಪ್ರಾತಃ ಬಲಿಃ ಉಪತಿಷ್ಠತು । ಬಲ್ಯಂತೇ ತಿಲೋದಕಂ ಉಪತಿಷ್ಠತು ।

ಉಪವೀತಿಯಾಗಿ । ಮೇಲೆ ಇರುವಂತೆಹೇಳಿ ದಕ್ಷಿಣೆಯನ್ನು ಇಟ್ಟು । ಪ್ರಾಚೀನಾವೀತಿಯಾಗಿ । ನಮಸ್ಕಾರ ಮಾಡಿ । ಪಿಂಡದ ಮುಂಭಾಗದಲ್ಲಿ ನೆಲದಮೇಲೆ, ತಿಲೋದಕವನ್ನು ಹಾಕಿ । ಅದರಮೇಲೆ ಪಿಂಡದಿಂದಲೇ ಸ್ವಲ್ಪ ಅನ್ನವನ್ನು ತೆಗೆದು, ಸಂಜೆಯ ಮತ್ತು ಬೆಳಿಗ್ಗೆಯ ಬಲಿಯೆಂದು ಇಡಬೇಕು । ನಂತರ ಆ ಬಲಿಯ ಮೇಲೆ ತಿಲೋದಕವನ್ನು ಕೊಡಬೇಕು ॥

ಪಾತ್ರೇ ತಿಲೋದಕಂ ಪೂರಯಿತ್ವಾ । ಅಪ್ರದಕ್ಷಿಣಂ ಪರಿಷಿಚ್ಯ ।

ಓಂ ಊರ್ಜಂ । ವಹಂತೀಃ । ಅಮೃತಂ । ಘೃತಂ ಪಯಃ । ಕೀಲಾಲಂ ।
ಪರಿಸ್ರುತಂ ॥ ಸ್ವಧಾಸ್ಥ । ತರ್ಪಯತ ಮೇ ॥

ಪಾತ್ರೆಯಲ್ಲಿ ತಿಲೋದಕವನ್ನು ಸಿದ್ಧಮಾಡಿಕೊಂಡು । ಅಪ್ರದಕ್ಷಿಣವಾಗಿ ಶಿಲೆಯನ್ನೂ ಸೇರಿಸಿಕೊಂಡು, ಪಿಂಡಕ್ಕೆ ತಿಲೋದಕದಿಂದ ಈ ಮೇಲಿನ ಮಂತ್ರದಿಂದ ಪರಿಷೇಚನ ಮಾಡಬೇಕು ॥

ನಾರಾಯಣ ನಮಸ್ತೇಽಸ್ತು ಶಂಖಚಕ್ರ ಗದಾಧರ ।
ಅಕ್ಷಯ್ಯಂ ಪಿಂಡದಾನೇನ ಪ್ರೇತತೃಪ್ತಿಕರೋ ಭವ ॥
ಗೃಧ್ರವಾಯಸ ರೂಪೇಣ ಜಲಮುಖೇನ ಭುಜ್ಯತಾಮ್ ॥

ಶ್ರೀ ಗೋವಿಂದ ಗೋವಿಂದ ಗೋವಿಂದ । ಆಪ್ಯಾಯಸ್ವ – ವೋದಸ್ವ – ಭುಂಕ್ಷ್ವ । ಪಿಂಡಂ ಗೃಹೀತ್ವಾ । ಶುಚೌದೇಶೇ ಭೂಮೌ ನಿಕ್ಷಿಪ್ಯ । ವಾಯಸಾಹ್ವಾನಂ ಕುರ್ಯಾತ್ । ಶಿಲಾಂ ವಿಸೃಜ್ಯ ॥

ಈ ಮೇಲಿರುವ ಶ್ಲೋಕವನ್ನು ಹೇಳಿ । ಪಿಂಡವನ್ನು ತೆಗೆದುಕೊಂಡು, ಶುಚಿಯಾದ ಜಾಗದಲ್ಲಿಟ್ಟು । ೩ ಸಲ ಬಾಯಿ ಬಡಿಯುವುದು । ೩ ಬಾರಿ ಕಾಗೆಯನ್ನು ಕೂಗುವುದು । ನಂತರ ಶಿಲೆಯನ್ನು ಅಲ್ಲಿಂದ ತೆಗೆದು, ಬಟ್ಟೆಯಲ್ಲಿ ಸುತ್ತಿ, ಜೋಪಾನವಾಗಿಟ್ಟುಕೊಂಡು, ದಿನವೂ ಮಾಡುವ ನಿತ್ಯವಿಧಿಗಳಲ್ಲಿ ಹಾಗೂ ವೇದಿಕಾರಾಧನೆಯಲ್ಲಿ ಇದನ್ನು ಪ್ರೇತಸ್ಥಾನದಲ್ಲಿ ಬಳಸಬೇಕು, ಕಳೆಯಬಾರದು ॥

ಏಕೋತ್ತರವೃದ್ಧಿ ಶ್ರಾದ್ಧ–

ಸೂಚನೆ

(ಇದನ್ನು ಮರಣದ ದಿನದಿಂದ ಆರಂಭಿಸಿ ಪ್ರತಿದಿನವೂ ಮಾಡಬೇಕು)

ಬೇಕಾಗುವ ಸಾಮಗ್ರಿಗಳು

೨ ಬಾಳೆಎಲೆ – ೨ ಪಂಚಪಾತ್ರೆ – ೨ ಉದ್ಧರಣೆ – ೨ ಟವಲ್ – ೧ ಕಟ್ಟು ದರ್ಭೆ – ೧ ಮುಷ್ಟಿ ತುಳಸಿ – ೨೫೦ ಗ್ರಾಂ ಅಕ್ಕಿ – ೨೫೦ ಗ್ರಾಂ ಎಳ್ಳು – ೨೫೦ ಗ್ರಾಂ ಹೆಸರುಕಾಳು – ೧೦ ರೂ ನೋಟು ೧೦ – ೧೦ ರೂ ಕಾಯಿನ್ ೧೦ – ೧ ಕಲಶ(ಚೊಂಬು) – ೨ ಅಡಿಕೆಪಟ್ಟೆ ಬೌಲ್ – ೩ ಅಡಿಕೆಪಟ್ಟೆ ತಟ್ಟೆ – ೧ ಲೀಟರ್ ನೀರು.

ಅನುಜ್ಞೆ –

ಉಪವೀತಂ । ಬ್ರಹ್ಮದಂಡಂ ಚರಿತ್ವಾ । ಪ್ರಾಚೀನಾವೀತಂ । ...ಗೋತ್ರಸ್ಯ (ಗೋತ್ರಾಯಾಃ), ...ಶರ್ಮಣಃ(ದಾಯಾಃ), ಅಸ್ಮತ್ ಪಿತುಃ(ಮಾತುಃ), ಪ್ರೇತಸ್ಯ(ಪ್ರೇತಾಯಾಃ), ವಸ್ವಾದಿ ಪುಣ್ಯಲೋಕಾವಾಪ್ತ್ಯರ್ಥಂ, ಕೃತಕರ್ಮ ಸಾಂಗತಾಫಲ ಸಿದ್ಧ್ಯರ್ಥಂ, ಶ್ರೀಮಹಾವಿಷ್ಣು ಪ್ರೀತ್ಯರ್ಥಂ, ಏಕೋತ್ತರವೃದ್ಧಿ ಶ್ರಾದ್ಧಂ ಆಮರೂಪೇಣ ಕರ್ತುಂ, ಮುಖ್ಯಕಾಲೋಭೂತ್ವಾ, ಉಪವೀತಂ, ಅಧಿಕಾರ ಸಂಪದಸ್ತ್ವಿತಿ ಭವಂತೋಬ್ರುವಂತು ॥ ತಥಾಸ್ತು ಇತಿ ಪ್ರತಿವಚನಂ ॥

ಉಪವೀತಿಯಾಗಿ, ಬ್ರಹ್ಮದಂಡವನ್ನು ಮಾಡಿ(ದಕ್ಷಿಣೆಯನ್ನಿಟ್ಟು) । ಮೇಲೆ ಇರುವಂತೆ ಹೇಳಿ, ಏಕೋತ್ತರವೃದ್ಧಿಶ್ರಾದ್ಧಕ್ಕಾಗಿ ಬ್ರಾಹ್ಮಣರ ಅನುಜ್ಞೆಯನ್ನು ಪಡೆಯಬೇಕು ॥

ಸಂಕಲ್ಪ –

ಓಂಓಂಓಂ ಅದ್ಯ ಪೂರ್ವೋಚ್ಚರಿತ.....ಪುಣ್ಯತಿಥೌ । ಪ್ರಾಚೀನಾವೀತಂ । ...ಗೋತ್ರಸ್ಯ(ಗೋತ್ರಾಯಾಃ), ...ಶರ್ಮಣಃ(ದಾಯಾಃ), ಅಸ್ಮತ್ ಪಿತುಃ(ಮಾತುಃ),

ಪ್ರೇತಸ್ಯ(ಪ್ರೇತಾಯಾಃ), ಪ್ರೇತತ್ವ ವಿಮೋಕಾರ್ಥಂ, ಮರಣದಿನಾದಾರಭ್ಯ ಅದ್ಯ ಪ್ರಥಮೋಽಹನಿ ಪ್ರೇತಸ್ಯ ವಸ್ವಾದಿ ಪುಣ್ಯಲೋಕಾವಾಪ್ತ್ಯರ್ಥಂ, ಶ್ರೀಮಹಾವಿಷ್ಣುಪ್ರೀತ್ಯರ್ಥಂ, ಏಕೋತ್ತರವೃದ್ಧಿ ಶ್ರಾದ್ಧಂ ಆಮರೂಪೇಣ ಕರಿಷ್ಯೇ ॥

ಏಕೋತ್ತರವೃದ್ಧಿಶ್ರಾದ್ಧಕ್ಕಾಗಿ, ಮೇಲೆ ಇರುವಂತೆ ಸಂಕಲ್ಪವನ್ನು ಆರಂಭಿಸಿ, ಪ್ರಾಚೀನಾವೀತಿಯಾಗಿ ಸಂಕಲ್ಪವನ್ನು ಮುಂದುವರೆಸಿ, ಆಮರೂಪದಿಂದ ಏಕೋತ್ತರವೃದ್ಧಿಶ್ರಾದ್ಧವನ್ನು ಮಾಡುತ್ತೇನೆಂದು ಸಂಕಲ್ಪಿಸಬೇಕು ॥

ಪರ್ಣೇ ಮುದ್ಗಮಿಶ್ರಿತ ತಂಡುಲಂ ನಿಧಾಯ । ಏಕ ದರ್ಭೇಣ ಕೂರ್ಚಂ ನಿಧಾಯ ।

ಒಂದು ಎಲೆಯಮೇಲೆ, ಹೆಸರುಕಾಳು ಮತ್ತು ಅಕ್ಕಿಯನ್ನು ಇಟ್ಟು । ಅದರಮೇಲೆ ದಕ್ಷಿಣಾಗ್ರವಾಗಿ ೧ ದರ್ಭೆಯ ಕೂರ್ಚವನ್ನಿಟ್ಟು ।

ಇಹಲೋಕಂ ಪರಿತ್ಯಜ್ಯ ಗತೋಽಸಿ(ಗತಾಸಿ) ಪರಮಾಂ ಗತಿಂ ।
ಮನಸಾ ವಾಯುರೂಪೇಣ ಕುಶೇ ತ್ವಾಂ ಯೋಜಯಾಮ್ಯಹಂ ॥

ಓಂ ಆ॑ಯಾಹಿ ಪ್ರೇತ(ಪ್ರೇತೇ) । ಸೋ॒ಮ್ಯಾ॒(ಸೋ॒ಮ್ಯೇ) ಗಂ॒ಭೀರೈಃ । ಪ॒ಥಿ॒ಭಿಃ ಪೂ॒ರ್ವ್ಯೈ॒ರ್ಃ ॥ ಪ್ರ॒ಜಾಮ॒ಸ್ಮಭ್ಯಂ॑ । ದ॒ದ॒ದ್ರ॒ಯಿಂ ಚ॑ (ದ॒ದ॒ತೋ॒ರ॒ಯಿಂ ಚ॑) । ದೀ॒ರ್ಘಾ॒ಯು॒ತ್ವಂ ಚ॑ । ಶ॒ತ॒ಶಾ॒ರ॒ದಂ ಚ ॥

ಆಯಾಹಿ ಪ್ರೇತ(ಪ್ರೇತೇ), ...ಗೋತ್ರ(ಗೋತ್ರೇ), ...ಶರ್ಮನ್(ಅಮ್ಮದೇ), ಏಷ ಕ್ಷಣಂ ಉಪತಿಷ್ಠತು ॥

...ಗೋತ್ರಂ(ಗೋತ್ರಾಂ), ...ಶರ್ಮಾಣಂ(ದಾಂ), ಪ್ರೇತಂ(ಪ್ರೇತಾಂ), ಆವಾಹನಂ ಉಪತಿಷ್ಠತು ॥

...ಗೋತ್ರಸ್ಯ(ಗೋತ್ರಾಯಾಃ), ...ಶರ್ಮಣಃ(ದಾಯಾಃ), ...ಪ್ರೇತಸ್ಯ(ಪ್ರೇತಾಯಾಃ) ಆಸನಂ ಉಪತಿಷ್ಠತು ॥

...ಗೋತ್ರಾಯ(ಗೋತ್ರಾಯ್ಯೈ), ...ಶರ್ಮಣೇ(ದಾಯ್ಯೈ), ಪ್ರೇತಾಯ(ಪ್ರೇತಾಯ್ಯೈ), ಪಾದ್ಯಂ ಉಪತಿಷ್ಠತು ॥

ಅರ್ಘ್ಯಂ ಉಪತಿಷ್ಠತು । ಆಚಮನಂ ಉಪತಿಷ್ಠತು । ತಿಲಾ ಉಪತಿಷ್ಠಂತು । ದರ್ಭಪತ್ರಾಣಿ ಉಪತಿಷ್ಠಂತು । ಸಕಲಾಭಿಧಾನಾನ್ಯುಪತಿಷ್ಠಂತು ॥

ಮೇಲಿನಶ್ಲೋಕ ಮತ್ತು ಮಂತ್ರವನ್ನು ಹೇಳಿ । ಆ ಕೂರ್ಚಕ್ಕೆ ಪ್ರೇತನನ್ನು ಆವಾಹಿಸಿ, ಮೇಲಿರುವಂತೆ ಇತರ ಉಪಚಾರಗಳನ್ನೂ ನೀಡಬೇಕು ॥

ಉಪವೀತಂ । ತುಳಸೀಸಹಿತಃ ಗಾಯತ್ರ್ಯಾ ಪ್ರೋಕ್ಷ್ಯ । ಪ್ರಾಚೀನಾವೀತಂ । ಓಂಸತ್ಯಂ ತ್ವರ್ತೇನ ಪರಿಷಿಂಚಾಮಿ ।

ಉಪವೀತಿಯಾಗಿ । ತುಳಸಿದಳ ಸಹಿತ ನೀರಿನಿಂದ ಗಾಯತ್ರೀಮಂತ್ರದೊಂದಿಗೆ, ಆ ಹೆಸರುಕಾಳು ಮತ್ತು ಅಕ್ಕಿಗೆ ಪ್ರೋಕ್ಷಿಸಬೇಕು । ಪ್ರಾಚೀನಾವೀತಿಯಾಗಿ । ಪರಿಷೇಚನ ಮಾಡಬೇಕು ॥

ಓಂ ಪೃಥಿವೀ ತೇ । ಪಾತ್ರಂ ದ್ಯೌಃ । ಅಪಿಧಾನಂ । ಬ್ರಹ್ಮಣಸ್ತ್ವಾ । ಮುಖೇ ಜುಹೋಮಿ । ಬ್ರಾಹ್ಮಣಾನಾಂ ತ್ವಾ । ಪ್ರಾಣಾಪಾನಯೋರ್ಜುಹೋಮಿ । ಅಕ್ಷಿತಮಸಿ । ಮೈಷಾಂ(ಮಾಸಾಂ) ಕ್ಷೇಷ್ಠಾಃ । ಅಮುತ್ರಾಮುಷ್ಮಿನ್ಲೋಕೇ ॥

ಓಂ ಇದಂ ವಿಷ್ಣುಃ । ವಿಚಕ್ರಮೇ । ತ್ರೇಧಾ । ನಿದಧೇಪದಂ । ಸಮೂಢಮಸ್ಯ । ಪಾಗ್ಂಸುರೇ ॥

ಇದಮಿದಂ ಏಕೋತ್ತರವೃದ್ಧಿ ಶ್ರಾದ್ಧದ್ರವ್ಯಂ ಆಮಂ ರಕ್ಷಸ್ವ । ಪ್ರೇತೋ ದೇವತಾ । ...ಗೋತ್ರಸ್ಯ(ಗೋತ್ರಾಯಾಃ), ...ಶರ್ಮಣಃ(ದಾಯಾಃ), ಪ್ರೇತಸ್ಯ(ಪ್ರೇತಾಯಾಃ), ಏಕೋತ್ತರವೃದ್ಧಿ ಶ್ರಾದ್ಧ ಸಾಂಗತಾಫಲ ಸಿದ್ಧಿದ್ವಾರಾ, ಶ್ರೀಮಹಾವಿಷ್ಣು ಸುಪ್ರೀತಿಂ ಕಾಮಯಮಾನಃ, ಇದಮಿದಂ ಏಕೋತ್ತರವೃದ್ಧಿ ಶ್ರಾದ್ಧದ್ರವ್ಯಂ ಆಮಂ ಸೋಪಸ್ಕರಂ ಸದಕ್ಷಿಣಾಕಂ ಪ್ರೇತ ತೃಪ್ತ್ಯೈ ಚ ಉಪತಿಷ್ಠತು ।

ಮೇಲಿನ ಮಂತ್ರಗಳನ್ನು ಹಾಗೂ ವಾಕ್ಯಗಳನ್ನೂ ಹೇಳಿ । ಈ ಆಮದ್ರವ್ಯವನ್ನು(ಅಕ್ಕಿ, ಹೆಸರುಕಾಳು) ಪ್ರೇತನಿಗೆ ಅರ್ಪಿಸಬೇಕು ॥

ಉಪವೀತಂ । ಅನೇನ ಪ್ರೇತಾಪ್ಯಾಯನಮಸ್ತ್ವಿತಿ ಭವಂತೋಬ್ರುವಂತು । ಪ್ರೇತಾಪ್ಯಾಯನಮಸ್ತು, ಇತಿ ಪ್ರತಿವಚನಂ । ಕೂರ್ಚಂ ವಿಸೃಜೇತ್ ॥

ಉಪವೀತಿಯಾಗಿ । ಪ್ರೇತಕ್ಕೆ ತೃಪ್ತಿಯಾಯಿತೆಂದು ಬ್ರಾಹ್ಮಣರಿಂದ ಆಶೀರ್ವಾದಪಡೆದು । ಕೂರ್ಚವನ್ನು ವಿಸರ್ಜಿಸಬೇಕು ॥

ಇಲ್ಲಿಗೆ ನಿತ್ಯವಿಧಿಯು ಮುಗಿಯಿತು

****

3. ನವಶ್ರಾದ್ಧಂ

ಸೂಚನೆ

(ಇದನ್ನು ಮರಣದ ದಿನದಿಂದ ಆರಂಭಿಸಿ ಬೆಸದಿನಗಳಲ್ಲಿ ಮಾತ್ರ ಮಾಡಬೇಕು)

ಬೇಕಾಗುವ ಸಾಮಗ್ರಿ

೩ ಬಾಳೆಎಲೆ – ೨ ಪಂಚಪಾತ್ರೆ – ೨ ಉದ್ಧರಣೆ – ೧ ಕಟ್ಟು ದರ್ಭೆ – ೧ ಮುಷ್ಟಿ ತುಳಸಿ – ೨೫೦ ಗ್ರಾಂ ಅಕ್ಕಿ – ೨೫೦ ಗ್ರಾಂ ಎಳ್ಳು – ೨೫೦ ಗ್ರಾಂ ಹೆಸರುಕಾಳು – ೧೦ ರೂ ನೋಟು ೧೦ – ೧೦ ರೂ ಕಾಯಿನ್ ೧೦ – ೧ ಕಲಶ(ಚೊಂಬು) – ಉದಕುಂಭದಾನಕ್ಕಾಗಿ ೧ ಹೊಸ ಕಲಶ(ಚೊಂಬು) – ದೀಪದಾನಕ್ಕಾಗಿ ೨ ಹೊಸ ದೀಪಗಳು – ವೊಸರನ್ನ ದಾನಕ್ಕೆ, ೧ ಹೊಸಬೌಲ್ ನಲ್ಲಿ ವೊಸರನ್ನ – ೧೦೦ ಗ್ರಾಂ ತುಪ್ಪ – ೧ ಕಟ್ಟು ದೀಪದಬತ್ತಿ – ೧ ಬೆಂಕಿಪೆಟ್ಟಿಗೆ – ೩ ಅಡಿಕೆಪಟ್ಟೆ ಬೌಲ್ – ೩ ಅಡಿಕೆಪಟ್ಟೆ ತಟ್ಟೆ – ೧ ಲೀಟರ್ ನೀರು.

ಅನುಜ್ಞೆ –

ಉಪವೀತಂ, ಬ್ರಹ್ಮದಂಡಂ ಚರಿತ್ವಾ । ಪ್ರಾಚೀನಾವೀತಿ । ...ಗೋತ್ರಸ್ಯ(ಗೋತ್ರಾಯಾಃ), ...ಶರ್ಮಣಃ(ದಾಯಾಃ), ಪ್ರೇತಸ್ಯ(ಪ್ರೇತಾಯಾಃ), ಪ್ರೇತತ್ವ ವಿಮೋಕಾರ್ಥಂ, ಮರಣದಿನಾದಾರಭ್ಯ ಅದ್ಯ ಪ್ರಥಮೇಽಹನಿ ಪ್ರೇತಸ್ಯ(ಪ್ರೇತಾಯಾಃ), ವಸ್ವಾದಿ ಪುಣ್ಯಲೋಕಾವಾಪ್ತ್ಯರ್ಥಂ, ಶ್ರೀಮಹಾವಿಷ್ಣು ಪ್ರೀತ್ಯರ್ಥಂ, ಪ್ರೇತಸ್ಯ ಯಮಲೋಕ ಮಾರ್ಗೇ ಅಂಧತ್ವ – ಬಧಿರತ್ವ – ಮೂಕತ್ವ ನಿವೃತ್ತಿದ್ವಾರಾ, ಶ್ರೀಮಹಾವಿಷ್ಣು ಪ್ರೀತ್ಯರ್ಥಂ, ನವಶ್ರಾದ್ಧಂ ಆಮರೂಪೇಣ ಕರ್ತುಂ ಮುಖ್ಯಕಾಲೋ ಭೂತ್ವಾ, ಅಧಿಕಾರ ಸಂಪದಸ್ತ್ವಿತಿ ಭವಂತೋಬ್ರುವಂತು ॥ ಅಧಿಕಾರ ಸಂಪದಸ್ತು ॥

ಉಪವೀತಿಯಾಗಿ, ಬ್ರಹ್ಮದಂಡವನ್ನು ಮಾಡಿ(ದಕ್ಷಿಣೆಯಿಟ್ಟು) । ಪ್ರಾಚೀನಾವೀತಿಯಾಗಿ, ಮೇಲಿರುವಂತೆ ಹೇಳಿ । ನವಶ್ರಾದ್ಧಕ್ಕೆ ಬ್ರಾಹ್ಮಣರಿಂದ ಅನುಜ್ಞೆಯನ್ನು ಪಡೆಯಬೇಕು ॥

ಸಂಕಲ್ಪಃ –

ಉಪವೀತಂ । ಓಂಓಂಓಂ .....ಪುಣ್ಯತಿಥೌ । ಪ್ರಾಚೀನಾವೀತಂ । ...ಗೋತ್ರಸ್ಯ(ಗೋತ್ರಾಯಾಃ), ...ಶರ್ಮಣಃ(ದಾಯಾಃ), ಪ್ರೇತಸ್ಯ(ಪ್ರೇತಾಯಾಃ), ಪ್ರೇತತ್ವ ವಿಮೋಕಾರ್ಥಂ, ಮರಣದಿನಾದಾರಭ್ಯ ಅದ್ಯ ಪ್ರಥಮೇಽಹನಿ ಪ್ರೇತಸ್ಯ(ಪ್ರೇತಾಯಾಃ), ವಸ್ವಾದಿ ಪುಣ್ಯಲೋಕಾವಾಪ್ತ್ಯರ್ಥಂ, ಶ್ರೀಮಹಾವಿಷ್ಣು ಪ್ರೀತ್ಯರ್ಥಂ, ಪ್ರೇತಸ್ಯ ಯಮಲೋಕ ಮಾರ್ಗೇ ಅಂಧತ್ವ – ಬಧಿರತ್ವ – ಮೂಕತ್ವ ನಿವೃತ್ತಿದ್ವಾರಾ, ಶ್ರೀಮಹಾವಿಷ್ಣು ಪ್ರೀತ್ಯರ್ಥಂ, ನವಶ್ರಾದ್ಧಂ ಆಮರೂಪೇಣ ಕರಿಷ್ಯೇ ॥

ಉಪವೀತಿಯಾಗಿ ಸಂಕಲ್ಪವನ್ನು ಆರಂಭಿಸಿ । ಪ್ರಾಚೀನಾವೀತಿಯಾಗಿ ಸಂಕಲ್ಪವನ್ನು ಮೇಲಿರುವಂತೆ ಮುಂದುವರೆಸಿ, ನವಶ್ರಾದ್ಧಕ್ಕೆ ಸಂಕಲ್ಪ ಮಾಡಬೇಕು ॥

ಏಕದರ್ಭೇಣ ಕೂರ್ಚಂ ದಕ್ಷಿಣಾಗ್ರಂ ನಿಧಾಯ ।

ಇಹಲೋಕಂ ಪರಿತ್ಯಜ್ಯ ಗತೋಽಸಿ(ಗತಾಸಿ) ಪರಮಾಂ ಗತಿಮ್ ।
ಮನಸಾ ವಾಯುರೂಪೇಣ ಕುಶೇ ತ್ವಾಂ ಯೋಜಯಾಮ್ಯಹಮ್ ॥

ಓಂ ಆಯಾಹಿ ಪ್ರೇತ(ಪ್ರೇತೇ) । ಸೋಮ್ಯಾ(ಸೋಮ್ಯೇ) ಗಂಭೀರೈಃ । ಪಥಿಭಿಃ ಪೂರ್ವ್ಯೈಃ ॥ ಪ್ರಜಾಮಸ್ಮಭ್ಯಂ । ದದದ್ರಯಿಂ ಚ (ದದತೋರಯಿಂ ಚ) । ದೀರ್ಘಾಯುತ್ವಂ ಚ । ಶತಶಾರದಂ ಚ ॥

...ಗೋತ್ರ(ಗೋತ್ರೇ), ...ಶರ್ಮನ್(ಅಮ್ಮದೇ), ಪ್ರೇತ(ಪ್ರೇತೇ) ಏಷಕ್ಷಣಂ ಉಪತಿಷ್ಠತು । ಇತಿ ತಿಲದರ್ಭೈಃ ಸಂಪೂಜ್ಯ ॥

...ಗೋತ್ರಸ್ಯ(ಗೋತ್ರಾಯಾಃ), ...ಶರ್ಮಣಃ(ದಾಯಾಃ), ಪ್ರೇತಸ್ಯ (ಪ್ರೇತಾಯಾಃ), ಆವಾಹನಂ ಉಪತಿಷ್ಠತು ॥

...ಗೋತ್ರಂ(ಗೋತ್ರಾಂ), ...ಶರ್ಮಾಣಂ(ದಾಂ), ಪ್ರೇತಂ(ಪ್ರೇತಾಂ) ಆಸನಮುಪತಿಷ್ಠತು ॥

ಪಾದ್ಯಂ ಉಪತಿಷ್ಠತು । ಅರ್ಘ್ಯಂ ಉಪತಿಷ್ಠತು । ಆಚಮನಂ ಉಪತಿಷ್ಠತು । ತಿಲಾ ಉಪತಿಷ್ಠಂತು । ದರ್ಭಪತ್ರಾಣಿ ಉಪತಿಷ್ಠಂತು । ದಕ್ಷಿಣಾ ಉಪತಿಷ್ಠಂತು ॥

ಒಂದು ದರ್ಭೆಯ ಕೂರ್ಚವನ್ನು ದಕ್ಷಿಣಾಗ್ರವಾಗಿಟ್ಟು । ಮೇಲಿನ ಶ್ಲೋಕ ಮತ್ತು ಮಂತ್ರವನ್ನು ಹೇಳಿ । ಮೇಲಿರುವಂತೆ ಕೂರ್ಚಕ್ಕೆ ಪ್ರೇತನನ್ನು ಆವಾಹಿಸಿ, ಆಸನಾದಿ ಉಪಚಾರಗಳನ್ನು ತಿಲದರ್ಭೆಗಳಿಂದ ನೀಡಬೇಕು ॥

ಉಪವೀತಂ । ಪ್ರಾಣಾನಾಯಮ್ಯ । ಪ್ರಾಚೀನಾವೀತಂ ।

ಓಂ ಪೃಥಿವೀ ತೇ । ಪಾತ್ರಂ ದ್ಯೌಃ । ಅಪಿಧಾನಂ । ಬ್ರಹ್ಮಣಸ್ತ್ವಾ । ಮುಖೇ ಜುಹೋಮಿ । ಬ್ರಾಹ್ಮಣಾನಾಂ ತ್ವಾ । ಪ್ರಾಣಾಪಾನಯೋರ್ಜುಹೋಮಿ । ಅಕ್ಷಿತಮಸಿ । ಮೈಷಾಂ(ಮಾಸಾಂ) ಕ್ಷೇಷ್ಠಾಃ । ಅಮುತ್ರಾಮುಷ್ಮಿನ್ಲೋಕೇ ॥

ಓಂ ಇದಂ ವಿಷ್ಣುಃ । ವಿಚಕ್ರಮೇ । ತ್ರೇಧಾ । ನಿದಧೇಪದಂ । ಸಮೂಢಮಸ್ಯ । ಪಾಗ್ಂಸುರೇ ॥

...ಗೋತ್ರಸ್ಯ(ಗೋತ್ರಾಯಾಃ), ...ಶರ್ಮಣಃ(ದಾಯಾಃ), ಪ್ರೇತಸ್ಯ(ಪ್ರೇತಾಯಾಃ) ಇದಮಿದಂ ಆಮಂ ಸದಕ್ಷಿಣಾಕಂ ಪ್ರೇತತೃಪ್ತ್ಯರ್ಥಮಿದಂ ಚೋಪತಿಷ್ಠತು । ಕೂರ್ಚಂ ವಿಸೃಜೇತ್ ॥

ಉಪವೀತಿಯಾಗಿ ಪ್ರಾಣಾಯಾಮ ಮಾಡಿ । ಪ್ರಾಚೀನಾವೀತಿಯಾಗಿ, ಮೇಲಿರುವ ೨ ಮಂತ್ರಗಳನ್ನು ಮತ್ತು ಮೇಲಿನವಾಕ್ಯಗಳನ್ನು ಹೇಳಿ, ಪ್ರೇತನಿಗೆ ಅಕ್ಕಿ, ಹೆಸರುಕಾಳು ಮತ್ತು ದಕ್ಷಿಣೆಯನ್ನು ಅರ್ಪಿಸುವುದು । ಕೂರ್ಚವನ್ನು ವಿಸರ್ಜಿಸುವುದು ॥

ದಾನ ಸಂಕಲ್ಪಃ

ಉಪವೀತಂ । ಬ್ರಹ್ಮದಂಡಂ ಚರಿತ್ವಾ । ಓಂಓಂಓಂ.....ಪುಣ್ಯತಿಥೌ । ಪ್ರಾಚೀನಾವೀತಂ । ಪ್ರಥಮೇಽಹನಿ ಕೃತಕರ್ಮ ಸಾಂಗತಾಫಲ ಸಿದ್ಧ್ಯರ್ಥಂ ಶ್ರೀಮಹಾವಿಷ್ಣು ಪ್ರೀತ್ಯರ್ಥಂ, ಯಥಾಸಂಭವ ಉದಕುಂಭ – ದಧ್ಯನ್ನ – ದೀಪ – ಹಿರಣ್ಯದಾನಾನಿ ಕರಿಷ್ಯೇ । ಕೃತ್ವಾ ॥

ಉಪವೀತಿಯಾಗಿ ಬ್ರಹ್ಮದಂಡವನ್ನು ಮಾಡಿ, ಸಂಕಲ್ಪವನ್ನು ಆರಂಭಿಸಿ । ಪ್ರಾಚೀನಾವೀತಿಯಾಗಿ, ಮಾಡಿದ ನಿತ್ಯವಿಧಿ – ನವಶ್ರಾದ್ಧ ಕರ್ಮಗಳ ಸಾಂಗತೆಗಾಗಿ, ಉದಕುಂಭ, ದಧ್ಯನ್ನ, ದೀಪ, ಹಿರಣ್ಯದಾನಗಳಿಗೆ ಸಂಕಲ್ಪಮಾಡಿ ॥

ದಾನದ ಶ್ಲೋಕಗಳು –

ಉದಕುಂಭ

ಪಾನೀಯಂ ಪಾವನಂ ಶ್ರೇಷ್ಠಂ ಸರ್ವದಾನೋತ್ತಮೋತ್ತಮಮ್ ।
ಸರ್ವೇಷಾಂ ಪ್ರಾಣಮಾಹಾರಂ ಅತಶ್ಶಾಂತಿಂ ಪ್ರಯಚ್ಛ ಮೇ ॥

ದಧ್ಯನ್ನ

ಅಸ್ಮತ್‌ಕುಲೇ ಹೃಷೀಕೇಶ ಅಕ್ಷಯ್ಯಾನ್ನಂ ಚ ಪುಷ್ಕಲಂ ।
ದಧ್ಯೋದನ ಪ್ರದಾನೇನ ಅತಶ್ಶಾಂತಿಂ ಪ್ರಯಚ್ಛ ಮೇ ॥

ದೀಪ

ಅಂಧಕಾರಹರಂ ದೀಪಂ ಪರಂಜ್ಯೋತಿಸ್ವರೂಪಕಂ ।
ತಸ್ಮಾದಸ್ಯ ಪ್ರದಾನೇನ ಅತಶ್ಶಾಂತಿಂ ಪ್ರಯಚ್ಛ ಮೇ ॥

ಹಿರಣ್ಯ

ಹಿರಣ್ಯಗರ್ಭ ಗರ್ಭಸ್ಥಂ ಹೇಮಬೀಜಂ ವಿಭಾವಸೋಃ ।

ಅನಂತಪುಣ್ಯಫಲದಂ ಅತಶ್ಶಾಂತಿಂ ಪ್ರಯಚ್ಛ ಮೇ ॥

ಪ್ರೇತಸ್ಯ(ಪ್ರೇತಾಯಾಃ) ವಸ್ವಾದಿ ಪುಣ್ಯಲೋಕಾವಾಪ್ತಿಂ ಕಾಮಯಮಾನಃ, ಕೃತಕರ್ಮ ಸಾಂಗತಾ ಫಲಸಿದ್ಧಿದ್ವಾರಾ, ಪ್ರೇತಸ್ಯ(ಪ್ರೇತಾಯಾಃ) ಯಮಲೋಕಮಾರ್ಗೇ ಅಂಧತ್ವ – ಬಧಿರತ್ವ – ಮೂಕತ್ವ ನಿವೃತ್ತಿದ್ವಾರಾ ಶ್ರೀಮಹಾವಿಷ್ಣುಸುಪ್ರೀತಿಂ ಕಾಮಯಮಾನಃ ಇದಮಿದಂ ಉದಕುಂಭಂ, ಸಪಾತ್ರಂ ದಧ್ಯನ್ನಂ, ದೀಪಂ, ಹಿರಣ್ಯಂ ಚ ನಾನಾಗೋತ್ರೇಭ್ಯೋ, ನಾನಾನಾಮಧೇಯೇಭ್ಯೋ ಬ್ರಾಹ್ಮಣೇಭ್ಯಃ ತೇಭ್ಯಃ ತೇಭ್ಯಃ ಸಂಪ್ರದದೇ । ಇದಂ ನಮಮ ॥

ಮೇಲಿರುವ ಆಯಾಯಾ ಶ್ಲೋಕ ಹಾಗೂ ವಾಕ್ಯಗಳಿಂದ ಬ್ರಾಹ್ಮಣರಿಗೆ ದಾನ ಕೊಡಬೇಕು ॥

ಇದಂ ಸ್ವೀಕೃತ್ಯ, ...ಗೋತ್ರಸ್ಯ(ಗೋತ್ರಾಯಾಃ), ...ಶರ್ಮಣಃ(ದಾಯಾಃ), ಪ್ರೇತಸ್ಯ(ಪ್ರೇತಾಯಾಃ), ಪ್ರೇತತ್ವ ನಿವೃತ್ತಿದ್ವಾರಾ, ಪ್ರೇತಸ್ಯ ಯಮಲೋಕಮಾರ್ಗೇ ಅಂಧತ್ವ – ಬಧಿರತ್ವ – ಮೂಕತ್ವ ನಿವೃತ್ತಿದ್ವಾರಾ, ವಸ್ವಾದಿ ಪುಣ್ಯಲೋಕಾವಾಪ್ತಿರಸ್ತ್ವಿತಿ, ಕೃತಕರ್ಮಸಾಂಗತಾ ಫಲ ಸಿದ್ಧಿರಸ್ತ್ವಿತಿ, ಶ್ರೀಮಹಾವಿಷ್ಣುಃ ಸುಪ್ರೀತೋ ವರದೋ ಭವತ್ವಿತಿ ಅನುಗೃಹ್ಣಂತು । ((ಸುಪ್ರೀತೋ ವರದೋ ಭವತು)) ಇತಿ ಪ್ರತಿವಚನಂ ॥

ಮಾಡಿರುವ ಈ ದಿನದ ಕರ್ಮದ ಫಲವು ದೊರಕಲೆಂದು ಈ ಮೇಲಿನಂತೆ ಬ್ರಾಹ್ಮಣರಲ್ಲಿ ಬೇಡಿಕೊಳ್ಳಬೇಕು । ಬ್ರಾಹ್ಮಣರು ಆಶೀರ್ವದಿಸಬೇಕು ॥

ನಮೋ ಬ್ರಹ್ಮಣ್ಯ ದೇವಾಯ ಗೋ ಬ್ರಾಹ್ಮಣ ಹಿತಾಯ ಚ ।

ಜಗದ್ಧಿತಾಯ ಕೃಷ್ಣಾಯ ಗೋವಿಂದಾಯ ನಮೋನಮಃ ॥

ಆದಿತ್ಯಂ ದರ್ಶಯಿತ್ವಾ । ಗೃಹಂ ಗಚ್ಛೇತ್ ।

ಮೇಲಿನ ಶ್ಲೋಕದಿಂದ ಸೂರ್ಯನನ್ನು ನೋಡಿ, ಮನೆಗೆ ಹೋಗಬೇಕು ॥

ಸೂಚನೆ

॥ ಕರ್ತೃಗಳು, ಈ ೧೨ ದಿನಗಳೂ ದೈಹಿಕಸಂಪರ್ಕ ಮಾಡಬಾರದು ಉಪ್ಪು, ಖಾರಗಳ ಆಹಾರ ಸೇವಿಸಬಾರದು – ಬೇರೆಯವರನ್ನು ಮುಟ್ಟಬಾರದು ಮತ್ತು ನೆಲದಮೇಲೆ ಮಲಗಬೇಕು ॥

॥ ಇತಿ ಪ್ರಥಮದಿನ ಕರ್ತವ್ಯಂ ಸಮಾಪ್ತಮ್ ॥

****

****

4. ಅಸ್ಥಿ ಸಂಚಯನಂ

ಅಪರೇದ್ಯುಃ, ತೃತೀಯೇದಿನೇ, ಪಂಚಮೇ, ಸಪ್ತಮೇ, ಅನಿಷಿದ್ಧದಿನೇ ಕಾರ್ಯಂ। ದಹನವಾದ ದಿನದ,, ಮರುದಿನ ಅಥವಾ ೩ ನೇ / ೫ ನೇ / ೭ ನೇ ದಿನಗಳಲ್ಲಿ ಅಸ್ಥಿಸಂಚಯನವನ್ನು ಮಾಡಬೇಕು।

ಸಂಚಯನಕ್ಕೆ ಬೇಕಾಗುವ ಪದಾರ್ಥಗಳು

೩ ಬಾಳೆಎಲೆ – ೨ ಪಂಚಪಾತ್ರೆ – ೨ ಉದ್ಧರಣೆ – ೨ ಟವಲ್ – ೩ ಕಟ್ಟು ದರ್ಭೆ – ೧ ಮುಷ್ಟಿ ತುಳಸಿ – ೧ ಲೀಟರ್ ಹಾಲು – ಅರ್ಧಲೀಟರ್ ಮೊಸರು – ಬಾಳೆ ಎಲೆಯ ಧ್ವಜ, ಪತಾಕೆ, ಪಾದುಕೆಗಳು ೩, ೩ – ೧ ಅಡಿಕೆ ಸಿಂಗಾರ – ೨೫೦ ಗ್ರಾಂ ಅಕ್ಕಿ – ೨೫೦ ಗ್ರಾಂ ಎಳ್ಳು – ೧೦ ರೂ ನೋಟು ೧೦ – ೧೦ ರೂ ಕಾಯಿನ್ ೧೦ – ೧ ಕಲಶ(ಚೊಂಬು) – ೧ ಉದಕುಂಭದಾನಕ್ಕಾಗಿ ಹೊಸ ಕಲಶ(ಚೊಂಬು) – ದೀಪದಾನಕ್ಕಾಗಿ ೨ ಹೊಸ ದೀಪಗಳು – ದಾನಕ್ಕೆ ಹೊಸಛತ್ರಿ – ದಾನಕ್ಕೆ ಪಾದುಕೆ – ದಾನಕ್ಕೆ ಮೊಸರನ್ನ – ೨೦೦ ಗ್ರಾಂ ತುಪ್ಪ – ಗಂಧದಪುಡಿ – ೧೦ ಗ್ರಾಂ ಸೀಗೇಪುಡಿ – ೩ ಚಮಚ ಮಣ್ಣು – ೫೦ ಎಮ್, ಎಲ್ ಎಣ್ಣೆ – ೧ ಎಳನೀರು – ೩ ಬಾಳೆಹಣ್ಣು – ೧ ಕಟ್ಟು ದೀಪದಬತ್ತಿ – ೧ ಬೆಂಕಿಪೆಟ್ಟಿಗೆ – ೫ ಅಡಿಕೆಪಟ್ಟೆ ಬೌಲ್ – ೫ ಅಡಿಕೆಪಟ್ಟೆ ತಟ್ಟೆ – ೨ ಲೀಟರ್ ನೀರು – ಕಂಬಳಿದಾರ ಅತ್ತಿಮರದ ಎಲೆ ೪ ಹಾಗೂ ಎಲೆಯಿರುವ ಟೊಂಗೆ ೨ – ಬೃಹತೀಫಲ (ಗುಳ್ಳದ ಕಾಯಿ / ಚಿಟ್ಟೆಕಾಯಿ) – ನೀಲಿ ಮತ್ತು ಕೆಂಪುಬಣ್ಣದ ದಾರ ೨ – ಹಗ್ಗ – ಮರಳು– ಬಲಿಗೆ ಅನ್ನ (ಕಾಲು ಕೆಜಿ) – ಗುದ್ದಲಿ – ಪಂಚಗವ್ಯ(ಸ್ವಲ್ಪ ಗೋಮೂತ್ರ, ಸ್ವಲ್ಪ ಸಗಣಿ, ಹಾಲು, ಮೊಸರು, ತುಪ್ಪ) – ೧ ಮಡಿಕೆ – ೫ ಜನ ಗರ್ಭಿಣಿಯರಲ್ಲದ ಹಾಗೂ ಮುಟ್ಟುನಿಂತಿರುವ ಹೆಂಗಸರು – ೫ ಬಿಂದಿಗೆ

ಅನುಜ್ಞೆ –

ಉಪವೀತಂ, ಬ್ರಹ್ಮದಂಡಂ ಚರಿತ್ವಾ । ಬ್ರಾಹ್ಮಣಾನ್ ಪ್ರಾರ್ಥ್ಯ । ಪ್ರಾಚೀನಾವೀತಂ । ಏಕದರ್ಭೇಣ ಪವಿತ್ರಂ ಧೃತ್ವಾ । ...ಗೋತ್ರಸ್ಯ(ಗೋತ್ರಾಯಾಃ), ...ಶರ್ಮಣಃ(ದಾಯಾಃ), ಪ್ರೇತಸ್ಯ(ಪ್ರೇತಾಯಾಃ), ಪ್ರೇತತ್ವ ವಿಮೋಕಾರ್ಥಂ, ಮರಣದಿನಾದಾರಭ್ಯ ಅದ್ಯ ದ್ವಿತೀಯೋಽಹನಿ ಅಸ್ಥಿಸಂಚಯನಂ ಕರ್ತುಂ ಮುಖ್ಯಕಾಲೋಭೂತ್ವಾ, ಅಧಿಕಾರ ಸಂಪದಸ್ತ್ವಿತಿ ಭವಂತೋಬ್ರುವಂತು ॥ ಅಧಿಕಾರಸಂಪದಸ್ತು ಇತಿ ಪ್ರತಿವಚನಂ ॥

ಉಪವೀತಿಯಾಗಿ, ಬ್ರಹ್ಮದಂಡವನ್ನು ಮಾಡಿ(ದಕ್ಷಿಣೆಯಿಟ್ಟು) । ಬ್ರಾಹ್ಮಣರನ್ನು ಪ್ರಾರ್ಥಿಸಿ । ಪ್ರಾಚೀನಾವೀತಿಯಾಗಿ । ಒಂದುದರ್ಭೆಯ ಪವಿತ್ರವನ್ನು ಹಾಕಿಕೊಂಡು । ಮೇಲಿನ ವಾಕ್ಯಗಳನ್ನು ಹೇಳಿ, ಅಸ್ಥಿಸಂಚಯನಕ್ಕೆ ಒಪ್ಪಿಗೆಯನ್ನು ಬ್ರಾಹ್ಮಣರಿಂದ ಪಡೆಯಬೇಕು ॥ ತಥಾಸ್ತು ಎಂದು ಬ್ರಾಹ್ಮಣರು ಹೇಳಬೇಕು ॥

ಸಂಕಲ್ಪಃ –

ಉಪವೀತಿ । ಪ್ರಾಣಾನಾಯಮ್ಯ । ಓಂಓಂಓಂ.....ಪುಣ್ಯತಿಥೌ, ಪ್ರಾಚೀನಾವೀತಿ । ...ಗೋತ್ರಸ್ಯ(ಗೋತ್ರಾಯಾಃ), ಶರ್ಮಣಃ(ದಾಯಾಃ), ಪ್ರೇತಸ್ಯ(ಪ್ರೇತಾಯಾಃ), ಪ್ರೇತತ್ವ ವಿಮೋಕಾರ್ಥಂ, ಮರಣದಿನಾದಾರಭ್ಯ ಅದ್ಯ ದ್ವಿತೀಯೋಽಹನಿ ಅಸ್ಥಿಸಂಚಯನಂ ಕರಿಷ್ಯೇ ॥

ಉಪವೀತಿಯಾಗಿ, ಪ್ರಾಣಾಯಾಮವನ್ನು ಮಾಡಿ । ಸಂಕಲ್ಪವನ್ನು ಆರಂಭಿಸಿ, ಪ್ರಾಚೀನಾವೀತಿಯಾಗಿ ಮೇಲಿನಂತೆ ಮುಂದುವರೆಸಿ, ಅಸ್ಥಿಸಂಚಯನಕ್ಕೆ ಸಂಕಲ್ಪ ಮಾಡಬೇಕು ॥

ಕೃಚ್ಛ್ರಂ –

ಉಪವೀತಂ । ಅಸ್ಥಿಸಂಚಯನೇ ತಿಥಿ – ವಾರ – ನಕ್ಷತ್ರ – ಯೋಗ – ಕರಣ್ಯೈಃ ಯೋಯೋ ದೋಷಃ ಸಮಜನಿ ತತ್ತದ್ದೋಷ ಪರಿಹಾರಾರ್ಥಂ, ತಥಾ ಚ ಅಸ್ಥಿಸಂಚಯನಕಾಲೇ ಅಸ್ಮಿನ್ ಸ್ಮಶಾನಭಸ್ಮನಿ ಶ್ವ, ಕಾಕ, ಚಂಡಾಲ, ಗಾರ್ದಭ, ಸೃಗಾಲ, ಕ್ರಿಮಿ, ಕೀಟಾದಿಭಿಃ ಸ್ಪೃಷ್ಟ – ದೃಷ್ಟ ದೋಷಪರಿಹಾರಾರ್ಥಂ, ಶ್ರೀಮಹಾವಿಷ್ಣು ಪ್ರೀತ್ಯರ್ಥಂ, ಕೃಚ್ಛ್ರಾಚರಣಂ ಕರಿಷ್ಯೇ । ಅಶಕ್ತತ್ವಾತ್, ಕೃಚ್ಛ್ರಪ್ರತಿನಿಧಿ ಯಥಾಶಕ್ತಿ ಹಿರಣ್ಯದಾನಂ ಕರಿಷ್ಯೇ । ಇತಿ ಸಂಕಲ್ಪ್ಯ, ಕೃತ್ವಾ ॥

ಉಪವೀತಿಯಾಗಿ, ಮೇಲೆತಿಳಿಸಿರುವ ಲಕ್ಷಣಗಳು ಸಂಭವಿಸಿದ್ದಲ್ಲಿ, ಅದಕ್ಕೆ ಪ್ರಾಯಶ್ಚಿತ್ತವಾಗಿ ಮೇಲಿನಂತೆ ಕೃಚ್ಛ್ರವನ್ನು ಮಾಡಿಕೊಳ್ಳಬೇಕು ॥

ಅಸ್ಥಿಭಸ್ಮ ಶುದ್ಧಿಃ –

ಅಸ್ಥಿಭಸ್ಮ ಶುದ್ಧ್ಯರ್ಥಂ, ಕ್ಷೀರೋತ್ಸಿಕ್ತೇನ ಪ್ರೋಕ್ಷಣಂ ಕರಿಷ್ಯೇ, ಇತಿ ಸಂಕಲ್ಪ್ಯ । ಔದುಂಬರ ಶಾಖಯಾ – ಪಂಚಭಿಃ ಮಂತ್ರೈಃ ಅಪ್ರದಕ್ಷಿಣಂ ಪ್ರೋಕ್ಷ್ಯತಿ ।

ಅಸ್ಥಿಭಸ್ಮದ ಶುದ್ಧಿಗಾಗಿ ಹಾಲು ಬೆರೆಸಿರುವ ನೀರನ್ನು ಪ್ರೋಕ್ಷಣೆಯನ್ನು ಮಾಡುತ್ತೇನೆಂದು ಸಂಕಲ್ಪಿಸಿ । ಎಲೆಗಳಿರುವ ಔದುಂಬರಶಾಖೆಯಿಂದ ಆ ಅಸ್ಥಿಗಳಿರುವ ಜಾಗಕ್ಕೆ ಅಪ್ರದಕ್ಷಿಣೆಯಾಗಿ ಕೆಳಗಿನ ೫ ಮಂತ್ರಗಳ ಕೊನೆಯಲ್ಲಿ ಒಮ್ಮೆ ಪ್ರೋಕ್ಷಿಸಬೇಕು । ಅಥವಾ ಪ್ರತಿಮಂತ್ರಕ್ಕೂ ಒಮ್ಮೊಮ್ಮೆ ಪ್ರೋಕ್ಷಿಸಬಹುದು ॥

ತತ್ರ ಪಂಚಮಂತ್ರಾಃ –

ಓಂ ಯಂ ತೇ ಅಗ್ನಿಂ । ಅಮಂಥಾಮ । ವೃಷಭಾಯೇವ । ಪಕ್ತವೇ ॥ ಇಮಂ ತಂ ।
ಶಮಂಯಾಮಸಿ । ಕ್ಷೀರೇಣ ಚ । ಉದಕೇನ ಚ ॥

ಓಂ ಯಂ ತ್ವಮಗ್ನೇ । ಸಮದಹಃ । ತ್ವಮುನಿರ್ವಾಪಯಾ । ಪುನಃ ॥ ಕ್ಯಾಂಬೂರತ್ರ । ಜಾಯತಾಂ । ಪಾಕದೂರ್ವಾ । ವ್ಯಲ್ಕಶಾ ॥

ಓಂ ಶೀತಿಕೇ । ಶೀತಿಕಾವತಿ । ಹ್ಲಾದುಕೇ । ಹ್ಲಾದುಕಾವತಿ ॥ ಮಂಡೂಕ್ಯಾಸು । ಸಂಗಮಯ । ಇಮಗ್ಂ ಸ್ವಗ್ನಿಂ । ಶಮಯ ॥

ಓಂ ಶಂ ತೇ ಧನ್ವನ್ಯಾಃ । ಆಪಃ । ಶಮು ತೇ ಸಂತು । ಅನೂಕ್ಯಾಃ ॥ ಶಂ ತೇ ಸಮುದ್ರಿಯಾಃ । ಆಪಃ । ಶಮು ತೇ ಸಂತು । ವಷ್ಯಾಃ ॥

ಓಂ ಶಂ ತೇ । ಸ್ರವಂತೀಃ । ತನುವೇ । ಶಮು ತೇ ಸಂತು । ಕೂಪ್ಯಾಃ ॥ ಶಂ ತೇ ನೀಹಾರಃ । ವರ್ಷತು । ಶಮು ಪೃಷ್ವಾ । ಅವಶೀಯತಾಮ್ ॥

ಚಿತೇಃ ದಕ್ಷಿಣತಃ ಅಂಗಾರಾನ್ ಸಮೂಹ್ಯ । ಅಗ್ನೇನಯ, ಇತಿ ಮಂತ್ರೇಣ ಅಗ್ನಿಂ ಪ್ರಾರ್ಥ್ಯ । ಪ್ರಾಗಗ್ರೈಶ್ಚ ದಕ್ಷಿಣಾಗ್ರೈಃ ದರ್ಭೈಃ ಅಗ್ನಿಂ ಪರಿಸ್ತೃಣಾತಿ । ದಕ್ಷಿಣಾನ್ ಅಧರಾನ್, ಉತ್ತರಾನ್ ಉತ್ತರಾನ್ । ದಕ್ಷಿಣೇನ ದರ್ಭಾನ್ ಸಂಸ್ತೀರ್ಯ । ತೇಷು ಏಕೈಕಶಃ ಪಾತ್ರಾಣಿ ಪ್ರಯುನಕ್ತಿ । ದರ್ವಿ – ಆಜ್ಯಸ್ಥಾಲೀ – ಪ್ರೋಕ್ಷಣೀ – ದ್ವಿತೀಯದರ್ವಿ ಚ । ಏಕದರ್ಭಪವಿತ್ರೇಣ ಪಾತ್ರಸಂಸ್ಕಾರಂ ಕೃತ್ವಾ । ತೂಷ್ಣೀಂ ಅಲಂಕೃತ್ಯ । ತೂಷ್ಣೀಂ ಅಪ್ರದಕ್ಷಿಣಂ ಪರಿಷಿಚ್ಯ । ಸ್ರುವೇಣ ಆಜ್ಯಮಾದಾಯ ಜುಹುಯಾತ್ ।

ಚಿತೆಯ ದಕ್ಷಿಣದಲ್ಲಿ ಕೆಂಡಗಳನ್ನು ಒಟ್ಟುಗೂಡಿಸಿ । ಅಗ್ನೇನಯ ಮಂತ್ರದಿಂದ ಅಗ್ನಿಯನ್ನು ಪ್ರಾರ್ಥಿಸಿ । ಪೂರ್ವಾಗ್ರ, ದಕ್ಷಿಣಾಗ್ರ ದರ್ಭೆಗಳಿಂದ ಆ ಕೆಂಡಗಳಿಗೆ ಪರಿಸ್ತರಣವನ್ನು ಹಾಕಬೇಕು । ದಕ್ಷಿಣದ್ದು ಕೆಳಕ್ಕೆ, ಉತ್ತರದ್ದು ಮೇಲೆ । ಅಗ್ನಿಯ ದಕ್ಷಿಣದಲ್ಲಿ ದರ್ಭೆಗಳನ್ನು ಹರಡಿ । ಅದರಮೇಲೆ ದರ್ವಿ – ಆಜ್ಯಸ್ಥಾಲೀ – ಪ್ರೋಕ್ಷಣೀಪಾತ್ರೆ ಮತ್ತು ಸ್ರುವಗಳನ್ನು

ಒಂದೊಂದಾಗಿ ಇಡಬೇಕು । ಒಂದು ದರ್ಭೆಯ ಪವಿತ್ರದಿಂದ ಪಾತ್ರಸಂಸ್ಕಾರವನ್ನು ಮಾಡಿ । ನಂತರ ಅಗ್ನಿಗೆ ಅಮಂತ್ರಕವಾಗಿ ಅಲಂಕಾರ ಮಾಡಿ । ಅಮಂತ್ರಕವಾಗಿ, ಅಪ್ರದಕ್ಷಿಣೆಯಾಗಿ ಪರಿಷೇಚನ ಮಾಡಿ । ಯಾವುದಾದರೂ ಯಜ್ಞೀಯ ವೃಕ್ಷದಿಂದ ಮಾಡಿರುವ ಸ್ರುವದಿಂದ ಅಥವಾ ಅಂತಹ ಮರದ ಎಲೆಗಳಿಂದ ಕೆಳಗಿನ ಮಂತ್ರಗಳಿಂದ ತುಪ್ಪವನ್ನು ಹೋಮಿಸಬೇಕು ॥

ತತ್ರ ಮಂತ್ರಾಃ–

ಓಂ ಅವಸೃಜ । ಪುನರಗ್ನೇ । ಪಿತೃಭ್ಯಃ । ಯಸ್ತ ಆಹುತಃ । ಚರತಿ ಸ್ವಧಾಭಿಃ ॥ ಆಯುರ್ವಸಾನಃ । ಉಪಯಾತು ಶೇಷಂ । ಸಂಗಚ್ಛತಾಂ । ತನುವಾ ಜಾತವೇದಃ ಸ್ವಾಹಾ – ಅಗ್ನಯೇ ಜಾತವೇದಸ ಇದಂ ನಮಮ ॥

ಓಂ ಸಂಗಚ್ಛಸ್ವ । ಪಿತೃಭಿಃ । ಸಗ್ಂ ಸ್ವಧಾಭಿಃ । ಸಮಿಷ್ಟಾಪೂರ್ತೇನ । ಪರಮೇ ವ್ಯೋಮನ್ ॥ ಯತ್ರ ಭೂಮ್ಯೈ । ವೃಣಸೇ ತತ್ರ । ಗಚ್ಛ ತತ್ರ ತ್ವಾ । ದೇವಸ್ಸವಿತಾ । ದಧಾತು ಸ್ವಾಹಾ – ದೇವಾಯ ಸವಿತ್ರ ಇದಂ ॥

ಓಂ ಯತ್ತೇ ಕೃಷ್ಣಃ । ಶಕುನ ಆ ತುತೋದ । ಪಿಪೀಲಸ್ಸರ್ಪಃ । ಉತ ವಾ ಶ್ವಾಪದಃ । ಅಗ್ನಿಷ್ಟದ್ವಿಶ್ವಾತ್ । ಅನೃಣಂ ಕೃಣೋತು । ಸೋಮಶ್ಚಯಃ । ಬ್ರಾಹ್ಮಣಮಾವಿವೇಶ ಸ್ವಾಹಾ – ಅಗ್ನೀಸೋಮಾಭ್ಯಾಂ ಇದಂ ॥

ಸ್ರುಕ್, ಸ್ರುವಂ, ಆಜ್ಯಸ್ಥಾಲೀಂ ಚ ಅಗ್ನೌ ಪ್ರಹರತಿ । ತೂಷ್ಣೀಂ ಅಪ್ರದಕ್ಷಿಣಂ ಉತ್ತರಪರಿಷೇಚನಂ ಕೃತ್ವಾ । ಪಂಚಸ್ತ್ರಿಯಃ, ಪಂಚಭಿಃ ಕುಂಭೈಃ ಅಪ ಆನೀಯ (ಅಥವಾ ಏಕಾವ್ಯೇಕೇನ ಕುಂಭೇನ ಸರ್ವಾಣಿ ಅಸ್ಥೀನಿ ಅವೋಕ್ಷೇತ್) । ಅಗ್ನಿಂ ಶಮಯಿತ್ವಾ । ಅಸ್ಥೀನ್ ಅವೋಕ್ಷಂತಿ ॥

ಸ್ರುಕ್, ಸ್ರುವ, ಆಜ್ಯಪಾತ್ರೆಗಳನ್ನು ಅಗ್ನಿಯಲ್ಲಿ ಹಾಕಬೇಕು । ಅಮಂತ್ರಕವಾಗಿ ಅಗ್ನಿಗೆ ಅಪ್ರದಕ್ಷಿಣೆಯಾಗಿ ಉತ್ತರಪರಿಷೇಚನ ಮಾಡಬೇಕು । ಋತುಕಾಲ ಮುಗಿದಿರುವ (ಮೃತನ ಹೆಂಡತಿಗೆ ಮಾತ್ರ ಈ ನಿಯಮವಿಲ್ಲ) ೫ ಹೆಂಗಸರು, ೫ ಕುಂಭಗಳಿಂದ ನೀರನ್ನುತಂದು । ಅಗ್ನಿಯನ್ನು ನೀರಿನಿಂದ ಆರಿಸಬೇಕು । ಅಸ್ಥಿಗಳಿಗೆ ನೀರನ್ನು ಹಾಕಬೇಕು ॥

ಅಸ್ಥಿಗಳನ್ನು ಸಂಗ್ರಹಿಸುವ ವಿಧಾನ –

((ನಂತರ, ಕೆಂಪು ಮತ್ತು ನೀಲಿದಾರದಲ್ಲಿ ಬೃಹತೀಫಲವನ್ನು(ಗುಳ್ಳದಕಾಯಿ / ಚಿಟ್ಟೆಕಾಯಿ) ಎಡಕೈ ಹೆಬ್ಬೆರಳಿಗೆ ಕಟ್ಟಿಕೊಂಡು, ಕಲ್ಲಿನ ಮೇಲೆ ಎಡಗಾಲನ್ನು ಇಟ್ಟುಕೊಂಡು, ಮೌನವಾಗಿ, ಹಾಲುಬೆರೆಸಿರುವ ನೀರಿನಲ್ಲಿ ಕೈಬೆರಳನ್ನು ಅದ್ದಿಕೊಂಡು, ತೆಗೆಯಬೇಕಾಗಿರುವ ಆಯಾ ಅಸ್ಥಿಗಳ ಜಾಗವನ್ನು ಮೊದಲು ನೋಡಿಕೊಂಡು, ನಂತರ ಕೈಹಾಕಿ ತೆಗೆಯುವಾಗ ನೋಡದೇ, ಈ ಕೆಳಗಿನ ಮಂತ್ರದಿಂದ ಅಸ್ಥಿಗಳನ್ನು ಎಡಕೈಯಿಂದ ತೆಗೆದು, ಒಂದು ಮಡಕೆಯಲ್ಲಿ ಸಂಗ್ರಹಿಸಬೇಕು । ಈ ಕೆಲಸವನ್ನು ಆ ೫ ಜನ ಸ್ತ್ರೀಯರು ಕ್ರಮವಾಗಿ ಒಬ್ಬೊಬ್ಬರಂತೆ, ಕೆಳಗೆ ತಿಳಿಸಿರುವ ಆಯಾ ಮಂತ್ರದೊಂದಿಗೆ ಆಯಾ ಅಂಗಗಳ ಅಸ್ಥಿಗಳನ್ನು ಸಂಗ್ರಹಿಸಬೇಕು । ಇನ್ನೂ ಮೂಳೆಗಳು ಉಳಿದಿದ್ದರೆ, ಅವುಗಳನ್ನೂ ಅಮಂತ್ರಕವಾಗಿ ತೆಗೆದುಕೊಂಡು ಮಡಕೆಯಲ್ಲಿ ಹಾಕಬೇಕು । ಹೀಗೆ ಎಲ್ಲಾ ಅಸ್ಥಿಗಳನ್ನೂ ಮಡಕೆಯಲ್ಲಿಟ್ಟನಂತರ ಮಡಕೆಯ ಬಾಯನ್ನು ಬಟ್ಟೆಯಿಂದ ಕಟ್ಟಿ, ಚಿತೆಯ ಪಶ್ಚಿಮಭಾಗದಲ್ಲಿ, ಬನ್ನಿ ಅಥವಾ ಮುತ್ತುಗ ಮರದ ಶಾಖೆಗಳನ್ನು ನೆಲದಮೇಲೆ ಹರಡಿ, ಅದರಮೇಲೆ ಜೋಪಾನವಾಗಿ ಇಡಬೇಕು । ಉಳಿದಭಸ್ಮವನ್ನೆಲ್ಲಾ, ಮಣ್ಣಿನಲ್ಲಿ ಸೇರುವಂತೆ ಚೆನ್ನಾಗಿ ನೀರನ್ನು ಹಾಕಬೇಕು ಅಥವಾ ನದೀ / ಬಾವಿ / ಕೆರೆ / ಸಮುದ್ರಾದಿಗಳಲ್ಲಿ ಹಾಕಬೇಕು))

ಈ ಕೆಳಗಿನಮಂತ್ರದಿಂದ, ಮೊದಲಸ್ತ್ರೀಯು, ಶಿರೋಭಾಗದ ಮತ್ತು ಹಲ್ಲುಗಳ ಅಸ್ಥಿಗಳನ್ನು ಮೇಲೆತಿಳಿಸಿರುವ ಕ್ರಮದಂತೆ ಸಂಗ್ರಹಿಸಬೇಕು ॥

ಓಂ ಉತ್ತಿಷ್ಠಾತಃ । ತನುವಗ್ಂ ಸಂ । ಭರಸ್ವ । ಮೇಹ ಗಾತ್ರಂ । ಅವಹಾ ಮಾ । ಶರೀರಂ ॥ ಯತ್ರ ಭೂಮ್ಯೈ । ವೃಣಸೇ ತತ್ರ ಗಚ್ಛ । ತತ್ರ ತ್ವಾ ದೇವಃ । ಸವಿತಾ ದಧಾತು ॥ ಇತಿ ಪ್ರಥಮಾ ॥

ಈ ಕೆಳಗಿನ ಮಂತ್ರದಿಂದ, ಎರಡನೇ ಸ್ತ್ರೀಯು, ಕ್ರಮವಾಗಿ ಭುಜ – ಕಂಠ ಮತ್ತು ಬಾಹುಗಳ ಅಸ್ಥಿಗಳನ್ನು ಮೇಲೆತಿಳಿಸಿರುವ ಕ್ರಮದಂತೆ ಸಂಗ್ರಹಿಸಬೇಕು ॥

ಓಂ ಇದಂ ತ ಏಕಂ ॥ ಇತಿ ದ್ವಿತೀಯಾ ॥

ಈ ಕೆಳಗಿನ ಮಂತ್ರದಿಂದ, ಮೂರನೇ ಸ್ತ್ರೀಯು, ಕ್ರಮವಾಗಿ ಕಂಠದಿಂದ ಸೊಂಟದವರೆಗಿನ ಅಸ್ಥಿಗಳನ್ನು ಮೇಲೆತಿಳಿಸಿರುವ ಕ್ರಮದಂತೆ ಸಂಗ್ರಹಿಸಬೇಕು ॥

ಓಂ ಪರೂತ ಏಕಂ ॥ ಇತಿ ತೃತೀಯಾ ।

ಈ ಕೆಳಗಿನ ಮಂತ್ರದಿಂದ, ನಾಲ್ಕನೇ ಸ್ತ್ರೀಯು, ಕ್ರಮವಾಗಿ ಸೊಂಟದಿಂದ ಪಾದದ ವರೆಗಿನ ಅಸ್ಥಿಗಳನ್ನು ಮೇಲೆತಿಳಿಸಿರುವ ಕ್ರಮದಂತೆ ಸಂಗ್ರಹಿಸಬೇಕು ॥

ಓಂ ತೃತೀಯೇನ । ಜ್ಯೋತಿಷಾ ಸಂವಿಶಸ್ವ ॥ ಇತಿ ಚತುರ್ಥೀ ।

ಈ ಕೆಳಗಿನ ಮಂತ್ರದಿಂದ, ಐದನೇ ಸ್ತ್ರೀಯು, ಪಾದದ ಅಸ್ಥಿಗಳನ್ನು ಮೇಲೆತಿಳಿಸಿರುವ ಕ್ರಮದಂತೆ ಸಂಗ್ರಹಿಸಬೇಕು ॥

ಓಂ ಸಂ ವೇಶನಃ । ತನುವೈ । ಚಾರುರೇಧಿ । ಪ್ರಿಯೋ ದೇವಾನಾಂ । ಪರಮೇ ಸಧಸ್ಥೇ ॥ ಇತಿ ಪಂಚಮಿ ॥

5. ವೇದಿಕಾರಾಧನಪ್ರಭೂತಬಲಿಃ

ಪ್ರಾಚೀನಾವೀತಂ । ಚಿತಾಸ್ಥಾನೇ ದಕ್ಷಿಣಶಿರಸಂ ಪ್ರೇತಾಕೃತಿಂ ಲಿಖಿತ್ವಾ ॥

ಪ್ರಾಚೀನಾವೀತಿಯಾಗಿ । ದಹನಮಾಡಿದ ಜಾಗದಲ್ಲಿ, ದಕ್ಷಿಣಕ್ಕೆ ತಲೆಬರುವಂತೆ ಮೃತನ ಆಕೃತಿಯನ್ನು ಬರೆದು ॥

ಅನುಜ್ಞೆ –

ಉಪವೀತಂ । ಬ್ರಹ್ಮದಂಡಂ ಕೃತ್ವಾ । ಪ್ರಾಚೀನಾವೀತಂ । ...ಗೋತ್ರಸ್ಯ (ಗೋತ್ರಾಯಾಃ), ...ಶರ್ಮಣಃ(ದಾಯಾಃ), ಪಿತುಃ(ಮಾತುಃ), ಪ್ರೇತಸ್ಯ(ಪ್ರೇತಾಯಾಃ), ಸಂಚಯನಾಂಗಂ, ವೇದಿಕಾರಾಧನಂ – ಪ್ರಭೂತಬಲಿಂ ಕರ್ತುಂ ಮುಖ್ಯಕಾಲೋಭೂತ್ವಾ, ಅಧಿಕಾರ ಸಂಪದಸ್ತ್ವಿತಿ ಭವಂತೋಬ್ರುವಂತು ॥ ಅಧಿಕಾರ ಸಂಪದಸ್ತು ಇತಿ ಪ್ರತಿವಚನಂ ॥

ಉಪವೀತಿಯಾಗಿ । ಬ್ರಹ್ಮದಂಡವನ್ನು ಮಾಡಿ । ಪ್ರಾಚೀನಾವೀತಿಯಾಗಿ । ಮೇಲಿರುವಂತೆ ಹೇಳಿ, ಬ್ರಾಹ್ಮಣರಿಂದ ವೇದಿಕಾರಾಧನೆಗೆ ಒಪ್ಪಿಗೆಯನ್ನು ಕೇಳಬೇಕು ॥ ಬ್ರಾಹ್ಮಣರು ಒಪ್ಪಿಗೆಯನ್ನು ಕೊಡಬೇಕು ॥

ಸಂಕಲ್ಪಃ –

ಉಪವೀತಂ । ಪ್ರಾಣಾನಾಯಮ್ಯ । ಓಂಓಂಓಂ.....ಪುಣ್ಯತಿಥೌ, ಪ್ರಾಚೀನಾವೀತಂ ...ಗೋತ್ರಸ್ಯ(ಗೋತ್ರಾಯಾಃ), ...ಶರ್ಮಣಃ(ದಾಯಾಃ), ಪಿತುಃ(ಮಾತುಃ), ಪ್ರೇತಸ್ಯ(ಪ್ರೇತಾಯಾಃ), ಮಹಾಕ್ಷುತ್ ನಿವಾರಣಾರ್ಥಂ, ಶ್ರೀಮಹಾವಿಷ್ಣು ಪ್ರೀತ್ಯರ್ಥಂ, ದ್ವಿತೀಯೇಽಹನಿ ವೇದಿಕಾರಾಧನಂ – ಪ್ರಭೂತಬಲಿಂ ಕರಿಷ್ಯೇ ॥

ಉಪವೀತಿಯಾಗಿ, ಪ್ರಾಣಾಯಾಮವಮಾಡಿ, ಸಂಕಲ್ಪವನ್ನು ಆರಂಭಿಸಿ । ಪ್ರಾಚೀನಾವೀತಿಯಾಗಿ ಮೇಲಿರುವಂತೆ ಸಂಕಲ್ಪವನ್ನು ಮುಂದುವರೆಸಿ, ವೇದಿಕಾರಾಧನೆಯ ಸಂಕಲ್ಪವನ್ನು ಮಾಡಬೇಕು ॥

ದಕ್ಷಿಣಾಗ್ರಾನ್ ದರ್ಭಾನಾಸ್ತೀರ್ಯ । ತಿಸ್ರಃ ಶಿಲಾಃ ನಿಧಾಯ । ಸ್ಥಾಪಯಿತ್ವಾ । ...ಗೋತ್ರಸ್ಯ(ಗೋತ್ರಾಯಾಃ), ...ಶರ್ಮಣಃ(ದಾಯಾಃ), ಅಸ್ಮತ್ ಪಿತುಃ(ಮಾತುಃ), ಪ್ರೇತಸ್ಯ(ಪ್ರೇತಾಯಾಃ), ಪ್ರೇತತ್ವ ವಿಮೋಕಾರ್ಥಂ, ಮರಣದಿನಾದಾರಭ್ಯ ಅದ್ಯ ದ್ವಿತೀಯೇಽಹನಿ ವೇದಿಕಾರಾಧನೇ, ಉತ್ತರತೋ ರುದ್ರ ಏಷಕ್ಷಣಂ ಉಪತಿಷ್ಠತು । ದಕ್ಷಿಣತೋ ಯಮ ಏಷಕ್ಷಣಂ ಉಪತಿಷ್ಠತು । ಮಧ್ಯೇ ಪ್ರೇತರಾಜ ಏಷಕ್ಷಣಂ ಉಪತಿಷ್ಠತು ।

ಉತ್ತರತೋ ರುದ್ರಂ ಆವಾಹನಂ ಉಪತಿಷ್ಠತು । ದಕ್ಷಿಣತೋ ಯಮಂ ಆವಾಹನಂ ಉಪತಿಷ್ಠತು । ಮಧ್ಯೇ ಪ್ರೇತರಾಜಂ ಆವಾಹನಂ ಉಪತಿಷ್ಠತು ।

ಬರೆದಿರುವ ಆ ಆಕೃತಿಯ ಕೆಳಭಾಗದಲ್ಲಿ, ದಕ್ಷಿಣಾಗ್ರವಾಗಿ ದರ್ಭೆಗಳನ್ನು ಹರಡಿ । ಅದರಮೇಲೆ, ೪ ಇಂಚು ಅಗಲ, ೪ ಇಂಚು ಉದ್ದ, ಹೆಬ್ಬೆಟ್ಟುಗಾತ್ರದಷ್ಟು ದಪ್ಪದ ಈ ಲಕ್ಷಣಗಳಲ್ಲಿರುವ ಬಿಳಿಬಣ್ಣದ ಕಲ್ಲನ್ನು ಮಧ್ಯದಲ್ಲೂ – ಮಧ್ಯದಕಲ್ಲಿನ ಉತ್ತರಕ್ಕೆ ಕೆಂಪುಕಲ್ಲನ್ನು ಮತ್ತೂ ಮಧ್ಯದಕಲ್ಲಿನ ದಕ್ಷಿಣಕ್ಕೆ ಕಪ್ಪುಕಲ್ಲನ್ನೂ ಇಡಬೇಕು । ಮೇಲೆ ಹೇಳಿರುವಂತೆ ಆ ಶಿಲೆಗಳಲ್ಲಿ ಉತ್ತರದಶಿಲೆಗೆ ರುದ್ರ – ದಕ್ಷಿಣದಶಿಲೆಗೆ ಯಮ ಮತ್ತು ಮಧ್ಯದಶಿಲೆಗೆ ಪ್ರೇತರಾಜನನ್ನು ಆವಾಹಿಸಿ ॥

ಉತ್ತರತೋ ರುದ್ರಸ್ಯ ಆಸನಂ ಉಪತಿಷ್ಠತು । ದಕ್ಷಿಣತೋ ಯಮಸ್ಯ ಆಸನಂ ಉಪತಿಷ್ಠತು । ಮಧ್ಯೇ ಪ್ರೇತರಾಜಸ್ಯ ಆಸನಂ ಉಪತಿಷ್ಠತು ।

ಉತ್ತರತೋ ರುದ್ರಾಯ ಪಾದ್ಯಂ ಉಪತಿಷ್ಠತು । ದಕ್ಷಿಣತೋ ಯಮಾಯ ಪಾದ್ಯಂ ಉಪತಿಷ್ಠತು । ಮಧ್ಯೇ ಪ್ರೇತರಾಜಾಯ ಪಾದ್ಯಂ ಉಪತಿಷ್ಠತು ।

ಅರ್ಘ್ಯಂ ಉಪತಿಷ್ಠತು । ಆಚಮನಂ ಉಪತಿಷ್ಠತು । ಅಶುಚಿ ಪರಿಹಾರಾರ್ಥಂ ಮೃದಾಸ್ನಾನಂ ಉಪತಿಷ್ಠತು । ಅಂಜನಾಭ್ಯಂಜನಂ ಉಪತಿಷ್ಠತು । ಸ್ನಾನೀಯಚೂರ್ಣಂ ಉಪತಿಷ್ಠತು । ಶುದ್ಧಸ್ನಾನಂ ಉಪತಿಷ್ಠತು । ತಿಲಾಃ ಉಪತಿಷ್ಠಂತು । ದರ್ಭಪತ್ರಾಣಿ ಉಪತಿಷ್ಠಂತು । ತುಳಸೀದಳಂ ಉಪತಿಷ್ಠತು । ಸಕಲಾಭಿಧಾನಾನಿ ಉಪತಿಷ್ಠಂತು ।

ವಸ್ತ್ರಂ ಉಪತಿಷ್ಠತು । ಉಪವೀತಂ ಉಪತಿಷ್ಠತು । ಗಂಧಃ ಉಪತಿಷ್ಠತು । ಶಿರೋಭೂಷಣಾರ್ಥಂ ಪೂಗಪುಷ್ಪಂ ಉಪತಿಷ್ಠತು । ಆತಪಬಾಧಾ ಪರಿಹಾರಾರ್ಥಂ ಪತಾಕೇ ಉಪತಿಷ್ಠತಾಂ । ಕಂಟಕೋಚ್ಛಿಷ್ಟ ಪಾಷಾಣ ಬಾಧಾ ಪರಿಹಾರಾರ್ಥಂ, ಪಾದುಕೇ ಉಪತಿಷ್ಠೇತಾಂ ॥

ಮೇಲೆತಿಳಿಸಿರುವ ಉಪಚಾರಗಳನ್ನು ಆ ಶಿಲೆಗಳಿಗೆ ಅರ್ಪಿಸಬೇಕು ॥

ತತಃ ಆಕೃತೇಃ ಪಶ್ಚಿಮದಿಶಿ ಕದಳೀಪರ್ಣಂ ನಿಧಾಯ । ಅಭಿಘಾರ್ಯ । ಪಂಚಭಕ್ಷ್ಯಸಹಿತಂ ಅನ್ನಂ ನಿಧಾಯ । ಕದಳೀಫಲಂ – ದಧಿ – ಕ್ಷೀರಂ – ಆಜ್ಯಂ ಚ ನಿಧಾಯ । ಅಭಿಘಾರ್ಯ ॥

ನಂತರ ಆಕೃತಿಯ ಪಶ್ಚಿಮದಿಕ್ಕಿನಲ್ಲಿ ಬಾಳೆ ಎಲೆಯನ್ನು ಇಟ್ಟು । ತುಪ್ಪವನ್ನು ಹಾಕಿ । ಅದರಮೇಲೆ ಪಂಚಭಕ್ಷ್ಯ(ಹಸಿಅಕ್ಕಿಹಿಟ್ಟಿನಿಂದ ಚಪಾತಿ, ಕೋಡುಬಳೆ, ಕಡಬು ಇತ್ಯಾದಿಗಳನ್ನು ಅಲ್ಲೇ ಮಾಡಿಕೊಂಡು)ಸಹಿತವಾದ ಅನ್ನವನ್ನು ಹಾಕಿ । ಅದರಮೇಲೆ, ಬಾಳೆಹಣ್ಣು – ಮೊಸರು – ಹಾಲು – ತುಪ್ಪ ಇವುಗಳನ್ನೂ ಹಾಕಿ । ಮತ್ತೆ ತುಪ್ಪವನ್ನು ಹಾಕಬೇಕು ॥

...ಗೋತ್ರಸ್ಯ(ಗೋತ್ರಾಯಾಃ), ...ಶರ್ಮಣಃ(ದಾಯಾಃ), ಪಿತುಃ(ಮಾತುಃ), ಪ್ರೇತಸ್ಯ(ಪ್ರೇತಾಯಾಃ), ಪ್ರೇತತ್ವ ವಿಮೋಕಾರ್ಥಂ, ಅದ್ಯ ದ್ವಿತೀಯೇಽಹನಿ ಪ್ರೇತಸ್ಯ ಮಹಾಕ್ಷುತ್ ನಿವಾರಣದ್ವಾರಾ ವೇದಿಕಾರಾಧನೇ,

ಉತ್ತರತೋ ರುದ್ರಾಯ ಏಷ ಪ್ರಭೂತಬಲಿಃ ಉಪತಿಷ್ಠತು । ದಕ್ಷಿಣತೋ ಯಮಾಯ ಏಷ ಪ್ರಭೂತಬಲಿಃ ಉಪತಿಷ್ಠತು । ಮಧ್ಯೇ ಪ್ರೇತರಾಜಾಯ ಏಷ ಪ್ರಭೂತಬಲಿಃ ಉಪತಿಷ್ಠತು । ಇತಿ ತುಳಸೀಸಹಿತಂ ಉದಕಂ ಉಪತಿಷ್ಠತು(ಪ್ರೋಕ್ಷಣೆ) ।

ಮೇಲೆ ಇರುವಂತೆ ಹೇಳಿ, ತುಳಸೀಸಹಿತವಾಗಿ ನೀರನ್ನು ಅನ್ನಕ್ಕೆ ಪ್ರೋಕ್ಷಿಸಿ, ತುಳಸಿಯನ್ನು ಅನ್ನದಮೇಲೆ ಹಾಕಿ, ರುದ್ರ – ಯಮ ಮತ್ತು ಪ್ರೇತರಿಗೆ ಆ ಪ್ರಭೂತಬಲಿಯನ್ನು ಅರ್ಪಿಸಬೇಕು ॥

ತದನಂತರಂ, ದಕ್ಷಿಣದಿಶಿ ಏಕಂಪರ್ಣಂ ನಿಧಾಯ । ಸರ್ವೇಭ್ಯಃ ಸ್ಮಶಾನವಾಸಿಭ್ಯಃ ಏಷಬಲಿಃ ಉಪತಿಷ್ಠತು । ಇತಿ ಸ್ಮಶಾನವಾಸಿಭ್ಯಃ ಕಿಂಚಿದನ್ನಂ ದತ್ವಾ । ಮುಖಶುದ್ಧ್ಯರ್ಥಂ ತಾಂಬೂಲಂ ಉಪತಿಷ್ಠತು । ತೃಡ್ಬಾಧಾ ನಿವೃತ್ಯರ್ಥಂ ನಾರಿಕೇಳಸಲಿಲಂ ಚ ತಿಲೋದಕಂ ಚ ಉಪತಿಷ್ಠತು ।

ನಂತರ ದಕ್ಷಿಣದಿಕ್ಕಿನಲ್ಲಿ ೧ ಎಲೆಯನ್ನಿಟ್ಟು । ಮೇಲಿರುವಂತೆ ಹೇಳಿ, ಆ ಎಲೆಯಲ್ಲಿ ಸ್ವಲ್ಪ ಅನ್ನವನ್ನು ಸ್ಮಶಾನವಾಸಿಗಳಿಗಾಗಿ ಇಡಬೇಕು । ಮುಖಶುದ್ಧಿಗಾಗಿ ತಾಂಬೂಲವನ್ನು ಮೇಲಿರುವಂತೆ ಹೇಳಿ ಇಡಬೇಕು । ಹಾಗೂ ಬಾಯಾರಿಕೆಗಾಗಿ ಎಳನೀರು ಮತ್ತು ತಿಲೋದಕವನ್ನು ಮೇಲಿರುವಂತೆ ಹೇಳಿ ಹಾಕಬೇಕು ।

ಉಪವೀತಂ । ವೀರ್ಯ ನಿಷ್ಪತ್ತ್ಯರ್ಥಂ ದಕ್ಷಿಣಾ ಉಪತಿಷ್ಠಂತು । ಪ್ರಾಚೀನಾವೀತಿ । ನಮಸ್ಕಾರಂ ಉಪತಿಷ್ಠತು । ಸಕಲಾಭಿಧಾನಾನಿ ಉಪತಿಷ್ಠಂತು । ಅನ್ನಪಾತ್ರೇ ತಿಲೋದಕಂ ಆಪೂರ್ಯ,

ಓಂ ಊರ್ಜಂ ವಹಂತೀಃ । ಅಮೃತಂ ಘೃತಂ । ಪಯಃ ಕೀಲಾಲಂ । ಪರಿಸ್ರುತಂ । ಸ್ವಧಾಸ್ತ । ತರ್ಪಯತ ಮೇ ॥

ಇತಿ ಮಂತ್ರೇಣ ಶಿಲಾಸಹಿತಂ ಅಪ್ರದಕ್ಷಿಣಂ ತ್ರಿಃ ಕುರ್ಯಾತ್ ।

ಉಪವೀತಿಯಾಗಿ । ವೀರ್ಯ ಉತ್ಪತ್ತಿಗಾಗಿ ದಕ್ಷಿಣೆಯನ್ನು ಸಮರ್ಪಿಸಬೇಕು । ಪ್ರಾಚೀನಾವೀತಿಯಾಗಿ ಮೇಲಿರುವಂತೆ ಹೇಳಿ, ನಮಸ್ಕಾರ ಹಾಗೂ ಸಕಲ ಉಪಚಾರಗಳನ್ನೂ ಮಾಡಬೇಕು । ಅನ್ನಪಾತ್ರೆಯನ್ನು ತಿಲೋದಕದಿಂದ ತುಂಬಬೇಕು । ಈ ತಿಲೋದಕಪಾತ್ರೆಯಿಂದ, ಮೇಲಿನ ಮಂತ್ರದಿಂದ, ಶಿಲೆಗಳ ಸಹಿತವಾಗಿ ಬಲಿಗಳನ್ನು ಅಪ್ರದಕ್ಷಿಣವಾಗಿ ೩ ಸಲ ಪರಿಷೇಚನ ಮಾಡಬೇಕು ॥

ನಾರಾಯಣ ನಮಸ್ತೇऽಸ್ತು ಶಂಖ ಚಕ್ರ ಗದಾಧರ ।

ಅಕ್ಷಯ್ಯಂ ಬಲಿದಾನೇನ ಪ್ರೇತತೃಪ್ತಿಕರೋ ಭವ ॥

ಗೃಧ್ರ ವಾಯಸ ರೂಪೇಣ ಜಲಮುಖೇನ ಭುಜ್ಯತಾಮ್ ॥

ಶ್ರೀಗೋವಿಂದ ಗೋವಿಂದ ಗೋವಿಂದ । ರೋದನಂ ಕುರ್ಯುಃ ॥

ಮೇಲಿನಶ್ಲೋಕವನ್ನು ಹೇಳಿ, ಗೋವಿಂದನನಾಮಸ್ಮರಣೆಯನ್ನು ಮಾಡಿ । ಅಳಬೇಕು, ದುಃಖವನ್ನು ತೋರಬೇಕು ॥ ನಂತರ ಶಿಲೆಗಳನ್ನು ಅಲ್ಲಿಂದ ತೆಗೆದು, ಮಧ್ಯದ ಪ್ರೇತಶಿಲೆಯನ್ನು ಮಾತ್ರ ಜೋಪಾನವಾಗಿ ಬಟ್ಟೆಯಲ್ಲಿ ಸುತ್ತಿ ಇಟ್ಟುಕೊಳ್ಳಬೇಕು । ದಿನವೂ ನಿತ್ಯವಿಧಿಕರ್ಮದಲ್ಲಿ ವಾಸೋದಕ, ತಿಲೋದಕಗಳನ್ನು ಬಿಡಲು ಇದೇ ಶಿಲೆಯನ್ನೇ ಬಳಸಬೇಕು, ಕಳೆದುಕೊಳ್ಳಬಾರದು ॥

ದಾನಗಳು –

ಸಂಕಲ್ಪಃ

ಉಪವೀತಂ । ಪ್ರಾಣಾನಾಯಮ್ಯ । ಓಂಓಂಓಂ.....ಪುಣ್ಯತಿಥೌ । ಪ್ರಾಚೀನಾವೀತಿ । ...ಗೋತ್ರಸ್ಯ(ಗೋತ್ರಾಯಾಃ), ...ಶರ್ಮಣಃ(ದಾಯಾಃ), ...ಪ್ರೇತಸ್ಯ(ಪ್ರೇತಾಯಾಃ), ಪ್ರೇತತ್ವ ವಿಮೋಕಾರ್ಥಂ, ಮರಣದಿನಾದಾರಭ್ಯ ಅದ್ಯದ್ವಿತೀಯೇಹನಿ ಪ್ರೇತಸ್ಯ (ಪ್ರೇತಾಯಾಃ) ಋಣ ನಿವೃತ್ತಿದ್ವಾರಾ ವಸ್ವಾದಿಪುಣ್ಯಲೋಕಾವಾಪ್ತ್ಯರ್ಥಂ, ಶ್ರೀಮಹಾವಿಷ್ಣುಪ್ರೀತ್ಯರ್ಥಂ, ಪ್ರೇತಸ್ಯ(ಪ್ರೇತಾಯಾಃ) ಯಮಲೋಕಮಾರ್ಗೇ ಕಂಟಕೋಚ್ಛಿಷ್ಟ ಪಾಷಾಣ ಆತಪಬಾಧಾ ನಿವೃತ್ಯರ್ಥಂ, ಸಂಚಯನಾಂಗ ಉದಕುಂಭಾದಿ ಯಥಾಸಂಭವ ದಾನಾನಿ ಚ ಕರಿಷ್ಯೇ ॥

ಉಪವೀತಿಯಾಗಿ, ಪ್ರಾಣಾಯಾಮಮಾಡಿ । ಮೇಲಿನಂತೆ ಸಂಕಲ್ಪವನ್ನು ಆರಂಭಿಸಿ, ಪ್ರಾಚೀನಾವೀತಿಯಾಗಿ ಸಂಕಲ್ಪವನ್ನು ಮುಂದುವರೆಸುತ್ತಾ, ಪ್ರೇತತ್ವವಿಮೋಚನೆಗೆ, ವಸ್ವಾದಿಪುಣ್ಯಲೋಕಗಳ ಪ್ರಾಪ್ತಿಗಾಗಿ ಹಾಗೂ ಮಹಾವಿಷ್ಣುವಿನ ಸುಪ್ರೀತಿಗಾಗಿ ಮತ್ತು ಯಮಲೋಕದ ಮಾರ್ಗದಲ್ಲಿ ಮುಳ್ಳು, ಎಂಜಲು, ಕಲ್ಲು ಮತ್ತು ಬಿಸಿಲು ಇವುಗಳ ಬಾಧಾನಿವೃತ್ತಿಗಾಗಿ, ಉದಕುಂಭಾದಿ ದಾನಾದಿಗಳನ್ನು ಮಾಡುತ್ತೇನೆಂದು ಸಂಕಲ್ಪಿಸಬೇಕು ॥

ಉಪವೀತಂ ।

ಉಪವೀತಿಯಾಗಿ । ಈ ಕೆಳಗಿನ ಶ್ಲೋಕಗಳಿಂದ, ಕೆಳಗೆತಿಳಿಸಿರುವ ದಾನಗಳನ್ನು ಅಥವಾ ಯಥಾಶಕ್ತಿ ಹಿರಣ್ಯದಾನವನ್ನು ಮಾಡಬೇಕು ॥

ಛತ್ರ –

ಛತ್ರಂ ವರ್ಷಾತಪತ್ರಾಣಂ ಛತ್ರಂ ವಿಭೂಷಣಂ ವರಂ ।

ತಸ್ಮಾದಸ್ಯ ಪ್ರದಾನೇನ ಅತಶ್ಶಾಂತಿಂ ಪ್ರಯಚ್ಛ ಮೇ ॥

ಇದಂ ಛತ್ರಂ ಯಸ್ಮೈ ಕಸ್ಮೈ ಬ್ರಾಹ್ಮಣಾಯ ತಸ್ಮೈ ಸಂಪ್ರದದೇ ॥

ಪಾದುಕಾ –

ಕಂಟಕೋಚ್ಛಿಷ್ಟ ಪಾಷಾಣಬಾಧಾ ನಿಬರ್ಹಣಂ ಶುಭಮ್ ।

ತಸ್ಮಾದಸ್ಯ ಪ್ರದಾನೇನ ಅತಶ್ಶಾಂತಿಂ ಪ್ರಯಚ್ಛ ಮೇ ॥

ಇಮೇ ಪಾದುಕೇ ಯಸ್ಮೈ ಕಸ್ಮೈ ಬ್ರಾಹ್ಮಣಾಯ ತಸ್ಮೈ ಸಂಪ್ರದದೇ ॥

ಉದಕುಂಭ –

ಪಾನೀಯಂ ಪಾವನಂ ಶ್ರೇಷ್ಠಂ ಸರ್ವದಾನೋತ್ತಮೋತ್ತಮಮ್ ।

ಸರ್ವೇಷಾಂ ಪ್ರಾಣಮಾಹಾರಂ ಅತಶ್ಶಾಂತಿಂ ಪ್ರಯಚ್ಛ ಮೇ ॥

ಇದಂ ಉದಕುಂಭಂ ಯಸ್ಮೈ ಕಸ್ಮೈ ಬ್ರಾಹ್ಮಣಾಯ ತಸ್ಮೈ ಸಂಪ್ರದದೇ ॥

ದಧ್ಯನ್ನ –

ಅಸ್ಮತ್ಕುಲೇ ಹೃಷೀಕೇಶ ಅಕ್ಷಯ್ಯಾನ್ನಂ ಚ ಪುಷ್ಕಲಂ ।

ದಧ್ಯೋದನ ಪ್ರದಾನೇನ ಅತಶ್ಶಾಂತಿಂ ಪ್ರಯಚ್ಛ ಮೇ ॥

ಇದಂ ದಧ್ಯನ್ನಂ ಯಸ್ಮೈ ಕಸ್ಮೈ ಬ್ರಾಹ್ಮಣಾಯ ತಸ್ಮೈ ಸಂಪ್ರದದೇ ॥

ದೀಪದಾನಂ –

ಅಂಧಕಾರಹರಂ ದೀಪಂ ಪರಂಜ್ಯೋತಿ ಸ್ವರೂಪಕಂ ।

ತಸ್ಮಾದಸ್ಯ ಪ್ರದಾನೇನ ಅತಶ್ಶಾಂತಿಂ ಪ್ರಯಚ್ಛ ಮೇ ॥

ಇದಂ ದೀಪಂ ಬ್ರಾಹ್ಮಣಾಯ ತಸ್ಮೈ ಸಂಪ್ರದದೇ ॥

ದಶದಾನ –

ಗೋ ಭೂ ತಿಲ ಹಿರಣ್ಯ ಆಜ್ಯ ವಾಸೋ ಧಾನ್ಯ ಗುಡಾನಿ ಚ ।

ರೌಪ್ಯಂ ಲವಣಮಿತ್ಯಾಹುಃ ದಶದಾನಾಃ ಪ್ರಕೀರ್ತಿತಾಃ ॥

ಗೋದಾನಂ –

ಗವಾಮಂಗೇಷು ತಿಷ್ಠಂತಿ ಭುವನಾನಿ ಚತುರ್ದಶ ।

ತಸ್ಮಾದಸ್ಯ ಪ್ರದಾನೇನ ಅತಶ್ಶಾಂತಿ ಪ್ರಯಚ್ಛ ಮೇ ॥

ಇದಂ ಗೋದಾನಂ ಬ್ರಾಹ್ಮಣಾಯ ತಸ್ಮೈ ಸಂಪ್ರದದೇ ॥

॥ ಇದಂ ದಶದಾನಂ ಅಥವಾ ಪ್ರತಿನಿಧಿ ಯಥಾಶಕ್ತಿ ಹಿರಣ್ಯದಾನಂ

ಕುರ್ಯಾತ್ ॥

6. ಅಸ್ಥಿಪ್ರಕ್ಷೇಪಣಂ

ಪಂಚಗವ್ಯಂ –

ಉಪವೀತಂ । ಪ್ರಾಣಾನಾಂಯಮ್ಯ । ಓಂಓಂಓಂ.....ಪೂರ್ವೋಚ್ಚರಿತ .....ಪುಣ್ಯತಿಥೌ । ಪ್ರಾಚೀನಾವೀತಂ । ...ಗೋತ್ರಸ್ಯ(ಗೋತ್ರಾಂಯಾಃ), ...ಶರ್ಮಣಃ(ದಾಯಾಃ), ಪಿತುಃ(ಮಾತುಃ) ಪ್ರೇತಸ್ಯ(ಪ್ರೇತಾಯಾಃ), ಪ್ರೇತತ್ವ ವಿಮೋಕಾರ್ಥಂ, ಮರಣದಿನಾದಾರಭ್ಯ ಅದ್ಯದ್ವಿತೀಯೇಽಹನಿ, ಅಸ್ಥಿಪ್ರಕ್ಷೇಪಣಾರ್ಥಂ, ಅಸ್ಥಿಶುದ್ಧ್ಯರ್ಥಂ, ಅಸ್ಥ್ನಾಂ ಪಂಚಗವ್ಯ ಸ್ನಪನಂ ಕರಿಷ್ಯೇ ॥

ಉಪವೀತಿಯಾಗಿ, ಪ್ರಾಣಾಂಯಾಮವಮಾಡಿ । ಸಂಕಲ್ಪವನ್ನು ಆರಂಭಿಸಿ । ಪ್ರಾಚೀನಾವೀತಿಯಾಗಿ ಸಂಕಲ್ಪವನ್ನು ಮೇಲಿನಂತೆ ಮುಂದುವರೆಸುತ್ತಾ, ಅಸ್ಥಿಪ್ರಕ್ಷೇಪಣಾರ್ಥವಾಗಿ – ಅಸ್ಥಿಶುದ್ಧಿಗಾಗಿ, ಅಸ್ಥಿಗಳಿಗೆ ಪಂಚಗವ್ಯ ಸ್ನಾನವನ್ನು ಮಾಡುತ್ತೇನೆಂದು ಸಂಕಲ್ಪಿಸಬೇಕು ॥

ಗಾಯತ್ರ್ಯಾ, ಗೋಮೂತ್ರಂ – ಗಂಧದ್ವಾರಾ, ಗೋಮಯಂ – ಆಪ್ಯಾಯಸ್ವೇತಿ, ಕ್ಷೀರಂ – ದಧಿಕ್ರಾವ್ಣೋ್ನೀ, ದಧಿ – ಶುಕ್ರಮಸೀತಿ, ಆಜ್ಯಂ – ಇತಿ ಪಂಚಗವ್ಯೇನ ಪ್ರೋಕ್ಷ್ಯ । ದೇವಸ್ಯತ್ವೇತಿ ಕುಶೋದಕಂ । ಇತ್ಥಂ ತತ್ತನ್ಮಂತ್ರೇಣ ಅಸ್ಥೀನಿ ಸ್ನಾಪಯೇತ್ ॥

ಮೇಲೆತಿಳಿಸಿರುವ ಆಯಾಯಾ ದ್ರವ್ಯಗಳನ್ನು, ಆಯಾಯಾ ಮಂತ್ರಗಳಿಂದ, ಒಂದುಗೂಡಿಸಿ, ನಂತರ ಮಡಕೆಯಲ್ಲಿಟ್ಟಿರುವ ಅಸ್ಥಿಗಳಿಗೆ ಆ ಪಂಚಗವ್ಯವನ್ನು ಪ್ರೋಕ್ಷಿಸಬೇಕು । ಪುನಃ ಅಸ್ಥಿಕುಂಭದ ಬಾಯನ್ನು ಮುಚ್ಚಬೇಕು ॥

ಕರ್ಷೂ(ಗುಂಡಿ) ಸ್ನಾನ –

(ಪ್ರಾಚೀನಾವೀತೀ), ದಹನದೇಶಸ್ಯ ಪಶ್ಚಾತ್ ಉದಗಾಯತಾಸ್ತಿಸ್ರಃ ಕರ್ಷೂಃ ದೀರ್ಘಾವಟಾನ್ ಖಾತ್ವಾ । ತಾಸಾಂ ಪೂರ್ವಾ ಅಗ್ರೇ ಖನ್ಯತೇ, ತತೋ ಮಧ್ಯಮಾ,

ತತಃ ಪಶ್ಚಿಮೇತಿ ಕ್ರಮೇಣ । ಸರ್ವಾಸ್ತಾಃ ದಕ್ಷಿಣಾಪವರ್ಗಾಃ ಖನ್ಯಂತೇ ಪಿತೃತ್ವಾತ್ । ಅಶ್ಮಾಭಿಃ ಸಿಕತಾಭಿಶ್ಚ ಉಪಪ್ರಕೀರ್ಯ । ಅಯುಗ್ಭಿಃ ಉದಕುಂಭೈರಪಃ ಪರಿಪ್ಲಾವ್ಯ । ಕರ್ಷೂನಾಂ ಪಶ್ಚಿಮೇಭಾಗೇ ದ್ವೇ ಪಲಾಶಶಾಖೇ ಶಮೀಶಾಖೇ ವಾ ದಕ್ಷಿಣೋತ್ತರತೋ ಭೂಮೌ ಸ್ಥಾಪಯಂತಿ, ತಯೋಃ ಉತ್ತರಾ ಪ್ರಥಮಂ ಸ್ಥಾಪ್ಯತೇ । ತಯೋರಗ್ರೇ ದರ್ಭಮಯೇನ ಶುಲ್ಬೇನ ಬಧ್ವಾ, ತೋರಣವತ್ ಕೃತ್ವಾ । ತಾಸು ಕನಿಷ್ಠಪ್ರಥಮಾಃ ಜ್ಞಾತಯಃ ಅಶ್ಮನ್ವತೀ ಮಂತ್ರೇಣ ಸಂಗಾಹಂತೇ ॥

ನಂತರ ದಹನಜಾಗದ ಪಶ್ಚಿಮಭಾಗದಲ್ಲಿ, ಪ್ರಾಚೀನಾವೀತಿಯಾಗಿ, ವಿಸ್ತೀರ್ಣದಲ್ಲಿ ಪೂರ್ವದಿಂದ ಪಶ್ಚಿಮಕ್ಕೆ ಉದ್ದವಾಗಿರುವಂತೆ, ದಕ್ಷಿಣೋತ್ತರ ಅಗಲವಿರುವಂತೆ । ಕ್ರಮವಾಗಿ ಪೂರ್ವ–ಮಧ್ಯ–ಪಶ್ಚಿಮದ ೩ ಗುಂಡಿಗಳನ್ನು ತೆಗೆಯಬೇಕು । ಈ ಕರ್ಮವು ಪಿತೃಸಂಬಂಧವಾದ್ದರಿಂದ, ಎಲ್ಲಾ ಗುಂಡಿಗಳನ್ನೂ ದಕ್ಷಿಣಕ್ಕೆ ಮುಗಿಯುವಂತೆ ಅಗೆಯುವ ಕೆಲಸವನ್ನು ಮಾಡಬೇಕು । ಕಲ್ಲು, ಮರಳುಗಳನ್ನು ಅದಕ್ಕೆ ಹಾಕಿ । ಬೆಸಸಂಖ್ಯೆಯ ನೀರಿನಬಿಂದಿಗೆಗಳಿಂದ, ಗುಂಡಿಯ ಅರ್ಧಕ್ಕಿಂತ ಹೆಚ್ಚಿನಭಾಗ ತುಂಬುವಂತೆ ನೀರನ್ನು ಹಾಕಿ । ಗುಂಡಿಗಳ ಹಿಂದೆ,ಪಶ್ಚಿಮಭಾಗದಲ್ಲಿ, ಮೊದಲು ಉತ್ತರಕ್ಕೆ ನಂತರ ದಕ್ಷಿಣಕ್ಕೆ ಮುತ್ತುಗ ಅಥವಾ ಬನ್ನಿ ಮರದ ಎಲೆಸಹಿತ ೨ ಕೊಂಬೆಗಳನ್ನು ನೆಟ್ಟು । ನಂತರ ೨ ಶಾಖೆಗಳ ತುದಿಭಾಗದಲ್ಲಿ ದರ್ಭೆಯಿಂದ ಮಾಡಿದ ಹಗ್ಗವನ್ನು ತೋರಣದಂತೆ ಕಟ್ಟಬೇಕು । ನಂತರ ನೀರಿರುವ ಆ ೩ ಗುಂಡಿಗಳಲ್ಲೂ ಸಣ್ಣವಯಸ್ಸಿನವರಿಂದ ಕ್ರಮವಾಗಿ, ಜ್ಞಾತಿಗಳು ಅವಗಾಹನ(ಮುಳುಗು)ಸ್ನಾನವನ್ನು ಈ ಕೆಳಗಿನ ಮಂತ್ರದಿಂದ ಮಾಡುತ್ತಾರೆ । ಜ್ಯೇಷ್ಠಕರ್ತೃವು ಕೊನೆಯವನಾಗಿ ಮಾಡಬೇಕು ॥

ಓಂ ಅಶ್ಮನ್ವತೀ ರೇವತೀಃ । ಸಗ್ಂರಭಧ್ವಂ । ಉತ್ತಿಷ್ಠತ । ಪ್ರತರತಾ ಸಖಾಯಃ ॥
ಅತ್ರಾಜಹಾಮ । ಯೇ ಅಸನ್ನಶೇವಾಃ । ಶಿವಾನ್ವಯಂ । ಉಭಿವಾಜಾನ್ । ಉತ್ತರೇಮ ॥

ಎಲ್ಲರೂ ತೋರಣದ ಒಳಗೆ ಹೋಗುವಿಕೆ–

(ಪ್ರಾಚೀನಾವೀತೀ), ತಯೋಶ್ಶಾಖಯೋರ್ಮಧ್ಯೇ ಕನಿಷ್ಠಪ್ರಥಮಾ ಇತ್ಯಾದಿ, ಮಂತ್ರೇಣ ಗಚ್ಛಂತಿ ॥

ನಂತರ ಪ್ರಾಚೀನಾವೀತಿಯಾಗಿ, ಆ ೨ ಶಾಖೆಗಳ ನಡುವೆ ತೋರಣದ ಕೆಳಗೆ ಸಣ್ಣವರಿಂದ ಕ್ರಮವಾಗಿ(ಕಡೆಯಲ್ಲಿ ಕರ್ತೃಗಳು) ಕೆಳಗಿನ ಮಂತ್ರದಿಂದ ನುಸುಳಿ ಹೋಗಬೇಕು । ಎಲ್ಲರಿಗಿಂತ ಕೊನೆಯವನಾಗಿ ಪ್ರಧಾನಕರ್ತೃವು ಹೋಗಬೇಕು ॥

ಓಂ ಯದ್ವೈ ದೇವಸ್ಯ । ಸವಿತುಃ ಪವಿತ್ರಂ । ಸಹಸ್ರಧಾರಂ । ವಿತತಮಂತರಿಕ್ಷೇ ॥ ಯೇನಾಪುನಾತ್ । ಇಂದ್ರಮನಾರ್ತಂ । ಆತ್ಮೈವ । ತೇನಾಹಂ ಮಾಂ । ಸರ್ವತನುಂ ಪುನಾಮಿ ॥

(ಪ್ರಾಚೀನಾವೀತೀ)ಕರ್ತಾ ಮಂತ್ರಾಂತೇ, ಭೂಮೌ ನಿಖಾತೇ ಶಾಖೇ ಉತ್ಥಾಯ, ರಜ್ಜುಂ ಛಿತ್ವಾ, ದಕ್ಷಿಣಸ್ಯಾಂ ನೈಋತ್ಯಾಂ ವಾ ದಿಶಿ ಪೃಥಕ್ ಪೃಥಕ್ ಪರಿತ್ಯಜೇತ್, ಅಪ ಉಪಸ್ಪೃಶ್ಯ ॥

ಪ್ರಾಚೀನಾವೀತಿಯಾಗಿ, ಪ್ರಧಾನಕರ್ತೃವು ಕೆಳಗಿನಮಂತ್ರವನ್ನು ಪೂರ್ಣವಾಗಿ ಹೇಳಿ ನಂತರ ಆ ಕೋಲುಗಳನ್ನು ಕಿತ್ತು ತೆಗೆದು, ತೋರಣದ ಹಗ್ಗವನ್ನು ತುಂಡರಿಸಿ, ದಕ್ಷಿಣ ಅಥವಾ ನೈಋತ್ಯಕ್ಕೆ ಬೇರೆಬೇರೆಯಾಗಿ ಎಸೆಯಬೇಕು, ನಂತರ ಕೈ ತೊಳೆಯಬೇಕು ॥

ಓಂ ಯಾ ರಾಷ್ಟ್ರಾತ್ । ಪನ್ನಾದಪಯಂತಿ । ಶಾಖಾಃ । ಅಭಿಮೃತಾ । ನೃಪತಿಮಿಚ್ಛಮಾನಾಃ ॥ ಧಾತುಸ್ತಾಸ್ಸರ್ವಾಃ । ಪವನೇನ ಪೂತಾಃ । ಪ್ರಜಯಾಸ್ಮಾನ್ । ರಯ್ಯಾ ವರ್ಚಸಾ । ಸಗ್ಂ ಸೃಜಾಥ ॥

ಸೂರ್ಯ ಉಪಸ್ಥಾನ –

ಸರ್ವೇ ಯಜ್ಞೋಪವೀತಿನಃ ಭೂತ್ವಾ, ಅಪ ಉಪಸ್ಪೃಶ್ಯ । ಜ್ಯೋತಿಸ್ತತಃ ಆದಿತ್ಯಮುಪತಿಷ್ಠಂತೇ ॥

ಕರ್ಷೂ(ಗುಂಡಿ)ಸ್ನಾನವಾದನಂತರ, ಎಲ್ಲರೂ ಉಪವೀತಿಗಳಾಗಿ, ಕೈ ತೊಳೆದುಕೊಂಡು । ಜ್ಯೋತಿರೂಪವಾದ ಸೂರ್ಯನನ್ನು ಕೆಳಗಿನ ಮಂತ್ರದಿಂದ ನೋಡುತ್ತಾರೆ(ಉಪಸ್ಥಾನ) ।

ಓಂ ಉದ್ವಯಂ । ತಮಸಸ್ಪರಿ । ಪಶ್ಯಂತಃ । ಜ್ಯೋತಿರುತ್ತರಂ ॥ ದೇವಂ ದೇವತ್ರಾ । ಸೂರ್ಯಮಗನ್ಮ । ಜ್ಯೋತಿರುತ್ತಮಮ್ ॥

ನಂತರ ಜ್ಯೇಷ್ಠಕರ್ತೃವು ಅಸ್ಥಿಕುಂಭವನ್ನು ಹಿಡಿದುಕೊಂಡು, ಅಲ್ಲಿರುವ ಎಲ್ಲರೊಡನೆ ಸ್ಮಶಾನದಿಂದ ಹೊರಟು, ನದೀತೀರಕ್ಕೆ ಹೋಗಬೇಕು ॥

ಅಸ್ಥಿಪ್ರಕ್ಷೇಪಣಸಂಕಲ್ಪಃ –

ಪ್ರಾಚೀನಾವೀತಂ । ...ಗೋತ್ರಸ್ಯ(ಗೋತ್ರಾಯಾಃ), ...ಶರ್ಮಣಃ(ದಾಯಾಃ), ಪಿತುಃ(ಮಾತುಃ), ಪ್ರೇತಸ್ಯ(ಪ್ರೇತಾಯಾಃ), ಪ್ರೇತತ್ವ ವಿಮೋಕಾರ್ಥಂ, ಮರಣದಿನಾದಾರಭ್ಯ ಅದ್ಯದ್ವಿತೀಯೇಽಹನಿ, ಪ್ರೇತಸ್ಯ(ಪ್ರೇತಾಯಾಃ) ವಸ್ವಾದಿ ಪುಣ್ಯಲೋಕಾವಾಪ್ತ್ಯರ್ಥಂ, ಶ್ರೀಮಹಾವಿಷ್ಣುಪ್ರೀತ್ಯರ್ಥಂ, ಮಹಾನದ್ಯಾಂ ಅಸ್ಥಿಪ್ರಕ್ಷೇಪಣಂ ಕರಿಷ್ಯೇ ॥

ಮೇಲೆತಿಳಿಸಿದಂತೆ, ಅಸ್ಥಿಗಳನ್ನು ಬಿಡಲು ಸಂಕಲ್ಪ ಮಾಡಬೇಕು ॥

ಅಸ್ಥಿಕುಂಭಮಾದಾಯ । ಜಾನುಮಾತ್ರಮವತಂ ಖಾತ್ವಾ । ದಕ್ಷಿಣಾಭಿಮುಖಂ ಸ್ಥಿತ್ವಾ । ಜ್ಯೇಷ್ಠಕರ್ತೃವು, ಅಸ್ಥಿಯಿರುವ ಮಡಿಕೆಯನ್ನು ತೆಗೆದುಕೊಂಡು । ನದಿಗೆ ಹೋಗಿ, ಮಂಡಿಯವರೆಗೆ ಮಾತ್ರ ನೀರಿನಲ್ಲಿ ಇಳಿದು, ದಕ್ಷಿಣಾಭಿಮುಖವಾಗಿ ನಿಂತುಕೊಂಡು ।

ಓಂ ಉತ್ತಿಷ್ಠ ಪ್ರೇಹಿ । ಪ್ರದ್ರವೌಕಃ । ಕೃಣುಷ್ವ । ಪರಮೇ ವ್ಯೋಮನ್ ॥ ಯಮೇನ ತ್ವಂ । ಯಮ್ಯಾ ಸಂವಿದಾನಾ । ಉತ್ತಮಂ ನಾಕಂ । ಅಧಿರೋಹೇಮಮ್ ॥

ಇತಿಮಂತ್ರೇಣ, ಮೌನೇನ ಅಸ್ಥಿಪ್ರಕ್ಷೇಪಣಂ ಕೃತ್ವಾ, ಸ್ನಾತ್ವಾ ।

ಮೇಲಿನ ಮಂತ್ರವನ್ನು ಹೇಳಿ, ಮೌನವಾಗಿ ದಕ್ಷಿಣಾಭಿಮುಖವಾಗಿ ನಿಂತು, ದಕ್ಷಿಣದಿಕ್ಕಿಗೆ ಅಸ್ಥಿಯನ್ನು ನೋಡದೇ ಬಿಡಬೇಕು । ಅಸ್ಥಿಗಳು ಮುಳುಗುವವರೆಗೂ ಅಘಮರ್ಷಣಸೂಕ್ತವನ್ನು ಹೇಳಬೇಕು । ಆಮೇಲೆ ಒಮ್ಮೆ ನೀರಿನಲ್ಲಿ ಮುಳುಗಿ, ಎದ್ದುಬರಬೇಕು ॥

(ಪ್ರಾಚೀನಾವೀತೀ), ಕೇಶಾನ್ಪ್ರಕೀರ್ಯ, ಪಾಂಸೂನೋಪ್ಯ ಏಕವಾಸಸಃ, ದಕ್ಷಿಣಾಮುಖಾಃ, ಧಾತಾಪುನಾತು, ಮಂತ್ರೇಣ ಉಪಮಜ್ಜನಂ ಕುರ್ಯಾತ್ ॥

ನಂತರ ಈ ಅಸ್ಥಿಪ್ರಕ್ಷೇಪಣೆಗಾಗಿ ಬಂದ ಎಲ್ಲರೂ ಕರ್ತೃಗಳೊಂದಿಗೆ, ಪ್ರಾಚೀನಾವೀತಿಯಾಗಿ, ಕೂದಲುಗಳನ್ನು ಬಿಚ್ಚಿಕೊಂಡು, ಧೂಳನ್ನು ದೇಹಕ್ಕೆ ತಿಕ್ಕಿಕೊಂಡು, ದೇಹದಲ್ಲಿ ಒಂದುಬಟ್ಟೆಯನ್ನು ಮಾತ್ರ ಧರಿಸಿಕೊಂಡು, ದಕ್ಷಿಣಾಭಿಮುಖವಾಗಿ, ಈ ಕೆಳಗಿನ ಮಂತ್ರದಿಂದ ನೀರಿನಲ್ಲಿ ಮುಳುಗುಸ್ನಾನ ಮಾಡಬೇಕು ॥

ಓಂ ಧಾತಾ ಪುನಾತು । ಸವಿತಾಪುನಾತು ॥ ಅಗ್ನೇಸ್ತೇಜಸಾ । ಸೂರ್ಯಸ್ಯ ವರ್ಚಸಾ ॥

ನಂತರ ಒದ್ದೆ ಬಟ್ಟೆಸಹಿತವಾಗಿಯೇ, ನಿತ್ಯವಿಧಿಯನ್ನು ಮಾಡುವುದು ॥

ಸೂಚನೆ –

ಮರಣದಿನದಿಂದ ಆರಂಭಿಸಿ ೧೦ ದಿನಗಳಲ್ಲಿ ಪ್ರತಿದಿನವೂ, ಶಿಲಾಸ್ಥಾಪನ – ವಾಸೋದಕ – ತಿಲೋದಕ – ಪಿಂಡಪ್ರದಾನ – ಏಕೋತ್ತರವೃದ್ಧಿಶ್ರಾದ್ಧ – ದಾನ, ಇವುಗಳನ್ನು ಮಾಡಬೇಕು । ಇದಕ್ಕೆ "ನಿತ್ಯವಿಧಿ" ಎನ್ನುತ್ತಾರೆ ॥

ಬೆಸದಿನಗಳಲ್ಲಿ(೧, ೩, ೫, ೭, ೯, ೧೧) ಮಾತ್ರ, ನವಶ್ರಾದ್ಧವನ್ನು ಮಾಡಬೇಕು ॥

ಇಲ್ಲಿ, ಮೊದಲದಿನಕ್ಕೆ ಅನ್ವಯವಾಗುವಂತೆ ನಿತ್ಯವಿಧಿಯನ್ನು ಹಾಗೂ ನವಶ್ರಾದ್ಧವನ್ನೂ ಬರೆಯಲಾಗಿದೆ । ಉಳಿದ ದಿನಗಳಲ್ಲಿ ಮಾಡುವಾಗ, ಅಲ್ಲಿನ ಸಂಕಲ್ಪವನ್ನು ಆಯಾಯಾ ದಿನಕ್ಕೆ ತಕ್ಕಂತೆ ಹೇಳಬೇಕು ॥

****

****

2 ಕಪರ್ದೀಯ ಅಪರಕಾರಿಕಾ

ನಗ್ನ ಪ್ರಚ್ಛಾದನ ಶ್ರಾದ್ಧಂ

– ಅಥ ವಿಪ್ರಾನನುಜ್ಞಾಪ್ಯ ನಗ್ನಶ್ರಾದ್ಧಂ ಸಮಾಚರೇತ್ ।

ನಗ್ನ ಪ್ರಚ್ಛಾದನಾಖ್ಯಂತು ಶ್ರಾದ್ಧಂ ಪೂರ್ವಮಿತಿ ಸ್ಥಿತಮ್ ॥ ೮೯ ॥

ನಂತರ ಬ್ರಾಹ್ಮಣರ ಒಪ್ಪಿಗೆಯನ್ನು ಪಡೆದು, ನಗ್ನಪ್ರಚ್ಛಾದನ ಶ್ರಾದ್ಧವನ್ನು ಮಾಡಬೇಕು । ಇದಕ್ಕೆ ನಗ್ನಪ್ರಚ್ಛಾದನ ಶ್ರಾದ್ಧವೆಂದು ಹೆಸರು, ಅದು ಹೇಗೆಂದರೆ – ॥

– ಘಟೇ ತಂಡುಲ ಸಂಪೂರ್ಣೇ ವಾಸಸಾ ಪರಿವೇಷ್ಟಿತೇ ।

ಪಿಧಾಯ ಕಾಂಸ್ಯಪಾತ್ರೇಣ ತಸ್ಮಿನ್ ಆಜ್ಯಂ ವಿನಿಕ್ಷಿಪೇತ್ ॥ ೯೦ ॥

ಒಂದುಪಾತ್ರೆಗೆ ಅಕ್ಕಿಯನ್ನು ತುಂಬಿ, ಹೊಸಬಟ್ಟೆಯಿಂದ ಮುಚ್ಚಿ । ಕಂಚಿನ ಪಾತ್ರೆಯಲ್ಲಿರುವ ತುಪ್ಪವನ್ನು ಅಕ್ಕಿಗೆ ಹಾಕಬೇಕು ॥

– ಹಿರಣ್ಯಂ ತತ್ರ ನಿಕ್ಷಿಪ್ಯ ಯಥಾವಿಭವ ಸಾರತಃ ।

ಕುಲೀನಾಯ ದರಿದ್ರಾಯ ಪ್ರದೀಪಂ ಕಾಂಸ್ಯಭಾಜನಮ್ ॥ ೯೧ ॥

ಚಿನ್ನವನ್ನು ಅದರಲ್ಲಿಟ್ಟು, (ತನ್ನ ಯೋಗ್ಯತೆಗೆ ತಕ್ಕದಾಗಿ) । ಒಳ್ಳೆಯ ವಂಶೀಕನಾದ, ಬಡವನಾಗಿರುವ ಬ್ರಾಹ್ಮಣನಿಗೆ ದೀಪ ಮತ್ತು ಚಿನ್ನ, ಅಕ್ಕಿಯಿರುವ ಕಂಚಿನ ಈ ಪಾತ್ರೆಯನ್ನು ಕೊಡಬೇಕು, ಇದಕ್ಕೆ ನಗ್ನಪ್ರಚ್ಛಾದನಶ್ರಾದ್ಧವೆಂದು ಹೆಸರು ॥

– ದಹನಾನಂತರಂ ದದ್ಯಾತ್ ಸ ತು ನಗ್ನ ಪರಿಚ್ಛದಃ ।

ದಹನಾನಂತರದಲ್ಲಿ ಈ ನಗ್ನಪ್ರಚ್ಛಾದನ ಶ್ರಾದ್ಧವನ್ನು ಮಾಡಬೇಕು ॥

ನಿತ್ಯವಿಧಿಃ

ಶಿಲಾ ಸ್ಥಾಪನಂ

– ನವಂ ವಾಸಸ್ತಿಲಾನ್ ದರ್ಭಾನ್ ಶಿಲಾಃ ತಿಸ್ರೋ ಘಟಂ ತದಾ ॥ ೯೨ ॥

ಕರ್ತೃವು ಹೊಸ ಬಟ್ಟೆ(ದೀಕ್ಷಾವಸ್ತ್ರ)ಯನ್ನು ಧರಿಸಿ, ಎಳ್ಳು, ದರ್ಭೆಯಕಟ್ಟು, ೩ ಕಲ್ಲು, ಪಂಚಪಾತ್ರೆ–ಉದ್ಧರಣೆ, ಚೊಂಬು ಇವುಗಳನ್ನು ತೆಗೆದುಕೊಂಡು ॥

– ಅಮಾತ್ಯೈಸ್ಸಹಚಾದಾಯ ತತ್ರ ಗತ್ವಾ ಮಹಾಜಲಂ ।

ಸಚೇಲಂ ದಂಡವತ್ ಸ್ನಾತ್ವಾ ಮಲಂ ಪ್ರಕ್ಷಾಳ್ಯ ವರ್ಷಜಂ ॥ ೯೩ ॥

ಪುರೋಹಿತರೊಡನೆ, ಜಲಾಶಯಕ್ಕೆ(ನದೀ) ಹೋಗಿ । ನಮಿಸಿ, ಬಟ್ಟೆಯಿರುವಂತೆಯೇ ಸ್ನಾನಮಾಡಿ, ಶರೀರವನ್ನು ಮಣ್ಣಿನಿಂದತಿಕ್ಕಿ, ಸ್ವಚ್ಛಗೊಳಿಸಿಕೊಂಡು ॥

– ಪುನಸ್ಸಚೇಲಂ ಸ್ನಾತ್ವಾಥ ಶುದ್ಧಃ ಪ್ರಯತ ಮಾನಸಃ ।

ಶುದ್ಧಿದಂ ಸ್ಫಟಿಕಂ ಶ್ಲಕ್ಷ್ಣಂ ಶ್ಯಾಮಂ ಲೋಹಿತಮೇವವಾ ॥ ೯೪ ॥

ಪುನಃ ವಸ್ತ್ರಸಮೇತವಾಗಿ ಸ್ನಾನಮಾಡಿ, ಶುದ್ಧಮನಸ್ಸಿನಿಂದ । ಶುದ್ಧವಾದ – ಬಿಳಿಯ ಕಪ್ಪಾದ ಮತ್ತು ಕೆಂಪಗಿರುವ ॥

– ಪಾಷಾಣತ್ರಯಮಾದಾಯ ಖಾತ್ವಾ ಭೂಮೌ ತತೋವಟಂ ।

ಶಿಲಾತ್ರಯಂ ಚ ಸಂಸ್ಥಾಪ್ಯ ಪ್ರೇತಮಾವಾಹಯೇತ್ ತತಃ ॥ ೯೫ ॥

೩ ಕಲ್ಲುಗಳನ್ನು ನದೀ ದಡದಲ್ಲಿ ಸಂಗ್ರಹಿಸಿ, ನೆಲದಲ್ಲಿ ದೊಡ್ಡಗುಂಡಿಯನ್ನು ಮಾಡಿ । ಆ ೩ ಕಲ್ಲುಗಳನ್ನು ಇಟ್ಟು, ನಂತರ ಮಧ್ಯದ ಶಿಲೆಗೆ ಪ್ರೇತನನ್ನು ಆವಾಹಿಸಬೇಕು (ಮಧ್ಯದಲ್ಲಿ ಬಿಳಿಯಕಲ್ಲನ್ನು ಇಟ್ಟು, ಅದಕ್ಕೆ ಪ್ರೇತನನ್ನೂ ಹಾಗೂ ಉತ್ತರಕ್ಕೆ ಕೆಂಪುಕಲ್ಲನ್ನಿಟ್ಟು ಅದಕ್ಕೆ ರುದ್ರನನ್ನೂ ಮತ್ತೂ ದಕ್ಷಿಣಕ್ಕೆ ಕರಿಕಲ್ಲನ್ನಿಟ್ಟು ಅದಕ್ಕೆ ಯಮನನ್ನೂ ಆವಾಹಿಸಬೇಕು, ಈ ೩ರನ್ನೂ ದಕ್ಷಿಣಾಗ್ರವಾದ ಒಂದು ದರ್ಭೆಯಮೇಲೆ ಇಡಬೇಕು) ॥ ಇದು ಪ್ರಭೂತಬಲಿ ವೇದಿಕಾರಾಧನೆಯಲ್ಲಿ ಮಾಡುವುದಾಗಿದೆ ॥

ವಾಸೋದಕ ಮತ್ತು ತಿಲೋದಕ ತರ್ಪಣಗಳ ವಿಚಾರ

– ಬಾಲಪೂರ್ವಾಸ್ಸಗೋತ್ರಾಶ್ಚ ಪುತ್ರಾಸ್ಸರ್ವೇ ಸಪಿಂಡಕಾಃ ।

ದಕ್ಷಿಣಾಭಿಮುಖಾ ಭೂತ್ವಾ ಪ್ರಾಚೀನಾವೀತಿನಸ್ತಥಾ ॥ ೯೬ ॥

ಕಿರಿಯರನ್ನು ಮುಂದಿಟ್ಟುಕೊಂಡು, ಎಲ್ಲಾ ಕರ್ತೃಗಳೂ, ಸಗೋತ್ರದವರೂ, ಮಕ್ಕಳೂ, ದಾಯಾದಿಗಳೂ । ದಕ್ಷಿಣಾಭಿಮುಖಿವಾಗಿ ಕುಳಿತು ಪ್ರಾಚೀನಾವೀತಿಯಾಗಿ, ಒಂಟಿದರ್ಭೆಯ ಪವಿತ್ರವನ್ನು ಬೆರಳಿಗೆ ಹಾಕಿಕೊಂಡು ॥

– ಸವ್ಯಂ ಜಾನುಂ ತತೋನ್ಯಾಚ್ಯ ಚೈಕವಸ್ತ್ರೇಣ ಏವ ಚ ।

ಸವ್ಯೋತ್ತರಾಭ್ಯಾಂ ಪಾಣಿಭ್ಯಾಂ ಕುರ್ವೀರನ್ ಉದಕ ಕ್ರಿಯಾಮ್ ॥ ೯೭ ॥

ಎಡಮಂಡಿಯನ್ನು ನೆಲಕ್ಕೆ ಊರಿಕೊಂಡು, ಒಂಟಿವಸ್ತ್ರವನ್ನು ಧರಿಸಿ । ಎರಡುಕೈಗಳಿಂದಲೂ ಪಿತೃತೀರ್ಥದಲ್ಲಿ ಈ ತಿಲತರ್ಪಣವನ್ನು ಮಾಡಬೇಕು ॥

– ಗೋತ್ರನಾಮ ಪದಾಂತೇ ತು ಏತತ್ತ ಉದಕಂ ತ್ವಿತಿ ।

ತ್ರೀಣಿ ವಾಸೋದಕಂ ದದ್ಯುಸ್ಸರ್ವೇಷಾಮೇವಮೇವತು ॥ ೯೮ ॥

ಗೋತ್ರವನ್ನು, ಹೆಸರನ್ನೂ, ಪದವನ್ನೂ(ಉಪತಿಷ್ಠತು) ಹೇಳಿ, ಈ ತಿಲತರ್ಪಣವು ನಿನಗೆ ಸೇರಲಿ ಎನ್ನಬೇಕು । ಮೊದಲದಿನ ೩ ತರ್ಪಣವನ್ನು ಮಾಡಬೇಕು, ಹೀಗೆಯೇ ಬಟ್ಟೆಯನೀರಿನಿಂದ ಕೊಡುವ(ವಾಸೋದಕ) ತರ್ಪಣವನ್ನು ಪ್ರತಿದಿನವೂ ಕೊಡಬೇಕು॥

– ತಿಲೈಃ ಸಪ್ತಾಷ್ಟಭಿರ್ವಾಪಿ ಸಮವೇತಂ ಜಲಾಂಜಲಿಂ ।

ಗೋತ್ರನಾಮ ಪದಾಂತೇತು ಏತತ್ತ ಉದಕಂ ತ್ವಿತಿ ॥ ೯೯ ॥

ಶಿಲಾಸ್ಥಾಪನ – ಶಿಲಾಸ್ನಾನ – ಮಣ್ಣಿನಸ್ನಾನ – ಬಟ್ಟೆಯನೀರಿನ ತರ್ಪಣ – ಎಳ್ಳಿನನೀರಿನ ತರ್ಪಣ – ಪಿಂಡಪ್ರದಾನ – ಬಲಿಪ್ರದಾನ ಅಪ್ರದಕ್ಷಿಣ ಪರಿಷೇಚನ ಈ ಎಂಟನ್ನೂ । ಹಿಂದಿನಂತೆ, ಗೋತ್ರ–ಹೆಸರು–ಉಪತಿಷ್ಠತು ಎಂಬ ಪದಗಳೊಡನೆ ಪ್ರತಿದಿನವೂ ಮಾಡಬೇಕು ॥

– ಪ್ರಥಮೇಹ್ನಿ ತ್ರಯಂ ಕುರ್ಯಾತ್ ದ್ವಿತೀಯೇಹ್ನಿ ಚತುಷ್ಟಯಮ್ ।

ಪಂಚಸಂಖ್ಯಾ ತೃತೀಯೇಹ್ನಿ ಚತುರ್ಥೇ ಷಟ್ಕಮೇವ ಚ ॥ ೧೦೦ ॥

ಮೊದಲದಿನ ೩ ತರ್ಪಣ – ಎರಡನೇದಿನ ೪ । ಮೂರನೇದಿನ ೫ – ನಾಲ್ಕನೇದಿನ ೬ ॥

– ಪಂಚಮೇ ಸಪ್ತ ಸಂಖ್ಯಾಸ್ಯಾತ್ ಷಷ್ಠೇಹನ್ಯಷ್ಟ ಸಂಖ್ಯಕಂ ।

ನವಸಂಖ್ಯಾ ಸಪ್ತಮೇಹ್ನಿ ಅಷ್ಟಮೇ ದಶ ಸಂಖ್ಯಕಮ್ ॥ ೧೦೧ ॥

ಐದನೇದಿನ ೭ – ಆರನೇದಿನ ೮ । ಏಳನೇದಿನ ೯ – ಎಂಟನೇದಿನ ೧೦ ॥

– ಏಕಾದಶಸ್ಯುರ್ನವಮೇ ದಶಾಹೇ ದ್ವಾದಶಸ್ಮೃತಾಃ ।

ಪ್ರದದ್ಯುಃ ಜ್ಞಾತಯಸ್ಸರ್ವೇ ಕ್ಷೌರಂ ಕೃತ್ವೋದಕಾಂಜಲಿಮ್ ॥ ೧೦೨ ॥

ಒಂಭತ್ತನೇದಿನ ೧೧ – ಹತ್ತನೇದಿನ ೧೨ ಹೀಗೆ ಒಟ್ಟು ೭೫ ತರ್ಪಣಗಳನ್ನು ಕರ್ತೃವು ಕೊಡಬೇಕು, ನಂತರ ೧೦ ನೇ ದಿನ ಜ್ಞಾತಿಗಳೂ(ದಾಯಾದಿಗಳು) ಕ್ಷೌರವನ್ನು(ಕಂಕಳು–ಮುಖ–ತಲೆ) ಮಾಡಿಸಿಕೊಂಡು, ಧರ್ಮೋದಕವೆಂಬ ತಿಲೋದಕವನ್ನು ೩ ಬಾರಿ ಕೊಡಬೇಕು ॥

ನವಶ್ರಾದ್ಧಂ

– ಶ್ರಾದ್ಧಮೇಕೋತ್ತರಂ ವೃದ್ಧ್ಯಾ ಕರ್ತವ್ಯಂ ತು ದಿನೇ ದಿನೇ ।

ನವಶ್ರಾದ್ಧಮಯುಗ್ಮಾಹೇತ್ವಥ ವೈಕಾದಶೇಹ್ನಿ ಷಟ್ ॥ ೧೦೩ ॥

ಹೀಗೆ ೧೦ ದಿನವೂ ತರ್ಪಣ, ಪಿಂಡಪ್ರದಾನಾದಿಗಳನ್ನು ಮಾಡಬೇಕು । ಬೆಸದಿನಗಳಲ್ಲಿ (೧–೩–೫–೭–೯–೧೧) ನವಶ್ರಾದ್ಧಗಳನ್ನು (ಒಟ್ಟು ೬) ೧೧ನೇ ದಿನ ಪರ್ಯಂತವರೆಗೂ ಮಾಡಬೇಕು ॥

– ಗೃಹದ್ವಾರಸ್ಯ ಕುಂಡಂತು ಪ್ರಾವೃಜ್ಯಂ ವಿದಲಾದಿಭಿಃ ।

ಪ್ರತ್ಯಕ್ ದ್ವಾರಮುದಕ್ ದ್ವಾರಂ ಕೂಟಂ ಕೃತ್ವಾಥ ಭೂಷಯೇತ್ ॥ ೧೦೪ ॥

ನಂತರ ಗುಂಡಿ, ದರ್ಭೆ, ಪಿಂಡ, ಬಲಿಪ್ರದಾನಗಳು ಮತ್ತು ನವಶ್ರಾದ್ಧದ ದ್ರವ್ಯಗಳು ಎಲ್ಲವನ್ನೂ ಒಂದೆಡೆ ಸೇರಿಸಿ, ಅವುಗಳನ್ನು ಪಾತ್ರೆಯಲ್ಲಿ ಇಟ್ಟು, ಆ ಜಾಗವನ್ನೆಲ್ಲಾ ಹೊಸಮಣ್ಣು, ಸಗಣಿಯಿಂದ ಶುದ್ಧಮಾಡಬೇಕು ॥

– ತಸ್ಯೋಪರಿ ನಿಧಾತವ್ಯಂ ಕ್ಷೀರಂ ನೀರಂ ಚ ಪಾತ್ರಯೋಃ ।

ಪ್ರೇತಾತ್ರಸ್ನಾಹೀತ್ಯುದಕಂ ಪಿಬೇತಂ ಕ್ಷೀರಮಿತ್ಯಪಿ ॥ ೧೦೫ ॥

ಎರಡು ಪಾತ್ರೆಗಳಲ್ಲಿ, ಒಂದಕ್ಕೆ ಹಾಲು ಇನ್ನೊಂದಕ್ಕೆ ನೀರನ್ನು ಹಾಕಿಡಬೇಕು । "ಹೇ ಪ್ರೇತ, ಅತ್ರ ಸ್ನಾಹಿ, ಅತ್ರ ಉದಕಂ ಪಿಬ, ಅತ್ರ ಕ್ಷೀರಂ ಪಿಬ" ಎಂದು ಹೇಳಿ, ಪ್ರೇತನಿಗೆ ಎರಡುಕೈಗಳಿಂದಲೂ ತೋರಿಸಬೇಕು ॥

– ಆಕಾಶಂ ಗಮಯೇತ್ ಪಿಂಡಂ ಜಲಸ್ಥೋ ದಕ್ಷಿಣಾಮುಖಿಃ ।

ಪಿತೄಣಾಂ ಸ್ಥಾನಮಾಕಾಶಂ ದಕ್ಷಿಣಾದಿಕ್ ತಥೈವ ಚ ॥ ೧೦೬ ॥

ನಂತರ ಅವೆಲ್ಲವನ್ನೂ ತುಂಬಿಟ್ಟಿರುವ ಪಾತ್ರೆಯಲ್ಲಿಯೇ, ಈ ಹಾಲು–ನೀರನ್ನೂ ಹಾಕಿಕೊಂಡು ನದಿಗೆ ಹೋಗಿ, ದಕ್ಷಿಣಕ್ಕೆ ತಿರುಗಿ, ಪ್ರಾಚೀನಾವೀತಿಯಾಗಿ । ಅವೆಲ್ಲವನ್ನೂ ಮೇಲಕ್ಕೆ ಎರಚಿ, ನೀರಿಗೆ ಬೀಳುವಂತೆ ಮಾಡಬೇಕು ॥

ಪಿಂಡಗಳ ಗಾತ್ರದ ವಿಚಾರ

– ದಕ್ಷಿಣಾಗ್ರಾನ್ ಕುಶಾನ್ ತೀರ್ತ್ವಾ ದದ್ಯಾತ್ ತೇಷೂದಕಂ ಸಕೃತ್ ।

ಕುಕ್ಕುಟಾಂಡ ಪ್ರಮಾಣಂ ವಾ ಮುಷ್ಟಿ ಪ್ರಮಾಣಮೇವವಾ ॥ ೧೦೭ ॥

ನಂತರ, ದಕ್ಷಿಣದಿಕ್ಕಿಗೆ ದರ್ಭೆಗಳನ್ನು ಹರಡಿಕೊಂಡು, ಮೊದಲು ತಿಲೋದಕವನ್ನು ಕೊಡಬೇಕು । ನಂತರ ಕೋಳಿಮೊಟ್ಟೆಯ ಗಾತ್ರದ ಪಿಂಡವನ್ನು ಅಥವಾ ಮುಷ್ಟಿಗಾತ್ರದ ಪಿಂಡವನ್ನು ಅಥವಾ ॥

– ಫಲಮೂಲ ತಿಲೈರ್ಮಿಶ್ರಂ ಘೃತೇನ ಚ ಸಮನ್ವಿತಂ ।

ಗೋತ್ರಾಯ ಶರ್ಮಣೇ ಪಿತ್ರೇ ದರ್ಭೇಷು ಕುಂಡ ಸನ್ನಿಧೌ ॥ ೧೦೮ ॥

ಹಣ್ಣು, ಎಳ್ಳು, ತುಪ್ಪ ಇವುಗಳನ್ನು ಸೇರಿಸಿ ಕಲಸಿ । ಈ ಗೋತ್ರದ, ಈ ಹೆಸರಿನ, ಇಂತಹವರಿಗೆ ಎಂದು ಹೇಳುತ್ತಾ, ಈ ಹಿಂದೆ ಮಾಡಿದ ಗುಂಡಿಯ ಪಕ್ಕದಲ್ಲಿ ॥

– ಪ್ರಾತರೇತಂ ಪಿಂಡಮಿತಿ ಸಾಯಮೇತಮಿತಿ ಬ್ರುವನ್ ।

ಅವಾಕ್ಪಾಣಿಃ ತತೋನ್ಯಸ್ಯ ತಿಲಮಿಶ್ರಂ ಜಲಂ ಕ್ಷಿಪೇತ್ ॥ ೧೦೯ ॥

ಬೆಳಿಗ್ಗೆ ಮತ್ತು ಸಂಜೆಯ ಪಿಂಡಗಳು ಎಂದುಹೇಳಿ, ಬೆಳಿಗ್ಗೆಯೇ । ಪಿತೃತೀರ್ಥದಲ್ಲಿ, ಪ್ರಾಚೀನಾವೀತಿಯಾಗಿ, ಎಳ್ಳುನೀರಿನೊಂದಿಗೆ ಇಡಬೇಕು ॥

– ಆಂಜನಾಭ್ಯಂಜನೇ ವಾಸೋ ಘೃತಂ ದತ್ವಾ ತತೋ ಮಧು ।

ಪಾತ್ರ ಸಂಕ್ಷಾಳನಜಲಂ ಅಪಸವ್ಯಂ ನಿನೀಯ ಚ ॥ ೧೧೦ ॥

ಎರಡುಸಲ ಆ ಪಿಂಡಕ್ಕೆ ತುಪ್ಪವನ್ನು ಹಾಕಿ, ಹೊಸಬಟ್ಟೆಯನ್ನೂ ಇಟ್ಟು, ಪುನಃತುಪ್ಪವನ್ನು ಹಾಕಿ, ಆಮೇಲೆ ಜೇನುತುಪ್ಪವನ್ನೂ ಸೇರಿಸಬೇಕು । ಅನ್ನಮಾಡಿದ ಪಾತ್ರೆಗೆ ನೀರನ್ನು ಹಾಕಿಕೊಂಡು, ಅಪ್ರದಕ್ಷಿಣವಾಗಿ ಒಸಲ ನೀರಿನಿಂದ ಪರಿಷೇಚನ(ಸುತ್ತುಗಟ್ಟುವುದು) ಮಾಡುವುದು ॥

ಆ ಹತ್ತು ದಿನಗಳು ಹಾಗೂ ೧ ವರ್ಷಗಳವರೆಗೆ, ಕರ್ತೃ ಮತ್ತು ಅವನ ಪತ್ನೀ–ಮಕ್ಕಳ ಆಹಾರ, ನಿಯಮಗಳ ವಿಚಾರ

– ನದ್ಯಾಂ ತು ಪ್ರಕ್ಷಿಪ್ಯ ಸ್ನಾತ್ವಾಥ ಗೃಹಮಾವಿಶೇತ್ ।

ದಶಾಹಮಥ ಆಸೀರನ್ನಕ್ಷಾರ ಲವಣಾಶಿನಃ ॥ ೧೧೧ ॥

ಪುನಃ ಉಪವೀತಿಯಾಗಿ, ಸ್ನಾನಮಾಡಿ, ಮನೆಗೆ ಬರಬೇಕು । ಈ ೧೦ ದಿನಗಳೂ ಉಪ್ಪು, ಖಾರಗಳನ್ನು ಬಿಡಬೇಕು ॥

– ಬ್ರಹ್ಮಚರ್ಯಂ ಭವೇದೇಷಾಂ ಪತ್ನ್ಯಸ್ತ್ವಾವಮರಣಾಂತಿಕಂ ।

ಆಶೌಚ ಕಾಲೇ ಸ್ಮಾರ್ತಾನಿ ವರ್ಜನೀಯಾನಿ ಸರ್ವದಾ ॥ ೧೧೨ ॥

ಕರ್ತೃಗಳು(ದಂಪತಿ) ಬ್ರಹ್ಮಚರ್ಯಪಾಲನೆ ಮಾಡಬೇಕು – ಹೆಂಡತಿಯಾದರೋ ಜೀವನಪೂರ್ತಿ ಬ್ರಹ್ಮಚರ್ಯ ಪಾಲನೆ ಮಾಡಬೇಕು । ಸೂತಕವಿರುವ ಕಾಲಗಳಲ್ಲಿ,ಯಾವುದೇ ಸಂಸ್ಕಾರ ಕರ್ಮಗಳನ್ನು(ಹಬ್ಬ, ವ್ರತಾದಿಗಳು) ಮಾಡುವಂತಿಲ್ಲ॥

॥ ಎರಡನೇ ದಿನದ ಕರ್ಮಗಳು ॥

ಸ್ಮಶಾನಾಗ್ನ್ಯನುಗತ ಪ್ರಾಯಶ್ಚಿತ್ತಮ್
(ಅಗ್ನಿನಾಶದ ವಿಚಾರ)

– ಶಾವಾನಲೇ ಸಮುದ್ವಾಯೇ ಸಂಧಾಯ ವಿಧಿವತ್ ಪುನಃ ।

ವ್ಯಾಹೃತೀಭಿಃ ಸಕೃತ್ ಹೋಮಃ ಕಾರ್ಯಂ ತತ್ರ ಶುಭೇತರೇ ॥ ೧೧೩ ॥

ಸ್ಮಶಾನಾಗ್ನಿಯು ನಾಶವಾಗಲಾಗಿ, ಪುನಸ್ಸಂಧಾನದ ವಿಧಿಯಂತೆ ಅಗ್ನಿಯನ್ನು ಇಟ್ಟುಕೊಂಡು । ವ್ಯಾಹೃತಿಯಿಂದ ಒಮ್ಮೆ ಹೋಮ ಮಾಡಬೇಕು ॥

– ಸ್ಮಶಾನವಹ್ನೌ ಯದಿ ತತ್ರ ನಷ್ಟೇ ಮಂಥೇದವಕ್ಷಾನತ ಏವ ವಹ್ನಿಂ ।

ತದ್ಭಸ್ಮನಾ ಲೌಕಿಕಯೋರರಣ್ಯೋಸ್ಸಂಸ್ಪೃಶ್ಯ ತದ್ವ್ಯಾಹೃತಿ ಹೋಮ
ಏಕಃ ॥ ೧೧೪ ॥

ಆಹಿತಾಗ್ನಿಯ ಸ್ಮಶಾನಾಗ್ನಿಯು ನಾಶವಾಗಲಾಗಿ, ಆ ನಾಶವಾದಂತಹ ಅಗ್ನಿಯ ಭಸ್ಮವನ್ನು ಲೌಕಿಕಾರಣಿಗೆ ಲೇಪನ ಮಾಡಿಕೊಂಡು । ಅರ್ಧಸುಟ್ಟ ಆ ಸೌದೆಗಳಿಂದಲೇ ಅಗ್ನಿಯನ್ನು ಮಂಥನಮಾಡಿ, ನಂತರ ಪ್ರಾಯಶ್ಚಿತ್ತವಾಗಿ ಸಮಸ್ತ ವ್ಯಾಹೃತಿಯಿಂದ ಒಂದು ಹೋಮ ಮಾಡಬೇಕು ॥

– ನಷ್ಟೇಶವಾಗ್ನೌ ತತ್ ಭಸ್ಮ ಸಂಸ್ಪೃಷ್ಟಾರಣಿ ಮಂಥನಮ್ ।

ಲೌಕಿಕಾಗ್ನಿ ವ್ಯಾಹೃತಿ ಸ್ಮಾರ್ತೇ ಸರ್ವಚಿತ್ತಂ ದ್ವಯೋಸ್ಸಮಮ್ ॥ ೧೧೫ ॥

ಸ್ಮಶಾನಾಗ್ನಿಯು ನಾಶವಾಗಲಾಗಿ, ಆಹಿತಾಗ್ನಿಯ ಔರ್ಧ್ವದೈಹಿಕಕ್ಕೆ ಆ ಭಸ್ಮವನ್ನು ಲೌಕಿಕಾರಣಿಗೆ ಲೇಪಿಸಿಕೊಂಡು, ಮಂಥನದಿಂದ ಅಗ್ನಿಯನ್ನು ಉತ್ಪಾದಿಸಬೇಕು । ಅನಾಹಿತಾಗ್ನಿಗಾದರೋ, ಲೌಕಿಕಾಗ್ನಿಯನ್ನು ಮಾಡಿಕೊಂಡು ಇಟ್ಟುಕೊಳ್ಳಬೇಕು । ಇಬ್ಬರಿಗೂ ಪ್ರಾಯಶ್ಚಿತ್ತವಾಗಿ ವ್ಯಾಹೃತಿಹೋಮವು ಸಮಾನವು ॥

– ಸ್ಮಾರ್ತಾಗ್ನಿ ನಾಶೇऽಪಿ ತದೇವ ಚಿತ್ತಂ ವಹ್ನಿರ್ಯಥಾ
ಯೋನಿಸಮುದ್ಭವಸ್ಯಾತ್ ।

ಬೋಧಾಯನಾಚಾರ್ಯಮತೇತು ತಸ್ಯ ಶ್ಮಶಾನ ವಹ್ನೇರಪರಂ
ವಿಧಾನಮ್ ॥ ೧೧೬ ॥

ಸ್ಮಾರ್ತಾಗ್ನಿಯು ನಾಶವಾದಾಗ, ಹೇಗೆ ಅಗ್ನಿನಷ್ಟ ಪುನಸ್ಸಂಧಾನವು ಪ್ರಾಯಶ್ಚಿತ್ತವೋ ಹಾಗೆಯೇ ಇಲ್ಲೂ ಪುನಸ್ಸಂಧಾನದಿಂದ ಅಗ್ನಿಯನ್ನು ಇಟ್ಟುಕೊಳ್ಳಬೇಕು ಎಂದು ಬೋಧಾಯನರು ಸ್ಮಶಾನಾಗ್ನಿಯ ವಿಷಯದಲ್ಲಿ ಈ ವಿಧಾನವನ್ನೂ ತಿಳಿಸಿದ್ದಾರೆ ॥

ಅಸ್ಥಿ ಸಂಚಯನಮ್
(ಮೂಳೆಗಳನ್ನು ಸಂಗ್ರಹಿಸುವ ವಿಚಾರ)

– ಅಪರೇದ್ಯುಸ್ತೃತೀಯಸ್ಯಾಂ ಪಂಚಮ್ಯಾಂ ಸಪ್ತಮೇಹ್ನಿ ವಾ ।

ಅಸ್ಥಿಸಂಚಯನಂ ಕುರ್ಯಾತ್ ಸ್ಮೃತ್ಯಂತರಮತೇನ ವಾ ॥ ೧೧೭ ॥

೨ನೇ / ೪ನೇ / ೫ನೇ / ೭ನೇ ದಿನದಲ್ಲಿ । ಮೂಳೆಗಳ ಸಂಗ್ರಹವನ್ನು ಮಾಡಬೇಕು, ಬೇರೆ ಸ್ಮೃತಿಗಳಲ್ಲಿಯೂ ಹೀಗೆಯೇ ಇದೆ ॥

– ಪ್ರಾಚೀನಾವೀತೀ ಸಂಸ್ಕರ್ತಾ ತೇಷಾಮನ್ಯತಮೋ ।

ದಿನೇ ಅಸ್ಥಿ ಸಂಚಯನಂ ಕರ್ಮ ಕರಿಷ್ಯ ಇತಿ ನಿರ್ದಿಶೇತ್ ॥ ೧೧೮ ॥

ಕರ್ತ್ಯವು, ಈ ಯಾವುದಾದರೂ ದಿನದಲ್ಲಿ ಪ್ರಾಚೀನಾವೀತಮಾಡಿಕೊಂಡು । ಅಸ್ಥಿ ಸಂಗ್ರಹ ಕರ್ಮವನ್ನು ಮಾಡುತ್ತೇನೆ, ಎಂದು ಸಂಕಲ್ಪಿಸಬೇಕು ॥

ಅಂದು, ಸ್ಮಶಾನಕ್ಕೆ ತೆಗೆದುಕೊಂಡು ಹೋಗಬೇಕಾದ ವಸ್ತುಗಳ ವಿಚಾರ

– ತತಃ ಸಂಭಾರಮಾದಾಯ ಗಚ್ಛೇತ್ ಜ್ಞಾತಿಜನೈಸ್ಸಹ ।

ಆಜ್ಯಂ ಪಯಃಕುಂಭ ಘಟಾಶ್ಮ ದರ್ಭಾವಾಸಸ್ತಿಲೌದುಂಬರ

ಪರ್ಣಶಾಖಾಃ ॥ ೧೧೯ ॥

ಎಲ್ಲಾ ಸಲಕರಣೆಗಳನ್ನೂ ತೆಗೆದುಕೊಂಡು, ದಾಯಾದಿಗಳೊಡನೆ ಅಲ್ಲಿಗೆ ಹೋಗಬೇಕು । ತುಪ್ಪ, ಹಾಲನ್ನು ಹಾಕಿಕೊಂಡು ಹೋಗುವ ಪಾತ್ರೆ, ಮಡಿಕೆ, ೩ ಕಲ್ಲುಗಳು, ದರ್ಭೆಗಳು, ಹೊಸಬಟ್ಟೆ, ತಿಲ, ಎಲೆಗಳಿರುವ ಅತ್ತಿಮರದ ಕೊನೆ ॥

– ಫಲಂ ಬೃಹತ್ಯಾ ಅಪಿ ರಕ್ತನೀಲೇ ಸೂತ್ರೇ ಚ ಶುಲ್ಬೇಸಿಕತಾ ಜಲಂ ಚ ।

ಕ್ಷೀರೋತ್ಸಿಕ್ತೇನೋದಕೇನ ಹ್ಯತ್ರೋದುಂಬರ ಶಾಖಯಾ ॥ ೧೨೦ ॥

ಗುಳ್ಳದ ಕಾಯಿ, ಕೆಂಪು ಮತ್ತು ಕಪ್ಪಾದ ದಾರ, ತೋರಣ, ಮರಳು ಮತ್ತು ನೀರು । ಒಂದು ದೊನ್ನೆಗೆ ಸ್ವಲ್ಪಹಾಲನ್ನು ಹಾಕಿ, ಅದಕ್ಕೆ ನೀರನ್ನು ಸೇರಿಸಿ, ಅತ್ತಿಕೊನೆಯಿಂದ ॥

– ಯಂತೇ ಅಗ್ನಿಮಮಂಥಾಮೇತ್ಯಾದಿಭಿಃ ಪಂಚಭಿಃ ತತಃ ।

ಮಂತ್ರಾಂತೇ ಸಕೃದಸ್ಥೀನಿ ಸರ್ವತಃ ಸಮವೋಕ್ಷತಿ ॥ ೧೨೧ ॥

ಯಂ ತೇ ಅಗ್ನಿಂ ಮುಂತಾದ ೫ ಮಂತ್ರಗಳಿಂದ । ಆ ಹಾಲುನೀರನ್ನು ಅಸ್ಥಿಗಳಿಗೆ ಪ್ರೋಕ್ಷಿಸಬೇಕು ॥

ಹೋಮ ಹಾಗೂ ಹೆಂಗಸರು ಭಾಗವಹಿಸುವ ವಿಚಾರ

– ನೀತ್ವಾ ದಕ್ಷಿಣತೋಂಗಾರಾನ್ ತತ ಏವ ಸ್ರುವಾಹುತೀಃ ।

ತಿಸ್ರೋಥಾವಸೃಜೇತ್ ಯತ್ರ ವಾರುಣೇನ ಸ್ರುವೇಣ ವಾ ॥ ೧೨೨ ॥

ಆಮೇಲೆ, ದಕ್ಷಿಣದಿಕ್ಕಿನ ಕೆಂಡಗಳನ್ನು ತೆಗೆದುಕೊಂಡು, ಅತ್ತಿಯ ಅಥವಾ ಪುಂಸೆಮರದ ಎಲೆಯಿಂದ । ಅವಸೃಜ ಎಂಬ ೩ ಮಂತ್ರಗಳಿಂದ ಸ್ರುವಾಹುತಿಯನ್ನು ಕೊಡಬೇಕು ॥

– ಅಯುಗ್ಭಿರುದಕುಂಭೈಸ್ತು ಸ್ವವೋಕ್ಷತಮವೋಕ್ಷತಿ ।

ಸಂಚಿನ್ವನ್ಯಯುಜೋ ನಾಯೋ ನ ಪ್ರಸೂತಿಕ್ಷಮಾತ್ರತು ॥ ೧೨೩ ॥

ಬೆಸಸಂಖ್ಯೆಯ ಕೊಡಗಳಿಂದ ನೀರನ್ನು ತಂದು, ಆ ಅಗ್ನಿಯನ್ನು ಆರಿಸಬೇಕು । ಗರ್ಭಿಣೀ ಸ್ತ್ರೀಯರು ಮತ್ತು ರಜಸ್ವಲಾಸ್ತ್ರೀಯರು ಇಲ್ಲಿ ಭಾಗವಹಿಸಬಾರದು ॥

– ನೀಲಲೋಹಿತ ಸೂತ್ರಾಭ್ಯಾಂ ಸವ್ಯೇ ಹಸ್ತೇ ನಿಬಧ್ಯಸಾ ।

ಬೃಹತೀಫಲಮಾಸ್ಥಾಯ ಪದಾ ಸವ್ಯೇನಚಾಶ್ಮನಿ ॥ ೧೨೪ ॥

ಕಪ್ಪು ಅಥವಾ ಕೆಂಪು ಬಣ್ಣದ ಉಣ್ಣೆಯ ದಾರಕ್ಕೆ, ಆ ಗುಳ್ಳದಕಾಯಿಯನ್ನು ಎಡಕೈ ಹೆಬ್ಬೆಟ್ಟಿಗೆ, ಹೆಂಗಸರು ಕಟ್ಟಿಕೊಂಡು । ಎಡಕಾಲನ್ನು ಕಲ್ಲಿನಮೇಲೆ ಇಟ್ಟು ॥

ಮೂಳೆಗಳನ್ನು ಸಂಗ್ರಹಿಸುವ ಕ್ರಮ

– ನಾನ್ವೀಕ್ಷಮಾಣತ್ವಾದತ್ತೇ ಪ್ರಥಮಂ ಸವ್ಯಪಾಣಿನಾ ।

ದಂತಾನ್ ಶಿರಃಕಪಾಲಾನಿ ತಥೋತ್ತಿಷ್ಠಾತ ಇತ್ಯೃಚಾ ॥ ೧೨೫ ॥

ಮೊದಲು ನೋಡದೇ, ಉತ್ತಿಷ್ಠಾತಃ ಎಂಬ ಮಂತ್ರದಿಂದ, ಹಲ್ಲುಗಳು – ತಲೆ – ಕಪಾಲ ಮುಂತಾದ ಅಂಗಗಳ ಮೂಳೆಗಳನ್ನು ಎಡಕೈಯಿಂದ ತೆಗೆದು, ಮಡಿಕೆಯಲ್ಲಿ ಹಾಕಿಕೊಳ್ಳಬೇಕು ॥

– ತಾನಿ ವಾಸಾಂಸಿ ಕುಂಭೇವಾ ನಿಧಾಯ್ಯೈವಾಪರಾಃ ಸ್ತ್ರಿಯಃ ।

ಸ ಧರ್ಮಕಾದ್ವಿತೀಯಾ ಚ ಅಂಸೌ ಬಾಹೂ ಚ ಸಂಹರೇತ್ ॥ ೧೨೬ ॥

ಬಟ್ಟೆ ಅಥವಾ ಮಡಿಕೆಯಲ್ಲಿ ಇಡಬೇಕು, ಆಮೇಲೆ । ಉಳಿದ ಹೆಂಗಸರಲ್ಲಿ, ೨ ನೆಯವರು ಹೆಗಲು, ಕೈಗಳ ಮೂಳೆಗಳನ್ನು ಸಂಗ್ರಹಿಸಿ ಮಡಿಕೆಯಲ್ಲಿ ಇಡಬೇಕು ॥

– ಇದಂ ತ ಏಕಮಿತ್ಯೇವ ತೃತೀಯಾಸ್ತ್ರೀ ತತಃ ಕ್ರಮಾತ್ ।

ಪಾರ್ಶ್ವಶ್ರೋಣ್ಯೌ ಪರಊತಏಕಮಿತ್ಯೇವಮಾಚರೇತ್ ॥ ೧೨೭ ॥

ಇದಂ ತ ಏಕಂ – ಪರಊತ ಏಕಂ ಎಂಬ ಮಂತ್ರಗಳಿಂದ ಸ್ತ್ರೀಯರು ಪಕ್ಕೆಲಬು ಮತ್ತು ಸೊಂಟದಮೂಳೆಗಳನ್ನು ಆಯ್ದು ಹಾಕಬೇಕು ॥

– ಚತುರ್ಥೀತು ತೃತೀಯೇನ ಜ್ಯೋತಿಷಾ ಸಂವಿಶಸ್ವ ಚ ।

ಊರೂ ಜಂಘೇಸಮಾದಾಯ ನಿಧಾಯೈವಂ ಸಮಾಚರೇತ್ ॥ ೧೨೮ ॥

ತೃತೀಯೇನ ಜ್ಯೋತಿಷಾ ಎಂಬ ಮಂತ್ರದಿಂದ ೨ ತೊಡೆಗಳೂ ಮತ್ತು ಮೊಳಕಾಲುಗಳ ಮೂಳೆಗಳನ್ನೂ ಹೀಗೆಯೇ ಆಯ್ದು ಇಡಬೇಕು ॥

– ಪಂಚಮೀತು ತಥಾಪದ್ಭ್ಯಮುಕ್ತ್ವಾ ಸಂವೇಶನೇತಿ ಚ ।

ಅಯುಗ್ಮಾಕಾರಮೇವಂ ಸ್ಯಾತ್ ಕ್ರಿಯಾಭ್ಯಾಸಸ್ಸಮಂತ್ರಕಃ ॥ ೧೨೯ ॥

ಸಂವೇಶನ ಎಂಬ ಮಂತ್ರದಿಂದ, ಕಾಲುಗಳ ಮೂಳೆಗಳನ್ನೂ ಹಾಕಬೇಕು । ಇನ್ನುಳಿದ ಅಂಗಗಳ ಮೂಳೆಗಳನ್ನು ಒಂದೊಂದಾಗಿ ಆಯ್ದು ಮಡಿಕೆಗೆ ಹಾಕಬೇಕು, ಅಮಂತ್ರಕವಾಗಿ ॥

– ಸಮೂಹ್ಯ ಭಸ್ಮನಾ ಪೀಠಂ ಕೃತ್ವಾ ಕರ್ತಾಸ್ಥಿ ಭಾಜನಂ ।

ಆದಾಯೋತ್ತಿಷ್ಠ ಪ್ರೇಹೀತಿ ಸಮುತ್ಥಾಯ ನಿಧಾಯತಮ್ ॥ ೧೩೦ ॥

ಆಮೇಲೆ ಕರ್ತೃವು, ಬೂದಿಯನ್ನು ಗುಡ್ಡೆಮಾಡಿ, ಮೂಳೆತುಂಬಿದ ಮಡಿಕೆಯನ್ನು ಆ ಗುಡ್ಡೆಯ ಮೇಲೆ ಇಟ್ಟು, ಉಳಿದ ಎಲ್ಲಾ ಮೂಲೆಗಳನ್ನೂ ಆಯ್ದು ಹಾಕಬೇಕು । ನಂತರ ಉತ್ತಿಷ್ಠಪ್ರೇಹಿ ಮಂತ್ರದಿಂದ, ಆ ಮಡಿಕೆಯನ್ನು ತೆಗೆದುಕೊಂಡು, ಬೇರೆ ಜಾಗದಲ್ಲಿ ಇಡಬೇಕು ॥

– ಪ್ರಕ್ಷಾಲ್ಯಾಸ್ಥೀನಿ ಕುಂಭೇ ತು ನಿಕ್ಷಿಪ್ಯ ಕ್ಷೀರ ಸೇಚನಮ್ ।

ಶಮ್ಯಾಂ ಪಲಾಶ ಮೂಲೇ ವಾ ಗರ್ತಂ ಖಾತ್ವಾ ನಿಧಾಯತಮ್ ॥ ೧೩೧ ॥

ಆ ಮೂಳೆಗಳನ್ನು ಹಾಲು–ಮೊಸರು–ತುಪ್ಪ–ಸಗಣಿ–ಗೋಮೂತ್ರ–ನೀರು ಇವುಗಳಿಂದ ತೊಳೆಯಬೇಕು(ಅಭಿಷೇಕ) । ಬನ್ನಿ ಅಥವಾ ಮುತ್ತುಗದ ಮರದ ಬುಡದಲ್ಲಿ, ಗುಂಡಿಯನ್ನು ಮಾಡಿ ॥

ಮೂಳೆಗಳನ್ನು ನದಿಗೆ ಬಿಡುವ ವಿಚಾರ

– ಪ್ರಚ್ಛಾದ್ಯ ಮೃತ್ತಿಕಾಭಿಶ್ಚ ಕುಂಭಂ ಕುರ್ಯಾತ್ ಸುರಕ್ಷಿತಮ್ ।

ಗಂಗಾಯಾಂ ಯಮುನಾಯಾಂ ವಾ ಕಾವೇರ್ಯಾಂ ವಾ ಶುತುದ್ರುತೌ ॥ ೧೩೨ ॥

ಅಲ್ಲಿ ಮಡಿಕೆಯನ್ನು ಸುರಕ್ಷಿತವಾಗಿ ಇಡಬೇಕು । ಗಂಗೆ, ಯಮುನೆ, ಕಾವೇರಿ, ಶುತುದ್ರು(ಸಟ್ಲೇಜ್) ॥

– ಸರಸ್ವತ್ಯಾಂ ವಿಶೇಷೇಣ ಹ್ಯಸ್ಥೀನಿ ವಿಸೃಜೇತ್ ತತಃ ।

ಅಘಮರ್ಷಣ ಸೂಕ್ತಂ ತು ಯಾವನ್ಮಜ್ಜಂತಿ ತಜ್ಜಪೇತ್ ।

ಕುರ್ಯಾತ್ ಉದಕದಾನಾಂತಂ ಸಂಗಾಹಾದಿ ಯಥಾ ವಿಧಿ ॥ ೧೩೩ ॥

ಸರಸ್ವತಿ ನದಿಯಲ್ಲಿ ಹಾಕುವುದು ಬಹಳ ವಿಶೇಷ ಅಥವಾ ಬೇರೇ ನದಿಗಳಲ್ಲಿ ಮೂಳೆಗಳನ್ನು ಹಾಕಬೇಕು । ಆ ಮೂಳೆಗಳು ಮುಳುಗುವವರೆಗೂ ಅಘಮರ್ಷಣ ಸೂಕ್ತಗಳನ್ನು ಹೇಳುತ್ತಿರಬೇಕು । ನಂತರ ಮುಳುಗುಸ್ನಾನ ಮಾಡಿಕೊಂಡು, ನಿತ್ಯವಿಧಿಗಳನ್ನು ಮಾಡಬೇಕು ॥

ಸತ್ತವನ ಪ್ರತಿಕೃತಿ ದಹನ ವಿಚಾರ

– ಅಸ್ಥ್ನಾಂ ಪ್ರತಿಕೃತೇರ್ದಾಹೇ ಸದ್ಯಃ ಸಂಚಯ ಇಷ್ಯತೇ ।

ಯದಾ ಪಲಾಶ ವಲ್ಕಾದ್ಯೈಃ ಕೃತ್ವಾ ಪ್ರತಿಕೃತಿಂ ದಹೇತ್ ।

ಭಸ್ಮಾಸ್ಥಿವತ್ ಸಂಚಿನುಯಾತ್ ಸದ್ಯೋ ಮಂತ್ರಾನ್ ಜಪೇತ್ತು ವಾ ॥ ೧೩೪ ॥

ಒಂದುವೇಳೆ ದೊಡ್ಡಮಗನು, ಅಂತ್ಯೇಷ್ಟಿಸಂಸ್ಕಾರಕರ್ಮಕ್ಕೆ ಭಾಗವಹಿಸಲು ಕಾಲಕ್ಕೆ ಬರದಿದ್ದರೆ, ಅವನಿಗೆ ದೋಷವು, ಹಾಗಾಗಿ ಅದರ ಪ್ರಾಯಶ್ಚಿತ್ತವಾಗಿ ಅಥವಾ ವ್ಯಕ್ತಿಯು ಸತ್ತ ವಿಷಯ ತಿಳಿದು ಆದರೆ ದೇಹವು ಸಿಕ್ಕದಿದ್ದರೆ, ಈ ಎರಡೂ ಸಂದರ್ಭಗಳಲ್ಲಿ ಮುತ್ತುಗದ ಸಮಿತ್ತು, ನಾರುಗಳಿಂದ ಮತ್ತು ದರ್ಭೆಗಳಿಂದ ಸತ್ತವನ ಆಕೃತಿಯನ್ನು ಮಾಡಿ, ಅದನ್ನು ವಿಧಿಯಂತೆ ದಹಿಸಿ। ಆ ಬೂದಿಯನ್ನು ಸಂಗ್ರಹಿಸಿ, ಅದನ್ನೇ ಅಸ್ಥಿಗಳೆಂದು ಭಾವಿಸಿ ಅದನ್ನು ನದಿಗಳಲ್ಲಿ ಬಿಡಬೇಕು, ಆಯಾಯಾ ಸಂದರ್ಭಗಳಲ್ಲಿ ಹಿಂದೆ ಹೇಳಿರುವ ಮಂತ್ರಗಳನ್ನು ಹೇಳಬೇಕು ॥

****

****

4. ಭಾರದ್ವಾಜೀಯ/ಆಪಸ್ತಂಬೀಯ ಯಜುರ್ವೇದ ಪಿತೃಮೇಧ(ಅಪರ)ಸೂತ್ರಂ, ಗೋಪಾಲಮುನಿಭಿಃ ತಥಾ ಚ ಕಪರ್ದಿಸ್ವಾಮಿಭಿಃ ವಿರಚಿತಭಾಷ್ಯಂ

ಪ್ರಥಮಃ ಪ್ರಶ್ನಃ

೯ ನೇ ಖಂಡ

ಎರಡನೇ ದಿನದ ಕರ್ಮ

(ಅಸ್ಥಿಸಂಗ್ರಹ ವಿಚಾರ – ಮಹಿಳೆಯರ ಭಾಗವಹಿಸುವಿಕೆ)

* ಸೂತ್ರಂ ೧ / ೧೨೮

ಅಪರೇದ್ಯುಃ ತೃತೀಯಸ್ಯಾಂ ಪಂಚಮ್ಯಾಂ ಸಪ್ತಮ್ಯಾಂ ವಾಸ್ಥೀನಿ ಸಂಚಿನ್ವಂತಿ ॥

ದಹನದಿಂದ, ೨ ನೇ(ಮರುದಿನ) ಅಥವಾ ೩ ನೇ ಅಥವಾ ೫ ನೇ ಅಥವಾ ೭ ನೇ ದಿನ ಅಸ್ಥಿಗಳನ್ನು ಸಂಚಯನ(ಸಂಗ್ರಹ) ಮಾಡಬೇಕು ॥

* ಗೋಪಾಲಭಾಷ್ಯಂ –

ಅಪರೇದ್ಯುಃ ದಹನದಿವಸಾತ್ ಪರಸ್ಮಿನ್ ದಿವಸ ಇತ್ಯರ್ಥಃ । ತೃತೀಯಸ್ಯಾಂ ಇತ್ಯಾದಿಷು ರಾತ್ರ್ಯವಿಧಾನಮುಖೇನ ಅಹೋರಾತ್ರಲಕ್ಷಣಾ । ತೃತೀಯತ್ವಾದಿ ಚ ಅನಂತರೋಕ್ತ ದ್ವಿತೀಯ ದಿವಸಾಪೇಕ್ಷಯಾ ಅತ್ರ ವೇದಿತವ್ಯಮ್ ನ ತು ದಹನ ದಿವಸಾಪೇಕ್ಷಯಾ । ಕುತಃ ಆಹ ಹಿ ಭಗವಾನ್ ಬೋಧಾಯನಃ ಅಥಾತಃ ಸಂಚಯನಮೇಕಸ್ಯಾಂ ವ್ಯುಷ್ಟಾಯಾಂ ತಿಸೃಷುವಾ ಪಂಚಸುವಾ ಸಪ್ತಸುವೇತಿ ಅನ್ಯೇತು ತೃತೀಯಸ್ಯಾಮಿತ್ಯಾದಿಶು ವ್ಯುಷ್ಟಾಯಾಮಿತ್ಯಧ್ಯಾಹಾರೇಣ ತದರ್ಥಂ ಘಟಯಂತಿ । ಸಂಚಿನ್ವಂತಿ ಸನ್ನಿವಪಂತಿ । ವಕ್ಷ್ಯಮಾಣಾಃ ಅಯುಜಃ ಸ್ತ್ರಿಯಃ ಇತ್ಯರ್ಥಃ ॥

ಮರುದಿನ, ಎಂದರೆ ದಹನದ ಮರುದಿನ ಎಂದರ್ಥ । ೩ ನೇ ದಿನ ಎಂಬುದಾಗಿ ರಾತ್ರಿಯನ್ನು ವಿಧಾನಮಾಡಿ ಅಹೋರಾತ್ರಿ ರೂಪದಿಂದ ಹೇಳಿರುತ್ತದೆ । ೩ ನೇ ಮುಂತಾದ ದಿವಸಗಳಲ್ಲಿ, ಎಂದರೆ ನಂತರ ಹೇಳಿದಂತಹ ೨ ನೇ ದಿವಸದ ಅಪೇಕ್ಷೆಯನ್ನಿಟ್ಟುಕೊಂಡು ಇದನ್ನು ಹೇಳಿದೆ ಎಂದು ತಿಳಿಯಬೇಕು । ದಹನ ದಿವಸವನ್ನು ಅಪೇಕ್ಷಿಸಿಕೊಂಡು ಹೇಳಿದ್ದಲ್ಲ । ಏಕೆಂದರೆ ಭಗವಾನ್ ಬೋಧಾಯನರು ಹೀಗೆ ಹೇಳಿರುತ್ತಾರೆ । ಅನಂತರ ಸಂಚಯನವನ್ನು ಮೊದಲನೇ ಅಥವಾ ೩ ನೇ ದಿವಸ ಅಥವ ೫ ಅಥವ ೭ ನೇ ದಿವಸದಲ್ಲಿ ಮಾಡಬೇಕು । ಇನ್ನು ಕೆಲವರು, ೩ ನೇ ದಿವಸ ಎಂಬೀರೀತಿಯಾಗಿ ವ್ಯುಷ್ಟ್ಯಾಯಾಂ ಎಂಬ ಪದವನ್ನು ಅಧ್ಯಾಹಾರ ಮಾಡಿರುವುದರಿಂದ, ಈ ರೀತಿಯಾದ ಅರ್ಥವನ್ನು ತೆಗೆಯಬೇಕೆನ್ನುತ್ತಾರೆ । ಮುಂದೆ ಹೇಳುವ ಬೆಸಸಂಖ್ಯೆಯ ಸ್ತ್ರೀಯರು ಸಂಚಯನವನ್ನು ಹಾಗೂ ಸನ್ನಿವಪನವನ್ನೂ ಮಾಡಬೇಕು ॥

*** ಕಪರ್ದಿಭಾಷ್ಯಂ –**

ಅಪರೇದ್ಯುಃ ಅಪರಸ್ಮಿನ್ ಅಹನಿ । ತೃತೀಯಸ್ಯಾಂ ವ್ಯುಷ್ಟ್ಯಾಯಾಂ ಸಂಚಿನ್ವಂತಿ । ಸಂಚಯನಮಿತಿ ಕರ್ಮನಾಮಧೇಯಂ । ತತ್ ಕುರ್ವಂತಿ ॥

ಮರುದಿನ, ಎಂದರೆ ಮರಣದ ೩ ನೇ ದಿನ ಸಂಚಯನವನ್ನು ಮಾಡಬೇಕು । ಸಂಚಯನ ಎಂದರೆ, ಔರ್ಧ್ವದೈಹಿಕಕರ್ಮದ ಒಂದುಹಂತದ ಕರ್ಮದ ಹೆಸರು । ಅದನ್ನು ಮಾಡುತ್ತಾರೆ ಎಂದರ್ಥ ॥

*** ಸೂತ್ರಂ – ೨ / ೧೨೯**

ಕ್ಷೀರೋತ್ಸಿಕ್ತೇನೋದಕೇನ ಔದುಂಬರ ಶಾಖಯಾಪ್ರಕ್ವಾಥಯಂಛರೀರಾಣ್ಯವೋಕ್ಷತಿ ಯಂ ತೇ ಅಗ್ನಿಮಮಂಥಾಮ ಇತಿ ಪಂಚಭಿಃ ॥

ಹಾಲುಬೆರೆಸಿರುವ ನೀರಿನಿಂದ ಅತ್ತಿ(ಔದುಂಬರ) ಮರದ ಎಲೆಗಳಿರುವ ಸಣ್ಣಕೊಂಬೆ / ಕೋಲಿನಿಂದ ಆ ಸುಟ್ಟಜಾಗವನ್ನು (ನೀರನ್ನು ಆ ಜಾಗಕ್ಕೆ ಹಾಕಿದಾಗ, ಆ ಜಾಗವು ಕುದಿಯುದಿರುವಂತೆ, ಆ ರೀತಿಯಲ್ಲಿ) ನೀರಿನಿಂದ ಪ್ರೋಕ್ಷಿಸಬೇಕು, ಯಂ ತೇ ಅಗ್ನಿಮಮಂಥಾಮ.... ಎಂಬ ೫ ಮಂತ್ರಗಳಿಂದ ॥

* ಗೋಪಾಲಭಾಷ್ಯಂ –

ಕ್ಷೀರೋತ್ಸಿಕ್ತಮ್, ಕ್ಷೀರಮುದಕೇ ಸಮವನೀಯು ಸಂಸೃಷ್ಟಮಿತ್ಯರ್ಥಃ । ಅಪ್ರಕ್ವಾಥಯನ್ ಅಸ್ಥಾಮುಪರಿ ಜಲಬುದ್ಬುದ ಸಮುದಾಯಾತ್ ಕ್ವಥನಮಜನಯನ್ ಯಥೈವಂ ಕ್ವಥನಂ ನ ಸ್ಯಾತ್ ತಥಾಗ್ನಿದಃ ಯುಂತೇಅಗ್ನಿಮಮಂಥಾಮೇತಿ ಪಂಚಭಿರುದುಂಬರ ಶಾಖಿಯಾ ಅವ್ಯೋಕ್ಷತಿ ಶರೀರಾಣ್ಯಸ್ಥೀನಿ । ಸರ್ವಮಂತ್ರಾಣಾಮಂತೇ ಅವ್ಯೋಕ್ಷಣಂ । ವಚನಾದೇಕಂ ಕರ್ಮಬಹುಮಂತ್ರವ್ । (ಆಪಸ್ತಂಬ ಪರಿಭಾಷಾ – ೧ / ೪೭)ಇತಿ ನ್ಯಾಯಾತ್ । ನ ಚೇದಾನೀಂ ಕೃತ್ಸ್ನ ಶವಾಗ್ನಿರನುಗಮಯಿತವ್ಯಃ ಹೋಮಾದ್ಯರ್ಥಮಸ್ಯ ಪುನರ್ದಹನ ಪರ್ಯಂತಂ ಲೋಷ್ಟಚಿತಿ ಪರ್ಯಂತಂ ವಾ ಧಾರ್ತತ್ವಾತ್ । ಪುನರ್ದಹನಾದ್ಯಭಾವೇಪಿ ವಕ್ಷ್ಯಮಾಣಾಹುತಿ ಪರ್ಯಂತಂ ಧಾರ್ತತ್ವಾಚ್ಚ ॥

ಹಾಲನ್ನು ಬೆರೆಸಿದಂತಹ ನೀರನ್ನು ತೆಗೆದುಕೊಂಡು, ಅಸ್ಥಿಗಳ ಮೇಲೆ ನೀರಿನ ಗುಳ್ಳೆಗಳು ಬರದ ರೀತಿಯಾಗಿ ಅಸ್ಥಿಗಳ ಮೇಲೆ, ಯಂತೇ ಅಗ್ನಿಂ....., ಎಂಬ ೫ ಮಂತ್ರಗಳಿಂದ, ಅತ್ತಿಮರದ ಶಾಖೆಯಿಂದ, ಕರ್ತ್ಯವು ಪ್ರೋಕ್ಷಣೆ ಮಾಡಬೇಕು । ೫ ಮಂತ್ರಗಳ ಕೊನೆಗೆ ಒಮ್ಮೆ ಪ್ರೋಕ್ಷಣೆ ಮಾಡಬೇಕು । ಒಂದೇ ಕರ್ಮಕ್ಕೆ ಬಹಳ ಮಂತ್ರಗಳನ್ನು ಹೇಳಿದೆ ಎಂಬ ಆಪಸ್ತಂಬ ಪರಿಭಾಷಾ ನ್ಯಾಯಕ್ಕೆ ಅನುಸಾರವಾಗಿ ಮಾಡಬೇಕು । ಸಂಪೂರ್ಣವಾಗಿ ಶವಾಗ್ನಿಯನ್ನು ಶಮನ ಮಾಡಬಾರದು, ಏಕೆಂದರೆ ಮುಂದಿನ ಹೋಮಕ್ಕೋಸ್ಕರವಾಗಿ ಹಾಗೂ ಪುನರ್ದಹನ ಪ್ರಸಂಗ ಬಂದಾಗ ಪುನರ್ದಹನವನ್ನು ಮಾಡುವವರೆಗೆ ಹಾಗೂ ಲೋಷ್ಟಚಿತಿಯನ್ನು ಮಾಡುವವರೆಗೆ ಆ ಅಗ್ನಿಯನ್ನು ಧಾರಣೆ ಮಾಡಬೇಕೆಂಬ ವಿಧಿಯಿರುವುದರಿಂದ । ಪುನರ್ದಹನ ಮತ್ತು ಲೋಷ್ಟಚಿತಿ ಇವುಗಳ ಪ್ರಸಂಗ ಇಲ್ಲದಿದ್ದರೂ ಕೂಡ, ಮುಂದೆ ಹೇಳಿರುವ ಸಂಚಯನಹೋಮಕ್ಕಾಗಿಯೂ ಅಗ್ನಿಯನ್ನು ಧಾರಣೆ ಮಾಡಬೇಕಿರುವುದರಿಂದ ಶವಾಗ್ನಿಯನ್ನು ಸಂಪೂರ್ಣವಾಗಿ ಶಮನ ಮಾಡಬಾರದು ॥

* ಕಪರ್ದಿಭಾಷ್ಯಂ –

ಕ್ಷೀರಮುತ್ಸಿಚ್ಯತೇ ಯಸ್ಮಿನ್ ಉದಕೇ ತದಿದಂ ಕ್ಷೀರೋತ್ಸಿಕ್ತಂ ತೇನೋದಕೇನ । ಉದುಂಬರ ಶಾಖಿಯಾ ಅಪ್ರಕ್ವಾಥಯನ್ ಅನತಿದಹನ್ । ಕೇಚಿತ್ ವಿಕಲಮಕುರ್ವನ್ನಿತಿ । ಶರೀರಾಣ್ಯವೋಕ್ಷತಿ । ಯಂತೇ ಅಗ್ನಿಮಮಂಥಾಮೇತಿ ಪಂಚಭಿಃ ಪ್ರತಿಮಂತ್ರಮ್ ॥

ಯಾವ ನೀರಿನಲ್ಲಿ ಹಾಲನ್ನು ಬೆರೆಸಿರುತ್ತಾರೋ, ಅದು ಕ್ಷೀರೋತ್ಸಿಕ್ತ । ಆ ನೀರಿನಿಂದ ಎಂದರ್ಥ । ಅತ್ತಿಮರದ ಶಾಖೆಯಿಂದ ಆ ನೀರನ್ನು ಅಸ್ಥಿಗಳ ಮೇಲೆ ಗುಳ್ಳೆಗಳು ಬರದಿರುವ ರೀತಿಯಲ್ಲಿ ಪ್ರೋಕ್ಷಿಸಬೇಕು । ಆದರೆ ಕೆಲವರು, ಎಲ್ಲಾ ಅಸ್ಥಿಗಳಿಗೆ ತಗಲುವಂತೆ ಪ್ರೋಕ್ಷಣೆ ಮಾಡಬೇಕೆಂದು ಅರ್ಥೈಸುತ್ತಾರೆ । ಯಂತೇ ಅಗ್ನಿಂ....., ಎಂಬ ೫ ಮಂತ್ರಗಳಲ್ಲಿ ಪ್ರತಿಮಂತ್ರದಲ್ಲೂ ಪ್ರೋಕ್ಷಿಸಬೇಕು ॥

* ಸೂತ್ರಂ – ೩ / ೧೩೦

ಅತ ಏವ ಅಂಗಾರಾನ್ ದಕ್ಷಿಣಾ ನಿರ್ವರ್ತ್ಯ ತಿಸ್ರಃ ಸ್ರುವಾಹುತೀರ್ಜುಹೋತಿ ಅವಸೃಜ ಇತಿ ಪ್ರತಿಮಂತ್ರಮ್ ॥

ಅಲ್ಲೇ ಇರುವ ಕೆಲಕೆಂಡಗಳನ್ನು ದಕ್ಷಿಣಕ್ಕೆ ಸರಿಸಿಕೊಂಡು(ಒಟ್ಟುಗೂಡಿಸಿ), ಅದರಮೇಲೆ ಅವಸೃಜ..... ಮುಂತಾದ ೩ ಮಂತ್ರಗಳಿಂದ, ಪ್ರತಿಮಂತ್ರಕ್ಕೂ ಒಂದೊಂದುಸಲ ಸ್ರುವಾಹುತಿಯನ್ನು ಹೋಮಿಸಬೇಕು ॥

ಗೋಪಾಲಭಾಷ್ಯಂ –

ಅತ ಏವ ಶವಾಗ್ನೇರಂಗಾರನ್ ದಕ್ಷಿಣತೋ ನಿರ್ವರ್ತ್ಯ ನಿಷ್ಕೃಷ್ಯ ತಸ್ಮಿನ್ ಅವಸೃಜ ಪುನರಗ್ನೇ ಇತಿ ತಿಸೃಭಿಃ ಪ್ರತಿಮಂತ್ರಂ ಸ್ರುವಾಹುತೀರ್ಜುಹೋತಿ । ಸ್ರುವಸ್ತ್ವತ್ರ ಯಾಜ್ಞೀಯದಾರುಣಾಕಾರ್ಯಃ । ತತ್ರ ಸೋಮಯಾಜಿನಸ್ತು ನಿವಪನಾಂತಪಕ್ಷೇ ತತಊರ್ಧ್ವಂ ಶವಾಗ್ನಿಃ ನ ಧಾರ್ಯಃ । ಭಾವ್ಯುಪಯೋಗಾಭಾವಾತ್ ॥

ಆ ಶವಾಗ್ನಿಯ ಮೇಲಿರುವಂತಹ ಕೆಂಡಗಳನ್ನು ದಕ್ಷಿಣಕ್ಕೆ ಸರಿಸಿ ಇಟ್ಟುಕೊಂಡು, ಅದರಲ್ಲಿ

ಅವಸೃಜ...., ಎಂಬ ೩ ಮಂತ್ರಗಳಿಂದ ಸ್ರುವಾಹುತಿಗಳನ್ನು ಮಾಡಬೇಕು । ಈ ಸ್ರುವವು, ಯಜ್ಞಿಯವೃಕ್ಷದಿಂದ ಮಾಡಲ್ಪಟ್ಟಿರಬೇಕು । ಈ ವಿಷಯದಲ್ಲಿ ಸೋಮಯಾಜಿಗಳಿಗೆ ಅಸ್ಥಿಗಳನ್ನು ಹೂಳುವ ಪಕ್ಷದಲ್ಲಿ, ಹೂತ ನಂತರ ಶವಾಗ್ನಿಯನ್ನು ಧಾರಣೆ ಮಾಡುವ ಅಗತ್ಯವಿಲ್ಲ, ಏಕೆಂದರೆ ಮುಂದೆ ಅದರಲ್ಲಿ ಕರ್ಮವು ಇಲ್ಲದಿರುವುದರಿಂದ ॥

* ಕಪರ್ದಿಭಾಷ್ಯಂ –

ಅತ ಏವ ದಹನದೇಶಾದೇವ ಅಂಗಾರಾನ್ ದಕ್ಷಿಣತಃ ನಿರ್ವರ್ತ್ಯ ಅಪನೀಯ ವಾರಣೇನ ಸ್ರುವೇಣಜುಹೋತಿ ಅವಸೃಜೇತಿ ಪ್ರತಿಮಂತ್ರಂ । ತಿಸೃಭಿಃ ತಿಸ್ರಃ । ಕೇಚಿತ್ ಆಹುಃ ವೃಕ್ಷನಿಯಮೋ ನಾಸ್ತಿ । ನವಮ್ಯಾಂ ಇತ್ಯಸ್ಮಿನ್ ಪಟಲೇ ವೃಕ್ಷನಿಯಮಾದಿತಿ ॥

ದಹನದ ಜಾಗದಿಂದ ಕೆಂಡಗಳನ್ನು ದಕ್ಷಿಣಕ್ಕೆ ಸರಿಸಿಕೊಂಡು, ವಾರಣ(ಹೊಳಲಕ್ಕಿ) ಮರದ ಸ್ರುವದಿಂದ, ಅವಸೃಜ...., ಎಂಬ ೩ ಮಂತ್ರಗಳನ್ನು ಹೋಮಿಸಬೇಕು । ಕೆಲವರು, ಸ್ರುವಕ್ಕೆ ನಿರ್ದಿಷ್ಟವೃಕ್ಷದ ನಿಯಮವಿಲ್ಲ ಎನ್ನುತ್ತಾರೆ । ಏಕೆಂದರೆ ನವಮ್ಯಾಂ ಎಂಬ ೯ ನೇ ಪಟಲದಲ್ಲಿ ವೃಕ್ಷನಿಯಮವನ್ನು ಹೇಳಿರುವುದರಿಂದ ॥

* ಸೂತ್ರಂ – ೪ / ೧೩೧

ಅಯುಗ್ಭಿರುದಕುಂಭೈಃ ಸ್ವಯೋಕ್ಷಿತಂ ಅಯೋಕ್ಷ್ಯಾಯುಜಃ ಸ್ತ್ರಿಯಃ ಸಂಚಿನ್ವಂತಿ ॥

ಬೆಸಸಂಖ್ಯೆಯ ಸ್ತ್ರೀಯರು, ಬೆಸಸಂಖ್ಯೆಯ ಕುಡಿಕೆಗಳಲ್ಲಿ ನೀರನ್ನು ತಾವೇ ತಂದು, ಪ್ರೋಕ್ಷಿಸಬೇಕು, ನಂತರ ಅಸ್ಥಿಸಂಚಯನ ಮಾಡಬೇಕು ॥

* ಗೋಪಾಲಭಾಷ್ಯಂ –

ಸ್ತ್ರಿಯೋತ್ರ ಪಂಚಾಭಿಃ ಪ್ರೇತಾಃ ತಥೋತ್ತರತ್ರ ವಚನಾತ್ । ತತ್ರಾಯುಜ ಇತಿ ಕಾಃಪುನಸ್ತಾಃ ಯಜಮಾನಸ್ಯ ಭಾರ್ಯಾ ಇತಿ ಬೋಧಾಯನಃ । ತಾ ಯದಿ ಪಂಚ

ನವಿದ್ಯಂತೇ ತತ್ರಾಣ್ಯಾ ಅಪಿ ಯೋಜಯಿತವ್ಯಾಃ । ಸ್ವವೋಕ್ಷಿತಂ ಅಸ್ಥೀನ್ಯವೋಕ್ಷ್ಯ ಸಂಚಿನ್ವಂತಿ ಆದಾಯಾದಾಯ ವಕ್ಷ್ಯಮಾಣ ವಿಧಿನಾ ಸಂನಿವಪಂತಿ ॥

ಮರಣಹೊಂದಿದ ವ್ಯಕ್ತಿಗೆ ಬಹುಪತ್ನಿಯರು ಇದ್ದರೆ, ಅವರಲ್ಲಿ ೫ (ಬೆಸಸಂಖ್ಯೆ) ಜನ ಅಥವ ಮೃತನ ನೆಂಟರಿಷ್ಟರಲ್ಲಿ(ಹೆಣ್ಣುಮಕ್ಕಳು) ೫ ಹೆಂಗಸರು ಈ ಅಸ್ಥಿಸಂಚಯನವನ್ನು ಮಾಡಬೇಕು, ಏಕೆಂದರೆ ಹೀಗೇ ವಚನವಿರುವುದರಿಂದ । ಇಲ್ಲಿ ಬೆಸಸಂಖ್ಯೆಯ ಸ್ತ್ರೀಯರು ಎಂದರೆ,, ಯಜಮಾನನ ಪತ್ನಿಯರು ಎಂದು ಬೋಧಾಯನರು ಅರ್ಥೈಸಿದ್ದಾರೆ । ಒಂದುವೇಳೆ ೫ ಹೆಂಡತಿಯರು ಇಲ್ಲದಿದ್ದರೆ, ಬೇರೇ ಸ್ತ್ರೀಯರನ್ನು ಸೇರಿಸಿಕೊಂಡು ೫ ಜನರನ್ನಾಗಿ ಮಾಡಿಕೊಳ್ಳಬೇಕು । ಇವರುಗಳು, ತಾವೇತಂದಂತಹ ಆ ನೀರಿನಿಂದ ಅಸ್ಥಿಗಳನ್ನು ಪ್ರೋಕ್ಷಿಸಿ, ಸಂಚಯನ ಮಾಡಿ ಮುಂದೆ ಹೇಳುವ ವಿಧಿಯಂತೆ ಅದನ್ನು ಮಡಿಕೆಯಲ್ಲಿ ಇಡಬೇಕು ॥

* ಕಪರ್ದಿಭಾಷ್ಯಂ –

ಸ್ವವೋಕ್ಷಿತಾನ್ಯಶೇಷಾಣಿ ಅಯುಜಃ ವಿಷಮಾಸ್ತ್ರಿಯಃ ಸಂಚಿನ್ವಂತಿ । ಸರ್ವಾಣ್ಯಸ್ಥೀನಿ ಗೃಹ್ಣಂತಿ । ಕೇಚಿತ್ ಸಮಾನ ಕರ್ತೃಕತ್ವಮಿಚ್ಛಂತಿ ಉದಕುಂಭಾನಯನಸ್ಯ ಸಂಚಯನಸ್ಯ ಚ ॥

ಬೆಸಸಂಖ್ಯೆಯ ಸ್ತ್ರೀಯರು, ತಾವೇ ತಂದಂತಹ ನೀರಿನಿಂದ ಅಸ್ಥಿಗಳಿಗೆ ಪ್ರೋಕ್ಷಿಸಬೇಕು । ಎಲ್ಲಾ ಅಸ್ಥಿಗಳನ್ನೂ ತೆಗೆದುಕೊಂಡು ಮುಂದಿನ ವಿಧಿಯನ್ನು ಮಾಡಬೇಕು । ಕೆಲವರು, ಯಾವ ಸ್ತ್ರೀಯರು ನೀರನ್ನು ತರುತ್ತಾರೋ ಅವರೇ ಅಸ್ಥಿಸಂಚಯನವನ್ನು ಮಾಡಬೇಕೆಂದು ಅಭಿಪ್ರಾಯಪಡುತ್ತಾರೆ ॥

* ಸೂತ್ರಂ – ೫ / ೧೩.೨

ಯಸ್ಯಾಃ ಪುನರ್ವಿಜನನಂ ನಸ್ಯಾತ್ ಸಾ ಸವ್ಯೇ ಹಸ್ತೇ ನೀಲಲೋಹಿತಾಭ್ಯಾಂ ಸೂತ್ರಾಭ್ಯಾಂ ಬೃಹತೀಫಲಂ ಆಬಧ್ಯ ಸವ್ಯೇನ ಪದಾಶ್ಮಾನಂ ಆಸ್ಥಾಯ

ಸವ್ಯೇನಪಾಣಿನಾ ಪ್ರಥಮಾನನ್ವೀಕ್ಷಮಾಣಾಸ್ಥೀನ್ಯಾದತ್ತೇ ಉತ್ತಿಷ್ಠಾತಃ ಇತಿ ದದ್ಭ್ಯಃ ಶಿರಸೋ ವಾ ॥

ಯಾರಿಗೆ ಇನ್ನುಮುಂದೆ, ಮಕ್ಕಳು ಆಗುವುದಿಲ್ಲವೋ(ಋತುಕಾಲ ಮುಗಿದಿದೆಯೋ) ಅಂತಹ ಐದು ಜನ ಸ್ತ್ರೀಯರು, ನೀಲಿ ಮತ್ತು ಕೆಂಪುದಾರಗಳಿಂದ ಕಟ್ಟಲ್ಪಟ್ಟ ಬೃಹತೀ(ಚಿಟ್ಟೆಕಾಯಿ) ಕಾಯಿಯನ್ನು ಎಡಕ್ಕೈಗೆ ಕಟ್ಟಿಕೊಂಡು, ಆ ಜಾಗದಲ್ಲಿಟ್ಟಿರುವ ಕಲ್ಲಿನಮೇಲೆ ಎಡಕಾಲಿನಿಂದ ನಿಂತು, ಎಡಕ್ಕೈನಿಂದಲೇ ಮೊದಲನೆಯವಳು ಅಸ್ಥಿಗಳಿರುವ ಜಾಗವನ್ನು ನೋಡದೇ, ತಲೆಯು ಅಥವಾ ಹಲ್ಲಿನಭಾಗದ ಅಸ್ಥಿಗಳನ್ನು ಉತ್ತಿಷ್ಠಾತಃ.....ಮಂತ್ರಗಳಿಂದ ಎತ್ತಿಕೊಳ್ಳಬೇಕು (ಸಂಗ್ರಹಮಾಡಬೇಕು) ॥

* ಗೋಪಾಲಭಾಷ್ಯಂ –

ವಿಜನನಂ ಪ್ರಸೂತಿಃ ತತ ಊರ್ಧ್ವಂ ಯಸ್ಯಾನಸಂಭಾವ್ಯತೇ । ಯಾನ ಗರ್ಭಿಣೀತಿ ತಾವತ್ ಬ್ರೂಮಃ ನ ನು ಏವಂಸತಿ ಯಾನ ಗರ್ಭಿಣೀತ್ಯೇವ ಬ್ರೂಯಾತ್ ಯದಿ ಇಹ ಮೃತಸ್ಯೈವ ಸ್ತ್ರಿಯ ಇಶ್ಯಂತೇ । ನತ್ವಯಂ ನಿಯಮೋಸ್ತಿ । ಸಂಭಾವ್ಯತೇ ಚಾನ್ಯಾಸು । ತತ್ರ ಅಯುಜ ಇತಿ ಬೋಧಾಯನೋಕ್ತ ಷಟ್ ಸಂಖ್ಯಾ ನಿವೃತ್ಯರ್ಥಂ ನ ತು ತ್ರಿತ್ವಾದಿ ಸಂಖ್ಯಾನುಜ್ಞಾರ್ಥಂ । ಪತಿವತೀಷು ಪಶ್ಚಾದಪಿ ಗರ್ಭಾಧಾನಂ ತಸ್ಮಾತ್ ಅರ್ಥವಾದೇನ ವಾ ಅಯಂ ಯತ್ನಃ । ಅನನ್ವೀಕ್ಷಮಾಣಾ ಅನಭಿವೀಕ್ಷಮಾಣಾ ಉತ್ತಿಷ್ಠಾತಃ ತನುವಮಿತ್ಯೃಚಾ ಆದದೀತ ದದ್ಭ್ಯಃ ಶಿರಸೋವೇತಿ ವಿಕಲ್ಪಃ ॥

ಯಾರಿಗೆ ಇನ್ನುಮುಂದೆ ಮಕ್ಕಳಾಗುವುದಿಲ್ಲವೋ(ಋತುಕಾಲ ಮುಗಿದಿರುವ) ಅಂತಹ ವಯಸ್ಸಿನ ಸ್ತ್ರೀಯರು ಎಂದರ್ಥ । ಗರ್ಭಿಣಿಯಾಗಿರಬಾರದು ಈ ಸಂದರ್ಭದಲ್ಲಿ । ಈ ರೀತಿಯಾಗಿ ನೀವು ಹೇಳಿದರೆ, ಯಾರು ಗರ್ಭಿಣಿಯಾಗುವುದಿಲ್ಲವೋ ಅವರು ಎಂದೂ ಹೇಳಬೇಕು ನೀವು, ಒಂದುವೇಳೆ ಮರಣಹೊಂದಿದವನ ಸ್ತ್ರೀಯರನ್ನೇ ಅಸ್ಥಿಸಂಚಯನಕ್ಕೆ ಹೇಳುವುದಾದರೆ । ಆಗ ಈ ನಿಯಮವು ಇಲ್ಲಿರುವುದಿಲ್ಲ, ಬೇರೇಸ್ತ್ರೀಯರೂ ಅಸ್ಥಿಸಂಚಯನದಲ್ಲಿ ಭಾಗವಹಿಸಬಹುದು । ಅಲ್ಲಿ ಬೋಧಾಯನರು

ಬೆಸಸಂಖ್ಯೆಯನ್ನು ಹೇಳಿರುವುದು, ೬ ಜನ ಆಗಬಾರದು ಎನ್ನುವುದನ್ನು ತೋರಿಸುವುದಕ್ಕಾಗಿ। ಇದರಿಂದ ಒಬ್ಬರು ಅಥವ ೩ ಜನ ಸಂಚಯನ ಮಾಡಬಹುದೆಂದು ಸಿದ್ಧವಾಗುವುದಿಲ್ಲ। ಬಹುಪತ್ನಿಯರಲ್ಲಿ ಪತಿಯ ಮರಣವಾದ ನಂತರವೂ ಅವರಲ್ಲಿ ಗರ್ಭಧರಿಸುವ ಸಾಮರ್ಥ್ಯವು ಕಂಡುಬಂದಿರುವುದರಿಂದ, ಋತುಕಾಲ ಮುಗಿದ ಸ್ತ್ರೀಯರು ಎಂದು ಹೇಳಿರುವುದಾಗಿದೆ। ಆ ಅಸ್ಥಿಗಳನ್ನು ನೋಡದೇ, ಉತ್ತಿಷ್ಠಾತ..., ಎಂಬ ಮಂತ್ರದಿಂದ ಹಲ್ಲು ಅಥವ ತಲೆಯಿಂದ ಸಂಚಯನವನ್ನು ಆರಂಭಿಸಬೇಕು ॥

* ಕಪರ್ದಿಭಾಷ್ಯಂ

ಯಸ್ಯಾಃ ಪುನಃ ಪ್ರಸೂತಿರ್ನಾಸ್ತಿ ಸಾ ಸವ್ಯೇ ಹಸ್ತೇನ ಬೃಹತೀಫಲಮಾಬಧ್ಯ ಸವ್ಯೇನ ಪದಾಶ್ಮನಿ ತಿಷ್ಠಂತೀ ಪ್ರಥಮಾಪೂರ್ವಂ ಗೃಹ್ಣಾತಿ। ಸಾ ಅನನ್ವೀಕ್ಷಮಾಣಾ ಅಪಶ್ಯಂತೀ ಸವ್ಯೇನ ಹಸ್ತೇನಾದತ್ತೇ ಉತ್ತಿಷ್ಠಾತಃ ಇತ್ಯಯಾ ದದ್ಭ್ಯಃ ಶಿರಸಶ್ಚ । ವಾ ಶಬ್ದಸ್ಸಮುಚ್ಚಯೇ ॥

ಯಾರಿಗೆ ಋತುಕಾಲವು ಮುಗಿದಿದೆಯೋ ಅಂತಹ ಸ್ತ್ರೀ ಎಡಕೈಗೆ ಬೃಹತೀಫಲವನ್ನು(ಹೆಗ್ಗುಳಕಾಯಿ = ಚಿಟ್ಟೆಕಾಯಿ) ಕಟ್ಟಿಕೊಂಡು, ಎಡಗಾಲಿನಿಂದ ಕಲ್ಲಿನಮೇಲೆ ನಿಂತು, ಮೊದಲ ಸ್ತ್ರೀಯು ಮೊದಲ ಅಸ್ಥಿಗಳನ್ನು ತೆಗೆಯಬೇಕು। ಅವಳು ಅಸ್ಥಿಗಳನ್ನು ನೋಡದೇ ಎಡಕೈಯಿಂದ ಉತ್ತಿಷ್ಠಾತ...., ಎಂಬ ಮಂತ್ರದಿಂದ ಹಲ್ಲು ಮತ್ತು ನಂತರ ತಲೆಯ ಭಾಗವನ್ನು ತೆಗೆಯಬೇಕು। ಇಲ್ಲಿ ವಾ ಶಬ್ದವು ಸಮುಚ್ಚಯವನ್ನು ಹೇಳುವುದಕ್ಕೆ ಬಂದಿದೆ ॥

* ಸೂತ್ರಂ – ೬ / ೧೩೩

ತದ್ವಾಸಸಿ ಕುಂಭೇ ವಾ ನಿದಧಾತಿ ॥

ಅದನ್ನು ಬಟ್ಟೆಯಲ್ಲಾಗಲೀ ಅಥವಾ ಕುಡಿಕೆಯಲ್ಲಾಗಲೀ ಹಾಕಬೇಕು ॥

* ಗೋಪಾಲಭಾಷ್ಯಂ –

ತತ್ ಅಸ್ಥಿ ಸ್ಯೈವ ನಿದಧ್ಯಾತ್ ॥

ತೆಗೆದ ಅಸ್ಥಿಯನ್ನು ತೆಗೆದವಳೇ, ಬಟ್ಟೇ ಅಥವ ಕುಡಿಕೆಯಲ್ಲೋ ಇಡಬೇಕು ॥

* ಕಪರ್ದಿಭಾಷ್ಯಂ –

ತಾನ್ಯಸ್ಥೀನಿ ವಾಸಸಿ ಕುಂಭೇವಾ ಕ್ಷಿಪತಿ । ಏವಮಿತರಾಶ್ಚ ಬಂಧನಾದಿ ॥

ತೆಗೆದ ಅಸ್ಥಿಗಳನ್ನು, ಬಟ್ಟೆ ಅಥವ ಕುಡಿಕೆಯಲ್ಲಿ ಇಡಬೇಕು । ಹೀಗೆಯೇ ಬೇರೇಸ್ತ್ರೀಯರೂ ಸಹಾ, ಎಡಕ್ಕೈಗೆ ಬೃಹತೀಫಲ ಕಟ್ಟಿಕೊಂಡು ಎಂಬುದರಿಂದ ಹಿಡಿದು, ಇಲ್ಲಿಯವರೆಗೂ ವಿಧಿಗಳನ್ನು ಮಾಡುವುದು ॥

* ಸೂತ್ರಂ – ೭ / ೧೩೪

ಇದಂ ತ ಏಕಂ ಇತಿ ದ್ವಿತೀಯಾ ಅಂಸಾಭ್ಯಾಂ ಬಾಹುಭ್ಯಾಂ ವಾ ॥

ಭುಜ ಅಥವಾ ಬಾಹು ಭಾಗಗಳ ಮೂಳೆ(ಅಸ್ಥಿ)ಗಳನ್ನು ಎರಡನೇ ಮಹಿಳೆಯು ಇದಂ ತ ಏಕಂ...., ಮಂತ್ರದಿಂದ ಎತ್ತಿಕೊಳ್ಳಬೇಕು ॥

* ಗೋಪಾಲಭಾಷ್ಯಂ –

ದ್ವಿತೀಯಾದಿಷ್ವಪಿ ಯಸ್ಯಾಃಪುನಃ ಪುನರಿತ್ಯಾದಿ ಸಮಾನಂ । ಮಂತ್ರಸ್ತು ಇದಂ ತ ಏಕಮಿತ್ಯೇತಾವಾನ್ ದ್ವಿತೀಯಾಯಾಃ । ಅತ್ರ ಅಂಸಾಭ್ಯಾಂ ಬಾಹುಭ್ಯಾಂ ವೇತಿ ಪ್ರದೇಶಪ್ರದರ್ಶನಂ ತೇನ ಕಂಠಶ್ಚ ದ್ವಿತೀಯಸ್ಯಾಃ ಪ್ರದೇಶೋ ವೇದಿತವ್ಯಃ ॥

೨ ನೇ ಮುಂತಾದ ಸ್ತ್ರೀಯರೂ ಕೂಡ, ಯಸ್ಯಾಃಪುನಃ ಪ್ರಸೂತಿರ್ನಾಸ್ತಿ ಎಂಬ ಹಿಂದೆ ಹೇಳಿದ ನಿಯಮದಂತೆಯೇ, ಕರ್ಮವನ್ನು ಮಾಡಬೇಕು । ಮಂತ್ರವು ಬೇರೆ, ಇದಂ ತ ಏಕಂ...., ಎಂಬುದಾಗಿದೆ । ಇಲ್ಲಿ, ಭುಜ ಅಥವ ಬಾಹು ಎಂದು ಶರೀರದ ಅಂಗವನ್ನು ತೋರಿಸಿರುವುದು, ಕಂಠವೂ ಕೂಡ ಎರಡನೆಯವಳ ಸರದಿಯಲ್ಲಿ ತೆಗೆಯುವ ಅಂಗವೇ ಆಗಿದೆ ಎಂದು ತಿಳಿಯಬೇಕು ॥

* ಕಪರ್ದಿಭಾಷ್ಯಂ –

ಏತಾವಾಂಸ್ತು ವಿಕಾರಃ ಇದಂ ತ ಏಕಮಿತಿ ದ್ವಿತೀಯಾ ಗೃಹ್ಣಾತಿ ॥

ಇದಂ ತ ಏಕಂ....., ಎಂಬ ಮಂತ್ರವು ಮಾತ್ರವೇ ೨ ನೇ ಸ್ತ್ರೀಯು ಸಂಚಯನ (ಮೂಳೆಗಳನ್ನು ತೆಗೆಯುವುದು) ಮಾಡುವುದರಲ್ಲಿ ವ್ಯತ್ಯಾಸ ಉಳಿದ ಎಲ್ಲಾ ಕ್ರಮಗಳು ಸಮಾನವೇ ॥

* ಸೂತ್ರಂ – ೮ / ೧೩೫

ಪರಊತ ಏಕಂ ಇತಿ ತೃತೀಯಾ ಪಾರ್ಶ್ವಾಭ್ಯಾಂ ಶ್ರೋಣಿಭ್ಯಾಂ ವಾ ॥

ಮೂರನೇ ಮಹಿಳೆಯು, ಪರಊತ ಏಕಂ....., ಮಂತ್ರವನ್ನು ಹೇಳಿ, ಪಕ್ಕೆಲಬುಗಳ ಅಥವಾ ಸೊಂಟದ ಮೂಳೆಗಳನ್ನು ಹಿಂದಿನಂತೆಯೇ ಅಂದರೆ ಕಲ್ಲಿನಮೇಲೆ ಎಡಕಾಲನ್ನಿಟ್ಟು, ಎಡಕ್ಕೈಯಿಂದ ಮತ್ತು ಆ ಜಾಗವನ್ನು ನೋಡದೇ ಎತ್ತಿಕೊಳ್ಳಬೇಕು ॥

* ಗೋಪಾಲಭಾಷ್ಯಂ –

ಪರಊತ ಏಕಮಿತ್ಯೇತಾವಾನ್ ಮಂತ್ರಃ ಕಟಿಕಂಠಯೋಃ ಮಧ್ಯಮಸ್ಯಾಃ ಪ್ರದೇಶಃ ॥

ಕಂಠದಿಂದ ಸೊಂಟದ ವರೆಗಿನ ಪ್ರದೇಶಗಳ ಮೂಳೆಗಳನ್ನು ತೆಗೆದುಕೊಳ್ಳಲು, ಪರಊತ ಏಕಂ....., ಮಂತ್ರವನ್ನು ಹೇಳಬೇಕು, ೩ ನೇ ಸ್ತ್ರೀಯು ॥

* ಕಪರ್ದಿಭಾಷ್ಯಂ –

ಪರಊತ ಏಕಮಿತಿ ತೃತೀಯಾ ॥

೩ ನೇ ಸ್ತ್ರೀಯು, ಪರಊತ ಏಕಂ...., ಮಂತ್ರದಿಂದ ಅಸ್ಥಿಗಳನ್ನು ಸಂಗ್ರಹಿಸಬೇಕು ॥

* ಸೂತ್ರಂ – ೯ / ೧೩೬

ತೃತೀಯೇನ ಜ್ಯೋತಿಷಾ ಇತಿ ಚತುರ್ಥ್ಯೂರುಭ್ಯಾಂ ಜಂಘಾಭ್ಯಾಂ ವಾ ॥

ನಾಲ್ಕನೇ ಮಹಿಳೆಯು, ತೃತೀಯೇನ....., ಮಂತ್ರದಿಂದ ತೊಡೆಯ ಹಾಗೂ ಮಂಡಿಯಿಂದ ಕೆಳಕಾಲಿನ ಮೂಳೆಗಳನ್ನು ಹಿಂದಿನ ಕ್ರಮದಂತೆಯೇ ಸಂಗ್ರಹಿಸಬೇಕು ॥

* ಗೋಪಾಲಭಾಷ್ಯಂ –

ತೃತೀಯೇನ ಜ್ಯೋತಿಷಾ ಸಂವಿಷಸ್ವೇತ್ಯೇತಾವಾನ್ ಮಂತ್ರಃ । ಕಟಿ ಗುಲ್ಫಯೋಃ ಮಧ್ಯಮಸ್ಯಾಃ ಪ್ರದೇಶಃ ॥

ತೃತೀಯೇನ....., ಮಂತ್ರದಿಂದ ೪ ನೇ ಸ್ತ್ರೀಯು, ಹಿಂದಿನಂತೆ ಸೊಂಟದಿಂದ ಪಾದದವರೆಗಿನ ಮೂಳೆಗಳನ್ನು ಯಥಾಕ್ರಮದಲ್ಲಿ ಸಂಗ್ರಹಿಸಬೇಕು ॥

* ಕಪರ್ದಿಭಾಷ್ಯಂ –

ತೃತೀಯೇನೇತಿ ಚತುರ್ಥೀ ॥

ತೃತೀಯೇನ....., ಮಂತ್ರದಿಂದ ೪ ನೇ ಸ್ತ್ರೀಯು ಅಸ್ಥಿಗಳನ್ನು ಸಂಗ್ರಹಿಸಬೇಕು ॥

* ಸೂತ್ರಂ – ೧೦ / ೧೩೭

ಸಂವೇಶನಃ ಇತಿ ಪಂಚಮೀ ಪದ್ಭ್ಯಾಮ್ ॥

ಐದನೇ ಮಹಿಳೆಯು, ಸಂವೇಶನಃ....., ಮಂತ್ರದಿಂದ ಪಾದಗಳ ಭಾಗದ ಮೂಳೆಗಳನ್ನು ಹಿಂದಿನ ರೀತಿಯಲ್ಲಿ ಸಂಗ್ರಹಿಸಬೇಕು ॥

* ಗೋಪಾಲ ಭಾಷ್ಯಂ –

ಸಂವೇಶನ ಇತ್ಯರ್ಧರ್ಚ ಗ್ರಹಣಂ । ಪದ್ಭ್ಯಂ ಚರಣಾಭ್ಯಾಂ ॥

ಸಂವೇಶನ....., ಎಂಬ ಅರ್ಧಋಙ್ಮಂತ್ರದಿಂದ ಈ ನೇ ಸ್ತ್ರೀಯು ಪಾದಗಳ ಅಸ್ಥಿಗಳನ್ನು ಸಂಗ್ರಹಿಸಬೇಕು ॥

* ಕಪರ್ದಿಭಾಷ್ಯಂ –

ಸಂವೇಶನ ಇತಿ ಪಂಚಮೀ । ಪದ್ಭ್ಯಂ ಪಾದಾಭ್ಯಾಂ । ಅರ್ಧರ್ಚೇನ ॥

ಈ ನೇ ಸ್ತ್ರೀಯು ಸಂವೇಶನ....., ಎಂಬ ಅರ್ಧಮಂತ್ರದಿಂದ । ಪಾದಗಳ ಅಸ್ಥಿಗಳನ್ನು ಸಂಗ್ರಹಿಸಬೇಕು ॥

* ಸೂತ್ರಂ – ೧೧ / ೧೩೮

ಏವಮೇವಾಯುಜಾಕಾರಂ ಸುಸಂಚಿತಂ ಸಂಚಿನ್ವಂತಿ ॥

ಹೀಗೆಯೇ ಬೆಸಸಂಖ್ಯೆಯ ಮಹಿಳೆಯರಿಂದ ಮತ್ತು ಬೆಸಸಂಖ್ಯೆಯ ಆವೃತ್ತಿಯಿಂದಲೇ ಪೂರ್ಣವಾಗಿ ಸಂಚಯನ(ಸಂಗ್ರಹಿಸುವಿಕೆ) ಮಾಡಬೇಕು ॥

* ಗೋಪಾಲಭಾಷ್ಯಂ –

ಏವಮೇತೇನೈವ ಕಲ್ಪೇನ ಸ್ವೇನಸ್ವೇನ ಮಂತ್ರೇಣ ಸ್ವಸ್ವ ಪ್ರದೇಶಾತ್ ಅಯುಜಾಕಾರಂ ತ್ರಿಭಿಃ ಪಂಚಭಿಃ ಸಪ್ತಭಿಃ ಇತ್ಯೇವಂ ಅಯುಗ್ಮ ಪರ್ಯಾಯಾವೃತ್ಯಾ ಸುಸಂಚಿತಂ ನಿರವಶೇಷಂ ಸಂಚಿನುಯುಃ ॥

ಈ ರೀತಿಯಾಗಿ ಮೇಲೆ ಹೇಳಿದ ಕ್ರಮದಿಂದಲೇ ತಮಗೆ ಹೇಳಿದ ಮಂತ್ರದಿಂದ, ತಮಗೆ ಹೇಳಿದ ಅಂಗಗಳಲ್ಲಿ ೩ / ೫ ಅಥವ ೭ ಎಂಬ ಬೆಸಸಂಖ್ಯೆಯ ಆವೃತ್ತಿಯಿಂದ ಸಂಪೂರ್ಣ ಅಸ್ಥಿಗಳನ್ನು ಸಂಗ್ರಹಿಸಬೇಕು, ಉಳಿಸಬಾರದು ॥

* ಕಪರ್ದಿಭಾಷ್ಯಂ –

ಏವಮೇವಾಯುಜಕಾರಮಿತಿ ಪುನಃ ಪುನಃ ಸಮಂತ್ರಕಂ ಕ್ರಿಯಾಭ್ಯಾವೃತ್ತಿಃ । ಸುಸಂಚಿತಂ ಸಂಚಿನ್ವಂತಿ ಸುಷ್ಠು ನಿರವಶೇಷಂ ಸಂಚಿನ್ವಂತಿ । ಸರ್ವಾನ್ಯಸ್ಥೀನಿ ಗೃಹ್ಣಂತಿ ಕ್ಷುದ್ರಾಣ್ಯಪಿ । ಏವಮೇತಾಭಿಃ ಸರ್ವಶಃ ಸಂಯುಕ್ತೇಷು ಅಸ್ಥಿಷು ಅಗ್ನಿದೇನ ಕರ್ತವ್ಯಮಾಹ ॥

ಈ ರೀತಿಯಾಗಿ ಸಮಂತ್ರಕವಾಗಿ ಮತ್ತೆಮತ್ತೆ ಬೆಸಸಂಖ್ಯೆಯಿಂದ ಕ್ರಿಯೆಯನ್ನು ಆವೃತ್ತಿಮಾಡಬೇಕು । ಸ್ವಲ್ಪವೂ ಉಳಿಯದಂತೆ ಅಸ್ಥಿಗಳನ್ನು ಸಂಗ್ರಹಿಸಬೇಕು । ಭಿನ್ನವಾದ ಹಾಗೂ ಸಣ್ಣಸಣ್ಣ ಅಸ್ಥಿಗಳನ್ನೂ ಸಹಾ ಸಂಗ್ರಹಿಸಬೇಕು । ಈ ರೀತಿಯಾಗಿ ಎಲ್ಲಕಡೆಗಳಿಂದಲೂ ಅಸ್ಥಿಗಳನ್ನು ಸಂಗ್ರಹಮಾಡಿದಮೇಲೆ, ಕರ್ತೃವು ಈ ಮುಂದಿನ ಸೂತ್ರಗಳಲ್ಲಿ ಹೇಳುವಂತೆ ಮಾಡಬೇಕು ॥

* ಸೂತ್ರಂ – ೧೨ / ೧೩೯

ಭಸ್ಮಾಭಿ ಸಮೂಹ್ಯ ಸಂಹತ್ಯ ಶರೀರಾಕೃತಿಂ ಕೃತ್ವಾ ಶರೀರಾಣ್ಯಾದಾಯೋತ್ತಿಷ್ಠತಿ ಉತ್ತಿಷ್ಠ ಪ್ರೇಹಿ ಇತಿ ॥

ಬೂದಿಯನ್ನು ಗುಡ್ಡೆಮಾಡಿ, ದೇಹಾಕಾರವನ್ನಾಗಿ ಮಾಡಿಕೊಂಡು, ಆ ದೇಹದ ಮೂಳೆಗಳನ್ನು ಸಂಗ್ರಹಿಸಿರುವ ಮಡಿಕೆಯನ್ನು ತೆಗೆದುಕೊಂಡು ಉತ್ತಿಷ್ಠಪ್ರೇಹಿ..., ಮಂತ್ರದಿಂದ ಏಳಬೇಕು ॥

* ಗೋಪಾಲಭಾಷ್ಯಂ –

ಅಭಿ ಸಮೂಹನಂ ಸಂಕಲನಂ ಏಕೀಕರಣಮಿತಿ ಯಾವತ್ । ಅಥ ತತ್ ಸಂಹತ್ಯ ಸಂಸೃಷ್ಟಂ ಕೃತ್ವಾ, ತೇನ ದಕ್ಷಿಣಾಶಿರಸಂ ಶರೀರಾಕೃತಿಂ ಕುರ್ಯಾತ್ ॥

ಎಲ್ಲ ಅಸ್ಥಿಗಳನ್ನೂ ಒಟ್ಟುಗೂಡಿಸಿ, ತೆಗೆದುಕೊಂಡು । ಒಂದು ಮಡಿಕೆಯಲ್ಲಿ ಹಾಕಬೇಕು ನಂತರ ಅದನ್ನು ಒಂದುಕಡೆಯಿಟ್ಟು, ಉಳಿದಿರುವ ಶವಭಸ್ಮದಿಂದ ದಕ್ಷಿಣಕ್ಕೆ ತಲೆಯಂತೆ ಆಕೃತಿ ಮಾಡಬೇಕು ॥

ತತ್ರಾಹ ಬೋಧಾಯನಃ –

ತಂ ತಥಾಕರೋತಿ ಯಥಾಸ್ಯಕಪೋತಶ್ಯಾಯಾಯಾಂನೋಪವಿಶೇದಿತಿ । ತತ್ರ ಯದಿ ಕುಂಭೇ ನಿಹಿತಾನ್ಯಸ್ಥೀನಿ ತದಾ ತಸ್ಯ ಬಿಲಂ ವಾಸಸಾಪಿ ನಹ್ಯೇತ್ । ಯದಿ ವಾಸಸೀ ನಿಹಿತಾನಿ ತದಾಪಿ ಕುಂಭೇ ಸಮೋಪ್ಯ ವಾಸಸಾಪಿ ನಹ್ಯೇತ್ । ಏವಂ ಕೃತ್ವಾ ಕುಂಭಮಾದಾಯ ಉತ್ತಷ್ಠತಿ ಉತ್ತಿಷ್ಠಪ್ರೇಹೀತ್ಯನಯಾ ನಿಧಾನದೇಶಂ ಗಚ್ಛೇತ್ ॥

ಇಲ್ಲಿ ಬೋಧಾಯನರು ಹೀಗೆ ಹೇಳುತ್ತಾರೆ,

ಈ ರೀತಿಯಾಗಿ ಪುರುಷಾಕೃತಿಯನ್ನು ಮಾಡುವುದು, ಹಕ್ಕಿ ಮುಂತಾದವುಗಳು ದಹನದ ಜಾಗದಲ್ಲಿ ಕುಳಿತು ಮಲಮೂತ್ರಾದಿಗಳನ್ನು ಮಾಡಬಾರದೆಂಬ ಕಾರಣಕ್ಕಾಗಿ । ಒಂದು ವೇಳೆ ಮಡಕೆಯಲ್ಲಿ ಅಸ್ಥಿಗಳನ್ನು ಇಟ್ಟಿದ್ದರೆ, ಅದರ ಬಾಯನ್ನು ಬಟ್ಟೆಯಿಂದ ಕಟ್ಟಬೇಕು । ಅಥವಾ ಬಟ್ಟೆಯಮೇಲೆ ಅಸ್ಥಿಗಳನ್ನು ಸಂಗ್ರಹಿಸಿದ್ದರೆ ಆಗ ಅದನ್ನು ಮಡಕೆಯಲ್ಲಿಟ್ಟು, ಅದರ ಬಾಯನ್ನು ಬಟ್ಟೆಯಿಂದ ಮುಚ್ಚಬೇಕು । ನಂತರ ಉತ್ತಿಷ್ಠ ಪ್ರೇಹಿ....., ಎಂಬ ಮಂತ್ರದಿಂದ ಮಡಿಕೆಯನ್ನು ತೆಗೆದುಕೊಂಡು ಎದ್ದು, ಅಸ್ಥಿಗಳನ್ನು ವಿಸರ್ಜಿಸುವ ಜಾಗದ ಕಡೆಗೆ ಹೋಗಬೇಕು ॥

* ಕಪರ್ದಿಭಾಷ್ಯಂ –

ಸಮೂಹ್ಯ ಭಸ್ಮವಿಶೇಷಸ್ಥಾನಾನಿ ಕೃತ್ವಾ ಪೀಠೀಕುರ್ವಂತಿ ಏತದಂತಂ ಸ್ತ್ರಿಯಃ ಕುರ್ವಂತಿ । ಶರೀರಾಣ್ಯಾದಾಯೋತ್ತಿಷ್ಠತ್ಯಧ್ವರ್ಯುಃ ಉತ್ತಿಷ್ಠ ಪ್ರೇಹೀತಿ ॥

ಅಸ್ಥಿಸಂಚಯನವನ್ನು ಮಾಡಿ, ಉಳಿದಭಸ್ಮಗಳಿಂದ ಶರೀರಾಕೃತಿಯನ್ನು ಮಾಡಬೇಕು । ಇಲ್ಲಿಯವರೆಗೆ ಸ್ತ್ರೀಯರು ಮಾಡಬೇಕು । ನಂತರ ಆ ಅಸ್ಥಿಗಳನ್ನು ಉತ್ತಿಷ್ಠಪ್ರೇಹಿ....., ಮಂತ್ರಗಳಿಂದ ತೆಗೆದುಕೊಂಡು ವಿಸರ್ಜನೆ ಮಾಡುವ ಕಡೆಗೆ ಹೋಗಬೇಕು ॥

* ಸೂತ್ರಂ – ೧೩ / ೧೪೦

ಶಮ್ಯಾಂ ಪಲಾಶಮೂಲೇ ವಾ ಕುಂಭಂ ನಿಧಾಯ ಜಘನೇನ ಕುಂಭಂ ಕರ್ಷ್ವಾದಿ ಸಮಾನಮಾಸ್ನಾನಾತ್ ॥

ಶಮೀ(ಬನ್ನಿ) ಮರದ ಅಥವಾ ಪಲಾಶ(ಮುತ್ತುಗ) ಮರದ ಬುಡದಲ್ಲಿ ಆ ಅಸ್ಥಿಯ ಗಡಿಗೆಯನ್ನು ಇಟ್ಟು, ಅದರ ಪಶ್ಚಿಮಭಾಗದಲ್ಲಿ ಹಿಂದೆ ಹೇಳಿದಂತೆ ಕರ್ಷೂ, ಕೈಕರಣಗಳನ್ನು ಮಾಡಿ, ನಂತರ ಸ್ನಾನ ಮಾಡಬೇಕು ॥

* ಗೋಪಾಲಭಾಷ್ಯಂ –

ಶಮೀವೃಕ್ಷ ಮೂಲೇ ವಾ ಪಲಾಶವೃಕ್ಷಸ್ಯ ಮೂಲೇ ವಾ ತೂಷ್ಣೀಂ ಕುಂಭಂ ನಿದಧಾತ್ಯಗ್ನಿದಃ । ತತಃ ಅಮಾತ್ಯಾಶ್ಚ ಕುಂಭಸ್ಯ ಪಶ್ಚಾತ್ ಕರ್ಷೂ ಖನನಾದಿ ತದವಗಾಹನ ಸ್ನಾನಾಂತಂ ಪೂರ್ವವತ್ ಕುರ್ಯುಃ ॥

ಬನ್ನಿ ಅಥವ ಮುತ್ತುಗದ ಮರದ ಬುಡದಲ್ಲಿ ಕರ್ತೃವು ಅಮಂತ್ರಕವಾಗಿ ಅಸ್ಥಿಯ ಮಡಕೆಯನ್ನು ಇಡಬೇಕು । ನಂತರ ಬಂಧುಗಳು ಆ ಅಸ್ಥಿಯ ಮಡಕೆಯ ಹಿಂದೆ ಕಲ್ಲಿನಿಂದ ಗುಂಡಿ ಮಾಡುವುದು ಹಾಗೂ ಅದರಲ್ಲಿ ನೀರುತುಂಬಿ ಅದರಲ್ಲಿ ಸ್ನಾನ ಮಾಡುವವರೆಗಿನ ವಿಧಿಗಳನ್ನೂ ಹಿಂದೆ ಹೇಳಿರುವಂತೆ ಮಾಡಬೇಕು ॥

* ಕಪರ್ದಿಭಾಷ್ಯಂ –

ತೂಷ್ಣೀಂ ನಿಧಾನಂ ಶಮ್ಯಾಂ ಪಲಾಶಮೂಲೇ ವಾ । ಜಘನೇನ ಕುಂಭಮುದೀಚೀಃ ತಿಸ್ರಃ ಕರ್ಷೂಃ ಖಾತ್ವೇತ್ಯಾದಿ ತತ್ ಪ್ರತ್ಯಯಮುದಕಂ ಉತ್ಸಿಚ್ಯೇತ್ಯೇತದಂತಂ ॥

ಅಮಂತ್ರಕವಾಗಿ ಬನ್ನಿ ಅಥವ ಮುತ್ತುಗದ ಮರದ ಬುಡದಲ್ಲಿ ಅಸ್ಥಿಮಡಿಕೆಯನ್ನು ಇಡಬೇಕು । ಆ ಅಸ್ಥಿ ಮಡಿಕೆಯ ಹಿಂದೆ ಉತ್ತರಕ್ಕೆ ೩ ಗುಂಡಿಗಳನ್ನು ಅಗೆಯುವುದರಿಂದ ಹಿಡಿದು, ಸ್ನಾನ ಮಾಡುವುದರವರೆಗೂ ವಿಧಿಯಂತೆ ಮಾಡುವುದು(ಕರ್ಷೂ ಖಾತ್ವಾ ಯಿಂದ ಆರಂಭಿಸಿ, ಉದಕಂ ಉತ್ಸಿಚ್ಯ ಎಂಬವರೆಗೆ) ॥

* ಸೂತ್ರಂ – ೧೪ / ೧೪೧

ಮೃದಾ ಸ್ನಾತೀತ್ಯೇಕೇ ॥

ಮಣ್ಣನ್ನು ದೇಹಕ್ಕೆ ತಿಕ್ಕಿಕೊಂಡು ಸ್ನಾನ ಮಾಡಬೇಕೆಂದು ಕೆಲವರು ಅಭಿಪ್ರಾಯಪಡುತ್ತಾರೆ ॥

* ಗೋಪಾಲಭಾಷ್ಯಂ –

ಮೃದಾಗಾತ್ರಾಣ್ಯಭಿಲಿಪ್ಯ ಸ್ನಾತವ್ಯಮಿತ್ಯೇಕೇ ಸಮಾಮನಂತಿ । ಅತ್ರಾಪಿ ಸವಿಧಿಃ ಸಮಾನಃ ॥

ಮಣ್ಣನ್ನು ದೇಹಕ್ಕೆ ತಿಕ್ಕಿಕೊಂಡು ಸ್ನಾನ ಮಾಡಬೇಕು ಎಂದು ಕೆಲವರು ಹೇಳುತ್ತಾರೆ । ಇಲ್ಲೂ ಕೂಡ ಗುಂಡಿ ತೆಗೆಯುವುದರಿಂದ ಸ್ನಾನದವರೆಗಿನ ವಿಧಿಗಳು ಸಮಾನವೇ ॥

* ಕಪರ್ದಿಭಾಷ್ಯಂ –

ಮೃದಾಸ್ನಾತೀತ್ಯನುವಾದ ಏವ ಧಾತಾಪುನಾತು ಸವಿತಾ ಪುನಾತ್ವಿತಿ ಶಿರಸಿ ಮೃದಂ ನಿಕ್ಷಿಪತಿ । ಊರ್ಧ್ವಂ ಚ ಲೋಪಃ ಕರ್ಷಾದಿಕ್ರಿಯತ ಇತಿ । ಉಪದೇಶಸ್ತು ಯಾವದುಕ್ತಮೇವ ತೂಷ್ಣೀಂ ಮೃತ್ ಪ್ರಕ್ಷೇಪ ಏವ । ಕೇಚಿತ್ ಮೃತ್ ಪ್ರಕ್ಷೇಪಣಮುದಕಪ್ರತ್ಯಾಮ್ನಾಯ ಏವ । ಊರ್ಧ್ವಂ ಚ ಕ್ರಿಯತ ಏವೇತಿ ।

ಮಣ್ಣನ್ನು ತಿಕ್ಕಿಕೊಂಡು ಸ್ನಾನ ಮಾಡಬೇಕು ಎಂಬುದು ಅನುವಾದವು । ಹೇಗೆ ಮಾಡಬೇಕೆಂದರೆ, ಧಾತಾ ಪುನಾತು....., ಮಂತ್ರದಿಂದ ತಲೆಯ ಮೇಲೆ ಮಣ್ಣನ್ನು ಹಾಕಿಕೊಳ್ಳಬೇಕು । ಗುಂಡಿ ಮಾಡುವಿಕೆ – ನೀರನ್ನು ತುಂಬಿಸುವಿಕೆ – ನೀರಿನ ಸ್ನಾನ, ಇವೆಲ್ಲವೂ ಇಲ್ಲ । ಇಲ್ಲಿ ಸೂತ್ರದಲ್ಲಿ ಉಪದೇಶ ಮಾಡಿರುವುದು, ಅಮಂತ್ರಕವಾಗಿ ಮಣ್ಣನ್ನು ತಲೆಯಮೇಲೆ ಹಾಕಿಕೊಳ್ಳಬೇಕೆಂದೇ ಇರುವುದು । ಕೆಲವರು ಮಣ್ಣನ್ನು ತಲೆಗೆ ಹಾಕಿಕೊಳ್ಳುವುದು ನೀರಿನಸ್ನಾನಕ್ಕೆ ಬದಲಾಗಿಯೇ ಎಂದು ಅಭಿಪ್ರಾಯ ಪಡುತ್ತಾರೆ । ಇಷ್ಟುಮಾತ್ರ ವ್ಯತ್ಯಾಸವಷ್ಟೇ, ಉಳಿದ ಎಲ್ಲಾ ವಿಧಿಗಳೂ ಸಮಾನವೇ ॥

೧೦ ನೇ ಖಂಡ –

(ಪುನಃಸುಡುವ ವಿಚಾರ – ಶವಸಂಸ್ಕಾರ ಕರ್ಮದ ವಿಶೇಷತೆ)

*** ಸೂತ್ರಂ – ೧ / ೧೪೨**

ಅಥಾತೋ ಹವಿರ್ಯಜ್ಞೀಯಂ ನಿವಪನಂ ಯಂ ಕಾಮಯೇತ ಅನಂತಲೋಕಃಸ್ಯಾದಿತಿ ॥

ನಂತರ ಹವಿರ್ಯಜ್ಞವಾದ ಅಸ್ಥಿಯ ಹೂಳುವಿಕೆಯನ್ನು ಮೃತನು ಅನಂತಲೋಕವನ್ನು ಪಡೆಯಬೇಕೆಂಬ ಕಾಮನೆಯು ವಿಶೇಷವಾಗಿ ಇದ್ದಾಗ ಹೇಳಿದೆ ॥

*** ಗೋಪಾಲಭಾಷ್ಯಂ –**

ಯಂಮೃತಂ ಅಸಾವನಂತ ಲೋಕಸ್ಯಾದಿತಿ ಅಗ್ನಿದಃ ಕಾಮಯೇತ ತಸ್ಯ ಇದಾನೀಂ ಹವಿರ್ಯಜ್ಞೀಯಂ ನಿವಪನಮುಚ್ಯತ ಇತ್ಯರ್ಥಃ। ಯಥಾ ಹವಿರ್ಯಜ್ಞೇಷು ಸಂಸ್ಕೃತೇ ಶೂರ್ಪಾದೌ ಹವಿರ್ನಿರುಪ್ಯತೇ ಏವಂ ಸಂಸ್ಕೃತೇದೇಶೇ ಅಸ್ಥೀನಿ ನ್ಯುಪ್ಯಂತ ಇತಿ ಹವಿರ್ಯಾಜ್ಞೀಯವಾದಃ। ತತ್ರ ಕಾಮಸಂಯೋಗಾತ್ ಕಾಮಾಭಾವೇ ತದಕ್ರಿಯೇತಿ ಸೂತ್ರಕಾರಮತಿಃ ॥

ಮೃತನಾದ ವ್ಯಕ್ತಿಯು ಅನಂತಲೋಕವನ್ನು ಪಡೆಯಬೇಕೆಂಬ ಇಚ್ಛೆಇದ್ದರೆ, ಕರ್ತೃವು ಹವಿರ್ಯಜ್ಞೀಯವಾದ ಅಸ್ಥಿಯ ನಿವಪನ(ಹೂಳುವಿಕೆ)ವನ್ನು ಇಲ್ಲಿ ಹೇಳಿದೆಯಂದರ್ಥ। ಹೇಗೆ ಹವಿರ್ಯಜ್ಞದಲ್ಲಿ ಸಂಸ್ಕೃತವಾದ ಹವಿಸ್ಸನ್ನು ಬಿದಿರಿನ ಮೊರದಲ್ಲಿ ಹೇಗೆ ಹಾಕುತ್ತಾರೋ ಹಾಗೆ, ಸುಸಂಸ್ಕೃತವಾದಂತಹ ಜಾಗದಲ್ಲಿ ಅಸ್ಥಿಗಳನ್ನು ಹೂಳುತ್ತಾರೆ ಎಂಬುದು ಹವಿರ್ಯಜ್ಞೀಯ ವಾದವು । ಇಲ್ಲಿ, ಕಾಮನೆಯು ವಿಶೇಷವಾಗಿ ಇದ್ದಾಗ ಹೂಳಬೇಕೆಂದು ಹೇಳಿರುವುದರಿಂದ, ಕಾವುನೆಯಿಲ್ಲದಿದ್ದಾಗ ಹೂಳುವ ಅಗತ್ಯವಿಲ್ಲವೆಂದು ಸೂತ್ರಕಾರರ ಅಭಿಪ್ರಾಯವು ॥

* ಕಪರ್ದಿಭಾಷ್ಯಂ –

ಅಥಶಬ್ದ ಆನಂತರ್ಯಾರ್ಥಃ । ಅತಃ ಅಸ್ಮಿನ್ನೇವಾಹನಿ ಯಸ್ಮಿನ್ನಹನಿ ಸಂಚಯನಂ ಕೃತಂ । ಯಂ ಮೃತಂ ಕಾಮಯೇತಾನಂತಲೋಕಸ್ಯಾದಿತಿ ಅನುವಾದ ಏವ ॥

ಅಥ ಶಬ್ದವು ಅನಂತರ ಎಂಬ ಅರ್ಥದಲ್ಲಿದೆ । ಯಾವ ದಿವಸ ಅಸ್ಥಿಸಂಚಯನವನ್ನು ಮಾಡುತ್ತಾರೋ ಆ ದಿವಸವೇ ಮೃತನು ಅನಂತಲೋಕವನ್ನು ಪಡೆದುಕೊಳ್ಳಬೇಕೆಂಬ ಕಾಮನೆಯಿದ್ದರೆ, ಅಸ್ಥಿಗಳನ್ನು ಹೂಳಬೇಕೆಂಬುದು ಅನುವಾದ ಮಾತ್ರ ।

* ಸೂತ್ರಂ – ೨ / ೧೪೩

ಸಮಸ್ಯಾ ಉದ್ಧತೇ ಅವೋಕ್ಷಿತೇ ಸಿಕತೋಪೋಪ್ತೇ ಪರಿಶ್ರಿತೇ ವಾಗ್ಯತಃ ಅನನ್ವೀಕ್ಷ್ಯಮಾಣೋ ದರ್ಭೇಷು ಅಸ್ಥೀನಿ ನಿವಪತಿ ಪೃಥಿವ್ಯಾಸ್ತ್ವಾ ಅಕ್ಷ್ಣಿತ್ಯಾ ಅಪಾಮೋಷಧೀನಾಂ ರಸೇನ ಸ್ವರ್ಗೇಲೋಕೇ ನಿವಪಾಮ್ಯಸೌ ಇತಿ ॥

ಯಾವ ಯಜಮಾನನಿಗೆ ಅನಂತಲೋಕ ಪ್ರಾಪ್ತಿಯ ಬಯಕೆ ಇದೆಯೋ, ಅವನು ಸಮವಾಗಿ ಕೊಚ್ಚಿದ, ಮಟ್ಟಮಾಡಿದ, ನೀರು ಚುಮುಕಿಸಿದ, ಮರಳನ್ನು ಮೇಲೆಸುರಿದ, ಆ ಜಾಗವನ್ನು ಸುತ್ತಲೂ ಮರೆಮಾಡಿದ, ಈ ರೀತಿಯಾಗಿ ಸಿದ್ಧಮಾಡಿಕೊಂಡಿರುವ ಜಾಗದಲ್ಲಿ ದರ್ಭೆಗಳನ್ನು ಹಾಸಿ, ಅದರಮೇಲೆ ಅಸ್ಥಿಗಳನ್ನು ಹಾಕಬೇಕು, ಹಾಕುವಾಗ ಆ ಜಾಗವನ್ನು ನೋಡದೇ ಹಾಕಬೇಕು ಹಾಗೂ ಪೃಥಿವ್ಯಾಸ್ತ್ವಾ ಅಕ್ಷ್ಣಿತ್ಯಾ ಅಪಾಂ ಓಷಧೀನಾಂ ರಸೇನ ಸ್ವರ್ಗೇ ಲೋಕೇ ನಿವಪಾಮಿ....., ಈ ಜಾಗದಲ್ಲಿ ಮೃತನ ಹೆಸರನ್ನು ಹೇಳಿ, ಅಸ್ಥಿಗಳನ್ನು ಇಡುವುದು ॥

* ಗೋಪಾಲಭಾಷ್ಯಂ –

ಸಮಸ್ಯಾ ಇತಿ ಛಾಂದಸಃ ಸ್ಯಾಗಮಃ ಸಮಾಯಾಭೂಮೇಸ್ಸಂಬಂಧಿನಿ ಪ್ರದೇಶೇ । ಉದ್ಧತೇವೋಕ್ಷಿತ ಇತ್ಯಾದೀನಿ ತದ್ವಿಶೇಷಣಾನಿ ತತ್ರ ದಕ್ಷಿಣಾಗ್ರಾನ್ ದರ್ಭಾನ್ ಸಂಸ್ತೀರ್ಯ, ವಾಗ್ಯತಃ ಅನನ್ವೀಕ್ಷಮಾಣಃ ಅಗ್ನಿದಃ ಅನೇನ ಮಂತ್ರೇಣ ಅಸ್ಥೀನಿ

ನಿವಪೇತ್ । ಮಂತ್ರಾಂತೇ ಸಂಬುಧ್ಯಾ ಮೃತಸ್ಯ ನಾಮಗೃಹ್ಯತೇ । ತತ್ ಕ್ರಿಯಮಾಣಂ ಕುಂಭನಿಧಾನ ಕರ್ಷೂಖನ್ನಯೋಃ ಮಧ್ಯೇಕ್ರಿಯತೇ । ನಿವಪನದೇಶಮಪರೇಣ ತು ಕರ್ಷ್ವಾದಿಕರ್ಮ । ಕುಂಭಂ ನಿಧಾಯ ಅಥಾತೋ ಹವಿರ್ಯಜ್ಞೀಯಂ ನಿವಪನ ಇತಿ ಬೋಧಾಯನೀಯೇ ತಥ್ಯೈವಾನುಕ್ರಾಂತತ್ವಾತ್ ॥

'ಸಮಸ್ಯಾ' ಎಂಬ ಪದದಲ್ಲಿ 'ಸ್ಯಾ' ಎಂದು ಹೇಳಿರುವುದು ಛಾಂದಸ ಪ್ರಯೋಗವು । ಸಮವಾದ ಭೂ ಪ್ರದೇಶದಲ್ಲಿ ಎಂದರ್ಥ । ಅಂತಹ ಜಾಗದಲ್ಲಿ ಅಗೆದು, ಪ್ರೋಕ್ಷಣೆ ಮುಂತಾದ ವಿಶೇಷ ವಿಧಿಗಳನ್ನು ಮಾಡಿ । ಅಲ್ಲಿ ದಕ್ಷಿಣಾಗ್ರವಾಗಿ ದರ್ಭೆಗಳನ್ನು ಹರಡಿ, ಮೌನವಾಗಿ ಆ ಅಸ್ಥಿಗಳನ್ನು ನೋಡದೇ, ಈ ಮಂತ್ರದಿಂದ ಕರ್ತೃವು ಹೂಳಬೇಕು । ಮಂತ್ರದ ಕೊನೆಯಲ್ಲಿ ಸಂಬೋಧನಾ ವಿಭಕ್ತಿಯಿಂದ ಮೃತನ ಹೆಸರನ್ನು ಹೇಳಬೇಕು । ಇದನ್ನು ಮಾಡುವುದು, ಕುಂಭವನ್ನು ಇಡುವಿಕೆ ಹಾಗೂ ಗುಂಡಿ ಮಾಡುವುದು ಇವೆರಡರ ಮಧ್ಯೆ ಮಾಡಬೇಕು । ಏಕೆಂದರೆ, ಅಸ್ಥಿಹೂಳುವ ಜಾಗದ ಹಿಂಭಾಗದಲ್ಲಿ ಗುಂಡಿತೆಗೆಯುವ (ಕರ್ಷ್ವಾದಿ) ಕೆಲಸಗಳನ್ನು ಮಾಡಬೇಕು । ಕುಂಭವನ್ನು ಇಟ್ಟು, ನಂತರ ಹವಿರ್ಯಜ್ಞೀಯ ನಿವಪನವನ್ನು ಮಾಡಬೇಕೆಂದು ಬೋಧಾಯನರು ಅನುಕ್ರಮವಾಗಿ ಹೇಳಿರುವುದರಿಂದ ॥

* ಕಪರ್ದಿಭಾಷ್ಯಂ –

ಸಮಸ್ಯಾಭೂಮೇಃ ಸಮೇ ಭಾಗೇ ಉದ್ಧತ್ಯಾವೋಕ್ಷ್ಯ ಸಿಕತಾನ್ಯುಪ್ಯ ಕಟಾದಿಭಿಃ ಪರಿಶ್ರಿತ್ಯ ದಕ್ಷಿಣಾಗ್ರಾನ್ ದರ್ಭಾನ್ ಸಂಸ್ತೀರ್ಯ ಅಸ್ಥೀನಿ ತೇಷು ಅನನ್ವೀಕ್ಷಮಾಣೋಧೋಮುಖೋ ನಿವಪತಿ ಪೃಥಿವ್ಯಾಸ್ತ್ವ ಅಕ್ಷ್ಣಿತ್ಯಾ ಇತಿ । ಅಸಾವಿತ್ಯತ್ರ ಮೃತಸ್ಯ ನಾಮಗ್ರಹಣಂ ಸಂಬುದ್ಧ್ಯಾ ॥

ಸಮಭೂಮಿಯಲ್ಲಿ ಅಗೆದು, ಪ್ರೋಕ್ಷಿಸಿ, ಮರಳನ್ನು ಹಾಕಿ, ಚಾಪೆ ಮುಂತಾದವುಗಳಿಂದ ಮರೆಮಾಡಿ, ಆ ಗುಂಡಿಯಲ್ಲಿ ದಕ್ಷಿಣಾಗ್ರವಾಗಿ ದರ್ಭೆಗಳನ್ನು ಹರಡಿ, ಆ ಜಾಗವನ್ನು ಮತ್ತು ಅಸ್ಥಿಯನ್ನೂ ನೋಡದೇ, ಅಸ್ಥಿಗಳನ್ನು ಪೃಥಿವ್ಯಾಸ್ತ್ವ..., ಮಂತ್ರದಿಂದ ಅಧೋಮುಖವಾಗಿ ಹೂಳಬೇಕು । 'ಅಸೌ' ಎಂಬ ಜಾಗದಲ್ಲಿ ಮೃತನ ಹೆಸರನ್ನು ಸಂಬುದ್ಧಿಯಿಂದ(ಶರ್ಮನ್) ಹೇಳಬೇಕು ॥

* ಸೂತ್ರಂ – ೩ / ೧೪೪

ಅನಂತಲೋಕೋ ಭವತೀತಿ ವಿಜ್ಞಾಯತೇ ॥

ಈ ರೀತಿ ಮಾಡಿದ್ದಲ್ಲಿ ಮೃತನಿಗೆ ಅನಂತಲೋಕವೇ ಖಂಡಿತವಾಗಿಯೂ ಉಂಟಾಗುತ್ತದೆ ॥

* ಗೋಪಾಲಭಾಷ್ಯಂ –

ರಾತ್ರಿಸತ್ರನ್ಯಾಯೇನ ಆರ್ಥವಾದಿಕಂ ಫಲಮಿಹ ಸ್ವೀಕೃತಮಿತ್ಯಭಿಪ್ರಾಯಃ ॥

ರಾತ್ರಿಸತ್ರ ನ್ಯಾಯದಿಂದ, ಅರ್ಥವಾದದ ಮೂಲಕ ಇಲ್ಲಿ ಫಲವನ್ನು ಹೇಳಿದೆ ಎಂದರ್ಥವಷ್ಟೇ ॥

* ಕಪರ್ದಿಭಾಷ್ಯಂ –

ಏವಂ ಕೃತೇ ಅನಂತಲೋಕೋಭವತೀತಿ ಶ್ರುತಿಃ । ಕೇಚಿತ್ ವಿಕಲ್ಪೇನ ನಿವಪನಂ ಕುರ್ವಂತಿ । ಕುಂಭನಿಧಾನಾದಿ ಸ್ನಾನಾಂತಂ ಕೃತ್ವಾ ಉತ್ತಿಷ್ಠಪ್ರೇಹೀತ್ಯುತ್ಥಾಯ ಹವಿರ್ಯಜ್ಞೀಯಂ ನಿವಪನಂ ತಸ್ಯಾಪರೇಣ ಕಷ್ಪಾ್ವದಿ ಸಮಾನಮಾಸ್ನಾನಾದಿತಿ । ಉಪದೇಶಸ್ತು ಕುಂಭನಿಧಾನಾಂತೇ ನಿವಪನಂ ತತಃ ಕಷ್ಪಾ್ವದಿ ಸಮಾನಮಿತಿ । ಅನಂತರ ವಚನಾತ್ ಅವಶೇಷ ಇತಿ ನ್ಯಾಯಃ । ತತಸ್ತೂಷ್ಣೀಂ ಸ್ನಾನಂ ವಚನಾತ್ ॥

ಈ ರೀತಿಯಾಗಿ ಮಾಡಿದರೆ, ಅನಂತಲೋಕವನ್ನೇ ಪಡೆಯುತ್ತಾನೆಂದು ಶ್ರುತಿಯಲ್ಲಿದೆ । ಕೆಲವರು, ವಿಕಲ್ಪದಿಂದ ಹೂಳುವಿಕೆಯನ್ನು ಹೇಳಿದ್ದಾರೆ । ಕುಂಭವನ್ನು ಇಡುವಿಕೆ ಇಂದ ಸ್ನಾನಾಂತದವರೆಗೆ ಮಾಡಿ, ಉತ್ತಿಷ್ಠಪ್ರೇಹಿ ಮಂತ್ರದಿಂದ ಎದ್ದು, ಹವಿರ್ಯಜ್ಞೀಯವಾದ ಅಸ್ಥಿಯ ಹೂಳುವಿಕೆಯನ್ನು ಅದರ ಹಿಂದೆ ಕಷ್ಪಾ್ವದಿ ಸ್ನಾನಂತದವರೆಗೆ ಸಮಾನವಾಗಿ ಹೇಳಿದ್ದಾರೆ । ಉಪದೇಶವಾದರೋ(ಸೂತ್ರ) ಕುಂಭವನ್ನು ಇಡುವಿಕೆಯವರೆಗೆ ಮಾಡಿ ನಂತರ ಅಸ್ಥಿನಿವಪನವನ್ನು ಹೇಳಿದೆ । ನಂತರ ಕಷ್ಪಾ್ವದಿ ಸ್ನಾನವನ್ನು ಹಿಂದಿನಂತೆಯೇ ಹೇಳಿದೆ । ಅನಂತರ ಎಂಬ ಮಾತನ್ನು ಹೇಳಿರುವುದರಿಂದ, ಅಸ್ಥಿಯ ಹೂಳುವಿಕೆಯವರೆಗೆ ಮಾಡುವುದು ನ್ಯಾಯ । ನಂತರ ಅಮಂತ್ರಕ ಸ್ನಾನ, ಹೀಗೆ ಸೂತ್ರದಲ್ಲಿ ಹೇಳಿದೆ ॥

* ಸೂತ್ರಂ – ೪ / ೧೪೫

ಅಥ ಯದಿ ಪುನರ್ದಹ್ಯೇಂತಃ ಸ್ಯುರಗ್ನಿಹೋತ್ರಹವಣೀಂ ಕೃಷ್ಣಾಜಿನಂ ಶಮ್ಯಾಂ ದೃಷದುಪಲೇ ಚ ನಾನುಪ್ರಹರೇಯುಃ ॥

ಹಾಗಲ್ಲದೇ, ಒಂದುವೇಳೆ ಮತ್ತೆ ಸುಡುವುದಾದರೆ ಅಗ್ನಿಹೋತ್ರಹವಣಿಯನ್ನು, ಕೃಷ್ಣಾಜಿನವನ್ನು, ಶಮ್ಯೆಯನ್ನು, ದೃಷತ್(ಕಲ್ಲು)ನ್ನು, ಉಪಲ(ಸಣ್ಣಕಲ್ಲು)ವನ್ನು ಇವುಗಳನ್ನು ಮೊದಲಸಲ ಸುಡುವಾಗ ಅನುಪ್ರಹರಣ ಮಾಡಬಾರದು ॥

* ಗೋಪಾಲಭಾಷ್ಯಂ –

ನನ್ವತ್ರ ಯದಿ ಉಪಬಂಧಃ ಕಿಮರ್ಥಃ ಅಥೈಕೇಷಾಂ ಕುಂಭಾಂತಂ ಇತಿ ಪರಮತೇ ಪುನರ್ದಹನಸ್ಯ ಸೋಮಯಾಜಿಮಾತ್ರ ವಿಷಯತಯಾ ಕ್ವಾಚಿತ್‌ಕತ್ವಾತ್ ಅಯಂ ಕೃತಃ । ವ ತು ಕಸ್ಮೈ ಚಿತ್ ಪ್ರಯೋಜನಾಯೇತಿ ಕೇಚಿತ್ । ತದಸಾರಂ । ಪರಮತ ವಿಷಯತ್ವಾಂಯೋಗಾತ್ । ಸ್ವಮತಮೇವ ಹ್ಯನುಕ್ರಮ್ಯತೇ । ತತ್ರ ಯದ್ಯನುಕ್ರಮ್ಯಮಾಣಮಪಿ ಪರಮತಂ ಸ್ಯಾತ್, ಕಿಮತ್ರ ಸ್ವಮತಂ ಸ್ಯಾತ್ । ನ ಚ ಸ್ವಮತೋಪದೇಶಮಧ್ಯೇ ಕಸ್ಯಚಿತ್ ಪರಮತಮಾತ್ರ ವಿಷಯತಾ ಯುಜ್ಯತೇ । ಅಪಿ ಚ ಪರಮತೇ ನಿವಪನ ಲೋಷ್ಟಚಿತ್ಯೋರಪಿ ಕ್ವಾಚಿತ್ ಕತ್ವಾತ್ ತತ್ರಾಪಿ ಯದ್ಯುಪಬಂಧಃ ಕರ್ತವ್ಯಸ್ಯಾತ್ । ನ ಚ ದೃಶ್ಯತೇ । ತಸ್ಮಾದನುಕ್ರಮ್ಯಮಾಣೇ ಸ್ವಮತ ಏವಾಸ್ಯ ವಕ್ತವ್ಯೋಪಪತ್ತಿಃ । ಅತ್ರಬ್ರೂಮಃ । ಇಹ ತಾವತ್ ಪುನರ್ದಹನ ಲೋಷ್ಟಚಯನೇ ಕಾಮನಿಮಿತ್ತರಹಿತೇ ವಕ್ಷ್ಯತೇ । ಅತೋ ನತಯೋಃ ಕಾಮನಿಮಿತ್ತ ನಿವೃತ್ಯಾತಾವತ್ ನಿವೃತ್ತಿಸ್ಸಂಭವತೀತಿ ಸಮುಚ್ಚಯಃ ಪ್ರಾಪ್ತಃ । ತತ್ರ ಲೋಷ್ಟಚಿತೇರೂರ್ಧ್ವಂ ಪುನರ್ದಹನಮಿತ್ಯೇವಂ ಸಮುಚ್ಚಯೋ ನ ಘಟತೇ ಅಶಕ್ಯತ್ವಾತ್ । ಇಷ್ಟಕಾಭಿರಭ್ಯುಪಹಿತಾನಾಂ ಅಸ್ಥ್ನಾಂ ಉದ್ಬರ್ಹಣಾ ಯೋಗಾಚ್ಚ । ನನು ಪುನರ್ದಹನಾದೂರ್ಧ್ವಂ ಶಕ್ಯತೇ ಲೋಷ್ಟಚಿತಿಃ ಅಸ್ಥಿಸ್ಥಾನೇ ಕಥಂ ಚಿತ್ ತತ್ ಭಸ್ಮೋಪಯೋಗಸಂಭವಾತ್ ಅಸ್ಥಿನಿವಪನಮಾತ್ರ ಲೋಪಾದ್ವಾ । ಸತ್ಯಂ

ಶಕ್ಯತೇ । ಪ್ರತಿಷಿದ್ಧ್ಯತೇತ್ವಯಮರ್ಥಃ । ನಚಾತ ಊರ್ಧ್ವಂ ಶ್ಮಶಾನಂ ಕರ್ತುಮಾದ್ರಿಯೇತೇತಿ । ತಸ್ಮಾನ್ನೋಭಯಥಾಪಿ ಸಮುಚ್ಚಯಃ । ಅತ ಪರಿಶೇಶನ್ಯಾಯಪ್ರಾಪ್ತಸ್ಯ ಪುನರ್ದಹನ ಲೋಷ್ಟಚಿತ್ಯೋಃ ಸ್ವಮತೇ ಮಿಥೋವಿಕಲ್ಪಸ್ಯ ಸೂಚನಾರ್ಥೋಯಂ ಯದ್ಯುಪಬಂಧಃ ಸತಿಹ್ಯಸ್ಮಿನ್ನುಪಬಂಧೇ ಸ್ವಮತೇನ ತಯೋಃ ಮಿಥೋವಿಕಲ್ಪಃ ಸ್ಪಷ್ಟೋಭವತಿ । ತಸ್ಮಾತ್ ಸರ್ವಾಹಿತಾಗ್ನೀನಾಂ ಸೂತ್ರಕಾರಮತೇ ವಿಧಿಃ ಪುನರ್ದಹನಾಂತ ಏವಸ್ಯಾತ್ । ಲೋಷ್ಟಚಿತ್ಯಂತ ಏವ ವಾ । ತೇನಾಯಮರ್ಥಃ ಯದಿ ಪುನರ್ದಹನಂ ಕರಿಷ್ಯಂತಸ್ಯುಃ ನ ತು ಲೋಷ್ಟಚಿತಿಂ ತದಾ ಪಾತ್ರಚಯನಕಾಲೇ ಅಗ್ನಿಹೋತ್ರಹವಣ್ಯಾದೀನಿ ಏತಾನಿಪಂಚಪಾತ್ರಾಣಿ ನಚಿನುಯುಃ । ತತ್ರ ಪಾತ್ರಚಯನೇ ಅನುಪ್ರಹರಣವ್ಯಪದೇಶ ಉಪಯುಕ್ತ ಸಂಸ್ಕಾರ ಸಂಪ್ರತ್ಯಯಾರ್ಥೋ ಭವತಿ । ಪಾತ್ರಚಯನಂ ಕರ್ಮಸು ಉಪಯುಕ್ತಾನಾಂ ಪಾತ್ರಾಣಾಮನುಪ್ರಹರಣಾತ್ಮಕಂ ತ್ಯೈರೇವ ಪುನರ್ದಹನಸ್ಯ ಕಾರ್ಯತ್ವಾದಿತಿ ಭಾವಃ ॥ ಯತ ಏವ ಅಗ್ನಿಹೋತ್ರಹವಣ್ಯಾದಿಭಿರೇವ ಪುನರ್ದಹನಂ ಅತ ಏವ ಅನಾಹಿತಾಗ್ನೇಃ ಪುನರ್ದಹನಾಭಾವೋಪಿ ಅನುಸಂಧೇಯಃ ॥

ಇಲ್ಲಿ, ಒಂದುವೇಳೆ ಉಪಬಂಧವು(ಸೇರಿಸುವುದು) ಏತಕ್ಕಾಗಿ ಎಂದರೆ, ಕೆಲವರ ಅಭಿಪ್ರಾಯದಲ್ಲಿ ಒಂದುವೇಳೆ ಕುಂಭಾಂತದವರೆಗೆ ಅಸ್ಥಿಚಯನವು ಎಂದು ಬಂದೊದಗಿದಾಗ, ಬೇರೆಯವರ ಅಭಿಪ್ರಾಯದಲ್ಲಿ ಪುನರ್ದಹನವು ಸೋಮಯಾಜಿಗಳಿಗೆ ಮಾತ್ರ ವಿಧಿಯಾಗಿ ಹೇಳಿರುವುದರಿಂದ, ಕೆಲವುಕಡೆ ಈ ಪುನರ್ದಹನವನ್ನು ಹೇಳಿದೆ। ಆದ್ದರಿಂದ ಈ ಪುನರ್ದಹನವು ಯಾರ ಅಥವ ಯಾವ ಪ್ರಯೋಜನಕ್ಕೂ ಹೇಳಿರುವುದಿಲ್ಲ ಎಂದು ಕೆಲವರ ಅಭಿಪ್ರಾಯ । ಆದರೆ ಇದು ಸರಿಯಲ್ಲ । ಇಲ್ಲಿ ಪರಮತ ಎಂಬುದು ಹೊಂದದೇ ಇರುವುದರಿಂದ । ಏಕೆಂದರೆ ನಾವು ನಮ್ಮ ಅಭಿಪ್ರಾಯವನ್ನೇ ಹೇಳಲು ಹೊರಟಿರುವುದರಿಂದ । ಒಂದುವೇಳೆ ನಮ್ಮ ಅಭಿಪ್ರಾಯವನ್ನು ಹೇಳಲು ಹೊರಟು, ಅದು ಬೇರೆಯವರ ಅಭಿಪ್ರಾಯದಂತೆ ಆದರೆ, ಆಗ ನಮ್ಮ ಅಭಿಪ್ರಾಯ ಎಂಬುದು ಇಲ್ಲಿ ಇರುವುದೇಇಲ್ಲ । ಅಷ್ಟೇ ಅಲ್ಲದೇ ನಮ್ಮ ಅಭಿಪ್ರಾಯವನ್ನು ಉಪದೇಶ ಮಾಡುವ ಮಧ್ಯದಲ್ಲಿ ಯಾರಿಗಾದರೂ ಕೆಲವರಿಗೆ ಪರಮತದಂತೆ ಕಂಡುಬರುವುದು

ಹೊಂದಿಕೆಯಾಗುವುದಿಲ್ಲ । ಅಷ್ಟೇಅಲ್ಲದೇ ಬೇರೆಯವರ ಮತದಲ್ಲೂ ಅಸ್ಥಿನಿವಪನ ಹಾಗೂ ಲೋಷ್ಟಚಿತಿಗಳೆರಡು ಕೆಲವರಿಗೆ ಮಾತ್ರ । ಆದ್ದರಿಂದ ಅಲ್ಲೂಕೂಡ ಇವುಗಳನ್ನು ಸೇರಿಸಬೇಕು ಎಂಬುದು, ಬಂದೊದಗಬೇಕಾಗಿತ್ತು । ಆದರೆ ಅದು ಇಲ್ಲಿ ಕಂಡುಬರುವುದಿಲ್ಲ । ಆದ್ದರಿಂದ ನಮ್ಮ ಅಭಿಪ್ರಾಯವನ್ನೇ ಇಲ್ಲಿ ಅನುಕ್ರಮವಾಗಿ ಹೇಳಲು ಹೊರಟು, ಅದನ್ನೇ ಹೇಳಬೇಕೆಂಬುದು ಇಲ್ಲಿ ಹೊಂದುತ್ತದೆ। ಈ ವಿಷಯದಲ್ಲಿ ಸ್ವಲ್ಪ ಹೇಳುವೆವು । ಇಲ್ಲಿ ಪುನರ್ದಹನ ಲೋಷ್ಟಚಯನಗಳು ಕಾಮನೆ ಇಲ್ಲದವರಿಗೆ ಹೇಳಲ್ಪಟ್ಟಿದೆ । ಆದ್ದರಿಂದ ಕಾಮನೆ ಇಲ್ಲದಿದ್ದಾಗ ಅದನ್ನು ಮಾಡುವ ಅಗತ್ಯವಿಲ್ಲ ಎಂಬುದು ಹೊಂದುವುದಿಲ್ಲ । ಈ ರೀತಿಯಾಗಿ ಇವೆರಡೂ ಎಲ್ಲರಿಗೂ ಪ್ರಾಪ್ತವಾಗುತ್ತವೆ। ಇಲ್ಲಿ ಲೋಷ್ಟಚಿತಿಯ ನಂತರ ಪುನರ್ದಹನ ಮಾಡಬೇಕೆಂಬ ಸಮುಚ್ಚಯ ಪಕ್ಷವು ಹೊಂದುವುದಿಲ್ಲ । ಏಕೆಂದರೆ, ಮಾಡಲು ಅಸಾಧ್ಯವಾಗಿರುವುದರಿಂದ । ಇಷ್ಟಕ(ಇಟ್ಟಿಗೆ) ಎಂಬ ಭಾವನೆಯಿಂದ ಒಟ್ಟಾಗಿ ಇಟ್ಟ ಅಸ್ಥಿಗಳನ್ನು ಮತ್ತೆ ತೆಗೆದು ದಹನ ಮಾಡಲು ಸಾಧ್ಯವಿಲ್ಲ । ಇಲ್ಲಿ, ಪುನರ್ದಹನವಾದಮೇಲೆ ಅಸ್ಥಿಸ್ಥಾನದಲ್ಲಿ ಲೋಷ್ಟಚಿತಿಯನ್ನು ಮಾಡಲು ಸಾಧ್ಯವಿದೆಯಲ್ಲವೇ, ಎಂಬುದು ಪೂರ್ವಪಕ್ಷವು । ಏಕೆಂದರೆ, ಹೇಗಾದರೂ ಆ ಅಸ್ಥಿ, ಭಸ್ಮಗಳನ್ನು ಉಪಯೋಗಿಸುವುದು ಸಾಧ್ಯವಾಗುತ್ತದೆಯಾದ್ದರಿಂದ ಹಾಗೂ ಅಸ್ಥಿನಿವಪನ(ಹೂಳುವಿಕೆಯು)ವು ಮಾತ್ರ ಲೋಪವಾಗುತ್ತದೆಯಾದ್ದರಿಂದ ಲೋಷ್ಟಚಿತಿಯಾದಮೇಲೆ ಪುನರ್ದಹನವು ಹೊಂದುತ್ತದೆಯಲ್ಲವೇ ಎಂಬ ಪ್ರಶ್ನೆಗೆ ಉತ್ತರ ಮುಂದಿನಂತೆ ಹೀಗಿದೆ । ಹೌದು ನೀವು ಹೇಳಿರುವುದು ಸರಿ, ಆದರೆ ಇಲ್ಲಿ ಈ ರೀತಿ ಮಾಡುವುದನ್ನು ಪ್ರತಿಷೇಧ ಮಾಡಿದೆ । ಅಸ್ಥಿನಿವಪನವಾದಮೇಲೆ ಮುಂದೆ ಸ್ಮಶಾನದಲ್ಲಿ ಮಾಡುವ ಕರ್ಮವು ಯಾವುದೂ ಇರುವುದಿಲ್ಲ ಮತ್ತು ಅದನ್ನು ಒಪ್ಪಿಯೂ ಇಲ್ಲ । ಆದ್ದರಿಂದ ಎರಡುರೀತಿಯಿಂದಲೂ ಸಮುಚ್ಚಯವು ಹೊಂದುವುದಿಲ್ಲ । ಆದ್ದರಿಂದ ಪಾರಿಶೇಷ್ಯನ್ಯಾಯದಿಂದ ಪುನರ್ದಹನ ಮತ್ತು ಲೋಷ್ಟಚಿತಿ ಎರಡುಕೂಡ ನಮ್ಮ ಅಭಿಪ್ರಾಯದಲ್ಲಿ ವಿಕಲ್ಪವನ್ನು ಸೂಚಿಸುವುದಕ್ಕಾಗಿ ಈ ಉಪಬಂಧವು(ಸೇರಿಸಿದೆ) ಬಂದಿದೆ। ಈ ಉಪಬಂಧವು ಇರಲಾಗಿ ನಮ್ಮ ಅಭಿಪ್ರಾಯದಲ್ಲಿ ಅವೆರಡರ ವಿಕಲ್ಪವು ಸ್ಪಷ್ಟವಾಗಿ

ತೋರುತ್ತದೆ । ಆದ್ದರಿಂದ ಎಲ್ಲಾ ಆಹಿತಾಗ್ನಿಗಳಿಗೂ ಸೂತ್ರಕಾರರ ಮತದಲ್ಲಿ ಪುನರ್ದಹನಾಂತವಾಗಿ ವಿಧಿಯು ಇದೆ ಅಥವಾ ಲೋಷ್ಟಚಿತ್ಯಂತವಾಗಿ ಇದೆ। ಆದ್ದರಿಂದ ಈ ರೀತಿಯಾಗಿಯೇ ಅರ್ಥ ಮಾಡಬೇಕು । ಒಂದುವೇಳೆ ಪುನರ್ದಹನವನ್ನು ಮಾಡುತ್ತಿದ್ದು, ಲೋಷ್ಟಚಿತಿಯನ್ನು ಮಾಡದಿದ್ದರೆ, ಆಗ ಯಜ್ಞಪಾತ್ರೆಗಳನ್ನು ಚಯನ(ಇಡುವುದು) ಮಾಡುವ ಕಾಲದಲ್ಲಿ ಅಗ್ನಿಹೋತ್ರಹವಣಿ ಮುಂತಾದ ಸೂತ್ರದಲ್ಲಿ ಹೇಳಿದ ೫ (ಅಗ್ನಿಹೋತ್ರಹವಣಿ, ಕೃಷ್ಣಾಜಿನ, ಶಮ್ಯಾ, ದೃಷತ್, ಉಪಲ) ಪಾತ್ರೆಗಳನ್ನು ಚಯನ ಮಾಡಬಾರದು। ಪಾತ್ರಚಯನದಲ್ಲಿ, ಅನುಪ್ರಹರಣವನ್ನು ಹೇಳುವಕಾಲದಲ್ಲಿ ಉಪಯುಕ್ತವಾದಂತಹ ಸಂಸ್ಕಾರವು ಸ್ಪಷ್ಟಾರ್ಥವುಳ್ಳದ್ದಾಗುತ್ತದೆ । ಪಾತ್ರಚಯನವು, ಕರ್ಮಗಳಲ್ಲಿ ಉಪಯೋಗಿಸಿದ ಪಾತ್ರೆಗಳ ಅನುಪ್ರಹರಣ ರೂಪವಾಗಿ, ಅವುಗಳಿಂದಲೇ ಪುನರ್ದಹನವನ್ನು ಮಾಡಬೇಕಾಗಿರುವುದರಿಂದ ಈ ರೀತಿಯಾಗಿ ೫ ಪಾತ್ರೆಗಳನ್ನು ಪುನರ್ದಹನ ಮಾಡದೇ, ಬೇರೇ ಪಾತ್ರೆಗಳನ್ನು ಪುನರ್ದಹನ ಮಾಡಬೇಕೆಂಬುದು ಇಲ್ಲಿ ಭಾವಾರ್ಥ। ಯಾವ ಕಾರಣದಿಂದ ಅಗ್ನಿಹೋತ್ರಹವಣಿ ಮುಂತಾದವುಗಳಿಂದ ಪುನರ್ದಹನವು ವಿಧಿಸಲ್ಪಟ್ಟಿದೆಯೋ ಆ ಕಾರಣದಿಂದ ಅನಾಹಿತಾಗ್ನಿಗಳಿಗೆ ಪುನರ್ದಹನವು ಇಲ್ಲ ಎಂದು ತಿಳಿದುಕೊಳ್ಳಬೇಕು ॥

* ಕಪರ್ದಿಭಾಷ್ಯಂ –

ಯದಿ ಪುನರ್ದಹನಂ ಕುರ್ವಂತಸ್ಯುಃ । ಪಾಕ್ಷಿಕಮಿತ್ಯುಪದೇಶಃ । ಪುನರ್ದಹನಪಕ್ಷ ಇತಿನ್ಯಾಯಃ । ಅಗ್ನಿಹೋತ್ರಹವಣ್ಯಾದಿ ಪಾತ್ರಚಯನಾಂತೇ ನಾನುಪ್ರಹರೇಯುಃ ನ ದಹೇಯುರಿತ್ಯರ್ಥಃ । ಉಪದೇಶಸ್ತು ಸಾದನಮಪಿ ನ ಕುರ್ಯಾದಿತಿ ॥

ಪುನರ್ದಹನವನ್ನು ಮಾಡುವವರು, ಲೋಷ್ಟಚಿತಿಯನ್ನು ಮಾಡದ ಪಕ್ಷದಲ್ಲಿ ಎಂದರೆ, ಪುನರ್ದಹನ ಪಕ್ಷದಲ್ಲಿ ಎಂದರ್ಥ। ಅಗ್ನಿಹೋತ್ರಹವಣಿ ಮುಂತಾದ ೫ ಪಾತ್ರೆಗಳನ್ನು ಚಯನ(ಇಟ್ಟವೇಲೆ) ಮಾಡಿದವೇಲೆ ಸುಡಬಾರದು । ಕೆಲವರು ಸೂತ್ರದಲ್ಲಿ, ಪ್ರಹರಣವನ್ನು ನಿಷೇಧ ಮಾಡಿರುವುದರಿಂದ ಈ ೫ ಪಾತ್ರೆಗಳನ್ನು ಇಡಲೂಬಾರದು(ಚಯನ) ಎಂದು ಹೇಳುತ್ತಾರೆ । ಇದೂ ಸೂಕ್ತವೇ ॥

* ಸೂತ್ರಂ – ೫ / ೧೪೬

ಅತ ಏವ ಅಂಗಾರಾನ್ ದಕ್ಷಿಣಾನಿರ್ವರ್ತ್ಯ ತಿಸ್ರೋರಾತ್ರೀರಿದ್ಧ್ವಾ ದಹನವದವಕಾಶಂ ಜೋಷಯಿತ್ವಾ ಅಗ್ನಿಮುಪಸಮಾಧಾಯು ಸಂಪರಿಸ್ತೀರ್ಯ ಅಪರೇಣಾಗ್ನಿಂ ದಕ್ಷಿಣಾಗ್ರಾನ್ ದರ್ಭಾನ್ ಸಂಸ್ತೀರ್ಯ ತೇಷು ಕೃಷ್ಣಾಜಿನೇ ಶಮ್ಯಾಯಾಂ ದೃಷದುಪಲಾಭ್ಯಾಂ ಅವಾಂಜನಂ ಶರೀರಾಣಿ ಸುಸಂಪಿಷ್ಟಾನಿ ಪೇಶಯಿತ್ವಾ ಆಜ್ಯಕುಂಭೇ ಸಮುದಾಯುತ್ಯಾಗ್ನಿಹೋತ್ರ ಹವಣ್ಯಾಜುಹೋತಿ ಅಸ್ಮಾತ್ತ್ವಮಧಿ ಜಾತೋಽಸಿ ಇತಿ ॥

ಈ ಸುಟ್ಟಜಾಗದಿಂದಲೇ, ಕೆಂಡಗಳನ್ನು ದಕ್ಷಿಣಕ್ಕೆ ಬೇರ್ಪಡಿಸಿ, ೩ ರಾತ್ರಿಗಳವರೆಗೆ ಅದನ್ನು ಚೆನ್ನಾಗಿ ಉರಿಸಿ, ಹಿಂದೆಸುಟ್ಟಂತೆ ಅವಕಾಶ(ಜಾಗ) ಮಾಡಿಕೊಂಡು, ಅಗ್ನಿಯನ್ನು ಚೆನ್ನಾಗಿ ಬೆಳೆಸಿ, ಅದಕ್ಕೆ ದರ್ಭೆಗಳಿಂದ ಪರಿಸ್ತರಣಹಾಕಿ, ಅಗ್ನಿಯ ಪಶ್ಚಿಮದಲ್ಲಿ ದರ್ಭೆಗಳನ್ನು ಹರಡಿ, ಆ ದರ್ಭೆಗಳಮೇಲೆ ಕೃಷ್ಣಾಜಿನದಲ್ಲಿ ಶಮ್ಯೆಯನ್ನು ಇಟ್ಟುಕೊಂಡು, ಆ ಕಲ್ಲು, ಸಣ್ಣಕಲ್ಲುಗಳಿಂದ ಸ್ವಲ್ಪತುಪ್ಪವನ್ನು ಸೇರಿಸಿ, ಆ ದೇಹದ ಅಂಗಾಂಗಗಳನ್ನು ಮತ್ತು ಬೂದಿಯನ್ನು ಹಿಟ್ಟಿನಂತೆ ಚೆನ್ನಾಗಿ ಅರೆದು, ತುಪ್ಪದಗಡಿಗೆಯಲ್ಲಿ ಸೇರಿಸಿ, ಅಗ್ನಿಹೋತ್ರಹವಣಿಯಿಂದ(ಸೌಟು) ಅದನ್ನು ಅಗ್ನಿಯಲ್ಲಿ ಅಸ್ಮಾತ್ತ್ವಮಧಿಜಾತೋಽಸಿ..... ಮಂತ್ರದಿಂದ ಹೋಮಿಸಬೇಕು ॥

* ಗೋಪಾಲಭಾಷ್ಯಂ –

ಅತ ಏವ ಶವಾಗ್ನೇರೇವ ಮಹಾಂತಮಂಗಾರಂ ದಕ್ಷಿಣತೋ ನಿಷ್ಕೃಶ್ಯ ತತ್ರೈವೈಣಂ ತಿಸ್ರೋರಾತ್ರೀಃ ತ್ರೀನಹೋರಾತ್ರಾನ್ ಅಜಸ್ರಂ ಪ್ರಜ್ವಾಲಯೇತ್ । ನಿರ್ವರ್ತಿತೇಷ್ವಸ್ಮಿನ್ ಶವಾಗ್ನಿರನುಗಮಯಿತವ್ಯಃ । ಏವಮತ್ರ ತ್ರಿರಾತ್ರೇಂಧನ ಪೂರ್ವಕತ್ವ ನಿಯಮಾತ್ ದಶಮೇಹನಿ ಶಾಂತಿಕರ್ಮ ನಿಯಮಾಚ್ಚ ಅಷ್ಟಮೇಹನಿ ಸಂಚಯನ ಸಂಭವೋವ್ಯದಸ್ತೋ ಭವತಿ । ತಸ್ಮಾತ್ ಪುನರ್ದಹನವಿಷಯೇ ದ್ವಿತೀಯ ಚತುರ್ಥ ಷಷ್ಠಾನಾಮೇವ ಅನ್ಯತಮಸ್ಮಿನ್ ಅಹನಿ ಸಂಚಯನಂ ಕೃತ್ವಾ ತತ್ರೈವ

ಪುನರ್ದಹನಾರಂಭಃ ಕಾರ್ಯಃ । ಪುನರ್ದಹನಾಭಾವೇತು ಅಷ್ಟಮೇಪ್ಯಹನಿ ಸಂಚಯನಮವಕಲ್ಪತೇ । ದಹನವತ್ ದಹನಸ್ಯೇವ । ತಲ್ಲಕ್ಷಣವಂತಮವಕಾಶಂ ಪರಿಗೃಹ್ಯೇತ್ಯರ್ಥಃ । ಅತ್ರಾಪಿ ಯಾವದರ್ಥಮುದ್ಧನನಾವೋಕ್ಷಣೇ ದ್ರಷ್ಟವ್ಯೇ । ತತ್ರ ನಿರ್ವರ್ತಿತಮಗ್ನಿಂ ಪ್ರತಿಷ್ಠಾಪ್ಯ ಉಪಸಮಿಧ್ಯ, ಪರಿಸ್ತೀರ್ಯ ದರ್ಭಸಂಸ್ತರಣಾದಿ ಕುರ್ಯಾತ್ । ದಕ್ಷಿಣಾಗ್ರಾ ದರ್ಭಾಃ । ತೇಷು ಕೃಷ್ಣಾಜಿನಂ ದಕ್ಷಿಣಾಗ್ರೀವಂ ಅಧರಲೋಮ ಆಸ್ತೀರ್ಯ ತಸ್ಮಿನ್ ಪ್ರಾಚೀನ ಕುಂಭಾಂ ಶಮ್ಯಾಂ ನಿಧಾಯ ತಸ್ಯಾಂ ದೃಷದಂ ಅತ್ಯಾಧಾಯ ತಸ್ಯಾಮುಪಲಾಂ ಅತ್ಯಾದಧಾತಿ । ಅಥ ಆಜ್ಯಾಕ್ತಾನಿ ಅಸ್ಥೀನಿ ಪಿನಷ್ಟಿ । ಅವಾಂಜನಂ ಅವಾಜ್ಯಾವಾಜ್ಯ ಪೇಷಣಾನುಗುಣಂ ಆಜ್ಯೇನ ಪುನಃ ಪುನರಕ್ತ್ವೇತ್ಯರ್ಥಃ । ಏವಂ ಸುಸಂಪಿಷ್ಟಾನಿ ಪಿಷ್ಟ್ವಾ ಆಜ್ಯಕುಂಭೇ ಅವಧಾಯ ಸಮುದಾಯುತ್ಯ ದ್ರವೀಕೃತ್ಯ ತಸ್ಮಾತ್ ಆಜ್ಯಾದಗ್ನಿಹೋತ್ರಹವಣೇಂ ಪೂರಯಿತ್ವಾ ಮಂತ್ರಕ್ರಮ ಪ್ರಾಪ್ತಯಾ ಅಸ್ಮಾತ್ವಮಧಿಜಾತೋಸ್ಯಯಂ ತ್ವದಿತ್ಯೇತಯಾ ಋಚಾಜುಹುಯಾತ್ ॥

ಶವಾಗ್ನಿಯ ದೊಡ್ಡ ಅಂಗಾರಗಳನ್ನು(ಕೆಂಡ) ದಕ್ಷಿಣಕ್ಕೆ ಸರಿಸಿ ಇಟ್ಟುಕೊಂಡು, ಅಲ್ಲೇ ೩ ರಾತ್ರಿ ನಿರಂತರವಾಗಿ ಉರಿಸಬೇಕು । ಈ ಅಂಗಾರಗಳನ್ನು ದಕ್ಷಿಣಕ್ಕೆ ಸರಿಸಿದಮೇಲೆ ಉಳಿದ ಶವಾಗ್ನಿಯನ್ನು ಆರಿಸಬೇಕು । ಈ ರೀತಿ ೩ ದಿವಸ ಉರಿಸಬೇಕೆಂಬ ನಿಯಮವಿರುವುದರಿಂದ ಹಾಗೂ ೧೦ ನೇ ದಿವಸ ಶಾಂತಿಹೋಮವನ್ನು ಮಾಡಬೇಕೆಂಬ ನಿಯಮವಿರುವುದರಿಂದ, ೮ ನೇ ದಿವಸ ಅಸ್ಥಿಸಂಚಯನವನ್ನು ಮಾಡುವುದನ್ನು ನಿರಾಕರಿಸಿದಂತಾಗುತ್ತದೆ । ಆದ್ದರಿಂದ ಪುನರ್ದಹನ ವಿಷಯದಲ್ಲಿ ೨, ೪ ಅಥವಾ ೬ ನೇ ದಿನವೇ ಅಸ್ಥಿಸಂಚಯನ ಮಾಡಿ, ಅಲ್ಲೇ ಪುನರ್ದಹನದ ಕಾರ್ಯವನ್ನು ಆರಂಭಿಸಬೇಕು । ಪುನರ್ದಹನವು ಇಲ್ಲದಪಕ್ಷದಲ್ಲಿ, ೮ ನೇ ದಿವಸವೂ ಸಂಚಯನ ಮಾಡುವುದು ಹೊಂದುತ್ತದೆ । ಸೂತ್ರದಲ್ಲಿರುವ ದಹನವತ್ ಎಂಬ ಪದಕ್ಕೆ, ದಹನದಂತೆ ಎಂದರ್ಥ । ದಹನಕ್ಕೆ ಯಾವ ರೀತಿಯಾಗಿ ಜಾಗವನ್ನು ಸಮತಟ್ಟಾಗಿ, ಮಾಡಿ, ಅಲ್ಲಿ ಪ್ರೋಕ್ಷಿಸಿ ಮುಂತಾದ ಸಂಸ್ಕಾರಗಳನ್ನು ಮಾಡಬೇಕೆಂದು ಹೇಳಿದೆಯೋ ಹಾಗೆಯೇ

ಈ ಕರ್ಮದಲ್ಲೂ ಮಾಡಬೇಕೆಂದು ಅರ್ಥ । ಇಲ್ಲೂಕೂಡ ಉದ್ಧನನ, ಅವೋಕ್ಷಣ ಇವುಗಳನ್ನೂ ಮಾಡಬೇಕೆಂದು ತಿಳಿಯಬೇಕು । ಸರಿಸಿಕೊಂಡ ಅಗ್ನಿಯನ್ನು ಪ್ರತಿಷ್ಠಾಪನೆ ಮಾಡಿ, ಉರಿಸಿ, ದರ್ಭೆಗಳಿಂದ ದಕ್ಷಿಣಾಗ್ರವಾಗಿ ಪರಿಸ್ತರಣ ಹಾಕಿ, ಅದರ ಮೇಲೆ ಕೃಷ್ಣಾಜಿನವನ್ನು ಅದರ ತಲೆಯಭಾಗ ದಕ್ಷಿಣಕ್ಕೆ ಬರುವಂತೆಯೂ ಹಾಗೂ ಆ ಕೃಷ್ಣಾಜಿನದ ಕೂದಲುಗಳು ಕೆಳಗೆಬರುವಂತೆಯೂ ಹಾಕಿ । ಅದರ ಮೇಲೆ ಶಮ್ಯೆಯ ದಪ್ಪಗಿರುವ ಜಾಗವು ಪೂರ್ವಕ್ಕೆ ಬರುವಂತೆ ಇಟ್ಟು, ಅದರಮೇಲೆ ದೃಷತ್ ನ್ನು ಇಟ್ಟು, ಅದರಮೇಲೆ ಉಪಲ ವನ್ನು ಇಡಬೇಕು । ಅನಂತರ ತುಪ್ಪದಿಂದ ಅದ್ದಿದ ಅಸ್ಥಿಗಳನ್ನು ಪುಡಿಪುಡಿ(ಹಿಟ್ಟಿನಂತೆ) ಮಾಡಬೇಕು । ಪುಡಿ ಮಾಡುವ ಸಮಯದಲ್ಲೂ ಅದು ಪುಡಿಯಾಗುವುದಕ್ಕೆ, ಆಗಾಗ ತುಪ್ಪವನ್ನೇ ಹಾಕಿಕೊಳ್ಳುತ್ತಾ ಪುಡಿ ಮಾಡಬೇಕು । ಹೀಗೆ ಹಿಟ್ಟು ಮಾಡಿದಂತಹ ಅಸ್ಥಿಗಳನ್ನು ತುಪ್ಪದ ಪಾತ್ರೆಯಲ್ಲಿ ಹಾಕಿ, ಅದನ್ನು ಚೆನ್ನಾಗಿ ಬೆರೆಸಿ, ಆ ಅಸ್ಥಿಬೆರೆಕೆಯಾದ ತುಪ್ಪದಿಂದ ಅಗ್ನಿಹೋತ್ರಹವಣಿಗೆ ತುಪ್ಪವನ್ನು ಹಾಕಿಕೊಂಡು, ಕ್ರಮಪ್ರಾಪ್ತವಾದ ಅಸ್ಮಾಕಂ ಅಧಿ ಜಾತೋಸಿ...., ಎಂಬ ಋಕ್ ನಿಂದ ಹೋಮಿಸಬೇಕು ॥

* ಕಪರ್ದಿಭಾಷ್ಯಂ –

ಅತ ಏವ ಶ್ಮಶಾನಾದೇವ ಅಂಗಾರಾನ್ ದಕ್ಷಿಣತೋಪನೀಯ ದಹನವತ್ ಅವಕಾಶಂ ಜೋಷಯಿತ್ವಾ ತಸ್ಮಿನ್ನೇವ ಅಗ್ನಿಧಾರ್ಯಂರ್ಯಃ । ತ್ರಿರಾತ್ರೇಪೂರ್ಣೇ ಚತುರ್ಥ್ಯಮಪರಾಹ್ಣೇ ಅಗ್ನೇರುಪಸಮಾಧಾನಾದಿ ಪ್ರತಿಪದ್ಯತೇ । ದರ್ಭೇಷು ಕೃಷ್ಣಾಜಿನಮಾಸ್ತೀರ್ಯ ತಸ್ಮಿನ್ ಶಮ್ಯಾಂ ದಕ್ಷಿಣಕುಂಭಾಂ ನಿಧಾಯ । ದರ್ಶಪೂರ್ಣಮಾಸವದ್ವಿಧಾನಂ । ಅವಾಂಜನಮಿತಿ ಘೃತಮಾಸಿಚ್ಯಾಸಿಚ್ಯಪಿನಷ್ಟಿ । ನಮುಲರ್ಥೋ ದ್ರಷ್ಟವ್ಯಃ । ಅಥವಾ ಪ್ರಮಾದಪಾಠೋವಾಂಜನಮಿತಿ । ಆಜ್ಯಕುಂಭೇ ಸಮುದಾಯುತ್ಯ ಸಹಮಿಶ್ರಯಿತ್ವಾ ಅಗ್ನಿಹೋತ್ರಹವಣ್ಯಾಜುಹೋತಿ ಸಕೃದೇವ ಸರ್ವಂ ಅಸ್ಮಾತ್ತ್ವಮಧಿ ಜಾತೋಸ್ಯಂಯುಮಿತಿ ಸ್ವಾಹಾಕಾರಾಂತೇ । ಏವಮಂತಂ ಧಾರಯೇಯುರಿತ್ಯರ್ಥಃ ॥

ಸ್ಮಶಾನದಲ್ಲಿ ಅಂಗಾರಗಳನ್ನು ದಕ್ಷಿಣಕ್ಕೆ ಇಡಬೇಕು । ಹೀಗೆ ಇಡುವ ಜಾಗವನ್ನು ದಹನದ ಜಾಗವನ್ನು ಸಂಸ್ಕರಿಸಿದಂತೆಯೇ ಸಂಸ್ಕರಿಸಿ ನಂತರ ಇಡಬೇಕು । ಅಲ್ಲಿಯೇ ಅಗ್ನಿಯನ್ನು ಧಾರಣೆ ಮಾಡಬೇಕು । ಹೀಗೆ ೩ ದಿವಸ ಅಗ್ನಿಧಾರಣೆ ಮಾಡಿದಮೇಲೆ ೪ ನೇ ದಿವಸದ ಅಪರಾಹ್ನದಲ್ಲಿ ಅಗ್ನಿಮುಖ ಪ್ರಯೋಗವನ್ನು ಮಾಡಬೇಕು । ದಕ್ಷಿಣಾಗ್ರ ದರ್ಭೆಗಳ ಮೇಲೆ ಕೃಷ್ಣಾಜಿನವನ್ನು ಇಟ್ಟು, ಅದರಮೇಲೆ ಶಮ್ಯೆಯನ್ನು ದಕ್ಷಿಣಕ್ಕೆ ಕುಂಭ ಬರುವಂತೆ ಇಟ್ಟು । ದರ್ಶಪೂರ್ಣಮಾಸದಂತೆ ಅದರಮೇಲೆ ದೃಷತ್, ಉಪಲೆಗಳನ್ನು ಇಟ್ಟು, ಅಸ್ಥಿಗಳನ್ನು ಪುಡಿಮಾಡಿ ಹಿಟ್ಟಿನಂತೆ ಮಾಡಬೇಕು । ಈ ಸಮಯದಲ್ಲಿ ಅಸ್ಥಿಗಳನ್ನು ತುಪ್ಪದಲ್ಲಿ ನೆನೆಸಿ ಹಿಟ್ಟು ಮಾಡಬೇಕು । ಅವಾಂಜನಂ ಎಂಬುದು, 'ಣಮುಲ್' ಅರ್ಥವಿರುವಂತಹ ಪದ ಎಂದು ತಿಳಿಯಬೇಕು ಅಥವ ಪ್ರಮಾದ ಪಾಠವೂ ಆಗಿರಬಹುದು । ಆಜ್ಯಕುಂಭದಲ್ಲಿ ಅಸ್ಥಿಯ ಪುಡಿಗಳನ್ನು ಚೆನ್ನಾಗಿ ಬೆರೆಸಿ, ಅಗ್ನಿಹೋತ್ರಹವಣಿಯಲ್ಲಿ ಒಂದೇಸಲ ಆ ಎಲ್ಲಾ ಅಸ್ಥಿಮಿಶ್ರಿತ ಆಜ್ಯವನ್ನು ಹಾಕಿಕೊಂಡು । ಅಸ್ಮಾತ್ವಮಧಿ ಜಾತೋಸಿ....., ಮಂತ್ರದಿಂದ ಸ್ವಾಹಾಕಾರಾಂತದಲ್ಲಿ ಹೋಮಿಸಬೇಕು । ಇಲ್ಲಿಯವರೆಗೂ ಅಗ್ನಿಯನ್ನು ಧಾರಣೆ ಮಾಡಬೇಕೆಂದು ಅರ್ಥ ॥

* ಸೂತ್ರಂ – ೬ / ೧೪೭

ಏತಯ್ಯೈವಾಂತಂ ॥

ಹವಿಸ್ಸು(ಅಸ್ಥಿಮಿಶ್ರಿತವಾದ ತುಪ್ಪ) ಮುಗಿಯುವವರೆಗೂ, ಈ ಒಂದೇ ಮಂತ್ರದಿಂದ ಹೋಮಿಸಬೇಕು ॥

* ಗೋಪಾಲಭಾಷ್ಯಂ –

ನ ಕೇವಲಮೇತಾವದೇವಕ್ರಿಯತೇ । ಕಿಂ ತು ಆಂತಂ ಯಾವದ್ಭಿಃ ಪರ್ಯಾಯೈಃ ಅಸ್ಥಿಪೇಶ ಸಂಯುಕ್ತಂ ಆಜ್ಯಂ ನಿರವಶೇಷಂ ಹುತಂ ಭವೇತ್ ತಾವತ್ ಕೃತ್ವಃ ಪುನಃಪುನಃ ಪೂರಯಿತ್ವಾ ಏತಯ್ಯೈವ ಋಚಾ ಪುನಃಪುನರಭ್ಯಸ್ಯಮಾನಯಾ ಜುಹುಯಾತ್ ॥

ಕೇವಲ ಇಷ್ಟನ್ನೇ ಮಾಡುವುದಿಲ್ಲ, ಮತ್ತೇನೆಂದರೆ ಎಲ್ಲಿಯವರೆಗೆ ಅಸ್ಥಿಯ ಹಿಟ್ಟು ಬೆರಕೆಯಾದ ಆಜ್ಯವು ಸಮಾಪ್ತಗೊಳ್ಳುವುದಿಲ್ಲವೋ, ಅಲ್ಲಿಯವರೆಗೂ ಮತ್ತೆಮತ್ತೆ ಅಗ್ನಿಹೋತ್ರಹವಣಿಯಲ್ಲಿ ತುಂಬಿಕೊಂಡು, ಈ ಒಂದುಮಂತ್ರವನ್ನೇ ಮತ್ತೆಮತ್ತೆ ಹೇಳಿಕೊಂಡು ಹೋಮ ಮಾಡಬೇಕು ॥

* ಸೂತ್ರಂ – ೭ / ೧೪೮

ಅತ್ರೈವಾಗ್ನಿಹೋತ್ರಹವಣೀಂ ಕೃಷ್ಣಾಜಿನಂ ಶಮ್ಯಾಂ ದೃಷದುಪಲೇ ಚ ಅನುಪ್ರಹರೇಯುಃ ॥

ಆ ಅಗ್ನಿಯಲ್ಲೇ ಅಗ್ನಿಹೋತ್ರಹವಣೇ, ಕೃಷ್ಣಾಜಿನ, ಶಮ್ಯೇ, ಕಲ್ಲು, ಸಣ್ಣಕಲ್ಲು ಇವುಗಳನ್ನು ಹಾಕಿ ಸುಡಬೇಕು(ಅನುಪ್ರಹರಣ) ॥

* ಗೋಪಾಲಭಾಷ್ಯಂ –

ಅತ್ರೈವ ಪುನರ್ದಹನಾಗ್ನಾವೇವ ॥

ಈ ಪುನರ್ದಹನಾಗ್ನಿಯಲ್ಲಿಯೇ ಅಗ್ನಿಹೋತ್ರಹವಣಿ ಮುಂತಾದ ೫ ಪಾತ್ರೆಗಳನ್ನು ಅನುಪ್ರಹರಣ(ಸುಡುವುದು) ಮಾಡಬೇಕು ॥

* ಕಪರ್ದಿಭಾಷ್ಯಂ –

ಅತ್ರೈವ ಅಗ್ನಿಹೋತ್ರಹವಣ್ಯಾದಿ ಪ್ರಹರೇಯುಃ ದಹೇಯುರಿತ್ಯರ್ಥಃ। ಇಷ್ಟಕಾಚಯನಂ ಕುರ್ವನ್ನಧಾರಯತಿ ॥

ಈ ಪುನರ್ದಹನದಲ್ಲಿಯೇ ಅಗ್ನಿಹೋತ್ರಹವಣಿ ಮುಂತಾದ ೫ ಪಾತ್ರೆಗಳನ್ನು ದಹನ ಮಾಡಬೇಕು । ಇಷ್ಟಿಕೆಯನ್ನು ಚಯನ ಮಾಡಬೇಕಾದರೆ, ಇವುಗಳನ್ನು ಇಟ್ಟುಕೊಳ್ಳುವುದಿಲ್ಲ ॥

* ಸೂತ್ರಂ – ೮ / ೧೪೯

ನ ಚಾತ ಊರ್ಧ್ವಂ ಸ್ಮಶಾನಂ ಕರ್ತುಮಾದ್ರಿಯೇತ ॥

ಇಲ್ಲಿಂದ ಮುಂದೆ, ಸ್ಮಶಾನದಲ್ಲಿ ಮಾಡುವುದನ್ನು ಆದರಿಸಬಾರದು ॥

* ಗೋಪಾಲಭಾಷ್ಯಂ –

ಅತಃ ಪುನರ್ದಹನಾದೂರ್ಧ್ವಂ ಶ್ಮಶಾನಂ ಕರ್ತುಂ ನಾದ್ರಿಯೇತ । ಪುನರ್ದಹನಾತ್ಪರಂ ಲೋಷ್ಟಚಿತಿರ್ನಕರ್ತವ್ಯಾ । ಯದ್ಯಪಿ ಸಾ ಕಾಮನಿಮಿತ್ತರಹಿತ ವಕ್ಷ್ಯತೇ । ತಥಾಪ್ಯತ ಊರ್ಧ್ವಂ ನ ಕಾರ್ಯೀತ್ಯರ್ಥಃ । ನಚೈವಂ ಸತಿ ಲೋಷ್ಟಚಿತೇರ್ವಿಷಯಾಭಾವಃ । ಪುನರ್ದಹನಸ್ಯಾಕ್ರಿಯಾಪಕ್ಷೇ ಪ್ರವೃತ್ಯುಪಪತ್ತಿಃ । ದರ್ಶಿತಂ ಚ ಪುನರ್ದಹನಸ್ಯ ಪಾಕ್ಷಿಕತ್ವಂ ಅಥ ಯದಿ ಪುನರ್ಧಕ್ಷ್ಯಂತ ಇತಿ ಉಪಬಂಧೇನ । ನ ಚ ಪುನರ್ದಹನಾತ್ಪರಂ ಲೋಷ್ಟಚಿತೇರಸಂಭವ ಇತಿ ಪ್ರತಿಶೇಧಾನರ್ಥಕ್ಯಂ । ಅಸ್ಥಿಸ್ಥಾನೇ ತದ್ಭಸ್ಮ ಉಪಯೋಗೇನ ಅಸ್ಥಿನಿವಪನಮಾತ್ರ ಲೋಪೇನ ವಾ । ತಸ್ಯಾಃ ಶಕ್ಯತ್ವಾದಿತ್ಯುಕ್ತಂ ॥

ಆದ್ದರಿಂದ ಪುನರ್ದಹನವಾದಮೇಲೆ ಸ್ಮಶಾನಕರ್ಮಗಳನ್ನು ಮಾಡಬಾರದು । ಪುನರ್ದಹನವಾದ ಮೇಲೆ ಲೋಷ್ಟಚಿತಿಯನ್ನು ಮಾಡಬಾರದು । ಆ ಲೋಷ್ಟಚಿತಿಯನ್ನು ಕಾಮನಿಮಿತ್ತವಿಲ್ಲದೇ ನಿತ್ಯವಾಗಿ ಹೇಳಿದ್ದರೂ ಕೂಡ, ಪುನರ್ದಹನವಾದ ಮೇಲೆ ಮಾಡಬಾರದು । ಇದರಿಂದ ಲೋಷ್ಟಚಿತಿಯನ್ನು ಮಾಡಲು ಅವಕಾಶವೇ ಇಲ್ಲ ಎಂದೇನಾಗುವುದಿಲ್ಲ । ಪುನರ್ದಹನವನ್ನು ಮಾಡದೇ ಇರುವ ಪಕ್ಷದಲ್ಲಿ ಲೋಷ್ಟಚಿತಿಯನ್ನು ಮಾಡಬಹುದು । ಇದನ್ನೇ ಸೂತ್ರಕಾರರು ತೋರಿಸಿದ್ದಾರೆ । ಹೇಗೆಂದರೆ – ಪುನರ್ದಹನವನ್ನು ಪಾಕ್ಷಿಕವಾಗಿ ಹೇಳುವುದಕ್ಕೋಸ್ಕರ ಯದಿ ಪುನರ್ಧಕ್ಷ್ಯಂತೇ ಎಂದು ಸೇರಿಸಿರುವುದು । ಪುನರ್ದಹನವಾದ ನಂತರ ಲೋಷ್ಟಚಿತಿಯನ್ನು ಮಾಡುವುದು ಅಸಾಧ್ಯ ಎಂಬ ಕಾರಣಕ್ಕೆ ಲೋಷ್ಟಚಿತಿಯ ಪ್ರತಿಷೇಧವು ಪ್ರಯೋಜನವಿಲ್ಲದ್ದಾಗುವುದಿಲ್ಲ । ಅಸ್ಥಿಸ್ಥಾನದಲ್ಲಿ ಅದರಭಸ್ಮವನ್ನು

ಉಪಯೋಗಮಾಡುವುದಕ್ಕೆ ಸಾಧ್ಯವಿರುವುದರಿಂದ ಹಾಗೂ ಅಸ್ಥಿಯ ಹೂಳುವಿಕೆ ಮಾತ್ರ ಪುನರ್ದಹನ ಮಾಡಿದ್ದರಿಂದ ಲೋಪವಾಗುತ್ತದೆಯಾದ್ದರಿಂದ, ಲೋಷ್ಟಚಿತಿಯನ್ನು ಪುನರ್ದಹನವಾದಮೇಲೂ ಮಾಡಲು ಸಾಧ್ಯವಿದೆ। ಆದ್ದರಿಂದ ಪ್ರತಿಷೇಧ ಮಾಡಿದೆ ॥

* ಕಪರ್ದಿಭಾಷ್ಯಂ –

ನ ಚಾತ ಊರ್ಧ್ವಮಿತಿ। ಏವಂ ಕ್ರಿಯಮಾಣೇ ಲೋಷ್ಟಚಿತಿರಗ್ನಿಚಿತೋಪಿ ಪ್ರತಿಶಿಧ್ಯತೇ। ಶ್ಮಶಾನಂ ಶ್ಮಶಾನಕ್ರಿಯಾಂ ಕರ್ತುಂ ನಾದ್ರಿಯೇತ। ಏವಂ ಪುನರ್ದಹನಾದೂರ್ಧ್ವಂ ಲೋಷ್ಟಚಿತಿಂ ಪ್ರತಿಶಿಧ್ಯ ತತ ಏವ ತಾವತ್ ಕರ್ತವ್ಯಮಿತ್ಯಾಹ ॥

ಪುನರ್ದಹನವಾದಮೇಲೆ ಅಗ್ನಿಚಯನವನ್ನು ಮಾಡಿದವನಿಗೂ ಲೋಷ್ಟಚಿತಿಯನ್ನು ಮಾಡಬಾರದು। ಏಕೆಂದರೆ ಪುನರ್ದಹನವಾದಮೇಲೆ ಸ್ಮಶಾನಕ್ರಿಯೆಯನ್ನು ಮಾಡಲು ನಿಷೇಧವಿರುವುದರಿಂದ। ಈ ರೀತಿಯಾಗಿ ಪುನರ್ದಹನವಾದಮೇಲೆ ಲೋಷ್ಟಚಿತಿಯ ಪ್ರತಿಷೇಧವಿರುವುದರಿಂದ, ನಂತರ ಮಾಡುವ ಕರ್ಮವನ್ನು ಇಲ್ಲಿ ಹೇಳಿದೆ ॥

* ಸೂತ್ರಂ – ೯ / ೧೫೦

ಆಕೃತೀರ್ವಾಸ್ಯದಹನೇ ನಿವಪೇಚ್ಛರ್ಕರಾಭಿರ್ವಾ ಪರಿಚಿನುಯಾತ್ ॥

ಮೃತನನ್ನು ಸುಟ್ಟಜಾಗದಲ್ಲಿ, ಸಕ್ಕರೆ ಅಥವ ಕಪ್ಪುಮಣ್ಣನ್ನು ಹಾಕಬೇಕು ॥

* ಗೋಪಾಲಭಾಷ್ಯಂ –

ಅಸ್ಯ ಪುನರ್ದಹನಸ್ಯ ಸಂಬಂಧಿನಿ ದಹನೇ ಕೃತೀಃ ಕೃಷ್ಣಮೃತ್ತಿಕಾವಾ ನಿವಪೇತ್। ಶರ್ಕರಾಭಿರ್ವಾ ಪರಿಮಂಡಲಮತ್ರಚಿನುಯಾತ್ । ಉಭಯೋರನ್ಯತರತ್ ಕರ್ತವ್ಯಮಿತ್ಯರ್ಥಃ। ಯಾವತಾ ಅಗ್ನ್ಯಾಯತನಂ ಸಂಪ್ರಚ್ಛಾದ್ಯತೇ ತಾವತ್ ಕಾರ್ಯಂ। ತತ್ರ ಶರ್ಕರಾಚಯನ ಪಕ್ಷೇ ಮಧ್ಯತ ಆರಭ್ಯ ಪ್ರಸವ್ಯಂ ಪರಿಚಯನಂ ವೇದಿತವ್ಯಂ। ನಾತ್ರಕರ್ಷಾದ್ಯಧಿಕರ್ಮ ಅನುಪದೇಶಾತ್ ಮಂತ್ರಸಮಾಮ್ನಾಯೇಚಾಸ್ಮಿನ್ ಸ್ಥಾನೇ ತನ್ಮಂತ್ರಾಣಾಮನಾಮ್ನಾನಾತ್ ॥

ಈ ಪುನರ್ದಹನ ಸಂಬಂಧದಲ್ಲಿ, ಪುನರ್ದಹನವಾದಮೇಲೆ ಮೃತನನ್ನು ದಹಿಸಿದ ಜಾಗದಲ್ಲಿಕಪ್ಪುಮಣ್ಣನ್ನು ಹಾಕಬೇಕು। ಅಥವಾ ಸಕ್ಕರೆಯನ್ನು ಹಾಕಬೇಕು। ಇವೆರಡರಲ್ಲಿ ಒಂದನ್ನು ಹಾಕಬೇಕು। ಅಗ್ನಿಯು ಎಷ್ಟುಜಾಗದಲ್ಲಿ ಮೃತದೇಹವನ್ನು ಸುಟ್ಟಿದೆಯೋ, ಅಷ್ಟೂಜಾಗದಲ್ಲಿ ಇದನ್ನು ಹಾಕಬೇಕು। ಸಕ್ಕರೆಯನ್ನು ಹಾಕುವ ಪಕ್ಷದಲ್ಲಿ, ಮಧ್ಯದಿಂದ ಆರಂಭಿಸಿ ಅಪ್ರದಕ್ಷಿಣೆಯಾಗಿ ಹಾಕಬೇಕು। ಇಲ್ಲಿ ಕರ್ಷೂ ಮುಂತಾದ ಕರ್ಮಗಳು ವಿಧಿಸದೇ ಇರುವುದರಿಂದ ಮಾಡಬೇಕಿಲ್ಲ। ಏಕೆಂದರೆ ಕರ್ಷೂ ಮಂತ್ರವನ್ನು ಹೇಳುವ ಜಾಗದಲ್ಲಿ, ಮಣ್ಣನ್ನು ಹಾಕುವುದಕ್ಕೆ ಕರ್ಷ್ವಾದಿಗಳನ್ನು ಮಾಡಬೇಕೆಂದು ಹೇಳದೇ ಇರುವುದರಿಂದ ॥

* ಕಪರ್ದಿಭಾಷ್ಯಂ –

ಕೃತಿನಿವಪನಂ ವಿಕಲ್ಪೇನ। ಕೃತಿಃ ಕೃಷ್ಣಮೃತ್ತಿಕಾ। ತಾಃ ನಿವಪೇತ್ ದಹನದೇಶೇ। ಶರ್ಕರಾಭಿರ್ವಾ ಸ್ಥಂಡಿಲಂ ಕುರ್ಯಾತ್ ॥

ಮಣ್ಣನ್ನು ಹಾಕುವುದನ್ನು ವಿಕಲ್ಪವಾಗಿ ಹೇಳಿದೆ। ಕೃತಿ ಎಂದರೆ, ಕಪ್ಪುಮಣ್ಣು। ಅದನ್ನು ಮೃತನ ದಹನದೇಶದಲ್ಲಿ ಹಾಕಬೇಕು। ಅಥವ ಸಕ್ಕರೆಯನ್ನು ದಹನದ ಜಾಗದಲ್ಲಿ ಹಾಕಬೇಕು ॥

* ಸೂತ್ರಂ – ೧೦ / ೧೫೧

ಅಥ ಪಟಲಶೇಷೇಣ ಪುನರ್ದಹನ ಪ್ರಶಂಸೋಚ್ಯತೇ –

ತಮಭ್ಯೇವಾದಿತ್ಯಸ್ತಪತಿ ತಮಭಿವಾತೋವಾತಿ ತಮಾಪಃ ಸ್ಪೃಶಂತೇ ॥

ಈಗ ಪಟಲದ ಉಳಿದ ವಿಷಯಗಳಿಂದ ಪುನರ್ದಹನದ ಪ್ರಶಂಸೆಯನ್ನು ಸೂತ್ರಗಳು ಮಾಡುತ್ತವೆ। ಈ ಮೃತನನ್ನು ಸೂರ್ಯನು ಬೆಳಗುತ್ತಾನೆ, ಇವನನ್ನು ಕುರಿತು ಗಾಳಿ ಬೀಸುತ್ತದೆ, ಮಳೆಯ ಮೂಲಕ ಅಬ್ದೇವತೆಗಳು ಇವನನ್ನು ಸ್ಪರ್ಶಿಸುತ್ತಾರೆ ॥

* ಗೋಪಾಲಭಾಷ್ಯಂ –

ಏವಂ ಶ್ರುತಿರನುಕ್ರಾಂತಾ ಅಥೈತಾಂ ಶ್ರುತಿಂ ವ್ಯಾಚಷ್ಟೇ ॥

ಈ ರೀತಿಯಾಗಿ ಶ್ರುತಿಯು ಆರಂಭಿಸಿ, ಈ ಮುಂದಿನ ಶ್ರುತಿಯನ್ನು ಹೊಗಳಿಕೆಗಾಗಿ ಉದಾಹರಣೆಯಾಗಿ ಹೇಳುತ್ತದೆ ॥

* ಕಪರ್ದಿಭಾಷ್ಯಂ –

ತಮಭ್ಯೇವಾದಿತ್ಯಸ್ತಪತಿ । ಏವಂ ಕೃತೇ ಪೈತೃಮೇಧಿಕೇ ಚಯನೇ ॥

ಈ ರೀತಿಯಾಗಿ ಪೈತೃಮೇಧಿಕದಲ್ಲಿ ಚಯನವನ್ನು ಮಾಡಿದರೆ, ಮೃತನನ್ನು ಕುರಿತು ಸೂರ್ಯನು ಬೆಳಗುತ್ತಾನೆ ॥

* ಸೂತ್ರಂ – ೧೧ / ೧೫೨

ಸ ನೈವಾದಿತ್ಯಸ್ಯ ಸಕಾಶಾಚ್ಛಿದ್ಯತೇ ನ ವಾಯೋರ್ನಾಪಾಂ ಸಂಸರ್ಜನಾತ್ ॥

ಹೀಗಾದಾಗ, ಅವನು (ಮೃತನು) ಸೂರ್ಯನ ಬಳಿಯಿಂದ ಎಂದೂ ಬೇರೆಯಾಗುವುದೇ ಇಲ್ಲ, ವಾಯುವಿನಿಂದಲೂ, ವರುಣನಿಂದಲೂ ಸಹಾ ಬೇರೆಯಾಗುವುದೇ ಇಲ್ಲ ॥

* ಗೋಪಾಲಭಾಷ್ಯಂ –

ಸ ಇತಿ ಪುನರ್ದಹನ ಸಂಸ್ಕೃತ ಶರೀರೋಯಜಮಾನಃ ಆದಿತ್ಯಸ್ಯ ವಾಯೋಶ್ಚ ಸಕಾಶಾತ್ ನ ಪ್ರಚ್ಯವತೇ । ನ ಚ ಅಮೃತಾತ್ಮಿಕಾನಾಮಪಾಂ ಸಂಸರ್ಜನಾತ್ ದೂರೇಭವತೀತಿ ಯಾವತ್ ॥

ಪುನರ್ದಹನದಿಂದ ಸಂಸ್ಕೃತದೇಹವುಳ್ಳ ಆ ಮೃತಯಜಮಾನನು, ಆದಿತ್ಯನಿಂದ, ವಾಯುವಿನಿಂದ ಯಾವಾಗಲೂ ಬೇರ್ಪಡುವುದಿಲ್ಲ । ಅಂದರೆ ಆದಿತ್ಯ ಮತ್ತು ವಾಯುಸ್ವರೂಪನೇ ಆಗುತ್ತಾನೆ ಎಂದು । ಅಮೃತಸ್ವರೂಪವಾದಂತಹ ಅಬ್ದೇವತೆಗಳ ಸಂಬಂಧದಿಂದ ಯಾವಾಗಲೂ ದೂರವಾಗುವುದಿಲ್ಲ ಅವನು ॥

* ಕಪರ್ದಿಭಾಷ್ಯಂ –

ಕೃತಿನಿವಪನಂ ಪ್ರಶಂಸತಿ ಸ ನೈವಾದಿತ್ಯಸ್ಯ ಸಕಾಶಾಚ್ಛಿದ್ಯತ ಇತಿ । ಪೂರ್ವಸೂತ್ರೋಕ್ತಂ ವ್ಯಾಖ್ಯಾನಂ । ಸ ಮೃತಃ ಆದಿತ್ಯಸ್ಯ ಸಕಾಶಾತ್ ಸಮೀಪಾತ್ ನ ಛಿದ್ಯತೇ ನಾಪಕ್ರಾಮತಿ । ದ್ಯುಲೋಕೇ ಮಹೀಯತೇ । ಏವಂ ವಾಯೋಶ್ಚ ನ ಛಿದ್ಯತೇ । ತಥಾದ್ಭ್ಯಃ । ಸರ್ವಾನ್ ಪ್ರಾಪ್ಯ ದ್ಯುಲೋಕೇ ಮಹೀಯತ ಇತಿ ಕೌಶೀತಕೀನಾಂ ಶ್ರುತಿಃ ॥

ಈ ಕಪ್ಪುಮಣ್ಣು ಹಾಕುವುದನ್ನು ಆ ಮೃತನು ಆದಿತ್ಯನ ಬಳಿಯಿಂದ ಯಾವಾಗಲೂ ಬೇರ್ಪಡುವುದಿಲ್ಲ ಎಂದು ಹೊಗಳುತ್ತಿದೆ । ಹಿಂದಿನ ಸೂತ್ರದಲ್ಲಿ ಹೇಳಿರುವುದರ ವ್ಯಾಖ್ಯಾನವು ಇದು । ಆ ಮೃತನು ಆದಿತ್ಯನ ಬಳಿಯಿಂದ ಯಾವಾಗಲೂ ಬೇರ್ಪಡುವುದಿಲ್ಲ, ಸ್ವರ್ಗಲೋಕದಲ್ಲಿ ಬೆಳಗುತ್ತಾನೆ । ಹೀಗೆಯೇ ವಾಯುವಿನ ಬಳಿಯಿಂದಲೂ ಯಾವಾಗಲೂ ಬೇರ್ಪಡುವುದಿಲ್ಲ ಹಾಗೆಯೇ ಅಬ್ದೇವತೆಗಳಿಂದಲೂ ಬೇರ್ಪಡುವುದಿಲ್ಲ । ಆದಿತ್ಯ – ವಾಯು – ಅಬ್ದೇವತೆಗಳ ಸ್ವರೂಪವನ್ನು ಪಡೆದುಕೊಂಡವನಾಗಿ, ಸ್ವರ್ಗಲೋಕದಲ್ಲಿ ಬೆಳಗುತ್ತಾನೆ ಎಂದು ಕೌಶೀತಕೀ ಶ್ರುತಿಯು ಹೇಳುತ್ತದೆ ॥

ಅಥ ಅಸ್ಮಿನ್ ವಿಷಯೇ ಬ್ರಾಹ್ಮಣೋಕ್ತಃ ಪುರಾಕಲ್ಪಃ ಅನುವರ್ಣ್ಯತೇ –

ಈ ವಿಷಯದಲ್ಲಿ ಬ್ರಾಹ್ಮಣೋಕ್ತವಾದಂತಹ ಹಿಂದಿನ ಕಲ್ಪಸೂತ್ರವನ್ನು ಹೀಗೆ ವರ್ಣಿಸುತ್ತದೆ –

* ಸೂತ್ರಂ – ೧೨ / ೧೫೩

ಏವಂ ಹಿ ಕೌಶೀತಕಿರ್ವಿದಾಂಚಕಾರ । ತಂ ಹ್ಯೇವಂ ಚಕ್ರುರೇವಮುಹಾಹ್ಯೈವಂ ಆಶ್ಮರಥ್ಯಂ ಚಕ್ರುಃ ॥

ಈ ರೀತಿಯಾಗಿ ಕೌಶೀತಕೀ ಋಷಿಯು, ವಿಶೇಷ ಜ್ಞಾನದಿಂದ ತಿಳಿದುಕೊಂಡನು । ಅವನಿಗೆ ಈ ರೀತಿಯಾಗಿಯೇ ಶವ್ಯ(ಶವದ) ಕರ್ಮವನ್ನು ಮಾಡಿದರು, ಇದೇ ರೀತಿ ಆಶ್ಮರಥ್ಯನಿಗೂ ಶವ್ಯಕರ್ಮವನ್ನು ಮಾಡಿದರು ॥

* ಗೋಪಾಲಭಾಷ್ಯಂ –

ಏವಂ ಕೌಶೀತಕಿರ್ವಿದಿತ್ವಾ ಸ್ವಶಿಷ್ಯೇಭ್ಯಃ ಪುನರ್ದಹನವಿಧಿಂ ಪ್ರೋವಾಚ । ತೇ ಚ ತಮೇತೇನ ಕಲ್ಪೇನ ಚಕ್ರುಃ ಪುನರ್ದದಹುಃ । ಆಶ್ಮರಥ್ಯಂ ಚೈವಮೇವ ಚಕ್ರುಃ ಸಂಚಸ್ಕರುಃ । ತತಶ್ಚ ಪೂರ್ವೈಃ ಋಷಿಭಿಃ ಅನುಷ್ಠಿತತ್ವಾತ್ ಪ್ರಶಸ್ತಮೇತತ್ ಪುನರ್ದಹನಂ ॥

ಈ ರೀತಿಯಾಗಿ ಕೌಶೀತಕೀ ಮುನಿಯು ತಿಳಿದುಕೊಂಡವನಾಗಿ, ತನ್ನ ಶಿಷ್ಯರಿಗೆ ಪುನರ್ದಹನವಿಧಿಯನ್ನು ಹೇಳಿದನು । ಅವನ ಶಿಷ್ಯರು ಈ ಮುನಿಯನ್ನು ಅವನು ದೇಹತ್ಯಾಗ ಮಾಡಿದಮೇಲೆ, ಅವನು ಹೇಳಿದ ಈ ಪ್ರಕಾರವಾಗಿಯೇ ಪುನರ್ದಹನವನ್ನು ಮಾಡಿದರು । ಹೀಗೆಯೇ ಆಶ್ಮರಥ್ಯ ಎಂಬ ಮುನಿಗಳಿಗೂ ಪುನರ್ದಹನ ಸಂಸ್ಕಾರವನ್ನು ಮಾಡಿದರು । ಹೀಗೆ ಹಿಂದಿನ ಋಷಿಗಳಿಂದ ಈ ಪುನರ್ದಹನ ಕರ್ಮವು ಮಾಡಲ್ಪಟ್ಟಿರುವುದರಿಂದ ಅತ್ಯಂತಶ್ರೇಷ್ಠವಾದ ಕರ್ಮ ಇದು ॥

* ಕಪರ್ದಿಭಾಷ್ಯಂ –

ಏವಂ ಹಿ ಕೌಶೀತಕಿರ್ವಿದಾಂಚಕಾರ । ಏವಮೇವ ಕೌಶೀತಕಿಃ ಋಷಿರ್ವಿಜ್ಞಾಯ ಏತಂ ವಿಧಿಂ ಪುತ್ರಶಿಷ್ಯಾನನುಷಿಷ್ಟವಾನ್ । ತೇಚ ಜ್ಞಾತ್ವಾ ತಮೇವಂ ಚಕ್ರುರಿತಿ ಪ್ರರೋಚನಾರ್ಥಂ । ಯಥಾ ಗಾವೋ ವಾ ಏತತ್ ಸತ್ರಮಾಸತ, ಸಾಧ್ಯಾ ವೈ ದೇವಾ, ಇತಿ ಚ ಪರಕೃತಯಃ, ತಥಾ ಬ್ರಾಹ್ಮಣಮೇವ ಸೂತ್ರಕಾರೇಣೋಕ್ತಂ ॥

ಈ ರೀತಿಯಾಗಿ ಕೌಶೀತಕೀಮುನಿಯು ತಿಳಿದುಕೊಂಡನು । ಹೀಗೆ ತಿಳಿದುಕೊಂಡು ಈ ವಿಧಿಯನ್ನು ತನ್ನ ಪುತ್ರ, ಶಿಷ್ಯಾದಿಗಳಿಗೆ ಉಪದೇಶಿಸಿದನು । ಆ ಶಿಷ್ಯಾದಿಗಳು ಈ ಪುನರ್ದಹನ ಕರ್ಮವನ್ನು ತಿಳಿದುಕೊಂಡು ಆ ಮುನಿಗೆ ಮರಣದ ನಂತರ ಮಾಡಿದರು ಎಂದು ಬೇರೇಯವರನ್ನೂ ಪ್ರೇರೇಪಿಸಲು ಈ ರೀತಿ ಹೇಳುತ್ತಿದೆ । ಹೇಗೆ, ಗಾವೋ ವಾ ಏತತ್ ಸಾಧ್ಯಾ ವೈ ದೇವಾಃ....., ಎಂಬ ಮಂತ್ರಗಳಿಂದ ಬೇರೆಯವರು ಈ ರೀತಿಯಾದಂತಹ ಕರ್ಮ ಮಾಡಿದರು, ಅದರಿಂದ ಅತ್ಯಂತ ಉತ್ತಮಫಲವನ್ನು

ಪಡೆದುಕೊಂಡರು ಎಂದು ಬ್ರಾಹ್ಮಣರೂಪದಿಂದ ಹೇಳುತ್ತಿದೆಯೋ, ಹಾಗೆಯೇ ಸೂತ್ರಕಾರರಿಂದಲೂ ಕೂಡ ಬ್ರಾಹ್ಮಣರೂಪದಿಂದ ಇದು ಹೇಳಲ್ಪಟ್ಟಿದೆ ॥

* ಸೂತ್ರಂ – ೧೩ / ೧೫೪

ತಸ್ಯೋ ಹೈವೈತೇऽಹೀನಾ ಹಾಯನಾ ವ್ಯುಂಚ್ಛಂತೀವ್ಯುಚ್ಛಂತ್ಯಸ್ಮೈ ವಸ್ಯಸೀವಸ್ಯಸೀ ವ್ಯುಚ್ಛತಿ ಪ್ರಜಾಹಾಸ್ಯ ಶ್ರೇಯಸೀಭವತಿ ಯಮೇವಂ ನಿದಧಾತೀತಿ ವಿಜ್ಞಾಯತೇ ॥

ಈ ರೀತಿಯಾಗಿ ಶವ್ಯಕರ್ಮದ ಕೊನೆಯಲ್ಲಿ ಪುನರ್ದಹನವನ್ನು ಮಾಡುತ್ತಾರೋ, ಅಂತಹ ಮೃತನಿಗೂ ಹಾಗೂ ಅವರ ಕುಲದವರಿಗೂ ಈ ಕರ್ಮದಿಂದ ಪ್ರತಿಸಂವತ್ಸರದಲ್ಲೂ ಅಭಿವೃದ್ಧಿಯಾಗುತ್ತಾ, ಯಾವಕೊರತೆಯೂ ಇಲ್ಲದೇ ದಿನದಿನವೂ ಹೆಚ್ಚುಹೆಚ್ಚು ಸಮೃದ್ಧಿಯು ದೊರೆಯುತ್ತದೆ, ಅವರ ಮಕ್ಕಳು ಹೆಚ್ಚಿನಶ್ರೇಯಸ್ಸನ್ನು ಪಡೆಯುತ್ತಾರೆ ॥

* ಗೋಪಾಲಭಾಷ್ಯಂ –

ವ್ಯುಚ್ಛಂತೀವ್ಯುಚ್ಛಂತೀ ಪುನಃಪುನಃ ಪ್ರಭಾತಾಭವಂತಿ । ರಾತ್ರಿರಿತ್ಯಹೋರಾತ್ರ ಲಕ್ಷಣಾ । ಸರ್ವೇ ಅಹೋರಾತ್ರಾ ಇತ್ಯರ್ಥಃ । ವಸ್ಯಸೀ ಶ್ರೇಯಸೀ ಇತ್ಯತ್ರಾಪಿ ಅಹೋರಾತ್ರ ಲಕ್ಷಣಾ । ಶ್ರೇಯಸ್ಕರಾ ಭವಂತಿ । ಪ್ರಜಾಚಾಸ್ಯಶ್ರೇಯಸೀ ಭವತೀತಿ ಪ್ರಶಂಸಾ ॥

ಆ ಮೃತನು ಪ್ರತಿದಿನವೂ ಹೆಚ್ಚುಹೆಚ್ಚು ಬೆಳಗುತ್ತಾನೆ, ಸಮೃದ್ಧಿಹೊಂದುತ್ತಾನೆ । ಇಲ್ಲಿ ರಾತ್ರಿ ಶಬ್ದಕ್ಕೆ ಅಹೋರಾತ್ರಿ ಎಂದರ್ಥ । ಈ ಮೃತನು ಮುಂದುಮುಂದಿನ ಎಲ್ಲಾ ಅಹೋರಾತ್ರಿಗಳಲ್ಲಿಯೂ ಹೆಚ್ಚು ಬೆಳಗುತ್ತಾನೆ ಸಮೃದ್ಧಿಹೊಂದುತ್ತಾನೆ ಹಾಗೆಯೇ ಇವನ ಮಕ್ಕಳೂಕೂಡ । ಮುಂದುಮುಂದಿನ ಪ್ರತಿ ಅಹೋರಾತ್ರಿಯೂ ಇವನಿಗೆ ಶ್ರೇಯಸ್ಕರವಾಗಿರುತ್ತದೆ । ಇವನ ಪ್ರಜೆಗಳು ಶ್ರೇಯಸ್ಸನ್ನು ಹೊಂದುತ್ತಾರೆ ಎಂದು ಹೊಗಳಿದೆ ॥

* ಕಪರ್ದಿಭಾಷ್ಯಂ –

ಯಂ ಮೃತಮೇವಂ ನಿದಧಾತಿ ಯಮೇವಂ ಜ್ಞಾತ್ವಾ ಸಂಸ್ಕುರ್ವಂತೀತಿ ವಿಜ್ಞಾಯತೇ ॥

ಯಾರು ಈ ರೀತಿಯಾಗಿ ತಿಳಿದುಕೊಂಡು, ಪುನರ್ದಹನವಿಧಿಯಿಂದ ಸಂಸ್ಕಾರ ಮಾಡುತ್ತಾರೋ, ಎಂದು ಇದಕ್ಕೆ ಅರ್ಥ ಮಾಡಬೇಕು ॥

****

****

4. ವೈದ್ಯನಾಥೀಯ ಸ್ಮೃತಿಮುಕ್ತಾಫಲಮ್

1. ಪರ್ಯುಷಿತ ಪ್ರಾಯಶ್ಚಿತ್ತಮ್

ಗಾರ್ಗ್ಯಃ –

ಪಂಚವಿಂಶಘಟೀ ಪೂರ್ವಂ ದಿವಾ ಪ್ರೇತೇಽಪ್ಯಸಂಸ್ಕೃತಿಃ । ದಿವಾ ವಾ ಯದಿ ವಾ ರಾತ್ರೌ ಶವಸ್ತಿಷ್ಠತಿ ಕರ್ಹಿಚಿತ್ ॥ ತತ್ಪರ್ಯುಷಿತಮಿತ್ಯಾಹುಃ ದಹನೇ ತಸ್ಯ ಕಾ ಗತಿಃ । ಬ್ರಾಹ್ಮಣೇಭ್ಯೋ ವಿಧಿಂ ಲಬ್ಧ್ವಾ ಕೃಚ್ಛ್ರತ್ರಯಮಥಾಚರೇತ್ । ಪಂಚಗವ್ಯೇನ ಸಂಸ್ನಾಪ್ಯ ಪಾವಮಾನ್ಯಭಿಮಂತ್ರ್ಯತು । ಜಲೇನ ಸ್ನಾಪಯಿತ್ವಾ ಚ ವಿಧಿವದ್ದಹನಂ ಚರೇತ್ । ಅನ್ಯಥಾ ದಹನೇ ತಸ್ಯ ಸರ್ವಂ ತನ್ನಿಷ್ಫಲಂ ಭವೇತ್ ॥ ಇತಿ

ಬೆಳಿಗ್ಗೆ ಅಥವ ರಾತ್ರಿ, ಮರಣವಾಗಿ ೨೫ ಘಳಿಗೆ ಅಂದರೆ ೧೦ ಘಂಟೆ ಕಳೆದಿದ್ದರೆ, ಅವನಿಗೆ ಪ್ರಾಯಶ್ಚಿತ್ತ ಮಾಡದೇ ದಹನಕರ್ಮ ಮಾಡಬಾರದು । ಏಕೆಂದರೆ, ಒಂದು ಹಗಲು ಅಥವ ಒಂದು ರಾತ್ರಿ ಶವವು ಸಂಸ್ಕಾರವಾಗದೇ ಇದ್ದರೇ, ಅದು ಪರ್ಯುಷಿತವಾಗುತ್ತದೆ(ಹಳಸಲು) । ಅದನ್ನು ದಹನ ಮಾಡುವುದು ಹೇಗೆಂದರೆ, ಬ್ರಾಹ್ಮಣರಿಂದ ಪ್ರಾಯಶ್ಚಿತ್ತ ವಿಧಿಯನ್ನು ತಿಳಿದು, ಅವರ ಅನುಮತಿಯನ್ನು ಪಡೆದು, ಕೃಚ್ಛ್ರತ್ರಯವನ್ನು ಮಾಡಬೇಕು । ಪಂಚಗವ್ಯದಿಂದ ಹಾಗೂ ಪವಮಾನ ಮುಂತಾದ ಮಂತ್ರಗಳಿಂದ ಆ ಶವಕ್ಕೆ ಸ್ನಾನ ಮಾಡಿಸಿ, ನಂತರ ವಿಧಿಯಂತೆ ದಹಿಸಬೇಕು । ಒಂದುವೇಳೆ ಪ್ರಾಯಶ್ಚಿತ್ತ ಮಾಡದೇ ದಹನ ಮಾಡಿದರೆ, ಆ ದಹನಕರ್ಮವು ಸಂಪೂರ್ಣ ನಿಷ್ಫಲವಾಗುತ್ತದೆ ॥

ಕಾತ್ಯಾಯನಸ್ತು –

ಪ್ರತ್ಯಕ್ಷ ಶವಸಂಸ್ಕಾರೇ ದಿನಂ ನೈವ ವಿಶೋಧಯೇತ್ । ನಿರ್ದಿಷ್ಟಕಾಲ ವೀಕ್ಷಾಯಾಂ ಶವಃ ಪರ್ಯುಷಿತೋ ಭವೇತ್ ॥ ದಗ್ಧಃ ಪರ್ಯುಷಿತೋ ಯ್ಯೈಸ್ತು ಪುತ್ರ ಮಿತ್ರೈಶ್ಚ ಬಂಧುಭಿಃ । ಮಹಾಭಯ ಪ್ರದಸ್ತೇಷಾಂ ತಿಥ್ಯಾದೀಂಸ್ತನ್ನ ಶೋಧಯೇತ್ ॥

ಪಂಚಗವ್ಯೇನ ಸಂಸ್ನಾಪ್ಯ ಪ್ರಾಜಾಪತ್ಯಂ ಸಮಾಚರೇತ್ । ಪೂತಿಗಂಧೇ ತಥಾ ಕ್ಲಿನ್ನೇ ಸ್ನಾಪ್ಯ ಗೋಮಯ ವಾರಿಣಾ ॥ ಬ್ರಾಹ್ಮಣೈರಭ್ಯನುಜ್ಞಾತಃ ತಪ್ತಕೃಚ್ಛ್ರಂ ಸಮಾಚರೇತ್ । ಕ್ರಿಮಿರುತ್ಪದ್ಯತೇ ಯಸ್ಯ ಶ್ವಕಾಕೈಶ್ಚ ವಿದೂಷಿತೇ ॥ ಕೃತ್ವಾ ತು ಪೂರ್ವವತ್ ಸ್ನಾನಂ ಸರ್ಪಿಷಾ ಮಧುನಾ ತತಃ । ಪುಣ್ಯಾದ್ಭಿಃ ಅಭಿಷಿಚ್ಯಾಥ ಸೇಚಯೇತ್ ಗಂಧವಾರಿಣಾ ॥ ಗಾಂ ದತ್ವಾ ದ್ವಿಜಮುಖ್ಯಾಯ ತಪ್ತ ಕೃಚ್ಛ್ರಂ ಸಮಾಚರೇತ್ ಇತಿ । ತಪ್ತಕೃಚ್ಛ್ರ ಪ್ರತಿನಿಧಿಃ ತಿಸ್ರೋಗಾವಃ ಪರಾಕತಪ್ತ ಕೃಚ್ಛ್ರಾತಿಕೃಚ್ಛ್ರೇ ತಿಸ್ರಸ್ತು ಗಾಃ ಸ್ಮೃತಾಃ ಇತಿ ಸ್ಮರಣಾತ್ ॥

ಪ್ರತ್ಯಕ್ಷಶವಸಂಸ್ಕಾರದಲ್ಲಿ ದಿನದೋಷಗಳನ್ನು ನೋಡಬಾರದು। ಒಂದುವೇಳೆ ದಿನವನ್ನು ನೋಡಿದರೆ, ಶವವು ಪರ್ಯುಷಿತವಾಗುತ್ತದೆ । ಪುತ್ರ, ಮಿತ್ರ, ಬಂಧುಗಳೊಡನೆ ಪರ್ಯುಷಿತವಾದ ಶವವನ್ನು ಪ್ರಾಯಶ್ಚಿತ್ತ ಮಾಡದೇ ಸುಟ್ಟರೆ, ಅವರಿಗೆ ಮಹಾ ಆಪತ್ತನ್ನು ಮತ್ತು ಭಯವನ್ನೂ ತರುತ್ತದೆ। ಪ್ರತ್ಯಕ್ಷಶವಸಂಸ್ಕಾರದಲ್ಲಿ ತಿಥ್ಯಾದಿ ದೋಷಗಳನ್ನು ನೋಡಬಾರದು । ಪರ್ಯುಷಿತವಾದ ಶವಕ್ಕೆ ಪಂಚಗವ್ಯದಿಂದ ಸ್ನಾನ ಮಾಡಿಸಿ, ಪ್ರಾಜಾಪತ್ಯಕೃಚ್ಛ್ರವನ್ನು ಮಾಡಿಕೊಳ್ಳಬೇಕು । ಪರ್ಯುಷಿತವಾದ ಹಾಗೂ ಕೊಳೆತ ಶವಕ್ಕೆ ಗೋಮಯ ನೀರಿನಿಂದ ಸ್ನಾನ ಮಾಡಿಸಿ, ಬ್ರಾಹ್ಮಣರಿಂದ ಅನುಜ್ಞೆಯನ್ನು ಪಡೆದು, ತಪ್ತಕೃಚ್ಛ್ರವನ್ನು ಮಾಡಿಕೊಳ್ಳಬೇಕು । ನಾಯಿ, ಕಾಗೆ ಮುಂತಾದವುಗಳಿಂದ ಎಳೆದಾಡಲ್ಪಟ್ಟಂತಹ ಹಾಗೂ ಶವದಲ್ಲಿ ಕ್ರಿಮಿಗಳು ಉಂಟಾಗುತ್ತವೋ ಅಂತಹ ಸಂದರ್ಭದಲ್ಲಿ ಗೋಮಯ ಸ್ನಾನಮಾಡಿಸಬೇಕು । ನಂತರ ತುಪ್ಪ ಮತ್ತು ಜೇನುತುಪ್ಪದಿಂದ ಸ್ನಾನ ಮಾಡಿಸಿ, ನಂತರ ಪುಣ್ಯತೀರ್ಥಗಳಿಂದ ಸ್ನಾನ ಮಾಡಿಸಬೇಕು। ನಂತರ ಗಂಧಯುಕ್ತ ನೀರಿನಿಂದ ಸ್ನಾನ ಮಾಡಿಸಬೇಕು। ನಂತರ ಬ್ರಾಹ್ಮಣಶ್ರೇಷ್ಠನಿಗೆ ಗೋವನ್ನು ದಾನಕೊಟ್ಟು, ತಪ್ತಕೃಚ್ಛ್ರವನ್ನು ಮಾಡಿಕೊಳ್ಳಬೇಕು । ತಪ್ತಕೃಚ್ಛ್ರವನ್ನು ಮಾಡಿಕೊಳ್ಳಲು ಅಸಮರ್ಥನಾದರೆ, ಅದಕ್ಕೆ ಬದಲಾಗಿ ೩ ಗೋದಾನ ಮಾಡಬೇಕು। ಏಕೆಂದರೆ ಪರಾಕ – ತಪ್ತ – ಅತಿಕೃಚ್ಛ್ರ ಇವುಗಳಲ್ಲಿ ೩ ಗೋದಾನ ಮಾಡಬೇಕೆಂದು ಸ್ಮೃತಿಯಿರುವುದರಿಂದ ॥

ವಸಿಷ್ಠಃ –

ನಾಸಾಗ್ರವರ್ತನಾ ದೋಷೈಃ ವಾಯುನಾ ಮೃತವತ್ಸ್ಥಿತಂ । ಅಜ್ಞಾನಾದ್ಯದಿ ವಾ ಜ್ಞಾನಾತ್ ಪಿತೃಮೇಧಮುಪಕ್ರಮೇತ್ ॥ ಗೃಹ ಕರ್ಮಾವಸಾನೇ ತು ಜೀವನ್ನಾಯುಷ್ಮತೀಂ ಜಪೇತ್ । ಪಥಿಕರ್ಮಾವಸಾನಾದ್ವಾ ಸ್ಮಶಾನೇ ಯದಿ ಜೀವತಿ ॥ ಘೃತಕುಂಭೇ ನಿಮಜ್ಜ್ಯೋಲನಂ ಜಾತಕರ್ಮಾದಿ ಕಾರಯೇತ್ । ಯಾಮಂ ಯಾವದ್ವಯಂ ಯಸ್ಯ ಮೃತಿಂ ನಿಶ್ಚಿತ್ಯ ನಾನ್ಯಥಾ ॥ ಬ್ರಹ್ಮಹತ್ಯಾಮವಾಪ್ನೋತಿ ಕರ್ತಾ ಭವತಿ ನಿಂದಿತಃ ॥

ಮೂಗು ಹಾಗೂ ಶ್ವಾಸಕೋಶದ ತೊಂದರೆಯಿಂದ ಮರಣಹೊಂದಿದವನಂತೆ ಇರುವ ವ್ಯಕ್ತಿಗೆ । ಅಜ್ಞಾನದಿಂದ ಅಥವ ಜ್ಞಾನದಿಂದಲೇ ಪಿತೃಮೇಧಕರ್ಮವನ್ನು ಒಂದುವೇಳೆ ಆರಂಭಿಸಿದರೆ । ಮೃತನಿಗೆ ಮಾಡುವ ಮನೆಯ ಕರ್ಮಗಳ ಪರ್ಯಂತವಾಗಿ ವಿಧಿಗಳನ್ನು ಮಾಡಿದ ನಂತರ । ಅವನು ಬದುಕಿದ್ದಾನೆಂದು ತಿಳಿದರೆ, ಆಗ ಪ್ರೇತಕರ್ಮವನ್ನು ನಿಲ್ಲಿಸಿ, ಅವನಿಗಾಗಿ ಆಯುರ್ಮಂತ್ರಗಳ ಜಪವನ್ನು ಮಾಡಬೇಕು । ಒಂದುವೇಳೆ ಪಥಬಲಿಗಳ ನಂತರ ಬದುಕಿದ್ದಾನೆಂದು ಗೊತ್ತಾದರೆ ಅಥವ ಸ್ಮಶಾನದಲ್ಲಿ ಗೊತ್ತಾದರೆ, ತುಪ್ಪದ ಹಂಡೆಯಲ್ಲಿ ಅವನನ್ನು ಮುಳುಗಿಸಿ ಸ್ನಾನ ಮಾಡಿಸಿ, ಅವನಿಗೆ ಜಾತಕರ್ಮಾದಿ ಸಂಸ್ಕಾರಗಳನ್ನು ಮಾಡಬೇಕು । ನಾವು ಪಿತೃಮೇಧ ಕರ್ಮವನ್ನು ಮಾಡುವ ಮೊದಲು ವ್ಯಕ್ತಿಯು ಮರಣವನ್ನು ಸಂಪೂರ್ಣವಾಗಿ ನಿಶ್ಚಿಯಿಸಿಕೊಂಡು ಆರಂಭಿಸಬೇಕು । ಇಲ್ಲದಿದ್ದರೆ, ಕರ್ತೃವು ಬ್ರಹ್ಮಹತ್ಯಾದಿ ದೋಷಗಳಿಗೆ ಒಳಗಾಗುತ್ತಾನೆಂದು ಶ್ರುತಿಯಿದೆ ॥

ಸ್ಮೃತ್ಯಂತರೇ –

ಬ್ರಾಹ್ಮಾನ್ಮುಹೂರ್ತಾದ್ಯಃ ಪೂರ್ವಮೃತಃ ಪರ್ಯುಷಿತೋ ಭವೇತ್ । ವೈಖಾನಸೋದಿತಂ ಕಾರ್ಯಂ ಪ್ರಾಯಶ್ಚಿತ್ತಂ ವಿಶುದ್ಧಯೇ ॥ ಯಾಮ್ಯ ಪೈತೃಕ ಮಂತ್ರಾಭ್ಯಾಂ ವೈಶ್ವದೇವೇನ ವೈ ತಿಲಾನ್ । ವ್ಯಸ್ತಾಭಿಶ್ಚ ಸಮಸ್ತಾಭಿಃ ಹುತ್ವಾ ವ್ಯಾಹೃತಿಭಿರ್ದಹೇತ್ ಇತಿ ॥ ವೈಖಾನಸೋದಿತ ಮಂತ್ರಾಃ – ಯವೋ ದಾಧಾರ ಪೃಥಿವೀಂ, ಉಶಂತಸ್ತ್ವಾ ಹವಾಮಹೇ, ವಿಶ್ವೇದೇವಸ್ಯ ನೇತುರ್ಮರ್ತೋ ವೃಣೀದ್ವೇ ಇತಿ ॥

ಬ್ರಾಹ್ಮೀಮುಹೂರ್ತದ ಮೊದಲು ಯಾವನು ಮೃತನಾಗಿ, ಅವನ ಔರ್ಧ್ವದೈಹಿಕ ಕರ್ಮವನ್ನು ೧೩ ಗಂಟೆ ಬಿಟ್ಟು ಮಾಡಲು ಆರಂಭಿಸಿದರೆ, ಆಗ ಆ ಶವವು ಪರ್ಯುಷಿತವಾಗುತ್ತದೆ। ಅದರ ಪ್ರಾಯಶ್ಚಿತ್ತಕ್ಕಾಗಿ ವೈಖಾನಸ ಋಷಿಗಳು ಹೇಳಿದಂತಹ ಮಂತ್ರದಿಂದ ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು। ನಮಗೆ ಸಂಬಂಧಿಸಿದ ಮತ್ತು ಪಿತೃಗಳಿಗೆ ಸಂಬಂಧಿಸಿದ ೨ ಮಂತ್ರಗಳಿಂದ ಹಾಗೂ ವೈಶ್ವದೇವ ಮಂತ್ರದಿಂದ ತಿಲಹೋಮವನ್ನು ಮಾಡಿ, ವ್ಯಸ್ತ ಮತ್ತು ಸಮಸ್ತ ವ್ಯಾಹೃತಿಗಳಿಂದ ಹೋಮಿಸಿ। ನಂತರ ದಹನ ಮಾಡಬೇಕು। ವೈಖಾನಸರು ಹೇಳಿದ ಮಂತ್ರಗಳು ಯಾವುವೆಂದರೆ – ನವೋ ದಾಧಾರ..., ಮತ್ತು ಉಶಂತಸ್ತ್ವಾ ಹವಾಮಹೇ..., ಹಾಗೂ ವಿಶ್ವೇದೇವಸ್ಯ ನೇತುಃ ಎಂಬ ೨ ಮಂತ್ರಗಳು ॥

ವ್ಯಾಸಸ್ತು –

ರವೇರಸ್ತಮಯಾತ್ಪ್ರಾಕ್ ತು ಯೋಗ್ಯಕಾಲೇ ತು ದುರ್ಲಭೇ । ಶ್ವಃ ಪ್ರಾತರಿಷ್ಟಂ ದಾಹಾದಿ ನ ಹವಿಸ್ತೇನ ದೂಷ್ಯತಿ ॥

ಸೂರ್ಯನು ಅಸ್ತವಾಗುವುದಕ್ಕೆ ಮುಂಚೆ ಔರ್ಧ್ವದೈಹಿಕಕರ್ಮ ಮಾಡಲು ಯೋಗ್ಯಕಾಲವು ಸಿಗದಿದ್ದಾಗ। ಆಪದ್ಧರ್ಮದಿಂದ ಮರುದಿನ ಬೆಳಿಗ್ಗೆ ದಾಹಾದಿಕರ್ಮಗಳನ್ನು ಮಾಡಿದರೆ, ಆ ಹವಿಸ್ಸು ದೂಷಿತವಾಗುವುದಿಲ್ಲ ॥

ಅತ್ರ ವ್ಯವಸ್ಥಾಮಾಹ ಬೌಧಾಯನಃ –

ರಾತ್ರೌ ಯದಿ ಮೃತಃ ಕಶ್ಚಿತ್ ಪ್ರಮಾದಾತ್ ಕಾಲಪರ್ಯಯಾತ್ । ನವನಾಡೀಷ್ವಧಸ್ತಾತ್ ಚೇದ್ದಹ್ನೌ ತು ಜುಹುಯಾತ್ ಶವಂ ॥ ಊರ್ಧ್ವೇ ಶ್ವಃ ಪ್ರಾತರೇವ ಸ್ಯಾತ್ ನ ರಾತ್ರೌ ತು ಕದಾಚನ ॥ ಇತಿ

ರಾತ್ರಿಯಲ್ಲಿ ಮರಣಹೊಂದಿದರೆ, ಔರ್ಧ್ವದೈಹಿಕ ಕರ್ಮವನ್ನು ಮಾಡಬಾರದು। ಆದರೆ ನವನಾಡಿಕಾಲದ(ಸೂರ್ಯಾಸ್ತದಿಂದ ಮುಂದಿನ ೨ ಗಂಟೆಗಳ ಅವಧಿ) ಒಳಗೇ ರಾತ್ರಿಯಲ್ಲಿ ದಹನವನ್ನು ಮಾಡಬಹುದು ॥ ಆ ಕಾಲದ ನಂತರ ಮರುದಿನವೇ ಕರ್ಮವನ್ನು ಮಾಡಬೇಕು, ರಾತ್ರಿಯಲ್ಲಿ ಮಾಡಲೇಬಾರದು ॥

****

2. ಶವಸ್ಯೋಪಹತ ಪ್ರಾಯಶ್ಚಿತ್ತಮ್

ವೈಖಾನಸ ಸೂತ್ರೇ –

ಶವೇsನ್ಯಾಶೌಚ ಯುಕ್ತೇ ಚ ಕುಕ್ಕುಟ ಸೂತಿಕಾ ರಜಸ್ವಲಾದ್ಯಸ್ಪೃಶ್ಯ ಸ್ಪರ್ಶನೇ ಚ ಮೃತಂ ಪಂಚಗವ್ಯೈಃ ಕುಶೋದಕೈಶ್ಚ ಸ್ನಾಪಯಿತ್ವಾ ಪ್ರೋಕ್ಷಣೈಃ ಪ್ರೋಕ್ಷ್ಯ ವಿಧಿವದ್ದಹನಂ ಕರೋತಿ ॥ ಇತಿ

ಆಶೌಚದಲ್ಲಿ ಸತ್ತರೆ, ಬಾಣಂತಿ, ರಜಸ್ವಲೆ, ಕೋಳಿ, ಇಂತಹ ಅಸ್ಪೃಶ್ಯರಿಂದ ಶವವು ಮುಟ್ಟಲ್ಪಟ್ಟಿದ್ದರೆ ಆಗ ಶವವನ್ನು ಪಂಚಗವ್ಯದಿಂದ ಹಾಗೂ ಕುಶೋದಕದಿಂದ ಸ್ನಾನ ಮಾಡಿಸಿ, ಪ್ರೋಕ್ಷಿಸಿ ವಿಧಿಯಂತೆ ದಹನ ಮಾಡಬೇಕು ॥

ಸ್ಮೃತ್ಯಂತರೇತು –

ಶ್ವಸೂಕರ ಸೃಗಾಲಾದ್ಯೈಃ ಗ್ರಾಮಸೂಕರ ಕುಕ್ಕುಟೈಃ । ಶವಾಸ್ಥಿ ಭಸ್ಮದೇಹಾನಾಂ ಸ್ಪರ್ಶನಂ ಚೇತ್ ಪ್ರಮಾದತಃ ॥ ಗವ್ಯೈಃ ಪ್ರಕ್ಷಾಲ್ಯ ಕೃಚ್ಛ್ರಾಣಾಂ ತ್ರಿತಯಂ ಚ ಸಮಾಚರೇತ್ ಇತಿ ॥

ನಾಯಿ, ಕಾಡುಹಂದಿ, ನರಿ, ಊರುಹಂದಿ, ಕೋಳಿ ಮುಂತಾದವುಗಳಿಂದ ಶವ – ಅಸ್ಥಿ – ಭಸ್ಮ – ದೇಹಗಳ ಸ್ಪರ್ಶವಾದರೆ, ಆಗ ಗೋಮಯದಿಂದ ತೊಳೆದು ೯ ಪ್ರಾಜಾಪತ್ಯ ಕೃಚ್ಛ್ರಾಚರಣೆಯನ್ನು ಮಾಡಿಕೊಳ್ಳಬೇಕು ॥

****

3. ನಿಶಾದಿ ಮರಣ ಪ್ರಾಯಶ್ಚಿತ್ತವ್

ಬೋಧಾಯನೀಯೇ –

ನಿಶಿಕೃಷ್ಣೇ ಚ ಪಕ್ಷೇ ಚ ಮರಣೇ ದಕ್ಷಿಣಾಯನೇ । ತಾ ಸೂರ್ಯಾ ಇತಿ ವೈ ಷಡ್ಭಿರ್ಹುತ್ವಾ ಸ್ಯಾತ್ ಸಂಸ್ಕ್ರಿಯಾ ತತಃ ॥ ಜಲೇ ಮೃತಸ್ಯ ಜುಹುಯಾದಿಮಂ ಮೇ ವರುಣೇತ್ಯೃಚಾ । ಸರ್ಪೇಣ ಚೇನ್ನಮೋ ಅಸ್ತು ತ್ರಿಭಿರ್ಹುತ್ವಾ ಚ ಸಂಸ್ಕ್ರಿಯಾ ಇತಿ ॥

ಕೃಷ್ಣಪಕ್ಷದ ರಾತ್ರಿಯಲ್ಲಿ, ದಕ್ಷಿಣಾಯನದಲ್ಲಿ ಮರಣವಾದರೆ । ತಾ ಸೂರ್ಯಾ..., ಎಂಬ ೬ ಮಂತ್ರಗಳಿಂದ ಪ್ರಾಯಶ್ಚಿತ್ತಹೋಮ ಮಾಡಿ ನಂತರ ಔರ್ಧ್ವದೈಹಿಕ ಸಂಸ್ಕಾರವನ್ನು ಮಾಡಬೇಕು । ನೀರಿನಲ್ಲಿ ಮುಳುಗಿ ಸತ್ತರೆ, ಇಮಂ ಮೇ..., ಮಂತ್ರದಿಂದ ಹೋಮಿಸಿ, ನಂತರ ಸಂಸ್ಕಾರ ಮಾಡಬೇಕು । ಹಾವು ಮುಂತಾದ ವಿಷಜಂತುಗಳಿಂದ ಸತ್ತರೆ, ನಮೋ ಅಸ್ತು..., ಎಂಬ ೩ ಮಂತ್ರಗಳಿಂದ ಹೋಮಿಸಿ, ಸಂಸ್ಕಾರವನ್ನು ಆರಂಭಿಸಬೇಕು ॥

ಸ್ಮೃತ್ಯಂತರೇ –

ನಿಶಾಯಾಂ ಕೃಷ್ಣಪಕ್ಷೇ ವಾ ದಕ್ಷಿಣೇಚಾಯನೇ ಮೃತಃ । ತಾ ಸೂರ್ಯೇತ್ಯಾದಿ ಷಡ್ಮಂತ್ರೈರ್ಜುಹುಯಾತ್ತು ಪೃಥಕ್ ಪೃಥಕ್ ॥ ಚತುರ್ಗೃಹೀತೇನಾಜ್ಯೇನ ದಾಹಕಸ್ತು ಸಮಾಹಿತಃ । ಪಿತೃಮೇಧ ವಿಧಾನೇನ ದಹ್ಯತೇ ಚ ಸುತಾದಿಭಿಃ ॥ ತಾ ಸೂರ್ಯೇತ್ಯಾದಿ ತಸ್ಯೈವ ಪ್ರಾಯಶ್ಚಿತ್ತಮುದೀರಿತಮ್ । ಏಕತ್ರ ವಿಧಿನಾದಾಹೇ ಪ್ರಾಯಶ್ಚಿತ್ತಂ ತು ನೇಷ್ಯತೇ ॥ ಇತಿ

ದಕ್ಷಿಣಾಯನ, ಕೃಷ್ಣಪಕ್ಷದ ರಾತ್ರಿಯಲ್ಲಿ ಮರಣವಾದರೆ, ತಾ ಸೂರ್ಯ..., ಎಂಬ ೬ ಮಂತ್ರಗಳಿಂದ ಚತುರ್ಗೃಹೀತ ಆಜ್ಯದಿಂದ ೬ ಹೋಮವನ್ನು ಕರ್ತೃವು ಮಾಡಬೇಕು । ನಂತರ ಮಗನೇ ಮುಂತಾದ ಕರ್ತೃಗಳಿಂದ ಪಿತೃಮೇಧ ವಿಧಾನದಿಂದ ದಹನ ಮಾಡಬೇಕು । ತಾ ಸೂರ್ಯಾ..., ಎಂಬ ೬ ಮಂತ್ರಗಳು ದಕ್ಷಿಣಾಯನ ಕೃಷ್ಣಪಕ್ಷ ರಾತ್ರಿಯಲ್ಲಿ ಮರಣವಾದರೆ ಪ್ರಾಯಶ್ಚಿತ್ತಕ್ಕಾಗಿ ಹೇಳಿದವುಗಳಾಗಿವೆ । ಮರಣಹೊಂದಿದ

ಊರಿನಲ್ಲೇ ಯಥಾವಿಧಿಯಾಗಿ ದಹನಕರ್ಮವನ್ನು ಮಾಡುವುದಾದರೆ, ಮೇಲೆ ಹೇಳಿದ ಪ್ರಾಯಶ್ಚಿತ್ತಗಳು ಬೇಕಿಲ್ಲ ॥

****

4. ಸರ್ಪಹತಸ್ಯ ಪ್ರಾಯಶ್ಚಿತ್ತವ್

ವಿಜ್ಞಾನೇಶ್ವರೀಯೇ(ಪುಟ೧೬೭/ಪ್ರ೧೨) –

ಸುವರ್ಣಭಾರ ನಿಷ್ಪನ್ನಂ ನಾಗಂ ಕೃತ್ವಾ ತಥೈವ ಗಾವ್ । ವ್ಯಾಸಾಯ ದತ್ವಾ ವಿಧಿವತ್ ಪೈತೃಮೇಧಂ ಸಮಾಚರೇತ್ ಇತಿ ॥ ವ್ಯಾಸಾಯ ವೇದವಿದ ಇತಿ ಯಾವತ್ ॥

ಸರ್ಪದಿಂದ ಸತ್ತಾಗ, ೧ ತೊಲ ಚಿನ್ನದ ನಾಗನ ಪ್ರತಿಮೆಯನ್ನು ಮಾಡಿ, ಅದರ ಜೊತೆ ಕರುಸಹಿತ ಗೋವನ್ನು ವೇದವಿದನಾದ ಶ್ರೋತ್ರಿಯನಿಗೆ ದಾನಮಾಡಿ ನಂತರ ವಿಧಿಯಂತೆ ಕರ್ಮವನ್ನು ಮಾಡಬೇಕು । "ವ್ಯಾಸ" ಎಂಬ ಪದಕ್ಕೆ ಅರ್ಥ ವೇದಜ್ಞ ಎಂದು ॥

****

5. ಅಶನ್ಯಾದಿ ದುರ್ಮರಣೇ ಪ್ರಾಯಶ್ಚಿತ್ತವ್

ಆಪಸ್ತಂಬಃ –

ಯದಿ ಆಹಿತಾಗ್ನಿರಶನಿಹತೋ ಮ್ರಿಯೇತ ತಸ್ಯ ಪ್ರಾಯಶ್ಚಿತ್ತಂ ಮೂರ್ಧಾನಂ ದಿವೋ...., ಇತಿ ಚತುರ್ಗೃಹೀತೇನಾಜ್ಯೇನ ಜುಹುಯಾತ್ । ಏತದೇವಾಸ್ಯ ಪ್ರಾಯಶ್ಚಿತ್ತಂ ಭವತೀತಿ ವಿಜ್ಞಾಯತೇ ॥

ಒಂದುವೇಳೆ ಆಹಿತಾಗ್ನಿಯು ಸಿಡಿಲಿನಿಂದ ಸತ್ತರೆ, ಅದಕ್ಕೆ ಪ್ರಾಯಶ್ಚಿತ್ತವಾಗಿ

ಮೂರ್ಧಾನಂ..., ಮಂತ್ರದಿಂದ ಕರ್ತೃವು ಚತುರ್ಗೃಹೀತ ಆಜ್ಯದಿಂದ ಹೋಮಿಸಬೇಕು। ಇದೇ ಅವನಿಗೆ ಪ್ರಾಯಶ್ಚಿತ್ತವೆಂದು ಸ್ಮೃತಿಯಲ್ಲಿ ಹೇಳಿದೆ ॥

ಯದಿ ಆಹಿತಾಗ್ನಿರ್ವಿಷಹತೋ ಮ್ರಿಯೇತ್ ತಸ್ಯ ಪ್ರಾಯಶ್ಚಿತ್ತಂ, ನಮೋ ಅಸ್ತು ಸರ್ಪೇಭ್ಯಃ...., ಇತಿ ತಿಸೃಭಿಃ ಚತುರ್ಗೃಹೀತಾಜ್ಯಾಹುತಿಭಿಃ ಜುಹುಯಾತ್ ॥

ಒಂದುವೇಳೆ ಆಹಿತಾಗ್ನಿಯು ವಿಷದಿಂದ ಸತ್ತರೆ, ಅದಕ್ಕೆ ಪ್ರಾಯಶ್ಚಿತ್ತವಾಗಿ ಚತುರ್ಗೃಹೀತ ಆಜ್ಯದಿಂದ ನಮೋ ಅಸ್ತು..., ಎಂಬ ೩ ಮಂತ್ರದಿಂದ ಕರ್ತೃವು ೩ ಹೋಮವನ್ನು ಮಾಡಬೇಕು ॥

ಯದಿ ಆಹಿತಾಗ್ನಿಃ ಅಪ್ಸ್ವಮ್ರಿಯೇತ ತಸ್ಯ ಪ್ರಾಯಶ್ಚಿತ್ತಂ, ಇಮಂ ಮೇ ವರುಣ, ತತ್ತ್ವಾಯಾಮಿ ಇತಿ ದ್ವೇ ಚತುರ್ಗೃಹೀತೇ ಜುಹುಯಾತ್ ॥

ಒಂದುವೇಳೆ ಆಹಿತಾಗ್ನಿಯು ನೀರಿನಲ್ಲಿ ಸತ್ತರೆ, ಅದಕ್ಕೆ ಪ್ರಾಯಶ್ಚಿತ್ತವಾಗಿ ಇಮಂ ಮೇ..., ತತ್ತ್ವಾಯಾಮಿ..., ಎಂಬ ೨ ಮಂತ್ರಗಳಿಂದ ಚತುರ್ಗೃಹೀತದಿಂದ ೨ ಹೋಮ ಮಾಡಬೇಕು ॥

ಯದಿ ಆಹಿತಾಗ್ನಿಃ ದಂಷ್ಟ್ರಿಭ್ಯೋ ಮ್ರಿಯೇತ ತಸ್ಯ ಪ್ರಾಯಶ್ಚಿತ್ತಂ, ದಂಷ್ಟ್ರಾಭ್ಯೋ ಮಲಿಮ್ಲುಚಾನೀತಿ ದ್ವೇ ಚತುರ್ಗೃಹೀತೇ ಜುಹುಯಾತ್। ತದೇವಾಸ್ಯ ಪ್ರಾಯಶ್ಚಿತ್ತಂ ಭವತೀತಿ ವಿಜ್ಞಾಯತೇ ॥

ಒಂದುವೇಳೆ ಆಹಿತಾಗ್ನಿಯು ದಂತ, ಕೋಡುಗಳುಳ್ಳ ಪ್ರಾಣಿಗಳಿಂದ ಮರಣ ಹೊಂದಿದರೆ, ಆಗ ದಂಷ್ಟ್ರಾಭ್ಯಾಂ..., ಎಂಬ ೨ ಮಂತ್ರಗಳಿಂದ ೨ ಹೋಮವನ್ನು ಮಾಡಬೇಕು। ಇವೇ ಪ್ರಾಯಶ್ಚಿತ್ತವು ॥

ಯದಿ ಆಹಿತಾಗ್ನಿಃ ಪಶುಭ್ಯೋಮ್ರಿಯೇತ್ ತಸ್ಯ ಪ್ರಾಯಶ್ಚಿತ್ತಂ, ಆಗಾವ್ಯೋ ಅಗ್ನ್ನಿಂದ್ರಾಯ ಇತಿ ದ್ವೇ ಚತುರ್ಗೃಹೀತೇನ ಜುಹುಯಾತ್। ಅತ್ರ ನಿಮಿತ್ತಸ್ಯ ತುಲ್ಯತ್ವಾತ್ ಏಕಾಗ್ನೇರಪಿ ತದುಕ್ತಂ ಪ್ರಾಯಶ್ಚಿತ್ತಂ ಭವತ್ಯೇವ ॥

ಒಂದುವೇಳೆ ಆಹಿತಾಗ್ನಿಯು ಪ್ರಾಣಿಗಳಿಂದ ಸತ್ತರೆ, ಆಗ ಆಗಾವ್ಯೋ..., ಇಂದ್ರಾಯ

ಪೂರ್ವೇ..., ಎಂಬ ೨ ಮಂತ್ರಗಳಿಂದ ಹೋಮಿಸಬೇಕು । ಈ ನಿಮಿತ್ತವು ಎಲ್ಲರಿಗೂ ಸಮಾನವಾಗಿರುವುದರಿಂದ ಅನಾಹಿತಾಗ್ನಿಗಳಿಗೂ ಇದೇ ಪ್ರಾಯಶ್ಚಿತ್ತವು ॥

****

6. ದಾಹಾದಿ ಪ್ರೇತಕಾರ್ಯ ಕರ್ತಾರಃ

ಸುಮಂತುಃ –

ಮಾತುಃ ಪಿತುಶ್ಚ ಕುರ್ವೀತ ಮೃತಯೋರೌರಸಃ ಸುತಃ । ಪೈತೃಮೇಧಿಕ ಸಂಸ್ಕಾರಂ ಮಂತ್ರಪೂರ್ವಕಮಾದೃತಃ ॥

ತಂದೆತಾಯಿಯರು ಮರಣಹೊಂದಿದರೆ, ಅವರ ಗಂಡು ಮಕ್ಕಳಲ್ಲಿ ದೊಡ್ಡವರು ಯಾರೋ ಅವರು ಪಿತೃಮೇಧಸಂಸ್ಕಾರವನ್ನು ಮಂತ್ರಪೂರ್ವಕವಾಗಿ ಶ್ರದ್ಧೆಯಿಂದ ಮಾಡಬೇಕು ॥

ಪುತ್ರಸ್ಯ ಪ್ರೇತಕಾರ್ಯ ಕರಣಾಶಕ್ತೌ ತತ್ಪ್ರಕಾರಂ –

ಕರ್ತೃಕ್ರಮಃ –

ಜಮದಗ್ನಿಃ –

ಪಿತುಃ ಪುತ್ರೇಣ ಕರ್ತವ್ಯಾಃ ಪಿಂಡ ದಾನೋದಕಕ್ರಿಯಾಃ । ಅಶಕ್ತೋಽಪ್ಯಗ್ನಿದಹ ಪುತ್ರಃ ಶೇಷಮನ್ಯಃ ಸಮಾಪಯೇತ್ ಇತಿ ॥ ಔರಸಪುತ್ರಾಣಾಂ ಸಮವಾಯೇ ಜ್ಯೇಷ್ಠ ಏವ ಪಿತುರೌರ್ಧ್ವದೈಹಿಕಂ ಕುರ್ಯಾತ್ । ಸರ್ವೈರನುಮತಿಂ ಕೃತ್ವಾ ಜ್ಯೇಷ್ಠೇನೈವ ತು ಯತ್ಕೃತಂ । ದ್ರವ್ಯೇಣಚಾವಿಭಕ್ತೇನ ಸರ್ವೈರೇವ ಕೃತಂ ಭವೇತ್ ಇತಿ ವಚನಾತ್ ॥

ಮೃತ ತಂದೆಗೆ ಮಗನು, ಪಿಂಡದಾನ – ತರ್ಪಣಗಳನ್ನು ಮಾಡಬೇಕು । ಒಂದುವೇಳೆ ಕರ್ತೃವಾದ ಮಗನು ತಂದೆಯ ಔರ್ಧ್ವದೈಹಿಕಕರ್ಮವನ್ನು ಮಾಡಲು ಅಶಕ್ತನಾದರೆ,

ಮೂರ್ಧಾನಂ..., ಮಂತ್ರದಿಂದ ಕರ್ತೃವು ಚತುರ್ಗೃಹೀತ ಆಜ್ಯದಿಂದ ಹೋಮಿಸಬೇಕು। ಇದೇ ಅವನಿಗೆ ಪ್ರಾಯಶ್ಚಿತ್ತವೆಂದು ಸ್ಮೃತಿಯಲ್ಲಿ ಹೇಳಿದೆ ॥

ಯದಿ ಆಹಿತಾಗ್ನಿರ್ವಿಷಹತೋ ಮ್ರಿಯೇತ್ ತಸ್ಯ ಪ್ರಾಯಶ್ಚಿತ್ತಂ, ನಮೋ ಅಸ್ತು ಸರ್ಪೇಭ್ಯಃ...., ಇತಿ ತಿಸೃಭಿಃ ಚತುರ್ಗೃಹೀತಾಜ್ಯಾಹುತಿಭಿಃ ಜುಹುಯಾತ್ ॥

ಒಂದುವೇಳೆ ಆಹಿತಾಗ್ನಿಯು ವಿಷದಿಂದ ಸತ್ತರೆ, ಅದಕ್ಕೆ ಪ್ರಾಯಶ್ಚಿತ್ತವಾಗಿ ಚತುರ್ಗೃಹೀತ ಆಜ್ಯದಿಂದ ನಮೋ ಅಸ್ತು..., ಎಂಬ ೩ ಮಂತ್ರದಿಂದ ಕರ್ತೃವು ೩ ಹೋಮವನ್ನು ಮಾಡಬೇಕು ॥

ಯದಿ ಆಹಿತಾಗ್ನಿಃ ಅಪ್ಸ್ವಮ್ರಿಯೇತ ತಸ್ಯ ಪ್ರಾಯಶ್ಚಿತ್ತಂ, ಇಮಂ ಮೇ ವರುಣ, ತತ್ತ್ವಾಯಾಮಿ ಇತಿ ದ್ವೇ ಚತುರ್ಗೃಹೀತೇ ಜುಹುಯಾತ್ ॥

ಒಂದುವೇಳೆ ಆಹಿತಾಗ್ನಿಯು ನೀರಿನಲ್ಲಿ ಸತ್ತರೆ, ಅದಕ್ಕೆ ಪ್ರಾಯಶ್ಚಿತ್ತವಾಗಿ ಇಮಂ ಮೇ..., ತತ್ತ್ವಾಯಾಮಿ..., ಎಂಬ ೨ ಮಂತ್ರಗಳಿಂದ ಚತುರ್ಗೃಹೀತದಿಂದ ೨ ಹೋಮ ಮಾಡಬೇಕು ॥

ಯದಿ ಆಹಿತಾಗ್ನಿಃ ದಂಷ್ಟ್ರಿಭ್ಯೋ ಮ್ರಿಯೇತ ತಸ್ಯ ಪ್ರಾಯಶ್ಚಿತ್ತಂ, ದಂಷ್ಟ್ರಾಭ್ಯೋ ಮಲಿಮ್ಲುಚಾನೀತಿ ದ್ವೇ ಚತುರ್ಗೃಹೀತೇ ಜುಹುಯಾತ್। ತದೇವಾಸ್ಯ ಪ್ರಾಯಶ್ಚಿತ್ತಂ ಭವತೀತಿ ವಿಜ್ಞಾಯತೇ ॥

ಒಂದುವೇಳೆ ಆಹಿತಾಗ್ನಿಯು ದಂತ, ಕೋಡುಗಳುಳ್ಳ ಪ್ರಾಣಿಗಳಿಂದ ಮರಣ ಹೊಂದಿದರೆ, ಆಗ ದಂಷ್ಟ್ರಾಭ್ಯಾಂ..., ಎಂಬ ೨ ಮಂತ್ರಗಳಿಂದ ೨ ಹೋಮವನ್ನು ಮಾಡಬೇಕು। ಇವೇ ಪ್ರಾಯಶ್ಚಿತ್ತವು ॥

ಯದಿ ಆಹಿತಾಗ್ನಿಃ ಪಶುಭ್ಯೋಮ್ರಿಯೇತ್ ತಸ್ಯ ಪ್ರಾಯಶ್ಚಿತ್ತಂ, ಆಗಾವ್ಯೋ ಅಗ್ನಿನ್ನಿಂದ್ರಾಯ ಇತಿ ದ್ವೇ ಚತುರ್ಗೃಹೀತೇನ ಜುಹುಯಾತ್। ಅತ್ರ ನಿಮಿತ್ತಸ್ಯ ತುಲ್ಯತ್ವಾತ್ ಏಕಾಗ್ನೇರಪಿ ತದುಕ್ತಂ ಪ್ರಾಯಶ್ಚಿತ್ತಂ ಭವತ್ಯೇವ ॥

ಒಂದುವೇಳೆ ಆಹಿತಾಗ್ನಿಯು ಪ್ರಾಣಿಗಳಿಂದ ಸತ್ತರೆ, ಆಗ ಆಗಾವ್ಯೋ..., ಇಂದ್ರಾಯ

ಪೂರ್ವೇ..., ಎಂಬ ೨ ಮಂತ್ರಗಳಿಂದ ಹೋಮಿಸಬೇಕು । ಈ ನಿಮಿತ್ತವು ಎಲ್ಲರಿಗೂ ಸಮಾನವಾಗಿರುವುದರಿಂದ ಅನಾಹಿತಾಗ್ನಿಗಳಿಗೂ ಇದೇ ಪ್ರಾಯಶ್ಚಿತ್ತವು ॥

****

6. ದಾಹಾದಿ ಪ್ರೇತಕಾರ್ಯ ಕರ್ತಾರಃ

ಸುಮಂತುಃ –

ಮಾತುಃ ಪಿತುಶ್ಚ ಕುರ್ವೀತ ಮೃತಯೋರೌರಸಃ ಸುತಃ । ಪೈತೃಮೇಧಿಕ ಸಂಸ್ಕಾರಂ ಮಂತ್ರಪೂರ್ವಕಮಾದೃತಃ ॥

ತಂದೆತಾಯಿಯರು ಮರಣಹೊಂದಿದರೆ, ಅವರ ಗಂಡು ಮಕ್ಕಳಲ್ಲಿ ದೊಡ್ಡವರು ಯಾರೋ ಅವರು ಪಿತೃಮೇಧಸಂಸ್ಕಾರವನ್ನು ಮಂತ್ರಪೂರ್ವಕವಾಗಿ ಶ್ರದ್ಧೆಯಿಂದ ಮಾಡಬೇಕು ॥

ಪುತ್ರಸ್ಯ ಪ್ರೇತಕಾರ್ಯ ಕರಣಾಶಕ್ತೌ ತತ್ಪ್ರಕಾರಂ –

ಕರ್ತೃಕ್ರಮಃ –

ಜಮದಗ್ನಿಃ –

ಪಿತುಃ ಪುತ್ರೇಣ ಕರ್ತವ್ಯಾಃ ಪಿಂಡ ದಾನೋದಕಕ್ರಿಯಾಃ । ಅಶಕ್ತೋಽಪ್ಯಗ್ನಿದಹ ಪುತ್ರಃ ಶೇಷಮನ್ಯಃ ಸಮಾಪಯೇತ್ ಇತಿ ॥ ಔರಸಪುತ್ರಾಣಾಂ ಸಮವಾಯೇ ಜ್ಯೇಷ್ಠ ಏವ ಪಿತುರೌರ್ಧ್ವದೈಹಿಕಂ ಕುರ್ಯಾತ್ । ಸರ್ವೈರನುಮತಿಂ ಕೃತ್ವಾ ಜ್ಯೇಷ್ಠೇನೈವ ತು ಯತ್ಕೃತಂ । ದ್ರವ್ಯೇಣಚಾವಿಭಕ್ತೇನ ಸರ್ವೈರೇವ ಕೃತಂ ಭವೇತ್ ಇತಿ ವಚನಾತ್ ॥

ಮೃತ ತಂದೆಗೆ ಮಗನು, ಪಿಂಡದಾನ – ತರ್ಪಣಗಳನ್ನು ಮಾಡಬೇಕು । ಒಂದುವೇಳೆ ಕರ್ತೃವಾದ ಮಗನು ತಂದೆಯ ಔರ್ಧ್ವದೈಹಿಕಕರ್ಮವನ್ನು ಮಾಡಲು ಅಶಕ್ತನಾದರೆ,

ದಹನವನ್ನು ಮಾತ್ರ ಇವನು ಮಾಡಿ, ಉಳಿದದ್ದನ್ನು ಬೇರೆ ಮಕ್ಕಳು ಅಥವ ಅನ್ಯಕರ್ತೃಗಳು ಮಾಡಬಹುದು। ಬಹುಸಂಖ್ಯೆಯಲ್ಲಿ ಗಂಡುಮಕ್ಕಳಿದ್ದರೆ, ಮೃತ ತಂದೆಗೆ ಹಿರಿಯವನೇ ಕರ್ಮವನ್ನು ಮಾಡಬೇಕು। ಏಕೆಂದರೆ, ಅವನು ಇದನ್ನು ಮಾಡುವುದರಿಂದಲೇ ಉಳಿದ ಎಲ್ಲಾ ಮಕ್ಕಳು ಮಾಡಿದಂತಾಗುತ್ತದೆ। ಶಾಸ್ತ್ರದಪ್ರಕಾರ, ತಂದೆತಾಯಿ ಇರುವವರೆಗೂ ಮಕ್ಕಳಲ್ಲಿ ಆಸ್ತಿವಿಭಾಗ ಇಲ್ಲದಿರುವುದರಿಂದ, ಹಿರಿಯಮಗಕರ್ಮಮಾಡಿದರೇ, ಉಳಿದ ಮಕ್ಕಳೂ ಕರ್ಮಮಾಡಿದಂತೆಯೇ ಆಗುತ್ತದೆ ॥

ಸ್ಮೃತ್ಯಂತರೇಽಪಿ –

ನವಶ್ರಾದ್ಧಂ ಸಪಿಂಡತ್ವಂ ಶ್ರಾದ್ಧಾನ್ಯಪಿ ಚ ಷೋಡಶ। ಏಕೇನೈವ ತು ಕಾರ್ಯಾಣಿ ಸಂವಿಭಕ್ತ ಧನೇಷ್ವಪಿ ಇತಿ ॥

ನವಶ್ರಾದ್ಧವನ್ನೂ, ಸಪಿಂಡೀಕರಣವನ್ನೂ, ಷೋಡಶಶ್ರಾದ್ಧವನ್ನೂ। ಅಣ್ಣತಮ್ಮಂದಿರು, ಬೇರೆಬೇರೆಯಾಗಿದ್ದರೂ ಒಬ್ಬನೇ ಮಾಡಬೇಕು ॥

ಚಂದ್ರಿಕಾಯಾಂ –

ಪ್ರೇತಸ್ಯ ಪುತ್ರೋ ದಾಹಾದಿ ದದ್ಯಾದೇವೌರಸಃ ಸುತಃ। ಬಹುತ್ವೇ ತು ಗುಣೇ ದದ್ಯಾತ್ ಸಮತ್ವೇ ಜ್ಯೇಷ್ಠ ಏವ ತು ॥

ಮೃತನ ಮಕ್ಕಳಲ್ಲಿ ಜ್ಯೇಷ್ಠಮಗನೇ ದಾಹಾದಿ ಕರ್ಮಗಳನ್ನು ಮಾಡಬೇಕು। ಬಹಳಜನ ಮಕ್ಕಳಿದ್ದರೆ, ಯಾರು ಅತ್ಯಂತ ಗುಣವಂತನೋ, ಸಾತ್ವಿಕನೋ ಅವನು ಮಾಡಬಹುದು। ಆದರೆ ಎಲ್ಲಾ ಮಕ್ಕಳು ಸಮಸ್ವಭಾವದವರೇ ಆಗಿದ್ದಲ್ಲಿ ಆಗ ಜ್ಯೇಷ್ಠನೇ ಮಾಡಬೇಕು ॥

ಋಷ್ಯಶೃಂಗಸ್ತು –

ಪುತ್ರಾಣಾಂ ಮಧ್ಯಮೋ ವಾಽಪಿ ಕನಿಷ್ಠೋ ಜ್ಯೇಷ್ಠ ಏವ ವಾ। ಪಿತುರ್ಯಸ್ತು ಪ್ರಿಯತಮಃ ಸರ್ವಂ ತೇನೈವ ಕಾರಯೇತ್ ॥ ಪುತ್ರಾಃ ಸರ್ವೇ ಪಿತುಃ ಪ್ರೇಷ್ಯಾಃ ಪತ್ನೀ ಭ್ರಾತಾ ಸಖಾಽಪಿ ವಾ। ಅಗ್ನಿದಾನಾದಿ ಕರ್ಮಾಣಿ ಕುರ್ಯುಃ ಪುತ್ರಾ ್ಯದಯಃ ಪಿತುಃ ಇತಿ ॥

ಮೃತನ ಮಕ್ಕಳಲ್ಲಿ ಮಧ್ಯಮನಾದವನು ಅಥವ ಕನಿಷ್ಠನು ಅಥವ ಜ್ಯೇಷ್ಠನು ಅಥವ। ಮೃತತಂದೆಗೆ ಅತ್ಯಂತ ಪ್ರಿಯತಮನಾದ ಮಗನು, ಔರ್ಧ್ವದೈಹಿಕ ಕರ್ಮವನ್ನು ಮಾಡಬೇಕು। ತಂದೆಗೆ ಮಕ್ಕಳೆಲ್ಲರೂ ಪ್ರೀತಿಪಾತ್ರರೇ। ಪತ್ನೀ, ಸೋದರರು ಅಥವ ಆಪ್ತಗೆಳೆಯ। ಮತ್ತು ಪುತ್ರೀ ಮುಂತಾದವರೂ ಕೂಡ ಮೃತ ತಂದೆಗೆ ಅಗ್ನಿದಾನಾದಿ ಕರ್ಮಗಳನ್ನು ಮಾಡಲು ಅರ್ಹರು॥

ಜಮದಗ್ನಿಃ –

ಜ್ಯೇಷ್ಠಪುತ್ರೇಣ ಕರ್ತವ್ಯಾ ದಾಹ ಪಿಂಡೋದಕ ಕ್ರಿಯಾಃ। ಯದಿ ಕರ್ತುಮಶಕ್ತಸ್ಯಾತ್ ಸರ್ವಮನ್ಯೇನ ಕಾರಯೇತ್ ಇತಿ॥ ಸರ್ವ ಜ್ಯೇಷ್ಠಸ್ಯಾಶಕ್ತಾವಸಂನಿಧಾನೇ ವಾ ಅವಸ್ಥಿತೇಷು ಪುತ್ರೇಷು ಮಧ್ಯೇ ಜನ್ಮಜ್ಯೇಷ್ಠೇನೈವ ಕಾರಯೇತ್। ಜನ್ಮ ಜ್ಯೇಷ್ಠಃ ಪಿತುಃ ಕುರ್ಯಾತ್ ಇತಿ ಸ್ಮರಣಾತ್। ಜನ್ಮಜ್ಯೇಷ್ಠ ಇತ್ಯಸ್ಯ ಅರ್ಥಾಂತರಮಪ್ಯಾಹುಃ – ಭಿನ್ನಮಾತೃಕಾಣಾಂ ಪುತ್ರಾಣಾಂ ಸಮವಾಯೇ ಯೋ ಜನ್ಮತೋ ಜ್ಯೇಷ್ಠಃ ಸ ಏವ ಪಿತುಃ ಕುರ್ಯಾತ್। ನ ಮಾತೃತೋ ಜ್ಯೇಷ್ಠಃ। ಸರ್ವತ್ರ ಜನ್ಮ ಜ್ಯೇಷ್ಠಸ್ಯೈವ ಗ್ರಹಣಾದಿತಿ ಸ್ಮರಣಾತ್॥

ಜ್ಯೇಷ್ಠಪುತ್ರನಿಂದಲೇ ಮೃತತಂದೆಗೆ ದಾಹ – ಪಿಂಡೋದಕ ಕ್ರಿಯೆಗಳು ಮಾಡಲ್ಪಡಬೇಕು। ಒಂದುವೇಳೆ ಜ್ಯೇಷ್ಠನು ಮಾಡಲು ಅಶಕ್ತನಾದರೆ, ಬೇರೇ ಮಕ್ಕಳಿಂದ ಎಲ್ಲಾ ವಿಧಿಗಳನ್ನು ಮಾಡಿಸಬೇಕು॥ ಜ್ಯೇಷ್ಠನು ಅಶಕ್ತನಾದರೆ ಎಂಬ ಮಾತಿಗೆ, ಅವನು ಹತ್ತಿರದಲ್ಲಿಲ್ಲದಿದ್ದರೆ ಹಾಗೂ ರೋಗಿಷ್ಠ – ಅಂಗವೈಕಲ್ಯಕ್ಕೆ ಒಳಗಾಗಿದ್ದರೆ, ಆಗ ಮೃತನ ಸಮೀಪವಿರುವ ಮಕ್ಕಳಲ್ಲಿ ಯಾರು ಜ್ಯೇಷ್ಠನೋ ಅವನಿಂದ ಕರ್ಮವನ್ನು ಮಾಡಿಸಬೇಕು। ಏಕೆಂದರೆ, ಜನ್ಮದಿಂದ ಜ್ಯೇಷ್ಠನಾದವನು ಕರ್ಮವನ್ನು ಮಾಡಬೇಕೆಂದು ಸ್ಮೃತಿಯಿರುವುದರಿಂದ। ಜನ್ಮಜ್ಯೇಷ್ಠಾ ಎಂಬುದಕ್ಕೆ ಕೆಲವರು ಬೇರೇ ಅರ್ಥವನ್ನೂ ಮಾಡುತ್ತಾರೆ – ಬೇರೆಬೇರೇ ತಾಯಂದಿರಲ್ಲಿ ಹುಟ್ಟಿದ ಮಕ್ಕಳಮಧ್ಯೇ, ಯಾರು ಜ್ಯೇಷ್ಠನೋ ಅವನೇ ತಂದೆಗೆ ಕರ್ಮವನ್ನು ಮಾಡಬೇಕು। ತಾಯಂದಿರ ಜ್ಯೇಷ್ಠತೇ ಇಲ್ಲಿ ಅನ್ವಯಿಸುವುದಿಲ್ಲ। ಎಲ್ಲ ಕಡೆಗಳಲ್ಲಿಯೂ ಜನ್ಮತಃ ಜ್ಯೇಷ್ಠಮಗನೇ ಮಾಡಬೇಕೆಂದು ಸ್ಮೃತಿ ಇರುವುದರಿಂದ॥

ಮನುಃ(೯/೧೨೫) –

ಸದೃಶಸ್ತ್ರೀಷು ಜಾತಾನಾಂ ಪುತ್ರಾಣಾಂ ಚ ವಿಶೇಷತಃ । ನ ಮಾತೃತೋ ಜ್ಯೈಷ್ಠ್ಯಮಸ್ತಿ ಜನ್ಮತೋ ಜ್ಯೈಷ್ಠ್ಯಮುಚ್ಯತೇ ॥ ಜನ್ಮ ಜ್ಯೈಷ್ಠ್ಯೇನ ಚಾಹ್ವಾನಂ ಸುಬ್ರಹ್ಮಣ್ಯಾಸ್ವಪಿ ಸ್ಮೃತಂ ಇತಿ ॥

ತಂದೆಗೆ ಬಹುಪತ್ನಿಯರು ಇದ್ದರೆ, ಅವರಲ್ಲಿ ಹುಟ್ಟಿದ ಮಕ್ಕಳಲ್ಲಿ, ಯಾರು ಮೊದಲು ಹುಟ್ಟಿರುತ್ತಾರೋ ಅವರೇ ಜ್ಯೇಷ್ಠರು । ತಾಯಿಯ ಜ್ಯೇಷ್ಠತ್ವದಿಂದ ಮಕ್ಕಳಿಗೆ ಜ್ಯೇಷ್ಠತ್ವವು ಬರುವುದಿಲ್ಲ, ಜನ್ಮದಿಂದಲೇ ಜ್ಯೇಷ್ಠತ್ವವು ಬರುವುದು । ಏಕೆಂದರೆ, ಸೋಮಯಾಗದಲ್ಲಿ ಸುಬ್ರಹ್ಮಣ್ಯಾಹ್ವಾನದಲ್ಲಿ ಜನ್ಮದಿಂದ ಜ್ಯೇಷ್ಠರಾದವರನ್ನೇ ಮೊದಲು ಆಹ್ವಾನಿಸುತ್ತಾರಾದ್ದರಿಂದ ಎಂದು ಸ್ಮೃತಿಯಿದೆ ॥

ಸ್ಮೃತ್ಯಂತರೇ –

ಜ್ಯೇಷ್ಠೋವಾऽಪಿ ಕನಿಷ್ಠೋ ವಾ ಜ್ಯೇಷ್ಠ ಭಾರ್ಯಾ ಸುತೋ ದಹೇತ್ । ಅಗ್ನಿಕಾರ್ಯಂ ಪ್ರಧಾನತ್ವಾಜ್ಜ್ಯೇಷ್ಠ ಭಾರ್ಯಾ ಸುತೋऽಗ್ರಜಃ ಇತಿ ॥

ಮೃತನ ಜ್ಯೇಷ್ಠಮಗನು ಅಥವ ಕನಿಷ್ಠಮಗನು ಅಥವ ಜ್ಯೇಷ್ಠಹೆಂಡತಿಯ ಮಗನು ದಹನವನ್ನು ಮಾಡಬಹುದು । ಇಲ್ಲಿ ದಹನರೂಪವಾದಂತಹ ಅಗ್ನಿಕಾರ್ಯವು ಪ್ರಧಾನವಾಗಿರುವುದರಿಂದ ಜ್ಯೇಷ್ಠಹೆಂಡತಿಯ ಮಗನೇ ಜ್ಯೇಷ್ಠನಾಗುತ್ತಾನೆಂದು ಸ್ಮೃತ್ಯಂತರದಲ್ಲಿ ಹೇಳಿದೆ ॥

ಅನ್ಯಚ್ಚ –

ಏಕಕರ್ತಾ ದ್ವಿಭಾರ್ಯಶ್ಚೇದುಭಯೋಃ ಪುತ್ರ ಸಂಭವೇ । ಪಿತುರ್ಮರಣ ಕಾಲೇ ತು ಜ್ಯೇಷ್ಠಪತ್ನೀ ಸುತೋऽಗ್ರಜಃ ಇತಿ ॥ ಅತ್ರ ಜ್ಯೇಷ್ಠ ಪತ್ನೀಸುತ ಇತಿ ಶ್ರೇಷ್ಠಭಾರ್ಯಾಸುತ ಇತ್ಯರ್ಥಃ । ಸವರ್ಣ ಸ್ತ್ರೀಜಾತ ಇತಿ ಯಾವತ್ । ಅನ್ಯಥಾ ಸದೃಶ ಸ್ತ್ರೀಷು ಜಾತಾನಾಂ ಇತಿ ವಚನವಿರೋಧಾಪತ್ತೇಃ । ತಥಾ ಚ

ಸವರ್ಣಭಾರ್ಯೋತ್ಪನ್ನಸ್ಯೈವ ಪಿತೃಋಣ ಮೋಚನತ್ವಮುಕ್ತಂ ಬೋಧಾಯನೇನ – ಪ್ರಜಾಮುತ್ಪಾದಯೇದ್ಯುಕ್ತಃ ಸ್ವೇಸ್ವೇ ವರ್ಣೇ ಜಿತೇಂದ್ರಿಯಃ । ಸ್ವಾಧ್ಯಾಯೇನ ಋಷೀನ್ ಪೂಜ್ಯ ಸೋಮೇನ ಚ ಪುರಂದರಂ ॥ ಪ್ರಜಯಾ ಚ ಪಿತ್ರ್ಯಾನ್ ಪೂರ್ವಾನ್ ಅನೃಣೋ ದಿವಿ ಮೋದತೇ ಇತಿ । ಜ್ಯೇಷ್ಠಪತ್ನ್ಯಂತರ ಪುತ್ರಃ ಪಿತುರೇವ ಕುರ್ಯಾತ್ । ಔರಸತ್ವಾತ್ ನ ಸಪತ್ನೀಮಾತುಃ ಭಿನ್ನೋದರೋತ್ಪನ್ನತ್ವಾತ್ ಕನಿಷ್ಠೋಽಪಿ ಸ್ವಮಾತುಃ ಸ್ವಯಮೇವ ಕುರ್ಯಾತ್ । ವಿಧದ್ಯಾದೌರಸಃ ಕ್ಷೇತ್ರೇ ಜನನ್ಯಾ ಔರ್ಧ್ವದೇಹಿಕಂ । ತದಭಾವೇ ಸಪತ್ನೀಜ ಇತಿ ಸ್ಮರಣಾತ್ ।

ಮೃತನ ಇಬ್ಬರು ಪತ್ನಿಯರಲ್ಲಿ ಮಕ್ಕಳು ಇದ್ದರೆ, ಇಬ್ಬರೂ ಸಮಾನಕರ್ತೃಗಳು ಆಗುತ್ತಾರಾದ್ದರಿಂದ । ತಂದೆಯು ಮರಣಕಾಲದಲ್ಲಿ ಜ್ಯೇಷ್ಠಪತ್ನಿಯು ಮಗನೇ ಅಗ್ರಜನಾಗುತ್ತಾನೆ । ಇಲ್ಲಿ ಜ್ಯೇಷ್ಠಪತ್ನೀಸುತ ಎಂಬುದಕ್ಕೆ, ಶ್ರೇಷ್ಠಹೆಂಡತಿಯ ಮಗ ಎಂದು ಅರ್ಥೈಸಬೇಕು । ಈ ನಿಯಮವು ಇಬ್ಬರು ಹೆಂಡತಿಯರೂ ಸವರ್ಣದಲ್ಲಿ ಇದ್ದು, ಅವರಿಗೆ ಹುಟ್ಟಿದವರಿಗೆ ಮಾತ್ರ । ಇಲ್ಲದಿದ್ದರೆ ಸದೃಶಸ್ತ್ರೀಷು ಜಾತಾನಾಂ ಎಂಬ ಮಾತಿಗೆ ವಿರೋಧವು ಬರುತ್ತದೆಯಾದ್ದರಿಂದ । ಸವರ್ಣ ಹೆಂಡತಿಯರಲ್ಲಿ ಪಿತೃಋಣ ಮೋಚನವನ್ನು ಬೋಧಾಯನರು ಹೇಳಿದ್ದಾರಾದ್ದರಿಂದ । ಹೇಗೆಂದರೆ, ತನ್ನ ವರ್ಣಾಶ್ರಮ ಕರ್ಮದಲ್ಲಿ ಯುಕ್ತನಾದವನು, ತಮ್ಮತಮ್ಮ ವರ್ಣದ ಪತ್ನಿಯರಿಂದಲೇ ಜಿತೇಂದ್ರಿಯನಾಗಿ ಪ್ರಜೆಗಳನ್ನು ಪಡೆಯಬೇಕು । ಸ್ವಾಧ್ಯಾಯದಿಂದ ಋಷಿಗಳಿಗೆ ಪೂಜೆ ಮಾಡಿದವನಾಗಿ ಹಾಗೂ ಸೋಮಯಾಗದಿಂದ ಇಂದ್ರನಿಗೆ ಪೂಜೆ ಮಾಡಿದವನಾಗಿ । ಹಾಗೂ ಪ್ರಜೆಗಳಿಂದ ತಮ್ಮ ಹಿಂದಿನ ಪಿತೃಗಳಿಗೆ ಪೂಜೆ ಮಾಡಿದವನಾಗಿ ಋಣತ್ರಯಗಳಿಂದ ಮುಕ್ತನಾಗಿ ಸ್ವರ್ಗದಲ್ಲಿ ಸುಖವನ್ನು ಆನಂದವನ್ನೂ ಅನುಭವಿಸುತ್ತಾನೆ ಎಂದು ಬೋಧಾಯನರು ಹೇಳಿರುವುದರಿಂದ । ಪತ್ನಿಯರಲ್ಲಿ, ಕನಿಷ್ಠಪತ್ನಿಯರಲ್ಲಿ ಜ್ಯೇಷ್ಠಪುತ್ರನಾಗಿ ಜನಿಸಿದ್ದರೂ ಕೂಡ, ಅವನೇ ತಂದೆಗೆ ಕರ್ಮವನ್ನು ಮಾಡಬೇಕು । ಜ್ಯೇಷ್ಠನಾಗಿದ್ದರೂ ತನ್ನ ತಾಯಿಯನ್ನು ಬಿಟ್ಟು, ಮಲತಾಯಿಗೆ ಔರ್ಧ್ವದೈಹಿಕಕರ್ಮವನ್ನು ಮಾಡಲು ಬರುವುದಿಲ್ಲ । ಭಿನ್ನೋದರದಲ್ಲಿ, ಎಂದರೆ ತಂದೆ ಒಬ್ಬನೇ ಆದರೂ,

ಬೇರೆಬೇರೆ ತಾಯಂದಿರಲ್ಲಿ ಹುಟ್ಟಿದ್ದಾರಾದ್ದರಿಂದ, ಅವರವರ ತಾಯಿಗೇ ಅವರ ಹೊಟ್ಟೆಯಲ್ಲಿ ಹುಟ್ಟಿದವರೇ ಮಾಡಬೇಕು । ಏಕೆಂದರೆ ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನೇ, ತಾಯಿಗೆ ಔರ್ಧ್ವದೈಹಿಕ ಸಂಸ್ಕಾರವನ್ನು ಮಾಡಬೇಕು । ಒಂದುವೇಳೆ ಮಗನಿಲ್ಲದಿದ್ದರೆ, ತಂದೆಯ ಬೇರೇಪತ್ನಿಯರ ಮಕ್ಕಳು ಕರ್ಮವನ್ನು ಮಾಡಬೇಕೆಂದು ಸ್ಮೃತಿಯಿರುವುದರಿಂದ ॥

****

7. ಯಮಲಯೋರ್ಜ್ಯೇಷ್ಠ್ಯ ನಿರ್ಣಯಃ

ಮನುಃ (೯/೧೨೬) –

ಯಮಲಯೋಶ್ಚ ಏಕಗರ್ಭೇತು ಜನ್ಮತೋ ಜ್ಯೇಷ್ಠತಾ ಸ್ಮೃತಾ ಇತಿ ॥

ಅವಳಿಜವಳಿ ಮಕ್ಕಳು ಒಂದೇ ಗರ್ಭದಿಂದ ಬರುವುದರಿಂದ, ಮೊದಲು ಜನ್ಮ ಯಾರು ಪಡೆಯುತ್ತಾರೋ ಅವರೇ ಜ್ಯೇಷ್ಠ ಎಂದು ಸ್ಮೃತಿಯಲ್ಲಿದೆ ॥

ಸ್ಮೃತ್ಯಂತರೇ –

ಯಮಲಯೋಃ ಜಾತಯೋಃ ಜ್ಯೇಷ್ಠೋ ಜನ್ಮನಾ ಪ್ರೋಚ್ಯತೇ ಬುಧೈಃ । ಗರ್ಭಸ್ಯ ಕಸ್ಯಚಿಲ್ಲೋಕೇ ಚಿರಾಜ್ಜನನ ದರ್ಶನಾತ್ ಇತಿ । ಅನ್ಯತ್ರಾಪಿ, ಯಮಲಯೋಃ ಜಾತಯೋಃ ಜ್ಯೈಷ್ಠ್ಯಮಾಧಾನಂ ಚೇಷ್ಯತೇ ಬುಧೈಃ ಇತ್ಯೇತತ್ ಸಮಭಾಗಸ್ಥ ಗರ್ಭವಿಷಯಂ । ಪಾರ್ಶ್ವಯೋಃ ಸಂಸ್ಥಿತೌ ಗರ್ಭೌ ತಯೋರ್ಯಃ ಪೂರ್ವಜಃ ಸ ತು । ಜ್ಯೇಷ್ಠ ಇತ್ಯುಚ್ಯತೇ ಸದ್ಭಿಃ ಜಾತಕಾದಿಷು ಕರ್ಮಸು ಇತಿ ಬಾದರಾಯಣ ಸ್ಮರಣಾತ್ ॥

ಹುಟ್ಟಿದ ಅವಳಿಮಕ್ಕಳಲ್ಲಿ ಜ್ಯೇಷ್ಠತ್ವವನ್ನು ಜನ್ಮದಿಂದಲೇ ಎಂದು ತಿಳಿದವರು ಹೇಳುತ್ತಾರೆ । ಗರ್ಭವು ಆರಂಭವಾಗಿ ೯ ತಿಂಗಳ ನಂತರ ಜನನ ಪಡೆಯುತ್ತದೆ ಎಂದು

ತೋರಿರುವುದರಿಂದ, ಜನ್ಮದಿಂದ ಯಾರು ಮೊದಲಿಗನೋ, ಅವನೇ ಜ್ಯೇಷ್ಠನು । ಆದರೆ ವಿಕಲ್ಪವಾಗಿ ಬೇರೇ ಕೆಲಸ್ಮೃತಿಗಳಲ್ಲಿ, ಅವಳಿಜವಳಿ ಮಕ್ಕಳಿಗೆ ಜ್ಯೇಷ್ಠತ್ವವನ್ನು, ಗರ್ಭವನ್ನು ಮೊದಲು ಯಾರು ಪ್ರವೇಶಿಸುತ್ತಾರೋ ಅವರೇಎಂದು ತಿಳಿದವರು ಹೇಳುತ್ತಾರೆ । ಇದು ಒಂದೇ ಗರ್ಭದಲ್ಲಿ ಸಮಭಾಗ ಮಾಡಿಕೊಂಡು ಹುಟ್ಟುವವನ ವಿಷಯವಾಗಿದೆ । ೨ ಗರ್ಭಗಳನ್ನು ಪಡೆದು, ಅದರಲ್ಲಿ ಯಾವ ಗರ್ಭವು ಮೊದಲು ಹುಟ್ಟುತ್ತದೋ ಅದೇ ಜ್ಯೇಷ್ಠತ್ವವನ್ನು ಪಡೆಯುತ್ತದೆ ಎಂದು ಸಜ್ಜನರು ಜಾತಕರ್ಮಾದಿಗಳಲ್ಲಿ ಹೇಳುತ್ತಾರೆ ಎಂದು ಬಾದರಾಯಣ ಸ್ಮೃತಿಯಲ್ಲಿ ಹೇಳಿದೆ ॥

ಅತ ಏವ ಉಪರ್ಯಧೋಭಾಗಸ್ಥ ಗರ್ಭವಿಷಯೇ ಸ್ಮೃತ್ಯಂತರಂ –

ಯಮಲಾಚ್ಚೈಕ ಗರ್ಭೇ ತು ಸ್ತ್ರೀ ವಾ ಪುರುಷ ಏವ ವಾ । ಕನಿಷ್ಠ ಆದ್ಯಜಾತಃ ಸ್ಯಾತ್ ಪಶ್ಚಾತ್ ಜಾತೋಽಗ್ರಜಃ ಸ್ಮೃತಃ ಇತಿ ॥ ಸ್ಥಲ ವಿಶೇಷಾಪರಿಜ್ಞಾನೇ ತು ಶಿಷ್ಟಾಚಾರಾತ್ ಕನಿಷ್ಠ ಆದ್ಯಜಾತಃ ಸ್ಯಾತ್ ಇತಿ ವಚನಾರ್ಥೋ ಗ್ರಾಹ್ಯಃ ॥

ಅವಳಿಜವಳಿ ಮಕ್ಕಳಲ್ಲಿ, ಮಕ್ಕಳು ಸ್ತ್ರೀ ಅಥವ ಪುರುಷರಾಗಲೀ ಕನಿಷ್ಠ ಮಗುವು ಮೊದಲು ಹುಟ್ಟುತ್ತದೆ ದೊಡ್ಡಮಗುವು ಆಮೇಲೆ ಹುಟ್ಟುತ್ತದೆ ಎಂದು ಸ್ಮೃತಿಯಿದೆ । ಸ್ಥಳ ವಿಶೇಷದ ಅರಿವಿಲ್ಲದಿದ್ದರೆ, ಶಿಷ್ಟಾಚಾರದಿಂದ ಕನಿಷ್ಠನು ಮೊದಲು ಹುಟ್ಟಿರುತ್ತಾನೆಂದು ಅರ್ಥವನ್ನು ಮಾಡಬೇಕು(ಗರ್ಭದ ಮೇಲ್ಭಾಗ ಹಾಗೂ ಕೆಳಭಾಗದಲ್ಲಿರುವ ಅವಳಿ ಮಕ್ಕಳಲ್ಲಿ, ಮೇಲ್ಭಾಗದ ಮಗುವು ಗರ್ಭವನ್ನು ಮೊದಲು ಪ್ರವೇಶ ಮಾಡಿರುತ್ತದೆ । ಆದರೆ ಜನ್ಮವನ್ನು ಪಡೆಯುವಾಗ ಮೇಲ್ಭಾಗದ ಮಗುವು ನಂತರ ಜನ್ಮ ಪಡೆಯುತ್ತದೆ. ಆದ್ದರಿಂದ ಅವಳಿ ಮಕ್ಕಳಲ್ಲಿ ಮೊದಲು ಹುಟ್ಟುವವನು ಸಣ್ಣವನು ಆಮೇಲೆ ಹುಟ್ಟುವವನು ದೊಡ್ಡವನಾಗುತ್ತಾನೆ ॥

ತಥಾ ಚ ಭಾಗವತೇ –

ಪ್ರಜಾಪತಿರ್ನಾಮ ತಯೋರಕಾರ್ಷೀದ್ಯಃ ಪ್ರಾಕ್ ಸ್ವದೇಹಾದ್ಯಮಯೋರಜಾಯತ । ತಂ ವೈ ಹಿರಣ್ಯಕಶಿಪುಂ ವಿದುಃ ಪ್ರಜಾ ಯಂ ತಂ ಹಿರಣ್ಯಾಕ್ಷಮಸೂತ ಸೂಽಗ್ರತಃ ॥

ಪ್ರಜಾಪತಿಬ್ರಹ್ಮನು ತನ್ನ ದೇಹದಿಂದ ಮೊದಲು ಅವಳಿ ಮಕ್ಕಳನ್ನು ಉತ್ಪತ್ತಿ ಮಾಡಿದನು। ಅದರಲ್ಲಿ ಮೊದಲು ಹುಟ್ಟಿದವನನ್ನು ಹಿರಣ್ಯಕಶಿಪು ಎಂಬ ಹೆಸರಿನಿಂದ ಕರೆದನು। ಆಮೇಲೆ ಹುಟ್ಟಿದವನನ್ನು ಹಿರಣ್ಯಾಕ್ಷ ಎಂದು ಕರೆದನು। ಇವರಿಬ್ಬರಲ್ಲಿ ಹಿರಣ್ಯಾಕ್ಷನೇ ದೊಡ್ಡವನು ಎಂಬುದು ಲೋಕಪ್ರಸಿದ್ಧಿಯು ॥

ಶ್ರೀಧರೀಯೇ –

ಯದಾ ಗರ್ಭಾಧಾನಸಮಯೇ ಯೋನಿಪುಷ್ಪಂ ವಿಷದ್ವೀರ್ಯಂ ದ್ವೇಧಾ ವಿಭಕ್ತಂ ಸತ್ ಪ್ರಾಕ್ ಪಶ್ಚಾದ್ಭಾವೇನ ಯೋನಿಂ ಪ್ರವಿಶತಿ ತದಾ ಯಮೌ ಭವತಃ। ತಯೋಶ್ಚ ಪಿತೃತಃ ಪ್ರವೇಶಕ್ರಮ ವಿಪರ್ಯಯೇಣಮಾತೃತಃ ಪ್ರಸೂತಿಃ। ಯದಾವಿಷತ್ ದ್ವಿಧಾ ಭೂತಂ ವೀರ್ಯಂ ಪುಷ್ಪಂ ಪರಿಕ್ಷರತ್। ದ್ವೌ ತದಾ ಭವತೋ ಗರ್ಭೌ ಸೂತಿರ್ವೇಶ ವಿಪರ್ಯಯಾತ್ ಇತಿ ಪಿಂಡಸಿದ್ಧಿ ಸ್ಮರಣಾತ್। ಸ್ವ ದೇಹಾತ್ ಪೂರ್ವಂ ಯೋ ಜಾತಃ ತಸ್ಯ ಹಿರಣ್ಯಕಶಿಪುರಿತಿ ದಿತೇಃ ಪ್ರಥಮಂ ಪ್ರಸೂತಸ್ಯ ಹಿರಣ್ಯಾಕ್ಷ ಇತಿ ಕೃತವಾನ್ ಇತಿ ॥

ಯಾವಾಗ ಗರ್ಭಾಧಾನ ಸಮಯದಲ್ಲಿ, ಸ್ತ್ರೀ ಯೋನಿಯನ್ನು ವೀರ್ಯವು ಪ್ರವೇಶ ಮಾಡುವ ಕಾಲದಲ್ಲಿ, ೨ ಭಾಗವಾಗಿ ಮೇಲೆ – ಕೆಳಗೆ ಎಂಬ ಯೋನಿಸ್ಥಾನವನ್ನು ಪ್ರವೇಶಿಸುತ್ತದೋ, ಆಗ ಅವಳಿ ಮಕ್ಕಳಾಗುತ್ತವೆ। ಆ ೨ ಭಾಗವಾದಂತಹ ವೀರ್ಯದಲ್ಲಿ ತಂದೆಯಿಂದ ತಾಯಿಯ ಯೋನಿಗೆ ಮೊದಲು ಪ್ರವೇಶ ಮಾಡಿದ ವೀರ್ಯಭಾಗವು, ಜನಿಸುವಾಗ ಆಮೇಲೆ ಹೊರಬರುತ್ತದೆ । ಯೋನಿಯೊಳಗೆ ಹೋದ ೨ ನೇ ವೀರ್ಯಭಾಗವು, ಜನಿಸುವಾಗ ಮೊದಲು ಹೊರಬರುತ್ತದೆ। ಯಾವಾಗ ವೀರ್ಯವು ೨ ಭಾಗವಾಗಿ ಯೋನಿಪುಷ್ಪವನ್ನು ಪ್ರವೇಶಿಸುತ್ತದೋ, ಆಗ ಯೋನಿಯಲ್ಲಿ ೨ ಗರ್ಭವುಂಟಾಗುತ್ತದೆ । ಅದರಲ್ಲಿ ಜನ್ಮ ಪಡೆಯುವಾಗ, ಮೊದಲು ಪ್ರವೇಶಿಸಿದ ವೀರ್ಯಭಾಗವು ಎರಡನೆಯದಾಗಿ ಜನ್ಮಪಡೆಯುತ್ತದೆ । ೨ ನೇ ಭಾಗವಾಗಿ ಯೋನಿಪ್ರವೇಶ ಮಾಡಿದ ವೀರ್ಯವು ಮೊದಲನೆಯದಾಗಿ ಜನಿಸುತ್ತದೆ । ಹೀಗೆ ಪಿಂಡಸಿದ್ಧಿಯಾಗುತ್ತದೆಂದು ಸ್ಮೃತಿ ಇದೆ। ಈ ನಿಯಮದಂತೆ, ದಿತಿದೇವಿಯ ದೇಹದಿಂದ

ಮೊದಲು ಯಾರು ಹುಟ್ಟಿದನೋ ಅವನು ಹಿರಣ್ಯಕಶಿಪು ಎನಿಸಿಕೊಂಡನು, ನಂತರ ಜನಿಸಿದ ಹಿರಣ್ಯಾಕ್ಷನು ದಿತಿಯ ಮೊದಲ ಮಗ ಎನಿಸಿಕೊಂಡನು ॥

****

8. ಔರಸಾಭಾವೇ ದತ್ತಾದಯಃ

ಅಥ ಪುತ್ರ ಪ್ರತಿಗ್ರಹಾನಂತರಂ ಔರಸ ಜನನೇ ಕನಿಷ್ಠೋಽಪ್ಯೌರಸ ಏವ ಪಿತುರ್ದಾಹಾದಿ ಸರ್ವಂ ಕುರ್ಯಾತ್ । ಔರಸೇ ತು ಸಮುತ್ಪನ್ನೇ ಪುತ್ರಸ್ಯ ಗ್ರಹಣಾದನು । ಔರಸಸ್ತು ಪಿತುಃ ಕುರ್ಯಾತ್ ತದಾ ದತ್ತೋ ವಿಸರ್ಜಯೇತ್ ॥ ಔರಸೇ ತು ಸಮುತ್ಪನ್ನೇ ದತ್ತೋ ಜ್ಯೇಷ್ಠೋ ನ ಚೇಷ್ಯತೇ ಇತಿ ಸ್ಮರಣಾತ್ ॥ ಜನಯಿತುಃ ಪುತ್ರಪೌತ್ರ ಪ್ರಪೌತ್ರಾಭಾವೇ ದತ್ತ ಏವ ಕುರ್ಯಾತ್ ।

ಪೂರ್ವಂ ಭ್ರಾತುಃ ಪಿತುಶ್ಚಾರ್ತ್ವೌ ಕೃತ್ಯಂ ರಿಕ್ಥಂ ಚ ದತ್ತಕೇ । ಆಬ್ದಿಕಾದ್ಯಖಿಲಂ ಶ್ರಾದ್ಧಂ ಕೃತ್ವಾ ರಿಕ್ತಮವಾಪ್ನುಯಾತ್ ॥ ದತ್ತಸ್ಯ ಜನಕಾಪತ್ಯೇ ಮೃತೇಽಥ ಜನಕೇಽಪಿ ವಾ । ಸಂಸ್ಕಾರಾದ್ಯಖಿಲಂ ಕೃತ್ವಾ ದತ್ತೋ ರಿಕ್ಥಮವಾಪ್ನುಯಾತ್ ಇತಿ ಸ್ಮರಣಾತ್ ॥

ಒಂದುವೇಳೆ ಮಗನನ್ನು ದತ್ತು ಪಡೆದುಕೊಂಡಮೇಲೆ ತನಗೇ ಮಗುವು ಹುಟ್ಟಿದರೆ, ಅವನು ಸಣ್ಣವನಾದರೂ ತಂದೆತಾಯಿಗಳ ದಾಹಾದಿ ಕಾರ್ಯಗಳನ್ನು ಇವನೇ ಮಾಡಬೇಕು । ಒಂದುವೇಳೆ ತನಗೆ ಮಗನು ಹುಟ್ಟಿದಮೇಲೂ ಇನ್ನೊಂದುಮಗುವನ್ನು ದತ್ತು ತೆಗೆದುಕೊಂಡರೆ, ತನಗೆ ಹುಟ್ಟಿದ ಮಗನೇ ಎಲ್ಲಾ ಕರ್ಮಗಳನ್ನು ಮಾಡಬೇಕು, ದತ್ತುಬಂದಿರುವ ಮಗನಿಗೆ ಈ ಕರ್ಮಗಳಲ್ಲಿ ಅಧಿಕಾರವಿರುವುದಿಲ್ಲ । ತನಗೆ ಮಗನು ಹುಟ್ಟಿದರೆ, ದತ್ತು ಮಗನು ಯಾವ ಪ್ರಕಾರದಿಂದಲೂ ಜ್ಯೇಷ್ಠನಾಗುವುದಿಲ್ಲ ಎಂದು ಸ್ಮೃತಿಯಿದೆ । ತಂದೆತಾಯಿಗಳಿಗೆ, ಮಗ – ಮೊಮ್ಮಗ – ಮರಿಮಗನಿಲ್ಲದಿದ್ದರೆ, ಅವರ ಔರ್ಧ್ವದೈಹಿಕ ಕರ್ಮವನ್ನು ದತ್ತು ಮಗನೇ ಮಾಡಬೇಕು ।

ತನಗೇ ಹುಟ್ಟಿದ ಮಗನಿದ್ದಾಗ, ದತ್ತು ಮಗನಿಗೆ ತಂದೆತಾಯಿಗಳ ಔರ್ಧ್ವದೈಹಿಕ ವಿಷಯದಲ್ಲಿ, ಯಾವ ಕರ್ತವ್ಯವೂ ಇರುವುದಿಲ್ಲ । ಒಂದುವೇಳೆ ತನಗೆ ಹುಟ್ಟಿದ

ಮಗನೇ ತನಗಿಂತ ಮೊದಲು ಮೃತನಾದರೆ, ಆಗ ದತ್ತು ಮಗನಿಗೆ ಕರ್ಮದ ಅಧಿಕಾರವು ಬರುತ್ತದೆ । ವರ್ಷಶ್ರಾದ್ಧ ಮುಂತಾದವುಗಳನ್ನು ಮಾಡಿ, ದತ್ತಕನು ತನ್ನ ತಂದೆಯ ಆಸ್ತಿಗಳಿಗೆ ಅಧಿಕಾರಿಯಾಗುತ್ತಾನೆ । ತಂದೆಗೆ ಹುಟ್ಟಿದ ಮಗನು ಮೃತನಾದರೆ, ನಂತರ ತಂದೆಯೂ ಮೃತನಾದರೆ ಅವರ ಔರ್ಧ್ವದೈಹಿಕ ಕರ್ಮಗಳನ್ನೂ, ಶ್ರಾದ್ಧಾದಿಗಳನ್ನೂ ದತ್ತುಮಗನು ಮಾಡಿ, ತಂದೆಯ ಆಸ್ತಿಗಳನ್ನು ಪಡೆಯಲು ಅರ್ಹನಾಗುತ್ತಾನೆಂದು ಸ್ಮೃತಿಯಿದೆ ॥

ಋಷ್ಯಶೃಂಗಃ –

ಪುತ್ರೇಷು ವಿದ್ಯಮಾನೇಷು ನಾನ್ಯಂ ವೈ ಕಾರಯೇತ್ ಸ್ವಧಾಂ । ಪಿತರೋ ಹಿಂಸಿತಾಸ್ತೇನ ಯಸ್ತ್ವೇವಂ ಕುರುತೇ ನರಃ ಇತಿ ॥ ಸ್ವಧಾ ಪ್ರೇತಕರ್ಮ । ಗರ್ಭವಾನಪಿ ಪಿತ್ರಾದೀನ್ ಸಂಸ್ಕುರ್ಯಾತ್ ಅನ್ಯತ್ರ ನ ಕುರ್ಯಾದಿತಿ ॥

ತನಗೇ ಜನಿಸಿದ ಮಗನಿದ್ದಾಗ, ಮೃತ ತಂದೆಗೆ ಬೇರೆಯವರಿಂದ ಕರ್ಮವನ್ನು ಮಾಡಿಸಬಾರದು । ಒಂದುವೇಳೆ ಮಾಡಿಸಿದರೆ, ತನ್ನ ಪಿತೃಗಳನ್ನು ಹಿಂಸಿಸಿದಂತಾಗುತ್ತದೆ । ಸ್ವಧಾಕಾರವೆಂದರೆ, ಪ್ರೇತಕರ್ಮ ಎಂದು ಅರ್ಥ । ತನ್ನ ಹೆಂಡತಿಯು ಗರ್ಭವತಿಯಾಗಿದ್ದರೂ ಕೂಡ, ಮಗನು ತಂದೆತಾಯಿಗಳ ಕರ್ಮವನ್ನು ಮಾಡಬೇಕು । ತಂದೆತಾಯಿಗಳನ್ನು ಬಿಟ್ಟು ಬೇರೆಯವರ ಕರ್ಮವನ್ನು ಗರ್ಭಿಣೀಪತಿಯು ಮಾಡಬಾರದು ॥

ತಥಾ ಚ ವೃದ್ಧಮನುಃ –

ವಪನಂ ದಹನಂ ವಾऽಪಿ ಪ್ರೇತಸ್ಯಾನ್ಯಸ್ಯ ಗರ್ಭವಾನ್ । ನ ಕುರ್ಯಾದುಭಯಂ ತತ್ರ ಕುರ್ಯಾದೇವ ಪಿತುಃ ಸದಾ ॥ ಜ್ಯೇಷ್ಠಸ್ಯ ಚಾನಪತ್ಯಸ್ಯ ಮಾತುಲಸ್ಯಾ ಸುತಸ್ಯ ಚ ಇತಿ ॥

ವಪನ ಮತ್ತು ದಹನಗಳನ್ನು ತಂದೆತಾಯಿಗಳನ್ನು ಬಿಟ್ಟು ಬೇರೆಯವರು ಮೃತರಾದಾಗ ಗರ್ಭಿಣೀಪತಿಯು ಮಾಡಬಾರದು । ಆದರೆ ತಂದೆತಾಯಿಗಳಿಗೆ ಮಾಡಲೇಬೇಕು । ಹಾಗೆಯೇ ಮಕ್ಕಳಿಲ್ಲದ ಸೋದರನಿಗೆ ಹಾಗೂ ಮಕ್ಕಳಿಲ್ಲದ ಸೋದರಮಾವನಿಗೆ ಗರ್ಭಿಣೀಪತಿಯೂ ಮಾಡಬಹುದು ॥

ವೃದ್ಧ ವಸಿಷ್ಠಶ್ಚ –

ಗರ್ಭವತಾ ಜ್ಯೇಷ್ಠೇನ ದಾಹ್ಯಃ ಪಿತಾ ಮಾತಾ ಚಾನಪತ್ಯೋ ಮಾತುಲಶ್ಚ ಇತಿ । ಅತ್ರ ಮಾತುಲಗ್ರಹಣಂ ಮಾತಾಮಹಾದೇರಪ್ಯುಪ ಲಕ್ಷಣಂ । ಅತ ಏವ ಮಾತಾಮಹಾದೇಃ ಸಂಸ್ಕಾರೇ ಗರ್ಭವತೋ ವಪನಂ ವಿಹಿತಂ । ಮಾತಾಮಹ ಪಿತೃವ್ಯಾಣಾಂ ಮಾತುಲಾಗ್ರಜಯೋರ್ಮ್ಯತೌ । ಶ್ವಶುರಾಚಾರ್ಯಯೋರೇಷಾಂ ಪತ್ನೀನಾಂ ಚ ಪಿತೃಶ್ವಸುಃ ॥ ಮಾತೃಶ್ವಸೃಭಗಿನ್ಯಾಶ್ಚ ಗರ್ಭವಾನಪಿ ವಾಪಯೇತ್ । ಸಪಿಂಡೋವಾऽಸಪಿಂಡೋ ವಾ ಸಂಸ್ಕರ್ತಾ ವಾಪಯೇತ್ ದ್ವಿಜಃ ಇತ್ಯಾದಿ ॥

ಜ್ಯೇಷ್ಠನಾದ, ಗರ್ಭಿಣೀಪತಿಯೂ ಆದ ಮಗನು ತಂದೆತಾಯಿಗಳಿಗೆ ಕರ್ಮವನ್ನು ಮಾಡಲೇಬೇಕು । ಹಾಗೂ ಮಕ್ಕಳಿಲ್ಲದ ಸೋದರಮಾವನಿಗೂ ಮಾಡಬೇಕು । ಇಲ್ಲಿ ಸೋದರಮಾವನನ್ನು ತೆಗೆದುಕೊಂಡಿರುವುದರಿಂದ, ತಾಯಿಯ ತಂದೆ ಮುಂತಾದವರಿಗೂ ಗರ್ಭಿಣೀಪತಿಯು ಮಾಡಬಹುದೆಂದು ತೋರಿಬರುತ್ತದೆ । ಆದ್ದರಿಂದಲೇ ಮಾತಾಮಹ ಮುಂತಾದವರಿಗೆ ಕರ್ಮವನ್ನು ಮಾಡುವಾಗ ಗರ್ಭಿಣೀಪತಿಗೆ ವಪನವನ್ನು ವಿಧಿಸಿದೆ । ಮಾತಾಮಹ, ಮಾತಾಮಹಿ, ಚಿಕ್ಕಪ್ಪ, ದೊಡ್ಡಪ್ಪಂದಿರು, ಸೋದರಮಾವ, ಸೋದರ, ಹೆಣ್ಣುಕೊಟ್ಟ ಅತ್ತೆಮಾವಂದಿರು, ವೇದಶಾಸ್ತ್ರಗಳನ್ನು ಕಲಿಸಿದ ಆಚಾರ್ಯ ಹಾಗೂ ತನ್ನ ಪತ್ನೀ, ತಂದೆಯ ಸೋದರಿ, ತಾಯಿಯ ಸೋದರಿ, ತನ್ನ ಸೋದರಿ, ಇವರೆಲ್ಲರಿಗೂ ಗರ್ಭಿಣೀಪತಿಯಾಗಿದ್ದರೂ, ವಪನವನ್ನು ಮಾಡಿಸಿಕೊಂಡು ಕರ್ಮವನ್ನು ಮಾಡಬೇಕು । ಸಪಿಂಡ ಅಥವ ಅಸಪಿಂಡರಾದರೂ, ಔರ್ಧ್ವದೈಹಿಕಸಂಸ್ಕಾರವನ್ನು ಮಾಡಬೇಕಾದರೆ ಬ್ರಾಹ್ಮಣನು ವಪನ ಮಾಡಿಸಿಕೊಳ್ಳಬೇಕು ॥

ಗೌತಮೋऽಪಿ –

ಜ್ಯೇಷ್ಠಸ್ಯ ಚಾನಪತ್ಯಸ್ಯ ಮಾತುಲಸ್ಯಾಸುತಸ್ಯ ಚ । ಅಗ್ನಿದಾಹಂ ತು ಯಃ ಕುರ್ಯಾತ್ ಸ ಕೇಶಾನ್ ವಾಪಯೇದ್ಬುಧಃ ಇತಿ ॥

ಮಕ್ಕಳಿಲ್ಲದ ಅಣ್ಣನಿಗೆ ಹಾಗೂ ಮಕ್ಕಳಿಲ್ಲದ ಸೋದರಮಾವನಿಗೆ, ವಪನ ಮಾಡಿಸಿಕೊಂಡು ಔರ್ಧ್ವದೈಹಿಕ ಕರ್ಮವನ್ನು ಮಾಡಬೇಕು ಎಂದು ತಿಳಿದವರು ಹೇಳುತ್ತಾರೆ ॥

ಸ ಏವ –

ಅಪುತ್ರಸ್ಯ ಪಿತೃವ್ಯಸ್ಯ ಜ್ಯೇಷ್ಠಸ್ಯಾಪ್ಯ ಸುತಸ್ಯ ಚ । ಅಂತರ್ವಾನ್ದಹನಂ ಕುರ್ಯಾತ್ ಕೇಶಶ್ಮಶ್ರೂಣಿ ವಾಪಯೇತ್ ಇತಿ ॥

ಮಕ್ಕಳಿಲ್ಲದ ಚಿಕ್ಕಪ್ಪ, ದೊಡ್ಡಪ್ಪಂದಿರಿಗೆ ಹಾಗೂ ಮಕ್ಕಳಿಲ್ಲದ ಅಣ್ಣನಿಗೆ ಗರ್ಭಿಣೀಪತಿಯಾದವನು ವಪನ ಮಾಡಿಸಿಕೊಂಡು ಕರ್ಮವನ್ನು ಮಾಡಬೇಕು ॥

****

9. ಬ್ರಹ್ಮಚಾರಿಣಃ ಸಂಸ್ಕಾರಾಧಿಕಾರಃ

ಬ್ರಹ್ಮಚಾರ್ಯಪಿ ಪಿತ್ರಾದೀನ್ ಸಂಸ್ಕುರ್ಯಾತ್ ।

ಬ್ರಹ್ಮಚಾರಿಯಾಗಿದ್ದರೂ ಕೂಡ, ತಂದೆತಾಯಿಗಳಿಗೆ ಔರ್ಧ್ವದೈಹಿಕ ಕರ್ಮವನ್ನು ಮಾಡಬೇಕು ॥

ಸುಮಂತುಃ –

ಮಾತುಃ ಪಿತುಶ್ಚ ಕುರ್ವೀತ ಸಂಸ್ಥಿತಸ್ಯೌರಸಃ ಸುತಃ । ವ್ರತಸ್ಥೋ ವಾऽವ್ರತಸ್ಥೋ ವಾ ಏಕ ಏವ ಭವೇದ್ಯದಿ ಇತಿ ॥ ವ್ರತಸ್ಥ ಉಪನೀತಃ ।

ತಂದೆತಾಯಿಗಳಿಗೆ ತಮಗೇ ಹುಟ್ಟಿದ ಒಬ್ಬನೇ ಮಗನಿದ್ದು, ಅವನು ಉಪನೀತನಾಗಿದ್ದು ಅಥವ ಅನುಪನೀತನಾಗಿದ್ದರೂ ಕೂಡ, ತಂದೆತಾಯಿಗಳ ಸಂಸ್ಕಾರವನ್ನು ಮಾಡಬೇಕು । ವ್ರತಸ್ಥ ಎಂದರೆ ಉಪನೀತ ಎಂದೂ, ಅವ್ರತಸ್ಥ ಎಂದರೆ ಅನುಪನೀತ ಎಂದೂ ಅರ್ಥ ॥

ಸ್ಮೃತ್ಯಂತರೇಽಪಿ –

ಪಿತ್ರೋಶ್ಚೈವ ಪಿತುಃ ಪಿತ್ರೋರೌರಸಸ್ಯಾಗ್ರ ಜನ್ಮನಃ । ಸಂಸ್ಕಾರಾದಿ ಕ್ರಿಯಾಃ ಕುರ್ಯಾತ್ ಬ್ರಹ್ಮಚಾರೀ ಗುರೋರಪಿ ಇತಿ ॥

ತಂದೆಗೂ, ತಂದೆಯ ತಂದೆಗೂ, ಔರಸ ಜ್ಯೇಷ್ಠಅಣ್ಣನಿಗೂ, ಗುರುವಿಗೂ, ಬ್ರಹ್ಮಚಾರಿಯಾದರೂ ಕರ್ಮವನ್ನು ಕರ್ತ್ಯವಾಗಿ ಮಾಡಬೇಕು ॥

ಅನ್ಯತ್ರಾಪಿ –

ದಹನಾದಿ ಸಪಿಂಡ್ಯಂತಂ ಬ್ರಹ್ಮಚಾರೀ ಕರೋತಿ ಚೇತ್ । ಅನ್ಯತ್ರ ಮಾತಾಪಿತ್ರೋಃ ಸ್ಯಾದುಪನೀಯಂ ಪುನರ್ವ್ರತೀ ಇತಿ ॥ ಅತಃ ಪ್ರೇತಕೃತ್ಯೈಕದೇಶಕರಣೇ ನ ಬ್ರಹ್ಮಚರ್ಯಹಾನಿಃ ಕೃಚ್ಛ್ರಾಚರಣಮೇವ । ಸಪಿಂಡೀಕರಣಮಾತ್ರ ಕರಣೇ ನ ಪುನರುಪನಯನ ದಾಹಾದಿ ಸಾಪಿಂಡ್ಯಾಂತಕರಣೇ ಪುನರುಪನಯನಮಿತ್ಯರ್ಥಃ । ಅತ್ರ ಮಾತಾಪಿತೃ ಗ್ರಹಣಮಾಚಾರ್ಯಾದೇರುಪಲಕ್ಷಣಂ ॥

ದಹನದಿಂದ ಸಪಿಂಡೀಕರಣದವರೆಗೆ ಬ್ರಹ್ಮಚಾರಿಯು ತನ್ನ ತಂದೆತಾಯಿಗಳನ್ನು ಹೊರತುಪಡಿಸಿ ಬೇರೆಯವರಿಗೆ ಮಾಡಿದರೆ । ಅವನಿಗೆ ಪುನ ಉಪನಯನವನ್ನು ಮಾಡಬೇಕು । ಆದರೆ ದಹನವನ್ನು ಮಾತ್ರ ಮಾಡಿದರೆ, ಬ್ರಹ್ಮಚರ್ಯಕ್ಕೆ ಹಾನಿಯಿಲ್ಲ, ಕೃಚ್ಛ್ರಾಚರಣೆಯಿಂದಲೇ ಪರಿಹಾರವಾಗುತ್ತದೆ । ಬ್ರಹ್ಮಚಾರಿಯು ಕೇವಲ ಸಪಿಂಡೀಕರಣವನ್ನು ಮಾಡಿದರೆ, ಆಗಲೂ ಪುನರುಪನಯನವಿಲ್ಲ । ದಹನದಿಂದ ಸಪಿಂಡೀಕರಣದ ಪರ್ಯಂತ ಮಾಡಿದರೆ, ಪುನರುಪನಯನವುಂಟು ಎಂದರ್ಥ । ಇಲ್ಲಿ ತಂದೆತಾಯಿಯರನ್ನು ತೆಗೆದುಕೊಂಡಿರುವುದು, ಆಚಾರ್ಯನಿಗೆ ಮಾಡಿದರೂ, ಪುನರುಪನಯನವಿಲ್ಲ ಎಂದು ತಿಳಿಸುವುದಕ್ಕೆ ॥

ತಥಾ ಚ ವಸಿಷ್ಠ – ಬೋಧಾಯನೌ (೨೩/೭–೮) –

ಬ್ರಹ್ಮಚಾರಿಣಃ ಶವಕರ್ಮಣೋ ವ್ರತಾನ್ನಿವೃತ್ತಿರನ್ಯತ್ರ ಮಾತಾಪಿತ್ರೋರಾಚಾರ್ಯಾಚ್ಚ ಇತಿ ॥

ಬ್ರಹ್ಮಚಾರಿಯು, ತಂದೆ – ತಾಯಿ – ಆಚಾರ್ಯರನ್ನು ಬಿಟ್ಟು ಬೇರೆಯವರಿಗೆ ಶವಕರ್ಮವನ್ನು ಮಾಡಿದರೆ, ಪುನರುಪನಯನವು ಆಗಬೇಕು ॥

ಯಾಜ್ಞವಲ್ಕ್ಯಶ್ಚ (ಪ್ರ ೧೫) –

ಆಚಾರ್ಯ ಪಿತ್ರುಪಾಧ್ಯಾಯಾನ್ ನಿಹ್ರ್ಯತ್ಯಾಪಿ ವ್ರತೀವ್ರತೀ । ಸಂಕಟಾನ್ನಂ ಚ ನಾಶ್ನೀಯಾತ್ ನ ಚ ತೈಃ ಸಃ ಸಂವಸೇತ್ ॥ ಸಂಕಟಾನ್ನಂ ಆಶೌಚಾನ್ನಂ ತೈಃ ಆಶೌಚಿಭಿಃ ॥

ಆಚಾರ್ಯ, ತಂದೆ, ತಾಯಿ, ಉಪಾಧ್ಯಾಯ ಇವರುಗಳ ಶವಕರ್ಮವನ್ನು ಮಾಡಿದ ಬ್ರಹ್ಮಚಾರಿಯು । ಆಶೌಚಾನ್ನವನ್ನು ಊಟಮಾಡಬಾರದು ಹಾಗೂ ಆಶೌಚವಿರುವವರ ಜೊತೆ ವಾಸ ಮಾಡಬಾರದು । ಸಂಕಟಾನ್ನ ಎಂದರೆ, ಆಶೌಚಾನ್ನ ॥

ಮನುರಪಿ (೫/೯೦) –

ಆಚಾರ್ಯಂ ಸ್ವಮುಪಾಧ್ಯಾಯಂ ಪಿತರಂ ಮಾತರಂ ಗುರುಂ । ನಿಹೃತ್ಯ ತು ವ್ರತೀ ಪ್ರೇತಂ ನ ವ್ರತೇನ ವಿಯುಜ್ಯತೇ ॥

ಆಚಾರ್ಯನನ್ನು, ತನ್ನ ಉಪಾಧ್ಯಾಯನನ್ನು, ತಂದೆ, ತಾಯಿ ಹಾಗೂ ಗುರುವನ್ನೂ । ಕುರಿತು ಔರ್ಧ್ವದೈಹಿಕ ಕರ್ಮವನ್ನು ಮಾಡುವ ಬ್ರಹ್ಮಚಾರಿಯು, ತನ್ನ ಬ್ರಹ್ಮಚರ್ಯದಿಂದ ಭ್ರಷ್ಟನಾಗುವುದಿಲ್ಲ ॥

ಭೃಗುಃ –

ಮಾತಾಮಹಂ ಮಾತುಲಂ ಚ ತತ್ಪತ್ನ್ಯೌಚಾನಪತ್ನ್ಯಕೇ । ವ್ರತೀ ಸಂಸ್ಕುರುತೇ ಯಸ್ತು ವ್ರತಲೋಪೋ ನ ತಸ್ಯ ಹಿ ಇತಿ ॥

ಮಾತಾಮಹ, ಸೋದರಮಾವ ಹಾಗೂ ಮಾತಾಮಹೀ, ಸೋದರಮಾವನ ಹೆಂಡತಿ ಇವರಿಗೆ ಮಕ್ಕಳಿಲ್ಲದಿದ್ದಾಗ, ಬ್ರಹ್ಮಚಾರಿಯು ಇವರ ಶವಕರ್ಮವನ್ನು ಮಾಡಿದರೆ, ವ್ರತಲೋಪವು ಬರುವುದಿಲ್ಲ ॥

ಸ್ಮೃತ್ಯಂತರೇ –

ಮಾತಾ ಪಿತ್ರೋರ್ವತೀ ಕುರ್ಯಾತ್ ಪಿತೃಮೇಧಂ ಸದೈವ ಹಿ । ಜ್ಯೇಷ್ಠಭ್ರಾತುಸ್ತಥೈವ ಸ್ಯಾದನ್ಯೇಷಾಂ ನ ಕದಾಚನ ॥ ಇತಿ

ತಾಯಿ ತಂದೆಯರಿಗೆ ಹಾಗೂ ಅಣ್ಣನಿಗೆ, ಬ್ರಹ್ಮಚಾರಿಯಾದರೂ ಶವಕರ್ಮವನ್ನು ಮಾಡಬೇಕು । ಬೇರೆಯವರಿಗೆ ಮಾಡಬಾರದು ॥

ಅನ್ಯತ್ರಾಪಿ –

ಮಾತಾಪಿತ್ರೋಃ ಉಪಾಧ್ಯಾಯ ಆಚಾರ್ಯಯೋಃ ಔರ್ಧ್ವದೇಹಿಕಂ । ಕುರ್ವನ್ ಮಾತಾಮಹಸ್ಯಾಪಿ ವ್ರತೀ ನ ಭ್ರಷ್ಯತೇ ವ್ರತಾತ್ ಇತಿ ॥

ತಾಯಿ, ತಂದೆ, ಉಪಾಧ್ಯಾಯ, ಆಚಾರ್ಯ ಹಾಗೂ ತಾಯಿಯತಂದೆ, ತಾಯಿಯತಾಯಿ । ಇವರ ಔರ್ಧ್ವದೈಹಿಕವನ್ನು ಬ್ರಹ್ಮಚಾರಿಯು ಮಾಡಿದರೂ, ಬ್ರಹ್ಮಚರ್ಯಕ್ಕೆ ಹಾನಿಯಿಲ್ಲ ॥

ಪುರಾಣೇಽಪಿ –

ಯಥಾ ವ್ರತಸ್ಥೋಽಪಿ ಸುತಃ ಪಿತುಃ ಕುರ್ಯಾತ್ ಕ್ರಿಯಾ ನೃಪ । ಉದಕಾದ್ಯಾ ಮಹಾಬಾಹೋ ದೌಹಿತ್ರೋಽಪಿ ತಥಾಽರ್ಹತಿ ಇತಿ ॥ ಉದಾಹೃತೇಷು ವಚನೇಷು ಪಿತೃವ್ಯಾದೇಃ ಕಂಠೋಕ್ತ್ಯಭಾವೇಽಪಿ ಗುರುತ್ವಾತ್ ತತ್ಸಂಸ್ಕಾರೇಽಪಿ ನ ವ್ರತಿನೋ ವ್ರತಹಾನಿಃ ಇತ್ಯಾಹುಃ ॥

ಎಲ್ಲೈ ರಾಜನೇ, ಬ್ರಹ್ಮಚಾರಿಯಾದರೂ ಕೂಡ, ತಂದೆತಾಯಿಯರ ಕರ್ಮವನ್ನು ಮಾಡಬೇಕು । ದೌಹಿತ್ರನೂ ಕೂಡ, ಔರ್ಧ್ವದೈಹಿಕ ಕರ್ಮವನ್ನು ಹಾಗೂ ತಿಲತರ್ಪಣಾದಿಗಳಿಗೆ ಅರ್ಹನಾಗಿರುತ್ತಾನೆ । ಹಿಂದೆ ಉದಾಹರಣೆ ನೀಡಿದಂತಹ ವಚನದಲ್ಲಿ ದೊಡ್ಡಪ್ಪ, ಚಿಕ್ಕಪ್ಪ ಮುಂತಾದವರಿಗೆ ಹೇಳದಿದ್ದರೂ ಕೂಡ ಅವರೆಲ್ಲರೂ ಗುರುಸ್ಥಾನದವರಾಗಿರುತ್ತಾರೆ ಎಂಬ ಕಾರಣದಿಂದ, ಅವರ ಔರ್ಧ್ವದೈಹಿಕ ಕರ್ಮವನ್ನು ಬ್ರಹ್ಮಚಾರಿ ಮಾಡಿದರೂ, ಯಾವುದೇ ದೋಷವಿಲ್ಲವೆಂದು ಪುರಾಣಕಾರರು ಹೇಳುತ್ತಾರೆ ॥

****

10. ಅನುಪನೀತಸ್ಯಾಪಿ ಪಿತೃ ಸಂಸ್ಕಾರಾಧಿಕಾರಃ

ಅನುಪನೀತೋಽಪಿ ಪುತ್ರಃ ಪಿತ್ರೋಃ ಸಂಸ್ಕಾರಾದಿ ಮಂತ್ರವದೇವ ಕುರ್ಯಾತ್ ।

ಉಪನಯನವಾಗದಿದ್ದರೂ, ಮಗನು ತಂದೆತಾಯಿಯರ ಔರ್ಧ್ವದೈಹಿಕಕರ್ಮವನ್ನು ಮಂತ್ರಪೂರ್ವಕವಾಗಿಯೇ ಮಾಡಬೇಕು ॥

ತಥಾ ಚ ಮನುಃ(೨/೧೭೧) –

ನಹ್ಯಸ್ಮಿನ್ ವಿದ್ಯತೇ ಕರ್ಮ ಕಿಂಚಿದಾ ಮೌಂಜಿಬಂಧನಾತ್ । ನಾಭಿವ್ಯಾಹಾರಯೇದ್ಬ್ರಹ್ಮ ಸ್ವಧಾ ನಿನಯನಾದೃತೇ ಇತಿ ॥ ಸ್ವಧಾನಿನಯ ಶಬ್ದೇನ ದಾಹಾದಿ ಸಪಿಂಡೀಕರಣಾಂತಂ ಪ್ರೇತಕರ್ಮ ಲಕ್ಷ್ಯತೇ । ಬ್ರಹ್ಮವೇದಃ । ಅನ್ಯತ್ರ ನ ವಾಚಯೇತ್ । ಪಿತೃಕೃತ್ಯೇ ತು ಉಚ್ಚಾರಯೇತ್ । ನಾತ್ರಾದೋಷ ಇತಿ ವ್ಯಾಖ್ಯಾತಂ ॥

ಅನುಪನೀತನಾದವನಿಗೆ, ಉಪನಯನವಾಗುವವರೆಗೂ ಯಾವ ಕರ್ಮಾಧಿಕಾರವೂ ಇಲ್ಲ । ಅವನಿಗೆ ಔರ್ಧ್ವದೈಹಿಕಕರ್ಮವನ್ನು ಬಿಟ್ಟು ಬೇರೇ ವೇದಮಂತ್ರಗಳ ಅಧ್ಯಯನ, ಅಧ್ಯಾಪನ ಹಾಗೂ ವೇದೋಕ್ತಕರ್ಮಗಳನ್ನು ಮಾಡಲು ಅಧಿಕಾರವಿರುವುದಿಲ್ಲ । ಇಲ್ಲಿ ಸ್ವಧಾನಿನಯನ ಎಂದರೆ, ದಹನದಿಂದ ಸಪಿಂಡೀಕರಣಪರ್ಯಂತದ ಕರ್ಮಗಳು ಎಂದರ್ಥ । ಪಿತೃಕರ್ಮವನ್ನು ಬಿಟ್ಟು ಬೇರೇಕಡೆಯಲ್ಲಿ ಅನುಪನೀತನಾದವನಿಗೆ ಮಂತ್ರಗಳನ್ನು ಹೇಳಿಕೊಡಬಾರದು । ಪಿತೃಕರ್ಮದಲ್ಲಿ ಹೇಳಿಕೊಡಲೇಬೇಕು । ಇಲ್ಲಿ ಮಾತ್ರ ದೋಷವಿಲ್ಲ ಎಂದು ಮನುಸ್ಮೃತಿಕಾರರು ಹೇಳಿದ್ದಾರೆ ॥

ಸ್ಮೃತ್ಯಂತರೇಽಪಿ –

ಪುತ್ರಸ್ತ್ವನುಪನೀತೋಽಪಿ ಪಿತ್ರೋಃ ಸಂಸ್ಕಾರಮರ್ಹತಿ । ಅನ್ಯೋಽಪ್ಯುಚ್ಚಾರಯೇತ್ ಮಂತ್ರಾನ್ ಸರ್ವಾಂಸ್ತೇನೈವ ಕಾರಯೇತ್ ॥ ಅನ್ಯ ಉಪಾಧ್ಯಾಯಾದಿಃ ಅನುಪನೀತಂ ವಾಚಯೇತ್ । ತೇನ ಕರ್ಮಾಣಿ ಕಾರಯೇತ್ । ನ ಸ್ವಯಂ ಕುರ್ಯಾತ್ ಇತ್ಯರ್ಥಃ ॥

ಮಗನಿಗೆ ಉಪನಯನವಾಗದಿದ್ದರೂ ಕೂಡ, ತಂದೆಯ ಔರ್ಧ್ವದೈಹಿಕ ಕರ್ಮವನ್ನು ಮಾಡಲು ಯೋಗ್ಯನಾಗುತ್ತಾನೆ। ಬೇರೆಯವರು ಆ ಕರ್ಮದ ಮಂತ್ರವನ್ನು ಉಚ್ಚಾರಣೆ ಮಾಡಿ, ಪ್ರಯೋಗವನ್ನು ಇವನ ಹತ್ತಿರ ಮಾಡಿಸಬೇಕು । ಅಥವಾ ಉಪಾಧ್ಯಾಯ ಮುಂತಾದವರು ಅವನಿಗೆ ಮಂತ್ರವನ್ನು ಹೇಳಿಕೊಟ್ಟು ಕರ್ಮವನ್ನು ಮಾಡಿಸಬೇಕು । ಉಪನಯನವಾಗದಿರುವವನು, ಬೇರೆಯವರ ಹತ್ತಿರ ಹೇಳಿಸಿಕೊಳ್ಳದೇ ಸ್ವಯಂತಾನೇ, ಈ ಕರ್ಮವನ್ನು ಮಾಡಬಾರದು ॥

ಸುಮಂತುರಪಿ –

ನಾಭಿವ್ಯಾಹಾರಯೇದ್ಬ್ರಹ್ಮ ಯಾವನ್ಮೌಂಜೀ ನಿಬಧ್ಯತೇ । ಮಂತ್ರಾನ್ ಅನುಪನೀತೋಽಪಿ ಪ್ರೇತಕೃತ್ಯೇ ವದೇತ್ ಪಿತುಃ, ಇತಿ ॥ ವದೇದೇವೈಕ ಇತಿ ಪಾಠಾಂತರಂ । ತತ್ರ ಪ್ರೇತಕೃತ್ಯ ಇತ್ಯಧ್ಯಾಹರ್ತವ್ಯಂ ॥

ಉಪನಯನವಾಗುವವರೆಗೆ ವೇದಮಂತ್ರಗಳನ್ನು ಹೇಳಬಾರದು । ಉಪನಯನವಾಗದಿದ್ದರೂ ತಂದೆತಾಯಿಗಳ ಕರ್ಮದಲ್ಲಿ ಮಾತ್ರ ಮಂತ್ರಹೇಳಿಯೇ ಕರ್ಮ ಮಾಡಬೇಕು । ಹೇಳಲೇಬೇಕು ಎಂದು ವಿಧಿಯಿದೆ । ಈ ನಿಯಮವು ಪ್ರೇತಕಾರ್ಯದಲ್ಲಿ ಮಾತ್ರವೆಂದು ತಿಳಿಯಬೇಕು ॥

ವೃದ್ಧಮನುರಪಿ –

ಕುರ್ಯಾದನುಪನೀತೋಽಪಿ ಶ್ರಾದ್ಧಮೇಕೋಽಹಿ ಯಃ ಸುತಃ । ಪಿತೃಯಜ್ಞಾಹುತಿಂ ಪಾಣೌ ಜುಹುಯಾತ್ ಮಂತ್ರಪೂರ್ವಕಂ, ಇತಿ ॥ ಶ್ರಾದ್ಧಂ ಸಪಿಂಡೀಕರಣಾದಿ ।

ಉಪನಯನವಾಗದಿದ್ದರೂ, ತಂದೆತಾಯಿಯರ ಶ್ರಾದ್ಧವನ್ನು ಮಗನು ಮಾಡಬೇಕು । ಅಲ್ಲಿ ಪಿತೃಯಜ್ಞಾಹುತಿಯನ್ನು ಕೈಯಲ್ಲಿ, ಮಂತ್ರಪೂರ್ವಕವಾಗಿ ಹೋಮಿಸಬೇಕು । ಇಲ್ಲಿ ಶ್ರಾದ್ಧ ಎಂದರೆ, ಸಪಿಂಡಿಕರಣ – ಮಾಸಿಶ್ರಾದ್ಧ ಹಾಗೂ ವರ್ಷಶ್ರಾದ್ಧಗಳು ॥

ವಿಶ್ವಾಮಿತ್ರಃ –

ಪಿತ್ರೋರನುಪನೀತೋಽಪಿ ವಿದಧ್ಯಾತ್ ಮಂತ್ರವತ್ ಸುತಃ । ಔರ್ಧ್ವದೇಹಿಕಮನ್ಯೇತು ಸಂಸ್ಕೃತಾಃ ಶ್ರಾದ್ಧಕಾರಿಣಃ, ಇತಿ ॥ ಅನ್ಯೇ ಭ್ರಾತ್ರಾದಯಃ ಉಪನೀತಾಃ ಶ್ರಾದ್ಧಕಾರಿಣಃ ಸ್ಯುಃ । ಕರ್ಮಶೂದ್ರಃ ಸ್ಮೃತೋ ವಿಪ್ರೋ ಯಾವನ್ಮೌಂಜೀ ನಿಬಧ್ಯತೇ । ತದೂರ್ಧ್ವಂ ಮಂತ್ರಪೂತೇಷು ಕರ್ಮಸ್ವಪ್ಯಧಿಕಾರ್ಯಸೌ, ಇತಿ ಸುಮಂತುಸ್ಮರಣಾತ್ ॥

ಮಗನಿಗೆ ಉಪನಯನವಾಗದಿದ್ದರೂ, ಹೆತ್ತವರಿಗೆ ಮಂತ್ರಪೂರ್ವಕವಾಗಿ ಕರ್ಮವನ್ನು ಮಾಡಬೇಕು । ಆದರೆ ಮಗನನ್ನು ಬಿಟ್ಟು ಬೇರೆಯವರು ಮಾಡಬೇಕಾದರೆ, ಅವರೆಲ್ಲರೂ ಉಪನಯನವಾಗಿರಲೇಬೇಕು । ಆಗಮಾತ್ರ ಅಧಿಕಾರ ಬರುತ್ತದೆ । ಬೇರೆಯವರು ಎಂದರೆ, ತಮ್ಮ ಮುಂತಾದವರು ಎಂದರ್ಥ । ಉಪನಯನವಾಗುವವರೆಗೂ ಕರ್ಮಗಳಿಗೆ ಶೂದ್ರನಂತೆ ಅನಧಿಕಾರಿಯಾಗಿರುತ್ತಾನೆ । ಉಪನಯನವಾದನಂತರ ಮಂತ್ರಗಳಿಂದ ಪವಿತ್ರಗೊಂಡವನಾಗಿ ಕರ್ಮಕ್ಕೆ ಅಧಿಕಾರ ಪಡೆಯುತ್ತಾನೆ ॥

ಕಾತ್ಯಾಯನಃ –

ಯತ್ತು ಅಸಂಸ್ಕೃತೋಽನಪತ್ಯಶ್ಚಾಹ್ಯಗ್ನಿದಾನಂ ಸಮಂತ್ರಕಂ । ಕರ್ತವ್ಯಮಿತರತ್ ಸರ್ವಂ ಕಾರಯೇದನ್ಯ ಮೇವ ತು । ಇತಿ ಕಾತ್ಯಾಯನ ವಚನಂ ತನ್ಮಂತ್ರೋಚ್ಚಾರಣಾಶಕ್ತ ವಿಷಯಂ । ಏತದೇವಾಭಿಪ್ರೇತ್ಯ ವ್ಯಾಘ್ರಪಾದಃ ॥

ಇನ್ನು, ಮೂಗ, ಕಿವುಡ ಮುಂತಾದ ಮಂತ್ರವನ್ನು ಹೇಳಲೂ ಆಗದಿದ್ದವರೂ ಸಹಾ ಅಗ್ನಿದಹನವನ್ನು ಮಾತ್ರ ಸಮಂತ್ರಕವಾಗಿ ಮಾಡಬೇಕು । ಮಂತ್ರವನ್ನು ಬೇರೆಯವರು ಹೇಳಿ, ತಂತ್ರವನ್ನು ಇವರು ಮಾಡಬೇಕು । ಅಥವ ತಂತ್ರವನ್ನೂ ಮಾಡಲು ಅಸಮರ್ಥರಾದರೆ, ಬೇರೆಯವರ ಬಳಿಯೇ ಎಲ್ಲವನ್ನೂ ಮಾಡಿಸಬೇಕು । ಇದು ಅಶಕ್ತರಿಗೆ ಹೇಳಿರುವ ವಿಷಯವು ॥

ವ್ಯಾಘ್ರಪಾದಃ –

ನವಶ್ರಾದ್ಧೇ ಮಾಸಿಕೇ ಚ ಸಪಿಂಡೀಕರಣೇ ತಥಾ । ಋತ್ವಿಕ್ ಶಿಷ್ಯಾದಿಭಿಃ ಕಾರ್ಯಂ ಬ್ರಾಹ್ಮಣಂ ವಾ ನಿಯೋಜಯೇತ್ ಇತಿ ॥ ಶಕ್ತಃ ಸರ್ವಂ ಪ್ರೇತಕರ್ಮ ಮಂತ್ರವದೇವ ಕುರ್ಯಾತ್ । ಅಶಕ್ತಸ್ತು ದಾಹಮಾತ್ರಂ ಮಂತ್ರವದೇವ ಕುರ್ಯಾತ್ । ಅನ್ಯತ್ ಸರ್ವಂ ಪ್ರತ್ಯಾಸನ್ನೇನ ಕರ್ತ್ರಂತರೇಣ ದರ್ಭಪ್ರದಾನಾನುಜ್ಞಯಾ ಕಾರಯೇತ್ । ಅಯಂ ಚ ಮಂತ್ರೋಚ್ಚಾರಣಾಧಿಕಾರಃ ತ್ರಿವರ್ಷ ಕೃತ ಚೂಡಸ್ಯ ತ್ರಿವರ್ಷಸ್ಯ ವಾ ॥

ನವಶ್ರಾದ್ಧದಲ್ಲಿ, ಮಾಸಿಕ, ಸಪಿಂಡೀಕರಣ ಇವುಗಳಲ್ಲಿ ತಾನು ಕರ್ಮಮಾಡಲು ಅಶಕ್ತನಾದರೆ, ಋತ್ವಿಜರು ಅಥವಾ ಶಿಷ್ಯಾದಿಗಳಿಂದ ಮಾಡಿಸಬೇಕು । ಶಕ್ತನಾಗಿದ್ದರೆ, ಎಲ್ಲವನ್ನೂ ಇವನೇ ಮಾಡಬೇಕು । ಅಶಕ್ತನಾದವನು ದಹನವೊಂದನ್ನು ಮಂತ್ರಪೂರ್ವಕವಾಗಿ ಮಾಡಬೇಕು । ಉಳಿದ ಬೇರೆಕರ್ಮಗಳನ್ನು ಉಳಿದ ಕರ್ತೃಗಳಿಗೆ ದರ್ಭೆಯಿಂದ ವರಣೆಕೊಟ್ಟು ಮಾಡಿಸಬೇಕು । ಇಲ್ಲಿ ಮಂತ್ರೋಚ್ಚಾರಣೆ ಮಾಡುವ ಸಾಮರ್ಥ್ಯವು, ೩ ವರ್ಷಗಳಾದ ಅಥವ ಚೂಡಾಕರ್ಮವಾಗಿರುವ ಮಕ್ಕಳಿಗೆ ಎಂದು ಅರ್ಥ ॥

ಸುಮಂತುಃ –

ಅನುಪೇತೋಽಪಿ ಕುರ್ವೀತ ಮಂತ್ರವತ್ ಪ್ರೈತೃಮೇಧಿಕಂ । ಯದ್ಯಸೌ ಕೃತಚೂಡಸ್ಸ್ಯಾದ್ಯದಿ ವಾಸ್ಯಾತ್ ತ್ರಿವತ್ಸರಃ ಇತಿ ॥

ಉಪನಯನವಾಗದಿದ್ದರೂ, ಹೆತ್ತವರ ಔರ್ಧ್ವದೈಹಿಕ ಕರ್ಮವನ್ನು ಮಂತ್ರಪೂರ್ವಕವಾಗಿ ಮಾಡಬೇಕು । ಚೂಡಾಕರ್ಮವಾಗಿದ್ದರೆ ಅಥವ ಚೂಡಾಕರ್ಮದ ವಯಸ್ಸಾಗಿದ್ದರೆ, ಅವನು ಮಂತ್ರವನ್ನು ಹೇಳಲು ಸಮರ್ಥ ಎಂದು ನಿಶ್ಚಯಿಸಿ, ಅವನಿಂದಲೇ ಕರ್ಮ ಮಾಡಿಸಬೇಕು ॥

ಸ್ಮೃತ್ಯಂತರೇ –

ಪುತ್ರಸ್ತ್ವಕೃತ ಚೌಲೋಽಪಿ ಪಿತ್ರೋಃ ಸಂಸ್ಕಾರಮರ್ಹತಿ । ಚೌಲಂ ಹ್ಯವಿಧಿನಾ ಕುರ್ಯಾತ್ ಪಶ್ಚಾಚ್ಚೌಲಂ ಯಥಾವಿಧಿ ಇತಿ । ಪಶ್ಚಾತ್ಸಪಿಂಡೀಕರಣಾನಂತರಂ ॥

ಚೂಡಾಕರ್ಮವು ಆಗದಿದ್ದರೂ, ಮಗನು ತಂದೆತಾಯಿಯರ ಔರ್ಧ್ವದೈಹಿಕ ಕರ್ಮವನ್ನು ಮಾಡಲು ಯೋಗ್ಯನಾಗಿರುತ್ತಾನೆ । ಆ ಸಮಯದಲ್ಲಿ ಅವಿಧಿಯಿಂದ ಚೌಲವನ್ನು(ಕ್ಷೌರ) ಮಾಡಿ, ಸಂಪಿಂಡಿಕರಣದ ನಂತರ ಯಥಾವಿಧಿಯಾಗಿ ಚೌಲವನ್ನು ಮಾಡಬೇಕು ॥

ವ್ಯಾಘ್ರಪಾದ ವಚನಂ –

ಕೃತ ಚೌಲಸ್ತು ಕುರ್ವೀತ ಉದಕಂ ಪಿಂಡಮೇವ ಚ । ಸ್ವಧಾಕಾರಂ ಪ್ರಯುಂಜೀತ ವೇದೋಚ್ಚಾರಂ ನ ಕಾರಯೇತ್ ಇತಿ ॥

ಚೂಡಾಕರ್ಮವಾದವರು, ಹೆತ್ತವರಿಗೆ ತರ್ಪಣ – ಪಿಂಡದಾನಗಳನ್ನೂ ಮಾಡಬೇಕು । ಹಾಗೂ ಸ್ವಧಾನಿನಯನವನ್ನೂ ಮಾಡಬೇಕು । ಆದರೆ ಮಂತ್ರಗಳನ್ನು ಹೇಳಿಸಬಾರದು ॥

ಸ್ಮೃತ್ಯಂತರ ವಚನಂ –

ಕೃತ ಚೌಲೋಽನುಪೇತಸ್ತು ಪಿತ್ರೋಃ ಶ್ರಾದ್ಧಂ ಸಮಾಚರೇತ್ । ಉದಾಹರೇತ್ ಸ್ವಧಾಕಾರಂ ನ ತು ವೇದಾಕ್ಷರಾಣ್ಯಸೌ ಇತಿ ॥ ಏತಯೋಃ ಪೂರ್ವೋಕ್ತಮನ್ವಾದಿ ವಚನಾನಾಂ ಚ ವಿಕಲ್ಪ ಇತಿ ಚಂದ್ರಿಕಾಯಾಂ ಉಕ್ತಂ । ಏತತ್ ವಚನದ್ವಯಂ ಪ್ರಥಮವರ್ಷ ಕೃತಚೂಡ ವಿಷಯಂ ಇತಿ ॥

ಚೌಲವಾದವನು, ಉಪನಯನವಾಗದಿದ್ದರೂ, ಹೆತ್ತವರ ಶ್ರಾದ್ಧವನ್ನು ಮಾಡಬೇಕು । ಮಂತ್ರಗಳನ್ನು ಹೇಳದೇ ಸ್ವಧಾಕಾರವನ್ನು ಮಾತ್ರ ಹೇಳಬೇಕು । ಈ ೨ ಸ್ಮೃತಿಗೂ ಹಿಂದೆ ಹೇಳಿದ ಮನ್ವಾದಿ ವಚನಗಳಿಗೂ ವಿಕಲ್ಪವುಂಟು ಎಂದು ಚಂದ್ರಿಕೆಯಲ್ಲಿ ಹೇಳಿದೆ । ಈ ೨ ರಲ್ಲಿ ಹೇಳಿದ ಚೂಡಾಕರ್ಮವು ಮೊದಲನೆ ವರ್ಷದಲ್ಲಿ ಮಾಡುವ ಚೌಲದ ವಿಷಯವಾಗಿದೆ ॥

ಕಾಲಾದರ್ಶ ದೀಪಿಕಾದೌ –

ಅತ್ರಿವರ್ಷಸ್ಯಾಕೃತ ಚೌಲಸ್ಯ ವಪನನಿಷೇಧೋಽಪಿ ಸ್ಮರ್ಯತೇ । ಪುತ್ರಸ್ತ್ವಕೃತ ಚೌಲೋಽಪಿ ಪಿತ್ರೋಃ ಸಂಸ್ಕಾರಮರ್ಹತಿ । ನ ತಸ್ಯ ವಪನಂ ಕುರ್ಯಾತ್ತೇನ ಕರ್ಮಾಣಿ ಕಾರಯೇತ್ ಇತಿ ॥

೩ ವರ್ಷದವರೆಗೆ ಚೌಲವಾಗದಿದ್ದರೆ, ವಪನ ನಿಷೇಧವನ್ನು ಹೇಳಿದೆ । ಮಗನು ಚೂಡಾಕರ್ಮವಾಗದಿದ್ದರೂ ಹೆತ್ತವರ ಕರ್ಮಕ್ಕೆ ಯೋಗ್ಯನಾಗುತ್ತಾನೆ । ಅವನಿಗೆ ವಪನವನ್ನು ಮಾಡಿಸದೇ ಉಳಿದ ಎಲ್ಲ ಕರ್ಮಗಳನ್ನೂ ಮಾಡಿಸಬೇಕು ॥

ಸುಮಂತುಃ –

ಪ್ರಥಮ ವತ್ಸರೇ ತು ಸಂಸ್ಕಾರಾಧಿಕಾರೀ ನ ಭವತೀತ್ಯಾಹ । ಪುತ್ರಸ್ಯೋತ್ಪತ್ತಿಮಾತ್ರೇಣ ಸಂಸ್ಕುರ್ಯಾದ್ಧೃಣಮೋಚನಾತ್ । ಪಿತರಾವಾಬ್ದಿಕಾಚ್ಚೌಲಾತ್ ಪೈತೃಮೇಧೇನ ಕರ್ಮಣಾ । ಚೌಲಂ ಯದ್ಯಾಬ್ದಿಕಾದರ್ವಾಕ್ ನ ಕುರ್ಯಾತ್ ಪೈತೃಮೇಧಿಕಂ । ತೃತೀಯವತ್ಸರಾದೂರ್ಧ್ವಂ ಮಂತ್ರವತ್ ತತ್ಸಮಾಪಯೇತ್ । ಪ್ರಥಮವತ್ಸರಾತ್ ಪ್ರಥಮವರ್ಷ ಚೌಲಾದ್ವಾ ಪರಂ ಋಣಮೋಚನಾದ್ಧೇತೋಃ ಪಿತರೌ ಸಂಸ್ಕುರ್ಯಾತ್ । ಅಬ್ದಪರಿಸಮಾಪ್ತೇಃ ಪ್ರಥಮವರ್ಷ ಚೌಲಾದ್ವಾ ಪೂರ್ವಂ ಪೈತೃಮೇಧಿಕಂ ನ ಕುರ್ಯಾತ್ । ದರ್ಭಾ ದಾನೇನಾನ್ಯ ಏವ ಕುರ್ಯಾತ್ । ತೃತೀಯವತ್ಸರಾಚ್ಚೌಲಾದ್ವಾ ಪರಂ ಮಂತ್ರವದೇವ ಪೈತೃಮೇಧಿಕಂ ಸಮಾಪಯೇದಿತ್ಯರ್ಥಃ ॥

೧ ವರ್ಷದ ಮಗುವಿಗೆ ಸಂಸ್ಕಾರಾದಿಗಳನ್ನು ಮಾಡಲು ಅಧಿಕಾರವಿಲ್ಲ । ಆದರೆ ಮಗನು ಹುಟ್ಟಿದಮಾತ್ರದಿಂದ ತಂದೆತಾಯಿಗಳ ಋಣ ವಿಮೋಚನೆಯನ್ನು ಮಾಡುತ್ತಾನಾದ್ದರಿಂದ, ಮಗನು ೧ ವರ್ಷದವನಾದರೂ ಕರ್ಮಕ್ಕೆ ಅಧಿಕಾರಿಯೇ । ಆ ತಂದೆತಾಯಿಯರು, ಮಗನು ಮಾಡುವ ಆಬ್ದಿಕ(ಶ್ರಾದ್ಧ)ದಿಂದ ಹಾಗೂ ಕ್ಷೌರದಿಂದ ಹಾಗೂ ಪೈತೃಮೇಧಿಕ ಕರ್ಮದಿಂದ ಋಣಮುಕ್ತರಾಗುತ್ತಾರೆ । ಆದರೆ ಕೆಲವರ ಅಭಿಪ್ರಾಯದಂತೆ, ಒಂದುವೇಳೆ ಚೌಲವನ್ನು ೧ ವರ್ಷಕ್ಕಿಂತ ಮುಂಚೆ ಮಾಡದಿದ್ದರೆ, ಪಿತೃಮೇಧಕರ್ಮವನ್ನು ಮಾಡಲು

ಅಧಿಕಾರ ಬರುವುದಿಲ್ಲ । ೩ ವರ್ಷವಾಗಿರುವ ಮಗುವು ಮಂತ್ರಪೂರ್ವಕವಾಗಿ ತಂದೆತಾಯಿಗಳ ಕರ್ಮವನ್ನು ಮಾಡಬೇಕು । ಮೊದಲವರ್ಷ ಕಳೆದ ನಂತರ ಅಥವಾ ಮೊದಲವರ್ಷದಲ್ಲಿ ಚೌಲವಾದ ನಂತರ ಹೆತ್ತವರಿಗೆ ಋಣವಿಮೋಚನೆಯಾಗುತ್ತದೆ ಎಂಬ ಕಾರಣದಿಂದ ಅವರಿಗೆ ಸಂಸ್ಕಾರ ಮಾಡಲು ಅಧಿಕಾರ ಬರುತ್ತದೆ । ಮೊದಲವರ್ಷದ ಒಳಗೆ ಅಥವಾ ಮೊದಲವರ್ಷದ ಚೌಲಕ್ಕಿಂತ ಮುಂಚೆ ಪೈತೃಮೇಧಿಕ ಕರ್ಮವನ್ನು ಮಾಡಬಾರದು । ಆಗ ಬೇರೆಯವರಿಗೆ ದರ್ಭೆಯನ್ನು ವರಣೆಯಾಗಿ ಕೊಟ್ಟು ಅವರಿಂದ ಮಾಡಿಸಬೇಕು । ೩ ವರ್ಷ ಕಳೆದ ನಂತರ ಅಥವಾ ೩ ವರ್ಷದ ಚೌಲವಾದ ನಂತರ ತಂದೆತಾಯಿಯರ ಕರ್ಮವನ್ನು ಮಂತ್ರಪೂರ್ವಕವಾಗಿ ಮಾಡಿ ಮುಗಿಸಬೇಕೆಂದು ಅರ್ಥ ॥

****

11. ದೀಕ್ಷಾಮಧ್ಯೇ ಮಾತಾಪಿತೃ ಸಂಸ್ಕಾರಾಧಿಕಾರಃ

ದೀಕ್ಷಿತಸ್ಯ ದೀಕ್ಷಾಮಧ್ಯೇ ಮಾತೃಪಿತೃ ಮರಣ ವಿಷಯೇ ।

ಸೋಮಯಾಗಾದಿ ಯಾಗಗಳನ್ನು ಮಾಡುವ ಸಮಯದಲ್ಲಿ, ದೀಕ್ಷಿತನಾದ ದೀಕ್ಷೆಯಲ್ಲಿರುವ ಯಜಮಾನನ ತಂದೆತಾಯಿಯ ಮರಣವಾದರೆ, ಆ ವಿಷಯದಲ್ಲಿ ಈಗ ಹೇಳುತ್ತೇವೆ ॥

ಕೌಂಡಿನ್ಯಃ –

ದೀಕ್ಷಿತೋಽಪ್ಯೇಕಪುತ್ರಶ್ಚೇನ್ಮಾತಾ ಪಿತ್ರೋರ್ಮೃತಿರ್ಯದಿ । ಸಂಸ್ಕೃತ್ಯ ಶಾಲಾಮಾಗತ್ಯ ಯಜ್ಞಶೇಷಂ ಸಮಾಪಯೇತ್ ॥

ಸೋಮಯಾಗಾದಿಗಳಲ್ಲಿ ದೀಕ್ಷೆಯಲ್ಲಿರುವ ಯಜಮಾನನು, ಅವರ ತಂದೆತಾಯಿಗಳಿಗೆ ತಾನೊಬ್ಬನೇ ಮಗನಾಗಿದ್ದಾಗ, ಆ ದೀಕ್ಷಾಸಮಯದಲ್ಲಿ ಒಂದುವೇಳೆ ತಂದೆತಾಯಿಯರ ಮರಣವಾದರೆ, ಅವರ ಔರ್ಧ್ವದೈಹಿಕ ಸಂಸ್ಕಾರವನ್ನು ಸಂಪೂರ್ಣವಾಗಿ ಮಾಡಿ ನಂತರ ಪುನಃ ಯಜ್ಞಶಾಲೆಗೆ ಬಂದು ಯಾಗವನ್ನು ಸಂಪೂರ್ಣಗೊಳಿಸಬೇಕು ॥

ಶಾಂಡಿಲ್ಯೋಽಪಿ –

ದೀಕ್ಷಿತೋಽಪ್ಯೇಕ ಪುತ್ರಶ್ಚೇತ್ ಮಾತಾಪಿತ್ರೋರ್ಮೃತಿರ್ಯದಿ । ದೀಕ್ಷಾರೂಪಂ ನಿಧಾಯಾತ್ರ ಸಂಸ್ಕುರ್ಯಾನ್ನೋದಕಾಪ್ಲವಃ । ಪಾವಯೇತ್ ದರ್ಭಪುಂಜೀಲ್ಯೈಃ ದೀಕ್ಷಾರೂಪಂ ಯಥಾವಿಧಿ ಇತಿ । ಏಕಪುತ್ರ ಇತಿ ವಿಶೇಷೋಪಾದಾನಾತ್ ಪುತ್ರಾಂತರ ಸಂಭವೇ ಸ ಏವ ಕುರ್ಯಾತ್ । ನೋದಕಾಪ್ಲವಃ ಉದಕದಾನಮಪಿ ನಾಸ್ತಿ । ಸ್ನಾನಮಾತ್ರಮಸ್ತಿ । ಸ್ನಾನತಃ ಸದ್ಯಃ ಶೌಚಸ್ಯೋಕ್ತತ್ವಾತ್ ॥

ದೀಕ್ಷಿತನಾದವನು ತನ್ನ ತಂದೆತಾಯಿಗಳಿಗೆ ಒಬ್ಬನೇ ಮಗನಾದರೆ, ಆ ದೀಕ್ಷಾಸಮಯದಲ್ಲಿ ತಂದೆತಾಯಿಗಳ ಮರಣವಾದರೆ, ಆ ದೀಕ್ಷೆಯನ್ನು ಅಲ್ಲಿಗೇ ನಿಲ್ಲಿಸಿ, ಔರ್ಧ್ವದೈಹಿಕ ಕರ್ಮವನ್ನು ಸಂಪೂರ್ಣಗೊಳಿಸಬೇಕು । ಆದರೆ ಉದಕದಾನ(ತರ್ಪಣ) ಇಲ್ಲ । ದರ್ಭೆಮುಷ್ಟಿಯಿಂದ ದೀಕ್ಷೆಯನ್ನು ಶಾಸ್ತ್ರವು ಹೇಳಿದ ರೀತಿಯಲ್ಲಿ ಮತ್ತೆ ಪವಿತ್ರಗೊಳಿಸಿ, ತಂದೆತಾಯಿಗಳ ಕರ್ಮವನ್ನು ಪೂರ್ತಿಗೊಳಿಸಿದ ನಂತರ ದೀಕ್ಷೆಯನ್ನು ಪೂರ್ಣಗೊಳಿಸಬೇಕು । ಇಲ್ಲಿ ಒಬ್ಬನೇ ಮಗನಿದ್ದರೆ ಎಂದು ವಿಶೇಷವಾಗಿ ತೆಗೆದುಕೊಂಡಿರುವುದರಿಂದ, ಬೇರೇ ಮಕ್ಕಳಿದ್ದರೆ, ಆಗ ಅವರೇ ಔರ್ಧ್ವದೈಹಿಕ ಕರ್ಮವನ್ನು ಮಾಡಬೇಕು । ದೀಕ್ಷಿತ ಮಗನಿಗೆ, ಉದಕದಾನವಿಲ್ಲ । ಸ್ನಾನ ಮಾತ್ರವುಂಟು । ಏಕೆಂದರೆ ಸ್ನಾನದಿಂದಲೇ ತಕ್ಷಣ ಶುಚಿಯಾಗುತ್ತಾನೆಂದು ಸ್ಮೃತಿಯಿರುವುದರಿಂದ ॥

ಸ್ಮೃತ್ಯಂತರೇ –

ಜ್ಯೇಷ್ಠಸ್ಯ ತು ಕ್ರತೋರ್ಮಧ್ಯೇ ಮಾತಾಪಿತ್ರೋರ್ಮೃತಿರ್ಯದಿ । ಸಂಸ್ಕೃತ್ಯ ಶಾಲಾಮಾಗತ್ಯ ಯಜ್ಞಶೇಷಂ ಸಮಾಪಯೇದಿತಿ । ಅನ್ಯಥಾ, ದೀಕ್ಷಿತೋಽಪಿ ಏಕಪುತ್ರಶ್ಚೇತ್ ಇತಿ ವಚನವಿರೋಧಾಪತ್ತೇಃ ॥

ಒಂದುವೇಳೆ ದೀಕ್ಷೆಯಲ್ಲಿರುವವನು ದೊಡ್ಡಮಗನಾಗಿದ್ದರೆ, ಆಗ ತಂದೆತಾಯಿಗಳ ಮರಣವು ದೀಕ್ಷಾಸಮಯದಲ್ಲೇ ಆದರೆ । ಅವನೇ ಔರ್ಧ್ವದೈಹಿಕ ಸಂಸ್ಕಾರವನ್ನು ಮಾಡಬೇಕು । ಔರ್ಧ್ವದೈಹಿಕ ಕರ್ಮವನ್ನು ಮುಗಿಸಿದನಂತರ ಯಜ್ಞಶಾಲೆಗೆ ಬಂದು

ಯಜ್ಞವನ್ನು ಮುಗಿಸಬೇಕು । ಹೀಗೆ ಅರ್ಥವಾಡದಿದ್ದರೆ, ದೀಕ್ಷಿತೋಪಿ ಏಕಪುತ್ರಶ್ಚೇತ್ ಎಂಬ ವಾಕ್ಯಕ್ಕೆ ವಿರೋಧವುಂಟಾಗುತ್ತದೆ ॥

****

12. ವಿವಾಹಾದಿ ಕರ್ಮಮಧ್ಯೇ ಪಿತ್ರೋರ್ಮೃತೌ ತು ವಿಶೇಷಃ

ಮಾತಾಪಿತ್ರೋರ್ಮೃತಿ ಪ್ರಾಪ್ತೌ ವಿವಾಹಾದಿಷು ಕರ್ಮಸು । ತಿಲಪಿಂಡಂ ತು ಕರ್ತವ್ಯಂ ಅನ್ಯಶ್ರಾದ್ಧಂ ತು ವರ್ಜಯೇತ್ ಇತಿ । ದಹನಂ ತಿಲಮಿಶ್ರಪಿಂಡ ದಾನಂ ಚ ಕರ್ತವ್ಯಂ । ಅನ್ಯತ್ ನವಶ್ರಾದ್ಧಾದಿಕಂ ವರ್ಜಯೇದಿತ್ಯರ್ಥಃ ॥

ಒಂದುವೇಳೆ ವರನ ವಿವಾಹ ಹಾಗೂ ಮುಂತಾದ ಸಂಸ್ಕಾರಗಳ ಮಧ್ಯದಲ್ಲಿ ತಂದೆತಾಯಿಯರ ಮರಣವುಂಟಾದರೆ । ಔರ್ಧ್ವದೈಹಿಕಕರ್ಮವನ್ನು ಮಾಡಿ, ಎಳ್ಳಿನಪಿಂಡವನ್ನು ಕೊಡಬೇಕು । ನವಶ್ರಾದ್ಧಾದಿಗಳನ್ನು ಬಿಡಬೇಕು । ದಹನ, ತಿಲಮಿಶ್ರಿತ ಪಿಂಡದಾನ ಇವೆರಡನ್ನು ಮಾಡಬೇಕು । ಬೇರೇ ನವಶ್ರಾದ್ಧಾದಿಗಳನ್ನು ಬಿಡಬೇಕು ॥

****

13. ಕ್ರಮೇಣ ಪ್ರೇತಕಾರ್ಯ ಕರ್ತೃನಾಹ

ಮರೀಚಿಃ –

ಪುತ್ರಃ ಪೌತ್ರಶ್ಚ ತಜ್ಜಶ್ಚ ಪುತ್ರಿಕಾಪುತ್ರ ಏವ ಚ । ಪತ್ನೀ ಭ್ರಾತಾ ಚ ತಜ್ಜಶ್ಚ ಪಿತಾ ಮಾತಾ ಸ್ನುಷಾ ತಥಾ । ಭಗಿನೀ ಭಾಗಿನೇಯಶ್ಚ ಸಪಿಂಡೋ ಧನಹಾರ್ಯಪಿ । ಪೂರ್ವಪೂರ್ವ ವಿನಾಶೇಸ್ಯುಃ ಉತ್ತರೋತ್ತರ ಪಿಂಡದಾಃ ॥

ತಂದೆತಾಯಿಯರ ಮರಣವಾದಾಗ, ಪ್ರಧಾನವಾದ ಕರ್ತೃವು ಮಕ್ಕಳಾಗುತ್ತಾರೆ । ಮಕ್ಕಳಿಲ್ಲದಿದ್ದರೆ, ಮೊಮ್ಮಕ್ಕಳು, ಅವರಿಲ್ಲದಿದ್ದರೆ ಮರಿಮಕ್ಕಳು । ಅವರಿಲ್ಲದಿದ್ದರೆ,

ಮಗಳ ಮಕ್ಕಳು । ಅವರೂ ಇಲ್ಲದಿದ್ದರೆ ತನ್ನ ಪತ್ನಿ । ಹಾಗೆಯೇ ಅಣ್ಣತಮ್ಮಂದಿರು ಹಾಗೂ ಅವರ ಮಕ್ಕಳು । ಮೃತನ ತಂದೆ, ತಾಯಿ ಹಾಗೂ ಸೊಸೆ ಹಾಗೂ ಅಕ್ಕತಂಗಿಯರು ಹಾಗೂ ಇವರ ಮಕ್ಕಳು । ಹಾಗೂ ಜ್ಞಾತಿಗಳು ಹಾಗೂ ಅವರಿಂದ ಧನ, ಆಸ್ತಿಗಳನ್ನು ಪಡೆದುಕೊಂಡವರು । ಇವರುಗಳು ಕ್ರಮವಾಗಿ ಮೊದಲು ಮೊದಲಿನವರು ಇಲ್ಲದಿದ್ದರೆ, ಮುಂದುಮುಂದಿನವರು ಕರ್ತೃಗಳಾಗುತ್ತಾರೆ ॥

ಪರಾಶರೋಽಪಿ –

ಪುತ್ರಃ ಪೌತ್ರಃ ಪ್ರಪೌತ್ರೋ ವಾ ತದ್ವದ್ವಾ ಭ್ರಾತೃಸಂತತಿಃ ಇತಿ ॥

ಮಗ, ಮೊಮ್ಮಕ್ಕಳು, ಮರಿಮಕ್ಕಳು, ಸಹೋದರರು, ಅವರ ಮಕ್ಕಳು ಇವರುಗಳು ಕ್ರಮವಾಗಿ ಔರ್ಧ್ವದೈಹಿಕ ಕರ್ಮಕ್ಕೆ ಕರ್ತೃಗಳಾಗುತ್ತಾರೆ ॥

ಕಾಲಾದರ್ಶೇಽಪಿ –

ದಾಹಾದಿ ಮಂತ್ರವತ್ ಪಿತ್ರೋರ್ವಿದಧ್ಯಾದೌರಸಃ ಸುತಃ । ತದಭಾವೇ ತು ಪೌತ್ರಶ್ಚ ಪ್ರಪೌತ್ರಃ ಪುತ್ರಿಕಾಸುತಃ ಇತಿ । ಕ್ಷೇತ್ರಜೋ ದತ್ತಕಃ ಕ್ರೀತಃ ಕೃತ್ರಿಮೋ ದತ್ತ ಏವ ವಾ । ಅಪವಿದ್ಧಶ್ಚ ಪತ್ನೀ ಚ ಗೂಢ್ಜಃ ಕನ್ಯಕಾಸುತಃ । ಪೌನರ್ಭವಃ ಸಹೋಢೋಽನ್ಯೋ ನಂದನಶ್ಚ ಸುತೀಕೃತಃ । ದೌಹಿತ್ರೋ ಧನಹಾರೀ ಚ ಭ್ರಾತಾ ತತ್ಪುತ್ರ ಏವ ವಾ । ಪಿತಾ ಮಾತಾ ಸ್ನುಷಾ ಚೈವ ಸ್ವಸಾ ತತ್ಪುತ್ರ ಏವ ಚ । ಸಪಿಂಡಃ ಸೋದಕೋ ಮಾತುಃ ಸಪಿಂಡಶ್ಚ ಸಹೋದರಃ । ಸ್ತ್ರೀ ಚ ಶಿಷ್ಯರ್ತ್ವಿಗಾಚಾರ್ಯಾ ಜಾಮಾತಾ ಚ ಸಖಾಪಿ ವಾ । ಉತ್ಸನ್ನಬಂಧೋ ರಿಕ್ಥೇನ ಕಾರಯೇದವನೀಪತಿಃ ಇತಿ । ಗರ್ಭಿಣ್ಯಾಂ ಪರಿಣೀತಾಯಾಂ ತತೋ ಜಾತಃ ಸಹೋಢೋತ್ಥಃ । ಸುತೀಕೃತಃ ಮಾತಾಮಹೇನ ಪುತ್ರತ್ವೇನ ಸ್ವೀಕೃತಃ ॥

ತಂದೆತಾಯಿಯರ ದಾಹಾದಿ ಕರ್ಮಗಳನ್ನು ಮಂತ್ರಪೂರ್ವಕವಾಗಿ ಅವರ ದೊಡ್ಡಮಗ ಅಥವಾ ಉಳಿದ ಮಕ್ಕಳು ಮಾಡಬೇಕು । ಅವರಿಲ್ಲದಿದ್ದರೆ ಮೊಮ್ಮಕ್ಕಳು, ಅವರೂ

ಇಲ್ಲದಿದ್ದರೆ ಮರಿಮಕ್ಕಳು, ಅವರೂ ಇಲ್ಲದಿದ್ದರೆ ಮಗಳ ಮಕ್ಕಳು । ಇವರಾರೂ ಇಲ್ಲದಿದ್ದರೆ, ತನ್ನಿಂದ ಬೇರೇ ಸ್ತ್ರೀಯರಲ್ಲಿ ಹುಟ್ಟಿದ ಮಕ್ಕಳು, ಅವರಿಲ್ಲದಿದ್ದರೆ ದತ್ತುಪುತ್ರ । ಇವರೂ ಇಲ್ಲದಿದ್ದರೆ ಮಾರಾಟದಿಂದ ಕೊಂಡಮಗ, ಅಥವಾ ತಾನೇ ತನ್ನನ್ನು ಮಗನಾಗಿ ಮಾಡಿಕೊಂಡವನು(ಕೃತ್ರಿಮ) । ದಾನವಾಗಿ ಕೊಟ್ಟ ಮಗ । ಗಂಡನಿಂದ ಬಿಡಲ್ಪಟ್ಟಂತಹ ಸ್ತ್ರೀಯಿಂದ ಬೇರೆಯವರು ಪಡೆದಮಕ್ಕಳು ಅಪವಿದ್ದರು । ಇವರಿಲ್ಲದಿದ್ದರೆ ಪತ್ನೀ, ಇವರೂ ಇಲ್ಲದಿದ್ದರೆ ಗುಟ್ಟಾಗಿ ಪಡೆದ ಮಗ । ಇವರೂ ಇಲ್ಲದಿದ್ದರೆ ತನ್ನಿಂದ ಕನ್ಯೆಗೆ ಹುಟ್ಟಿದ ಮಗ । ಶೀಲವತಿಯಾದ ಕನ್ಯೆಯಿಂದ ಅಥವಾ ಶೀಲಹಾಳಾದ ಸ್ತ್ರೀಯಿಂದ ಪಡೆದ ಮಗನು (ಪೌನರ್ಭವನು), ಗರ್ಭಿಣಿಯಾದವಳನ್ನು ಮದುವೆಯಾಗಿ, ಅವಳಿಗೆ ಹುಟ್ಟಿದ ಮಗನು(ಸಹೋಢನು) । ಇವರೂ ಇಲ್ಲದಿದ್ದರೆ ಮಗಳ ಮಕ್ಕಳು, ಅಥವಾ ಸಂಪತ್ತನ್ನು ಪಡೆದವರು ಅಥವಾ ಮೃತರ ಸೋದರರು ಅಥವ ಅವರ ಮಕ್ಕಳು । ಇವರೂ ಇಲ್ಲದಿದ್ದರೆ ಮೃತನ ತಂದೆ ಅಥವ ಸೊಸೆ ಅಥವ ಸೋದರಿಯರು । ಅಥವ ಅವರ ಮಕ್ಕಳು । ಇವರೂ ಇಲ್ಲದಿದ್ದರೆ ಜ್ಞಾತಿಗಳು, ಅಥವಾ ತ್ರಿಪೌರುಷೇಯ ಜ್ಞಾತಿಗಳು ಅಥವ ತಾಯಿಯ ಸೋದರರು । ಇವರಾರೂ ಇಲ್ಲದಿದ್ದರೆ, ಸ್ತ್ರೀ ಅಥವ ಶಿಷ್ಯ ಅಥವ ಮೃತನ ಪುರೋಹಿತ ಅಥವ ಅಳಿಯ ಅಥವಾ ಗೆಳೆಯ । ಹೀಗೆ ಕ್ರಮವಾಗಿ ಇವರುಗಳು ಕರ್ತೃಗಳಾಗುತ್ತಾರೆ । ಇನ್ನು ಮೃತರಿಗೆ ಬಂಧುಗಳು ಯಾರೂ ಇಲ್ಲದಿದ್ದರೆ, ಅವನು ಅನಾಥನಾಗಿದ್ದರೆ, ಪರದೇಶಿಯಾಗಿದ್ದರೆ, ಅವನ ಕರ್ಮವನ್ನು ಆ ಪ್ರದೇಶದ ರಾಜನು(ಮುಖ್ಯಸ್ಥನು) ಮಾಡಿಸಬೇಕು । ಗರ್ಭಿಣಿಯಾದವಳನ್ನು ಮದುವೆಯಾಗಿ, ಅವಳಿಗೆ ಹುಟ್ಟಿದ ಮಗನು ಸಹೋಢ ಎನಿಸಿಕೊಳ್ಳುತ್ತಾನೆ । ತನ್ನ ತಾಯಿಯ ತಂದೆಯಿಂದ, ಮಗನಾಗಿ ಸ್ವೀಕರಿಸಲ್ಪಟ್ಟವನು ಸುತೀಕೃತನು ॥

****

14. ಔರಸಾದಿ ಲಕ್ಷಣಂ

ಯಾಜ್ಞವಲ್ಕ್ಯಃ (೧೨೮–೧೩೨) –

ಔರಸೋ ಧರ್ಮಪತ್ನೀಜಃ ತತ್ಸಮಃ ಪುತ್ರಿಕಾಸುತಃ । ಕ್ಷೇತ್ರಜಃ ಕ್ಷೇತ್ರಜಾತಸ್ತು ಸಗೋತ್ರೇಣೇತರೇಣ ವಾ ॥ ಗೃಹೇ ಪ್ರಚ್ಛನ್ನ ಉತ್ಪನ್ನೋ ಗೂಢಜಸ್ತು ಸುತಃ ಸ್ಮೃತಃ । ಕಾನೀನಃ ಕನ್ಯಕಾಜಾತೋ ಮಾತಾಮಹ ಸುತೋಮತಃ ॥ ಅಕ್ಷತಾಯಾಂ ಕ್ಷತಾಯಾಂ ವಾ ಜಾತಃ ಪೌನರ್ಭವಃ ಸ್ಮೃತಃ । ದದ್ಯಾನ್ಮಾತಾ ಪಿತಾ ವಾ ಯಂ ಸ ಪುತ್ರೋ ದತ್ತಕೋ ಭವೇತ್ ॥ ಕ್ರೀತಸ್ತು ತಾಭ್ಯಾಂ ವಿಕ್ರೀತಃ ಕೃತ್ರಿಮಃ ಸ್ಯಾತ್ ಸ್ವಯಂಕೃತಃ । ದತ್ರಿಮಸ್ತು ಸ್ವಯಂದತ್ತೋ ಗರ್ಭೇವಿನ್ನಃ ಸಹೋಢಜಃ ॥ ಉತ್ಸೃಷ್ಟೋ ಗೃಹ್ಯತೇ ಯಸ್ತು ಸೋಽಪವಿದ್ಧೋ ಭವೇತ್ಸುತಃ । ಪಿಂಡದೋಂಽಶಹರಶ್ಚೈಷಾಂ ಪೂರ್ವಾಭಾವೇ ಪರಃಪರಃ ಇತಿ ॥

ತನ್ನ ಧರ್ಮಪತ್ನಿಯಲ್ಲಿ ಹುಟ್ಟಿದ ಮಕ್ಕಳು, ಔರಸರು । ಅವರಿಗೆ ಸಮನಾದವರು, ತನ್ನ ಮಗಳ ಮಕ್ಕಳು । ವಂಶವನ್ನು ಬೆಳೆಸುವ ಅನಿವಾರ್ಯ ಕಾರಣಕ್ಕಾಗಿ ಮಾತ್ರವೇ, ತನ್ನ ಗೋತ್ರದ ಅಥವಾ ಬೇರೇ ಗೋತ್ರದ ಸ್ತ್ರೀಯಲ್ಲಿಪಡೆದ ಮಕ್ಕಳು ಕ್ಷೇತ್ರಜರು । ತನ್ನ ಮನೆಯಲ್ಲೇ ಗುಟ್ಟಾಗಿ ಬೇರೇಸ್ತ್ರೀಯಿಂದ ಪಡೆದ ಮಗನು ಗೂಢಜನು । ಕನ್ಯೆಯಲ್ಲಿ ಹುಟ್ಟಿದ ಮಗನು, ಕಾನೀನನು । ತಾಯಿಯುತಂದೆಯು ತನ್ನನ್ನು ಮಗನಾಗಿ ಮಾಡಿಕೊಂಡವನು, ಸುತನು । ಶೀಲವತಿಯಾದ ಅಥವಾ ಶೀಲಹಾಳಾದ ಸ್ತ್ರೀಯಲ್ಲಿ ಜನಿಸಿದ ಮಗನು, ಪೌನರ್ಭವನು । ತಾಯಿಯೋ, ತಂದೆಯೋ ಶಾಸ್ತ್ರದಂತೆ ಮಗನನ್ನು ದತ್ತು ಕೊಟ್ಟರೆ, ಅವನು ದತ್ತಕನು । ತಾಯಿತಂದೆರಿಂದ ಮಾರಲ್ಪಟ್ಟವನು ಕ್ರೀತನು । ತಾನೇ ತನ್ನನ್ನು ಮಗನನ್ನಾಗಿ ಮಾಡಿಕೊಂಡವನು ಕೃತ್ರಿಮನು । ಲೌಕಿಕವಾಗಿ, ತಂದೆತಾಯಿಯರು ಇನ್ನೊಬ್ಬರಿಗೆ ಮಗನನ್ನು ಕೊಟ್ಟರೆ, ಅವನು ದತ್ರಿಮನು । ಗರ್ಭಿಣಿಯಾದವಳನ್ನು ಮದುವೆಯಾಗಿ ಅವಳಲ್ಲಿ ಹುಟ್ಟಿದವನು ಸಹೋಢಜನು । ಬೇರೇ ಗಂಡಂದಿರಿಂದ ಬಿಡಲ್ಪಟ್ಟ ಸ್ತ್ರೀಯನ್ನು ಮದುವೆಯಾಗಿ, ಅವಳಲ್ಲಿ ಹುಟ್ಟಿದವನು,

ಅಪವಿದ್ಧನು । ಹಾಗೂ ತ್ರಿಪೌರುಷೇಯದವರು ಪಿಂಡದರು । ಸಪ್ತಪೌರುಷೇಯಾದಿ ಉಳಿದವರು, ಜ್ಞಾತಿಗಳು । ಮೃತರ ಆಸ್ತಿಗಳನ್ನು ಪಡೆದವರು, ಅಂಶಹರರು । ಮೇಲೆ ಹೇಳಿದ ಇವರುಗಳಲ್ಲಿ ಮೊದಮೊದಲಿನವರು ಇಲ್ಲದಿದ್ದರೆ, ಕ್ರಮವಾಗಿ ನಂತರದವರು ಕರ್ತೃಗಳಾಗುತ್ತಾರೆ ॥

ಬೃಹಸ್ಪತಿಃ –

ಪ್ರತೀತಸ್ಯ ಪಿತುಃ ಪುತ್ರೈಃ ಶ್ರಾದ್ಧಂ ದೇಯಂ ಪ್ರಯತ್ನತಃ । ಜಾತಿಬಂಧು ಸುಹೃತ್ ಶಿಷ್ಯೈಃ ಋತ್ವಿಕ್ ಭೃತ್ಯ ಪುರೋಹಿತೈಃ ॥ ಅತ್ರ ಪುತ್ರೈರಿತಿ ಬಹುವಚನಾದುಕ್ತಾ ಔರಸಾದಿ ದ್ವಾದಶವಿಧಪುತ್ರಾ ಗೃಹ್ಯಂತೇ ॥

ಮರಣಹೊಂದಿದಂತಹ ತಂದೆಗೆ ಮಕ್ಕಳು ಪ್ರಯತ್ನಪೂರ್ವಕವಾಗಿ ಶ್ರದ್ಧೆಯಿಂದ ಶ್ರಾದ್ಧ ಮತ್ತು ತರ್ಪಣಾದಿಗಳನ್ನು ಮಾಡಬೇಕು । ಮರಣಿಸಿದ ವ್ಯಕ್ತಿಯ ಸಂಬಂಧಿಕರು, ಸ್ನೇಹಿತ, ಶಿಷ್ಯ ಹಾಗೂ ಋತ್ವಿಜರು ಮತ್ತು ಸೇವಕರು ಹಾಗೂ ಪುರೋಹಿತರು, ಇವರೆಲ್ಲರೂ ಮೃತನಿಗೆ ಮಕ್ಕಳಿಲ್ಲದಿದ್ದರೆ ಮರಣಹೊಂದಿದ ಆ ವ್ಯಕ್ತಿಗೆ ಶ್ರಾದ್ಧವನ್ನು ಮಾಡಲು ಅರ್ಹರಾಗಿರುತ್ತಾರೆ ॥ ಇಲ್ಲಿ ಪುತ್ರೈಃ ಎಂದು ಬಹುವಚನದಿಂದ ಹೇಳಿರುವುದರಿಂದ, ಔರಸ(ತನಗೇ ಹುಟ್ಟಿದ) ಮುಂತಾದ ೧೨ ವಿಧ ಪುತ್ರರನ್ನು ಇಲ್ಲಿ ತೆಗೆದುಕೊಳ್ಳಬೇಕು ॥

ಮನುಃ (೯/೧೮೦) –

ಕ್ಷೇತ್ರಜಾದಿ ಸುತಾನೇತಾನೇಕಾದಶ ಯಥೋದಿತಾನ್ । ಪುತ್ರಪ್ರತಿನಿಧೀನಾಹುಃ ಕ್ರಿಯಾಲೋಪಾನ್ಮನೀಷಿಣಃ ಇತಿ ॥ ಏತತ್ ಗೌಣಪುತ್ರ ಪರಿಗ್ರಹವಚನಂ ಯುಗಾಂತರ ವಿಷಯಂ ।

ತನಗೇ ಹುಟ್ಟಿದ ಮಗನನ್ನೂ ಸೇರಿಸಿಕೊಂಡು, ಉಳಿದ ೧೧ ವಿಧದ ಪುತ್ರಸಮಾನರನ್ನೂ ಇಲ್ಲಿ ಹೇಳಿದೆ । ಈ ೧೧ ವಿಧ ಪುತ್ರರೂ ಔರಸಪುತ್ರನ ಪ್ರತಿನಿಧಿಗಳೇ ಆಗಿರುತ್ತಾರೆ ।

ಆದ್ದರಿಂದ ಇವರನ್ನೂ ಔರ್ಧ್ವದೈಹಿಕಕರ್ಮದ ಲೋಪವಾಗಬಾರದೆಂದು, ಜ್ಞಾನಿಗಳು ಇವರುಗಳನ್ನೂ ಪುತ್ರರೆಂದು ತೀರ್ಮಾನಿಸಿದ್ದಾರೆ। ಈ ೧೧ ವಿಧ ಪುತ್ರರು ಗೌಣಪುತ್ರರು ಎಂಬುದು ಯುಗಾಂತರ ವಿಷಯವು ॥

ಚಂದ್ರಿಕಾ ಸ್ಮೃತ್ಯರ್ಥಸಾರಃ –

ದತ್ತೌರಸೇತರೇಷಾಂ ಚ ಪುತ್ರತ್ವೇನ ಪರಿಗ್ರಹಃ । ಕಲಿಯುಗವರ್ಜ್ಯ ಧರ್ಮಮಧ್ಯೇ ಪರಿಗ್ರಹಣಾತ್ । ಪುತ್ರಿಕಾಪುತ್ರಸ್ತು ನ ನಿಷಿಧ್ಯತೇ – ಪುತ್ರಿಕಾಯಾಂ ಕೃತಾಯಾಂ ತು ಯದಿ ಪುತ್ರೋsನುಜಾಯತೇ । ಸಮಸ್ತತ್ರ ವಿಭಾಗಃ ಸ್ಯಾತ್ ಜ್ಯೈಷ್ಠ್ಯಂ ತತ್ರ ನ ವಿದ್ಯತೇ ॥ ರಿಕ್ಥೇ ಚ ಪಿಂಡದಾನೇ ಚ ಸಮೌ ತೌ ಪರಿಕೀರ್ತಿತೌ । ಔರಸೋ ಧರ್ಮಪತ್ನೀಜಃ ತತ್ಸಮಃ ಪುತ್ರಿಕಾಸುತಃ ॥ ಪುತ್ರಾಸ್ತು ದ್ವಾದಶಪ್ರೋಕ್ತಾ ಮನುನಾ ಯೇsನುಪೂರ್ವಶಃ । ಸಂತಾನಕಾರಣಂ ತೇಷಾಂ ಔರಸಃ ಪುತ್ರಿಕಾಸುತಃ ॥ ಆಜ್ಯಂ ವಿನಾ ಯಥಾ ತೈಲಂ ಸರ್ಪಿಃ ಪ್ರತಿನಿಧಿಃ ಸ್ಮೃತಂ । ತಥೈಕಾದಶ ಪುತ್ರಾಸ್ತು ಪುತ್ರಿಕೌರಸಯೋರ್ವಿನಾ ಇತಿ ॥ ಮನು ಯಾಜ್ಞವಲ್ಕ್ಯಾದಿಭಿಃ ಔರಸ ಸಾಮ್ಯ ಸ್ಮರಣಾದಿತ್ಯಾಹುಃ । ಏವಂ ಚ ಪುತ್ರಪೌತ್ರ ಪ್ರಪೌತ್ರಾಭಾವೇ ಪುತ್ರಿಕಾಪುತ್ರಸ್ಯ ಸತ್ವೇ ಸ ಏವ ಸಂಸ್ಕಾರಾಧಿಕಾರೀ ಭವತಿ । ಯಶ್ಚಾರ್ಥಹರಃ ಸ ಪಿಂಡದಾಯೀ ಇತಿ (೧೫/೩೭) ವಿಷ್ಣುಸ್ಮರಣಾತ್ । ಪೌತ್ರಾದೇಃ ಸತ್ವೇ ತು ತಸ್ಯೈವ ಪ್ರಾಥಮ್ಯಂ ನ ಪುತ್ರಿಕಾಪುತ್ರಾದೇಃ ಪುತ್ರೇಷು ಸತ್ಸು ಪೌತ್ರೇಷು ನಾನ್ಯಂ ವೈ ಕಾರಯೇತ್ಸ್ವಧಾಂ ಇತಿ ನಿಷೇಧಾತ್ ॥

ದತ್ತುಪುತ್ರ ಮತ್ತು ಔರಸಪುತ್ರರನ್ನು ಬಿಟ್ಟು, ಬೇರೆಯವರನ್ನು ಪುತ್ರರನ್ನಾಗಿ ಸ್ವೀಕರಿಸುವುದು ಕಲಿಯುಗ ವರ್ಜ್ಯಪ್ರಕರಣದಲ್ಲಿ ತೆಗೆದುಕೊಂಡಿರುವುದರಿಂದ, ಅವರಿಗೆಲ್ಲಾ ಪುತ್ರತ್ವವು ನಿಷೇಧವಿದೆ । ಆದರೆ ಪುತ್ರಿಕಾಪುತ್ರನಿಗೆ ಮಾತ್ರ ನಿಷೇಧವಿಲ್ಲ । ಪುತ್ರಿಕಾಪುತ್ರನನ್ನು ಪಡೆದಮೇಲೆ, ತನಗೇ ಮಗನು ಹುಟ್ಟಿದರೆ ಅವರಿಬ್ಬರೂ ಆಸ್ತಿ ಮುಂತಾದವುಗಳಲ್ಲಿ ಸಮಭಾಗರು । ಅಲ್ಲಿ ಜ್ಯೇಷ್ಠತ್ವವು ಯಾರಿಗೂ ಇರುವುದಿಲ್ಲ । ಆಸ್ತಿ ಹಾಗೂ

ಪಿಂಡದಾನದಲ್ಲೂ ಇಬ್ಬರೂ ಸಮಭಾಗಿಗಳೆಂದು ಹೇಳಲ್ಪಟ್ಟಿದೆ। ಔರಸನೆಂದರೆ, ತನ್ನ ಧರ್ಮಪತ್ನಿಯಲ್ಲಿ ಹುಟ್ಟಿದವನು। ಅವನಿಗೆ ಸಮನು ಪುತ್ರಿಕಾಪುತ್ರನು। ಇನ್ನು ಮನುವು, ೧೨ ವಿಧ ಪುತ್ರರನ್ನು ಅನುಕ್ರಮವಾಗಿ ಹೇಳಿದ್ದಾನೆ । ಇವರಲ್ಲಿ ಔರಸಪುತ್ರ ಮತ್ತು ಪುತ್ರಿಕಾಪುತ್ರರು ವಂಶವೃದ್ಧಿಗೆ, ಸಂತಾನವೃದ್ಧಿಗೆ ಕಾರಣೀಭೂತರು। ಹೇಗೆಂದರೆ – ಹೋಮದಲ್ಲಿ ಆಜ್ಯ ಅಭಾವವಾದಾಗ, ಅದಕ್ಕೆ ಪ್ರತಿನಿಧಿಯಾಗಿ ಎಣ್ಣೆಯನ್ನು ಇಟ್ಟುಕೊಳ್ಳಬಹುದೆಂದು ಸ್ಮೃತಿಯಲ್ಲಿದೆ। ಹಾಗೆಯೇ ಔರಸಾ ಮತ್ತು ಪುತ್ರಿಕಾಪುತ್ರರು ಇಲ್ಲದಿದ್ದಾಗ, ಇನ್ನು ಉಳಿದ ೧೧ ವಿಧದ ಪುತ್ರರನ್ನು ಪುತ್ರ ಪ್ರತಿನಿಧಿಯಾಗಿ ಇಟ್ಟುಕೊಳ್ಳಬೇಕು, ಮನು ಮತ್ತು ಯಾಜ್ಞವಲ್ಕ್ಯ ಮುಂತಾದ ಸ್ಮೃತಿಕಾರರು ಪುತ್ರಿಕಾಪುತ್ರನು ಔರಸನಿಗೆ ಸಮನೆಂದು ಹೇಳಿದ್ದಾರಾದ್ದರಿಂದ। ಹೀಗೆ ಮಗ, ಮೊಮ್ಮಗ, ಮರಿಮಕ್ಕಳಿಲ್ಲದಿದ್ದರೆ, ಪುತ್ರಿಕಾಪುತ್ರನಿರಲು, ಆಗ ಅವನೇ ಔರ್ಧ್ವದೈಹಿಕ ಸಂಸ್ಕಾರಕ್ಕೆ ಅಧಿಕಾರಿಯು। ಏಕೆಂದರೆ ಮರಣಹೊಂದಿದವನ ಆಸ್ತಿ ಮುಂತಾದ ಅಧಿಕಾರವು ಯಾರಿಗೆ ಬರುತ್ತದೋ ಅವನೇ ಅವನಿಗೆ ಕರ್ಮವನ್ನು ಮಾಡಲು ಅಧಿಕಾರಿಯು ಎಂದು ವಿಷ್ಣುಪುರಾಣದಲ್ಲೂ ಇರುವುದರಿಂದ। ಮಗ, ಮೊಮ್ಮಗ, ಮರಿಮಕ್ಕಳಿದ್ದರೆ ಅವರೇ ಔರ್ಧ್ವದೈಹಿಕ ಕರ್ಮಕ್ಕೆ ಅಧಿಕಾರಿಗಳು, ಪುತ್ರಿಕಾಪುತ್ರನು ಅಲ್ಲ । ಏಕೆಂದರೆ ಮಕ್ಕಳು ಅಥವಾ ಮೊಮ್ಮಕ್ಕಳು ಅಥವ ಮರಿಮಕ್ಕಳಿದ್ದಾಗ, ಬೇರೆಯವರಿಗೆ ಸ್ವಧಾಕಾರವನ್ನು ಮಾಡಲು ಅಧಿಕಾರವಿರುವುದಿಲ್ಲ ಎಂದು ನಿಷೇಧವಾಕ್ಯವಿರುವುದರಿಂದ ॥

ತಥಾ ಚ ಕ್ರಮಂ ದರ್ಶಯತಿ ಮರೀಚಿಃ –

ಪುತ್ರಃ ಪೌತ್ರಶ್ಚ ತಜ್ಜಶ್ಚ ಪುತ್ರಿಕಾಪುತ್ರ ಏವ ಚ ಇತಿ । ತಥೈವ ಸ್ಮೃತಿರತ್ನಕಾಲಾದರ್ಶಾದೌ ನಿರ್ಣೀತಂ ॥

ಮಗ, ಮೊಮ್ಮಗ, ಮರಿಮಗ ನಂತರ ಪುತ್ರಿಕಾಪುತ್ರ, ಹೀಗೆ ಕ್ರಮವಾಗಿ। ಔರ್ಧ್ವದೈಹಿಕ ಕರ್ಮಕ್ಕೆ ಅಧಿಕಾರಿಗಳು ಎಂದು ಸ್ಮೃತಿರತ್ನಕಾಲಾದರ್ಶಾದಿಗಳಲ್ಲಿ ನಿರ್ಣಯಿಸಿದೆ ॥

****

15. ಪುತ್ರಿಕಾಪುತ್ರಸ್ಯ ಪೌತ್ರಸಾಮ್ಯಂ ಉಕ್ತಂ

ಬೃಹಸ್ಪತಿನಾ –

ಪೌತ್ರಶ್ಚ ಪುತ್ರಿಕಾಪುತ್ರಃ ಸ್ವರ್ಗಪ್ರಾಪ್ತಿಕರಾವುಭೌ । ರಿಕ್ಥೇ ಚ ಪಿಂಡದಾನೇ ಚ ಸಮಾನೌ ಪರಿಕೀರ್ತಿತೌ ಇತಿ । ತತ್ಸಮಃ ಪುತ್ರಿಕಾಸುತಃ ಇತಿ ಔರಸಸಾಮ್ಯ ವಚನಂ ಔರಸ ಸಂತತ್ಯಭಾವೇ ಪುತ್ರಿಕಾಸುತಸ್ಯ ಸಮನಂತರಾಧಿಕಾರಿತ್ವ ಪ್ರತಿಪಾದನಪರಂ ನ ತತ್ ಪೌತ್ರೇಣ ಕರ್ತವ್ಯಂ ಪುತ್ರವಾಂಶ್ಚೇತ್ ಪಿತಾಮಹಃ ಇತಿ ವಚನಂ ಮುಖ್ಯಸಂತಾನ ವಿಷಯಂ । ಅತಃ ಪುತ್ರಿಕಾಪುತ್ರ ದತ್ತಾಪೇಕ್ಷಯಾ ಪೌತ್ರ ಏವ ಮುಖ್ಯಃ । ಪುತ್ರಿಕಾಪುತ್ರಸ್ಯೋಭಯ ಸಂಬಂಧೋಽಪಿ ಸ್ಮರ್ಯತೇ ದೇವಲೇನ ದ್ವ್ಯಮುಷ್ಯಾಯಣಕಾ ದದ್ಯುರ್ದ್ವಾಭ್ಯಾಂ ಪಿಂಡೋದಕೇ ಪೃಥಕ್ ಇತಿ ॥

ಮೊಮ್ಮಗ, ಹಾಗೂ ಪುತ್ರಿಕಾಪುತ್ರ ಇಬ್ಬರೂಕೂಡ ಸ್ವರ್ಗಪ್ರಾಪ್ತಿಗೆ ಕಾರಣೀಭೂತರು । ಆಸ್ತಿ ಮತ್ತು ಶ್ರಾದ್ಧಾದಿಕರ್ಮಗಳಲ್ಲಿ ಇಬ್ಬರೂ ಸಮಾನರು ಎಂದು ಹೇಳಲ್ಪಟ್ಟಿದೆ । ತತ್ಸಮಃ ಪುತ್ರಿಕಾಸುತಃ, ಅಂದರೆ ಪುತ್ರಿಕಾಸುತನು ಔರಸಪುತ್ರನಿಗೆ ಸಮಾನನು ಎಂದು ಹೇಳಿರುವ ಈ ಮಾತು, ಔರಸ ಸಂತತಿ ಇಲ್ಲದಿದ್ದಾಗ, ಪುತ್ರಿಕಾಪುತ್ರನಿಗೆ ಅಧಿಕಾರ ಪ್ರಾಪ್ತಿಯಾಗುತ್ತದೆ ಎಂದು ಹೇಳಲು ಬಂದಿರುವುದು । ಮಗನಿದ್ದಾಗ, ಮೊಮ್ಮಗನು ಔರ್ಧ್ವದೈಹಿಕ ಕರ್ಮವನ್ನು ಮಾಡಬಾರದು ಎಂಬ ಈ ವಿಷಯವು, ಮುಖ್ಯಸಂತಾನವಾದ ಔರಸನನ್ನು ಇಟ್ಟುಕೊಂಡು ಹೇಳಿದುದಾಗಿದೆ । ಆದ್ದರಿಂದ ಪುತ್ರಿಕಾಪುತ್ರನಿಗೆ ಹೋಲಿಸಿದರೆ, ಪೌತ್ರನೇ ಔರ್ಧ್ವದೈಹಿಕಕರ್ಮಕ್ಕೆ ಪ್ರಧಾನನು । ಏಕೆಂದರೆ ಪುತ್ರಿಕಾಪುತ್ರನು ದತ್ತು ತೆಗೆದುಕೊಳ್ಳಲ್ಪಟ್ಟವನಾಗಿರುತ್ತಾನೆ । ಪುತ್ರಿಕಾಪುತ್ರನಿಗೆ, ತನ್ನ ತಂದೆಯ ವಂಶದ ಸಂಬಂಧವೂ ಹಾಗೂ ತನ್ನ ತಾಯಿಯ ತಂದೆಯ ವಂಶದ ಸಂಬಂಧವೂ ಬರುತ್ತದೆಂದು ದೇವಲ ಋಷಿಯು ಹೇಳಿದ್ದಾನೆ । ಹೀಗೆ ೨ ಕಡೆಯ ಸಂಬಂಧವಿರುವುದರಿಂದ, ೨ ಕಡೆಯವರಿಗೂ ಪಿಂಡೋದಕಾದಿಗಳನ್ನೂ ಇವನೇ ಮಾಡಬೇಕು । ಹಾಗಾಗಿ ಮಗ, ಮಗನಮಗ, ಇಬ್ಬರೂ ಇಲ್ಲದಿದ್ದರೆ ಆಗ ಪುತ್ರಿಕಾಸುತನಿಗೇ ಅಧಿಕಾರ ಬರುತ್ತದೆ ॥

ಬರುತ್ತದೆ । ದೌಹಿತ್ರನಾಗಿದ್ದರೆ, ಅವನು ಮಾತಾಮಹನ ಆಸ್ತಿಯಲ್ಲಿ ಅಧಿಕಾರವನ್ನು ಪಡೆದುಕೊಂಡರೆ ಮಾತ್ರ ಕರ್ಮಕ್ಕೂ ಅಧಿಕಾರಿಯಾಗುತ್ತಾನೆ ॥

ತತ್ರ ವಿಷ್ಣುಃ –

ಅಪುತ್ರಪೌತ್ರಸಂತಾನೇ ದೌಹಿತ್ರಾ ಧನಮಾಪ್ನುಯುಃ । ಸರ್ವೇಷಾಂ ತು ಸ್ವಧಾಕಾರೇ ಪೌತ್ರಾ ದೌಹಿತ್ರಕಾ ಮತಾಃ ॥ ಇತಿ ಅಪುತ್ರಪೌತ್ರ ಸಂತಾನೇ ಗೌಣಮುಖ್ಯರೂಪೋಭಯವಿಧ ಪುತ್ರಪೌತ್ರತತ್ಸಂತತ್ಯಭಾವೇ ಇತ್ಯರ್ಥಃ ॥

ಗಂಡುಮಕ್ಕಳಿಲ್ಲದಿದ್ದರೆ, ಕೇವಲ ಹೆಣ್ಣುಮಕ್ಕಳಿದ್ದರೆ ಆಗ ದೌಹಿತ್ರನೇ(ಮಗಳಮಗ) ಮಾತಾಮಹನ ಆಸ್ತಿಗೆಲ್ಲಾ ಅಧಿಕಾರಿಯಾಗುತ್ತಾನೆ । ಸ್ವಧಾಕಾರಕ್ಕೆ (ಪಿತೃಕರ್ಮ), ಮೊಮ್ಮಗ(ಮಗನಮಗ) – ದೌಹಿತ್ರ(ಮಗಳಮಗ) ಇವರೇ ಅಧಿಕಾರಿಗಳು, ಎಂದರೆ ಗಂಡುಮಕ್ಕಳಿಲ್ಲದಿದ್ದರೆ, ತನ್ನ ಹೆಣ್ಣುಮಕ್ಕಳ ಗಂಡುಮಕ್ಕಳೇ ಪೌತ್ರಸ್ಥಾನದಲ್ಲಿ ಇರುತ್ತಾರೆ, ಗೌಣ ಮತ್ತು ಪ್ರಧಾನರೂಪದಿಂದ ಮಗ – ಮೊಮ್ಮಗ ಇಲ್ಲದಿದ್ದಾಗ ॥

ಸ್ಮೃತ್ಯಂತರೇಽಪಿ –

ಪುತ್ರಶ್ಚ ದುಹಿತಾ ಚೈವ ತುಲ್ಯಸಂತಾನ ಕಾರಕೌ ಇತಿ ॥

ಮಗ ಮತ್ತು ಮಗಳು ಇಬ್ಬರೂ ಸಂತತಿಯನ್ನು ಸಮಾನವಾಗಿ ಬೆಳೆಸುವವರೇ ಆಗಿದ್ದಾರೆ ॥

ಮನುರಪಿ (೯/೧೩೯) –

ಪೌತ್ರದೌಹಿತ್ರಯೋಃ ಲೋಕೇ ವಿಶೇಷೋ ನಾಸ್ತಿ ಧರ್ಮತಃ । ದೌಹಿತ್ರಾದ್ಯಖಿಲಂ ರಿಕ್ಥಮಪುತ್ರಸ್ಯ ಪಿತುರ್ಹರೇತ್ ॥ ಸ ಏವ ದದ್ಯಾತ್ ದ್ವೌ ಪಿಂಡೌ ಪಿತ್ರೇ ಮಾತಾಮಹಾಯ ಚ ಇತಿ ॥

ಮೊಮ್ಮಗ ಮತ್ತು ದೌಹಿತ್ರರಲ್ಲಿ ಯಾವ ವಿಶೇಷವೂ ಇಲ್ಲ, ಇಬ್ಬರೂ ಸಮರು ಎಂದು ಶಾಸ್ತ್ರರೀತಿಯಿಂದ ಲೋಕದಲ್ಲಿ ಪ್ರಸಿದ್ಧವಾಗಿದೆ । ಮಕ್ಕಳು, ಮೊಮ್ಮಕ್ಕಳು ಇಲ್ಲದಿದ್ದರೆ,

ತಂದೆಯ ಸಂಪೂರ್ಣ ಆಸ್ತಿಯ ಹಕ್ಕು ದೌಹಿತ್ರನಿಗೆ ಹೋಗುತ್ತದೆ । ದೌಹಿತ್ರನೇ ತಂದೆ ತಾಯಿಯರಿಗೂ, ಮಾತಾಮಹನಿಗೂ ಶ್ರಾದ್ಧಾದಿಕರ್ಮಗಳನ್ನು ಮಾಡಬೇಕು ॥

ಸ್ಮೃತ್ಯಂತರೇ –

ಶ್ರಾದ್ಧಂ ಮಾತಾಮಹಾನಾಂ ಚ ಅವಶ್ಯಂ ಧನಹಾರಿಣಾ । ದೌಹಿತ್ರೇಣ ವಿಧಿಗ್ನೇನ ಕರ್ತವ್ಯಂ ಪೂರ್ವಮುತ್ತರಮ್ ॥ ಧನಗ್ರಹಣಾಭಾವೇಽಪಿ ದೌಹಿತ್ರೋಽಧಿಕಾರೀ ।

ಗಂಡಮಕ್ಕಳಿಲ್ಲದ ಮಾತಾಮಹನ ಶ್ರಾದ್ಧವನ್ನು, ಅವನ ಆಸ್ತಿಯಹಕ್ಕನ್ನು ಪಡೆದಂತಹ ದೌಹಿತ್ರನು ವಿಧಿಪೂರ್ವಕವಾಗಿ ಮಾಡಬೇಕು । ಒಂದುವೇಳೆ ಆಸ್ತಿ ಇಲ್ಲದಿದ್ದರೂ ಸಹ ಅಥವ ಆಸ್ತಿಯು ಇವನಿಗೆ ಸೇರದಿದ್ದರೂ ಸಹಾ ದೌಹಿತ್ರನೇ ಮಾಡಬೇಕು ॥

ಭವಿಷ್ಯತ್ಪುರಾಣೇ –

ಯಥಾ ವ್ರತಸ್ಥೋಽಪಿ ಸುತಃ ಕುರ್ಯಾತ್ ಪ್ರೇತಕ್ರಿಯಾಂ ನೃಪ । ಮಾತಾಮಹಸ್ಯ ದಾಹಾದ್ಯಾನ್ ದೌಹಿತ್ರೋಽಪಿ ತಥಾರ್ಹತಿ ॥

ಯಾವುದೇ ವ್ರತದಲ್ಲಿದ್ದರೂ ಕೂಡ ಮಗನು, ತಂದೆತಾಯಿಯರ ಔರ್ಧ್ವದೈಹಿಕ ಕರ್ಮವನ್ನು ಮಾಡಬೇಕು । ಹಾಗೆಯೇ ಗಂಡುಮಕ್ಕಳಿಲ್ಲದ ಮಾತಾಮಹನ ದಾಹಾದಿ ಕರ್ಮವನ್ನು ಮಾಡಲೂ ಅರ್ಹನಾಗಿರುತ್ತಾನೆ ॥

ಗೃಹ್ಯಪರಿಶಿಷ್ಟೇ –

ಪಿತಾಮಹಸ್ಯ ತತ್ಪುತ್ರಾ ಮಾತಾಮಹ್ಯೋಸ್ತಥೈವ ಚ । ಪಿಂಡದಾನಾದಿಕಂ ಸರ್ವಂ ಮಾತಾಪಿತ್ರೋಃ ಸಮಂ ವಿದುಃ ॥

ಅಜ್ಜ, ಅಜ್ಜಿ, ಮಾತಾಮಹ, ಮಾತಾಮಹಿ ಹಾಗೂ ತಂದೆ ತಾಯಿ, ಇವರುಗಳ । ಪಿಂಡದಾನಾದಿಗಳನ್ನು ಮಾಡುವುದು ಕರ್ತೃವಿಗೆ ಸಮಾನರೂಪವಾದ ಕರ್ತವ್ಯವಾಗಿರುತ್ತದೆ ॥

ಪರಾಶರಃ (ವಿಷ್ಣುಪುರಾಣೇ – ೩/೧೩/೩೪–೩೭) –

ಪೂರ್ವಾಹ ಕ್ರಿಯಾ ಮಧ್ಯಮಾಶ್ಚ ತಥಾ ಚೈವೋತ್ತರಾಃ ಕ್ರಿಯಾಃ । ಆದ್ಯಾಹಾ ದ್ವಾದಶಾಹಾಚ್ಚ ಮಧ್ಯೇ ಯಾಃ ಸ್ಯುಃ ಕ್ರಿಯಾ ಮತಾಃ ॥ ಪೂರ್ವಾ ಚ ಮಧ್ಯಮಾ ಮಾಸಿ ಮಾಸ್ಯೈಕೋದ್ದಿಷ್ಟಸಂಜ್ಞಿತಾಃ ॥ ಪ್ರೇತೇ ಪಿತೃತ್ವಮಾಪನ್ನೇ ಸಪಿಂಡೀಕರಣಾದನು । ಕ್ರಿಯಂತೇ ಯಾಃ ಕ್ರಿಯಾಃ ಪಿತ್ರೋಃ ಪ್ರೋಚ್ಯಂತೇ ತಾಸ್ತಥೋತ್ತರಾಃ ॥ ಪಿತೃಮಾತೃಸಪಿಂಡೈಸ್ತು ಸಮಾನಸಲಿಲೈಸ್ತಥಾ । ತತ್ಸಂಘಾತ ಗತೈಶ್ಚಾಪಿ ರಾಜ್ಞಾ ಚ ಧನಹಾರಿಣಾ ॥ ಆದ್ಯಾ ಮಧ್ಯಾಃ ಕ್ರಿಯಾಃ ಕಾರ್ಯಾಃ ಪುತ್ರಾದ್ಯೈರಪಿ ಚೋತ್ತರಾಃ । ದೌಹಿತ್ರೈರ್ವಾ ತಥಾ ಕಾರ್ಯಾಃ ಸರ್ವಾಸ್ತತ್ತನಯೈಸ್ತಥಾ ॥ ಏಕೋದ್ದಿಷ್ಟಾಂತಾಃ ಸಪಿಂಡ್ಯಂತಾಸ್ತದುತ್ತರಾಶ್ಚ ತ್ರಿವಿಧಾ ಇತ್ಯರ್ಥಃ । ಅಹ್ನಾಂ ದಶಾನಾಂ ಮಧ್ಯೇ ಯಾಃ ಕ್ರಿಯಾಃ ದಾಹಾದಿಕಾಃ ಸ್ಮೃತಾಃ ತಾಃ ಪೂರ್ವಾ ಮಧ್ಯಮಾ ಮಾಸೀತಿ ಪಾಠಮಾಶ್ರಿತ್ಯ ಕಾಲದರ್ಶಕಾರೇಣ ಸಂಗೃಹೀತಂ

ದಾಹಾತ್ ದಶಾಹಪರ್ಯಂತಾಃ ಸಪಿಂಡ್ಯಂತಾದಧಃ ಕ್ರಿಯಾಃ । ತದೂರ್ಧ್ವಶ್ಚ ಕ್ರಮಾತ್ ಪೂರ್ವಾ ಮಧ್ಯಮಾಶ್ಚೋತ್ತರಾಃ ಸ್ಮೃತಾಃ ॥ ಪುತ್ರೈಶ್ಚ ಭ್ರಾತೃತತ್ಪುತ್ರೈಃ ಪತ್ನ್ಯಶ್ಶಿಷ್ಯೇಣ ವಾऽಖಿಲಾಃ । ಕ್ರಿಯಾಃ ಕಾರ್ಯಾಃ ಸಮಾದಿಷ್ಟಾಃ ಜ್ಯೇಷ್ಠೈಃ ಪುತ್ರಾಶ್ಚ ಮಧ್ಯಮಾಃ ಇತಿ ॥ ಅಪುತ್ರಸ್ಯ ಮಾತಾಮಹಸ್ಯ ಮರಣೇ ಧನಹಾರಿಣಾ ದೌಹಿತ್ರೇಣ ತ್ರಿವಿಧಾ ಅಪಿ ಕ್ರಿಯಾಃ ಕರ್ತವ್ಯಾಃ । ಮಲಮೇತನ್ಮನುಷ್ಯಾಣಾಂ ದ್ರವಿಣಂ ಯತ್ಪ್ರಕೀರ್ತಿತಂ । ತತ್ ಗೃಹ್ಣನ್ಮಲಮಾದತ್ತೇ ದುರ್ಜರಂ ಜ್ಞಾನಿನಾಮಪಿ ॥ ಋಷಿಭಿಃ ತಸ್ಯ ನಿರ್ದಿಷ್ಟಾ ನಿಷ್ಕೃತಿಃ ಪಾವನೀಪರಾ । ಆ ದೇಹಪತನಾತ್ತಸ್ಯ ಕುರ್ಯಾತ್ ಪಿಂಡೋದಕಕ್ರಿಯಾಮ್ ಇತಿ ಸ್ಮರಣಾತ್ ।

ಧನಗ್ರಹಣಾಭಾವೇऽಪಿ ಕರ್ತ್ರಂತರಾಭಾವೇ ತ್ರಿವಿಧಾ ಅಪಿ ಕ್ರಿಯಾಃ ಕಾರ್ಯಾಃ ಅಪ್ಯದಾಯಹರೋऽಪುತ್ರೀಕೃತೋऽಪಿ ದುಹಿತುಃ ಸುತಃ । ಮಾತಾಮಹಸ್ಯ ವಿಧಿವತ್ಕುರ್ಯಾದೇವೋತ್ತರಾಃ ಕ್ರಿಯಾಃ ಇತಿ ಸ್ಮರಣಾತ್ । ಪೂರ್ವಮಧ್ಯ

ಕ್ರಿಯಾಕರಣಾಭಾವೇ ಅವಶ್ಯಕರ್ತವ್ಯಾಯಾ ಉತ್ತರಕ್ರಿಯಾಯಾಃ ಕರ್ತುಮಯುಕ್ತತ್ವಾತ್ ಕರ್ತ್ರಂತರಸದ್ಭಾವೇ ತು ಧನಹರಣಯೋಗ್ಯತಾರಹಿತೇನ ದೌಹಿತ್ರೇಣಾದ್ಯಾಃ ಕ್ರಿಯಾ ನ ಕಾರ್ಯಾಃ । ತತ್ರಾಬ್ದಿಕವ್ಯತಿರಿಕ್ತ ಮಹಾಲಯಪೂರ್ವಮಧ್ಯಕ್ರಿಯಾದಯಸ್ತು ಕರ್ತವ್ಯಾಃ । ಪಿತ್ರ್ಯಾನ್ ಮಾತಾಮಹಾಂಶ್ಚೈವ ದ್ವಿಜಃ ಶ್ರಾದ್ಧೇನ ತರ್ಪಯೇತ್ । ಅನೃಣಃ ಸ್ಯಾತ್ ಪಿತೃಣಾಂ ತು ಬ್ರಹ್ಮಲೋಕಂ ಚ ಗಚ್ಛತಿ ॥

ಔರ್ಧ್ವದೈಹಿಕ ಕರ್ಮದಲ್ಲಿ ಪೂರ್ವಾಹಕ್ರಿಯೆ, ಮಧ್ಯಮಾಹಕ್ರಿಯೆ ಮತ್ತು ಉತ್ತರಾಹಕ್ರಿಯೆ ಎಂದು ೩ ಭಾಗಗಳಿವೆ । ಮರಣಹೊಂದಿದ ದಿವಸದಿಂದ ೧೧ ನೇ ದಿನಗಳ ಸಮಾಪ್ತಿವರೆಗಿನ ದಿವಸಗಳು, ಪೂರ್ವಾಹ ಎಂದು ಕರೆಯಲ್ಪಡುತ್ತವೆ । ಇನ್ನು ಮಾಸಮಾಸ ಏಕೋದ್ದಿಷ್ಟ ವಿಧಾನದಿಂದ ಮಾಡುವ ಮಾಸಿಕಶ್ರಾದ್ಧಗಳು ಮಧ್ಯಮಾಹ ಎನಿಸಿಕೊಳ್ಳುತ್ತವೆ । ಮರಣಹೊಂದಿದವನು ಸಪಿಂಡೀಕರಣದಿಂದ ಪಿತೃತ್ವವನ್ನು ಹೊಂದುತ್ತಾನಾದ್ದರಿಂದ, ಆ ಸಪಿಂಡೀಕರಣ ಕರ್ಮವು ಉತ್ತರಾಹ ಎನಿಸಿಕೊಳ್ಳುತ್ತವೆ । ತಂದೆ ತಾಯಿಯರ ತ್ರಿಪೌರುಷದಲ್ಲಿರುವವರಿಂದ ಹಾಗೂ ತಂದೆತಾಯಿಯರ ಜೊತೆ ಸಮಾನ ತಿಲೋದಕವನ್ನು ಪಡೆಯುವವರಿಂದ ಹಾಗೂ ರಾಜನಿಂದ ಮೃತನ ಆಸ್ತಿಗೆ ಅಧಿಕಾರವನ್ನು ಪಡೆಯುವವರಿಂದ ಆದ್ಯಾಃ ಮತ್ತು ಮಧ್ಯಾಃ ಕ್ರಿಯೆಗಳು ಮಾಡಲ್ಪಡಬೇಕು । ಮಕ್ಕಳು, ದೌಹಿತ್ರ ಮುಂತಾದವರಿಂದ ಉತ್ತರಾಹ ಕ್ರಿಯೆಗಳು ಮಾಡಲ್ಪಡಬೇಕು । ಏಕೋದ್ದಿಷ್ಟದವರೆಗೆ ಹಾಗೂ ಸಪಿಂಡಾಂತದವರೆಗೆ ಹಾಗೂ ಮೊದಲಿನ ೨ ದಿವಸ । ಹೀಗೆ ೩ ವಿಧವಾಗಿ (ಪೂರ್ವಾಹ, ಮಧ್ಯಾಹ, ಉತ್ತರಾಹ) ಕ್ರಿಯೆಗಳು ನಡೆಯುತ್ತವೆ ।

೧೦ ದಿನಗಳಲ್ಲಿ ದಾಹಾದಿಕ್ರಿಯೆಗಳು ನಡೆಯುವ ದಿನಗಳನ್ನು ಪೂರ್ವಾಹಕ್ರಿಯಾ ಎನ್ನುತ್ತಾರೆ । ಮಾಸಮಾಸ ಏಕೋದ್ದಿಷ್ಟವಿಧಾನದಿಂದ ಮಾಡುವ ಶ್ರಾದ್ಧಗಳನ್ನು ಮಧ್ಯಮಾಹ ಕ್ರಿಯೆಗಳು ಎನ್ನುತ್ತಾರೆ । ಇದನ್ನು ಕಾಲದರ್ಶಕರು, ಮಧ್ಯಮಾಮಾಸಿ ಎಂದು ಸಂಗ್ರಹಿಸಿ ಹೇಳಿದ್ದಾರೆ । ದಹನದಿಂದ ೧೦ ದಿನಗಳವರೆಗಿನ ಹಾಗೂ ೧೧ ನೇ ದಿನದ ಏಕೋದ್ದಿಷ್ಟಕ್ರಿಯೆಗಳನ್ನು ಪೂರ್ವಕ್ರಿಯೆ ಎನ್ನುತ್ತಾರೆ । ಅಲ್ಲಿಂದ ಮುಂದೆ,

ಮಾಸಮಾಸ ಮಾಡುವ ಶ್ರಾದ್ಧಗಳನ್ನು ಮಧ್ಯಮಕ್ರಿಯೆ ಎನ್ನುತ್ತಾರೆ। ಸಪಿಂಡಿಕರಣವನ್ನು ಉತ್ತರಕ್ರಿಯೆ ಎನ್ನುತ್ತಾರೆ। ಇನ್ನು ಕೆಲವರು, ೧೧ ನೇ ದಿವಸದ ಏಕೋದ್ದಿಷ್ಟಕ್ರಿಯೆಯನ್ನು ಪೂರ್ವಾಕ್ರಿಯಾ ಎಂದು ಹೇಳಿ, ಮಾಸಮಾಸ ಮಾಡುವ ಶ್ರಾದ್ಧವನ್ನು ಮಧ್ಯಮಾಕ್ರಿಯಾ ಎಂದುಹೇಳಿ, ಸಪಿಂಡೀಕರಣವನ್ನು ಉತ್ತರಾಕ್ರಿಯಾ ಎಂದು ಹೇಳುತ್ತಾರೆ।

ಮಕ್ಕಳಿಂದ, ಸೋದರರಿಂದ, ಸೋದರರ ಮಕ್ಕಳಿಂದ, ಪತ್ನಿಯಿಂದ ಅಥವಾ ಶಿಷ್ಯನಿಂದ ಇವರುಗಳಿಂದಲೂ ಔರ್ಧ್ವದೈಹಿಕ ಕ್ರಿಯೆಗಳನ್ನು ಮಾಡಬಹುದು। ಜ್ಯೇಷ್ಠರಾದವರು ಹಾಗೂ ತನ್ನ ಮಕ್ಕಳಿಗೆ ಈ ಕ್ರಿಯೆಯನ್ನು ಮಾಡುವವರು ಮಧ್ಯಮರು। ಗಂಡುಮಕ್ಕಳಿಲ್ಲದ ಮಾತಾಮಹನು ಮರಣಹೊಂದಿದರೆ, ಅವನ ಆಸ್ತಿಗೆ ಅಧಿಕಾರವನ್ನು ಪಡೆದುಕೊಂಡ ದೌಹಿತ್ರನು, ಮೇಲೆಹೇಳಿದ ೩ ವಿಧವಾದ ಕ್ರಿಯೆಗಳನ್ನೂ ಮಾಡಬೇಕು। ಆಸ್ತಿ, ಸಂಪತ್ತು ಇವು ಮನುಷ್ಯನಿಗೆ ಮಲವಿದ್ದಂತೆ(ಕೊಳೆ)। ಆದ್ದರಿಂದ ಆ ಮಲವನ್ನು ಕಳೆದುಕೊಳ್ಳಲು, ಆಸ್ತಿಯ ಅಧಿಕಾರವನ್ನು ಹೊಂದಿದವರು, ಮೇಲೆ ಹೇಳಿದ ೩ ವಿಧದ ಕ್ರಿಯೆಗಳನ್ನೂ ಮಾಡಬೇಕು । ಜ್ಞಾನಿಗಳೂ ಕೂಡ ಈ ಕೊಳೆಯಿಂದ ಮುಕ್ತರಾಗಲು ಅತೀವಕಷ್ಟಪಡುತ್ತಾರೆ। ಇದರಿಂದ ಬಿಡುಗಡೆಹೊಂದಲು ಋಷಿಗಳು ಪಾವನಗೊಳಿಸುವ ಮಾರ್ಗವನ್ನು ತೋರಿಸಿದ್ದಾರೆ। ಅದೇನೆಂದರೆ – ಕರ್ತೃವು ತನ್ನ ದೇಹ ಬೀಳುವವರೆಗೂ, ಮೃತನ ತರ್ಪಣ – ಶ್ರಾದ್ಧಾದಿಗಳನ್ನು ಮಾಡಬೇಕು ಎಂದು ಸ್ಮೃತಿಯನ್ನಿಟ್ಟುಕೊಂಡು, ಈ ಮಲ(ಕೊಳೆ)ಕ್ಕೆ ಬಿಡುಗಡೆಯನ್ನು ಹೇಳಿದ್ದಾರೆ।

ಆಸ್ತಿಯನ್ನು ಪಡೆಯದೇ ಇದ್ದರೂಕೂಡ, ಬೇರೇಕರ್ತೃಗಳು ಇಲ್ಲದಿದ್ದರೆ ದೌಹಿತ್ರನು ಮೇಲೆಹೇಳಿದ ೩ ಕ್ರಿಯೆಗಳನ್ನೂ ತನ್ನ ಮಾತಾಮಹನಿಗೆ ಮಾಡಬೇಕು। ಏಕೆಂದರೆ, ದಾಯಹರನಾಗದಿದ್ದರೂ ಪುತ್ರಕಾಪುತ್ರನಾಗದಿದ್ದರೂ ಕೂಡ, ಮಗಳಮಗನು, ಗಂಡುಮಕ್ಕಳಿಲ್ಲದ ಮಾತಾಮಹನಿಗೆ ವಿಧಿವತ್ತಾಗಿ ಔರ್ಧ್ವದೈಹಿಕಕ್ರಿಯೆಗಳನ್ನು ಮಾಡಬೇಕು ಎಂದು ಸ್ಮೃತಿಯಿರುವುದರಿಂದ । ಪೂರ್ವಕ್ರಿಯೆ ಮತ್ತು ಮಧ್ಯಮಕ್ರಿಯೆಗಳನ್ನು ಮಾಡದಿದ್ದರೆ, ಉತ್ತರಕ್ರಿಯೆಯನ್ನು ಮಾಡಲು ಯೋಗ್ಯತೆಯು ಬರುವುದಿಲ್ಲ, ಪ್ರಧಾನಕರ್ತೃವು ಇರಲಾಗಿ, ಆಸ್ತಿಯನ್ನು ಪಡೆಯದೇ ಇರುವ ದೌಹಿತ್ರನು

ಈ ವಿಧವಾದಂತಹ ಕ್ರಿಯೆಗಳನ್ನು ಮಾಡಲು ಬರುವುದಿಲ್ಲ । ತಂದೆತಾಯಿಯರನ್ನು ಮತ್ತು ಮಾತಾಮಹರನ್ನು ಬ್ರಾಹ್ಮಣನಾದ ಕರ್ತೃವು ಶ್ರಾದ್ಧದಿಂದ ತೃಪ್ತಿಗೊಳಿಸುತ್ತಾನೆ । ಹೀಗೆ ಶ್ರಾದ್ಧಾದಿಗಳನ್ನು ಮಾಡಿ, ಪಿತೃಋಣವನ್ನು ತೀರಿಸಿ, ಕರ್ತೃವು ಬ್ರಹ್ಮಲೋಕವನ್ನು ಪಡೆಯುತ್ತಾನೆ ॥

****

****

6. ಯಲ್ಲಾಜೀಯ ಅನುಧರ್ಮಶಾಸ್ತ್ರಮ್

1. ಸ್ಥಲಭ್ರಂಶಜ ಪ್ರಾಯಶ್ಚಿತ್ತಂ

ಪ್ರಥಮೇಹನಿ ಯತ್‌ಸ್ಥಲಂ ಯಾ ಶಿಲಾಯಚ್ಚ ಪಿಂಡದ್ರವ್ಯಂ ಯಃ ಕರ್ತಾ ಯತ್ಪಾತ್ರಂ ತದೇವ ದಶಾಹ ಪರ್ಯಂತಂ ನಿಯಮೇನ ಕರ್ತವ್ಯಂ । ವಿಪರ್ಯಾಸೇ ಪ್ರಾಜಾಪತ್ಯತ್ರಯಂ ಕೃತ್ವಾ ಉದಕಪಿಂಡ ದಾನಾನಿ ಪುನಃ ಕುರ್ಯಾತ್ ॥

ಮರಣಹೊಂದಿದ ಮೊದಲನೇ ದಿವಸದಲ್ಲಿ, ಯಾವ ಸ್ಥಳದಲ್ಲಿ, ಯಾವ ಶಿಲೆಯಲ್ಲಿ, ಹಾಗೂ ಯಾವಪಿಂಡದ್ರವ್ಯದಲ್ಲಿ ಹಾಗೂ ಯಾರು ಕರ್ತೃವಾಗಿ ಮಾಡುತ್ತಾನೋ ಹಾಗೂ ಯಾವ ಪಾತ್ರೆಯಲ್ಲಿ ಮಾಡುತ್ತಾನೋ ಅದನ್ನೇ ೧೦ ದಿನಗಳು ಕಳೆಯುವವರೆಗೂ ಉಪಯೋಗಿಸಬೇಕು ಎಂದು ನಿಯಮಪೂರ್ವಕವಾಗಿ ಕರ್ತವ್ಯವಾಗಿ ಹೇಳಿದೆ । ಒಂದುವೇಳೆ ವ್ಯತ್ಯಾಸವಾಗಲಾಗಿ, ಪ್ರಾಜಾಪತ್ಯತ್ರಯ ಕೃಚ್ಛ್ರವನ್ನು ಮಾಡಿಕೊಂಡು, ಉದಕಪಿಂಡದಾನಾದಿಗಳನ್ನು ಮತ್ತೆ ಮಾಡಬೇಕು । ಹೀಗೆಯೇ ಸ್ಮೃತಿಯಲ್ಲಿದೆ ॥

ತಥಾ ಚ ಸ್ಮೃತಿಃ –

ಸ್ಥಲಭ್ರಂಶೇ ಶಿಲಾಪಾತ್ರ ಕರ್ತೃ ದ್ರವ್ಯ ವಿಪರ್ಯಯೇ । ಪ್ರಾಜಾಪತ್ಯ ತ್ರಯಂ ಕೃತ್ವಾಂಜಲೀನ್ ಪಿಂಡಾನ್ ಪುನಶ್ಚರೇತ್ । ದೇಶವಿಪರ್ಯಯೇ ಅಪಕೃಶ್ಯಾಪಿ ಕುರ್ಯಾತ್ । ಗೃಹೀತ್ವಾ ಪ್ರೇತ ಪಾಷಾಣಂ ಗಚ್ಛೇದ್ದೇಶ ವಿಪರ್ಯಯೇ । ಅಪಕೃಷ್ಯಾಪಿ ಕುರ್ವೀತ ನತ್ವೇತದವಶೇಷಯೇತ್ । ಶ್ವಾದಿಭಿಃ ಪಿಂಡೋಪಹತೌ ಕೃಚ್ಛ್ರತ್ರಯಮಿತ್ಯಾದಿ ಸ್ಮೃತಿಷು ದ್ರಷ್ಟವ್ಯಂ । ಸರ್ವೇ ಪುತ್ರಾ ಜ್ಞಾತಯಶ್ಚ ಸ್ನಾತ್ವಾ ಆರ್ದ್ರೈಕವಾಸಸಃ ಗ್ರಾಮಂ ಗತ್ವಾ ಯತ್ ಸ್ತ್ರಿಯ ಆಹುಸ್ತತ್ಕುರ್ವಂತಿ । ಸ್ಮೃತ್ಯಂತರೋಕ್ತಾನ್ಯಪಿ ಕರ್ತವ್ಯಾನಿ । ತತೋ ಬಹಿರ್ದ್ವಾರದೇಶೇ ಪೂರ್ವೋಕ್ತಲಕ್ಷಣಾಂ ಶಿಲಾಂ ನಿಧಾಯ ತಸ್ಯಾಂ ಸರ್ವೇ ಚೋದಕಂ ದದ್ಯುರಿತಿ ಕೇಚಿತ್ । ತಥಾ ಆದಶಾಹಾತ್ ಪ್ರತಿದಿನಂ ಸರ್ವೇ ದದ್ಯುಸ್ತಿಲೋದಕಂ । ಏಕೈಕೋತ್ತರವೃದ್ಧ್ಯಾ ತು ಪಂಚಾಶತ್ಪಂಚನ ಸ್ತ್ರಿಯಾಃ ।

ಪ್ರಥಮೇಹನ್ಯೇಕಂ ದ್ವಿತೀಯೇದ್ವೇ ತೃತೀಯೇತ್ರೀಣೀತ್ಯಾದಿ ಪ್ರತಿದಿನಂ ಕುರ್ಯಾತ್ । ತತೋ ಗೃಹದ್ವಾರಿ ಕರ್ತಾ ಸರ್ವಾನ್ ನಮಸ್ಕೃತ್ಯ ವಿಸೃಜ್ಯ ತತ್ರೈವ ಸರ್ವೇ ಘೃತಂ ಪ್ರಾಶ್ಯ ನಿಂಬಪತ್ರಾಣಿ ವಿದಶ್ಯ ಗೋಮಯ ಸುವರ್ಣಾಗ್ನಿ ಸರ್ಷಫ ಯವ ದೂರ್ವಾಂಕುರಾಣಿ ಸ್ಪೃಷ್ಟ್ವಾ, ದ್ವಾರಮಧ್ಯೇ ಸುಸ್ಥಿರಂ ಪಾಷಾಣಂ ನಿಧಾಯ ಶನೈಸ್ತದಾ ಕ್ರಮ್ಯ ಕನಿಷ್ಠಪ್ರಥಮಾ ಗೃಹಂ ಪ್ರವಿಶೇಯುಃ । ಸರ್ವಪ್ರವೇಶನೇಷ್ವೇವೇದಂ । ನಿರ್ಗಮನೇ ತು ಜ್ಯೇಷ್ಠಪುರಸ್ಸರಂ ನಿರ್ಗಚ್ಛೇಯುಃ । ತತೋ ಮರಣಸ್ಥಳಂ ಪ್ರದೀಪೇನ ಸಹ ಪ್ರವಿಶ್ಯ ವತ್ಸಮಾಕ್ರಮಯಿತ್ವಾ ಯವೋದಕೇನಾವೋಕ್ಷ್ಯ ಅಯೋನಿಖಾಯು ಸ್ವಸ್ತ್ಯಸ್ತುಮದ್ಗೃಹಾಣಾಂ ಶೇಷೇಷು ಶಿವಂ ವಾಸ್ತ್ವಿತ್ಯುಕ್ತ್ವಾ ತಂಡುಲಾನವಕೀರ್ಯ ನಗ್ನಪ್ರಚ್ಛಾದನಂ ಕುರ್ಯಾತ್ । ಅಶ್ಮಾನಮನಲಂ ಚೈವ ಗೋಮಯಂ ಚಾಕ್ಷತಾನಥ । ತೈಲಂ ಚಾಪ ಉಪಸ್ಪೃಶ್ಯ ಪ್ರವಿಶೇಯುರ್ಗೃಹಂ ತತ ಇತಿ । ಮರಣದೇಶೇ ಮೃತ್ಪಾತ್ರದ್ವಯೇ ಏಕಸ್ಮಿನ್ನುದಕಂ ಅನ್ಯಸ್ಮಿನ್ ಕ್ಷೀರಮಾನೀಯ ಶಿಕ್ಯದ್ವಯೇ ಅತ್ರ ಸ್ನಾಹಿ ಇತ್ಯುದಕಂ, ಅತ್ರ ಪಿಬ ಇತಿಕ್ಷೀರಂ ನಿದಧ್ಯಾತ್ । ತತೋ ವಿಷಮದಿವಸೇಷು ಅಮಂತ್ರಕಂ ನವಶ್ರಾದ್ಧಾನಿ ಕುರ್ಯಾತ್ । ಏಕಾದಶೇಹನಿ ಸಮಂತ್ರಕಂ । ತಿಲೋದಕ ಸಂಖ್ಯಯಾ ಪಿಂಡೋದಕ ಸಂಖ್ಯಯಾ ವಾ ಪ್ರತಿದಿನಂ ಅಮಂತ್ರಕಂ ಪಂಚಸಪ್ತತಿ ವಾ ಪಂಚಪಂಚಾಶದ್ವಾ ಶ್ರಾದ್ಧಾನ್ಯಾಮೇವ ಏಕೋದ್ದಿಷ್ಟ ವಿಧಾನೇನ ಕುರ್ಯಾತ್ । ಪ್ರಥಮದಿವಸೇ ಸರ್ವೇಷಾಂ ಜ್ಞಾತೀನಾಂ ಏಕಕಾಲ ಭೋಜನಂ । ಪುತ್ರಾಣಾಮೇವೇತಿ ಕೇಚಿತ್ । ಸರ್ವೇಷಾಮೇಕಕಾಲ ಭೋಜನಂ । ಅಧಶ್ಶಯನಂ ಬ್ರಹ್ಮಚರ್ಯಂ ಚ ಪೃಥಕ್ ಪೃಥಕ್ ಶಯನಂ ಆದಶಾಹಾದನ್ಯೋನ್ಯಂ ನ ಸ್ಪೃಶೇಯುಃ ।

ಚತುರ್ಥೇಹನಿ ಶಸ್ತಂಸ್ಯಾದಸ್ಥ್ನಾಂ ಸಂಚಯನಂ ದ್ವಿಜೈಃ । ಅಸ್ಥ್ನಾಂ ಸಂಚಯನಾದರ್ವಾಕ್ ತತ್ಸಪಿಂಡಾಃ ಪರಸ್ಪರಂ ॥ ನ ಸಂಸ್ಪೃಶೇಯುಃ ಅಂಗಾನಿ ಪುತ್ರಾಶ್ಚ ಪ್ರಾಗ್ದಶಾಹಾಂತಃ ಅಕೃತೇಪಿ ಚತುರ್ಥೇsಹನಿ ಅಸ್ಥಿಸಂಚಯನೇ ಯದಿ ॥ ತದ್ದಿನಾದಿ ಸಪಿಂಡಾನಾಂ ಅತಃ ಸ್ಪರ್ಶೋವಿಧೀಯತೇ । ನೈತಸ್ಯಾಂ ರಾತ್ರ್ಯಾಮನ್ನಂ ಪಚೇರನ್ । ಕ್ರೀತೋದನೇನ ವಾ ಅನ್ಯದತ್ತೇನವಾ ವರ್ತೇರನ್ ।

ಸಂಗ್ರಹೇ – ದಶಾಹಮಧ್ಯೇ ಆಸೀರನ್ನಕ್ಷಾರ ಲವಣಾಶಿನಃ ಬ್ರಹ್ಮಚರ್ಯಂ ಭವೇತ್ತೇಷಾಂ ಪತ್ನ್ಯಸ್ತು ಮರಣಾಂತಿಕಂ । ಅಪೂಪ ಪಾಯಸಾದೀನಿ ವರ್ಜಯಿತ್ವಾ ತು ಭೋಜಯೇತ್ । ಅಧಶ್ಚ ಶಯನಂ ಕುರ್ಯಾತ್ ವೃದ್ಧಬಾಲಾತುರಾನ್ ವಿನಾ । ಮೃತೌ ತು ಮಾತಾಪಿತರೌ ಗುರುಶ್ಚೈವ ತಥೈವ ಚ । ಉಪವಾಸಂ ಪ್ರಕುರ್ವೀತ ಇತಿ ಶಾಸ್ತ್ರಸ್ಯ ನಿರ್ಣಯಃ । ಷಣ್ಮಾಸಾನ್ ವರ್ಜಯೇತ್ ಕ್ಷೌರಂ ತೈಲ ತಾಂಬೂಲ ಯೋಷಿತಃ । ಜ್ಯೇಷ್ಠಾದೀನಾಂ ಮೃತಿಪ್ರಾಪ್ತಾ ಮಾತಾಪಿತ್ರೋಸ್ತು ವತ್ಸರಂ ॥

ನಿತ್ಯವಿಧಿಯ ಸ್ಥಳವು ವ್ಯತ್ಯಾಸವಾದರೆ ಹಾಗೂ ಶಿಲೆ – ಪಾತ್ರೆ – ಕರ್ತೃ – ದ್ರವ್ಯಗಳ ವ್ಯತ್ಯಾಸವಾದರೆ ಆಗ ಪ್ರಾಜಾಪತ್ಯತ್ರಯ ಕೃಚ್ಛ್ರವನ್ನು ಮಾಡಿಕೊಂಡು, ಪಿಂಡೊದಕಗಳನ್ನು ಮತ್ತೆ ಮಾಡಬೇಕು । ಕೇವಲ ಸ್ಥಳ ವ್ಯತ್ಯಾಸವಾದರೆ, ಬೇರೇಸ್ಥಳದಲ್ಲಿ ಮಾಡಬಹುದು ಇದಕ್ಕೆ ಯಾವ ಪ್ರಾಯಶ್ಚಿತ್ತವು ಇಲ್ಲ । ಹೇಗೆ ಮಾಡಬೇಕೆಂದರೆ – ಪ್ರೇತಶಿಲೆಯನ್ನು ಬೇರೇ ದೇಶಕ್ಕೆ ತೆಗೆದುಕೊಂಡುಹೋಗಿ, ಅಪಕರ್ಷಣ ಮಾಡಿ ಸ್ವಲ್ಪವೂ ಉಳಿಸದೇ ಮಾಡಬೇಕು । ನಾಯಿ ಮುಂತಾದವುಗಳಿಂದ ಪಿಂಡವು ಮುಟ್ಟಲ್ಪಟ್ಟರೆ, ಕೃಚ್ಛ್ರತ್ರಯವನ್ನು ಮಾಡಬೇಕೆಂದು ಹೇಳಿದೆ । ಮಕ್ಕಳು, ಜ್ಞಾತಿಗಳು ಎಲ್ಲರೂ ಸ್ನಾನಮಾಡಿ, ಒದ್ದೆಯಾದ ಒಂದು ಬಟ್ಟೆಯನ್ನುಟ್ಟು, ಗ್ರಾಮಕ್ಕೆ ಹಿಂತಿರುಗಿ, ಜ್ಞಾನವೃದ್ಧಸ್ತ್ರೀಯರು ಹೇಗೆ ಹೇಳುತ್ತಾರೋ ಹಾಗೇ ಮಾಡಬೇಕು । ಬೇರೇ ಸ್ಮೃತಿಗಳಲ್ಲಿ ಹೇಳಿರುವ ಕರ್ಮಗಳನ್ನೂ ಮಾಡಬೇಕು । ಮನೆಯ ಮುಂದೆ ಹೊರಗೆ, ಒಂದುಸ್ಥಳದಲ್ಲಿ ಶಿಲೆಯನ್ನು ಇಟ್ಟು, ಅದಕ್ಕೆ ಎಲ್ಲರೂ ಉದಕವನ್ನು ಬಿಡಬೇಕೆಂದು ಹೇಳುತ್ತಾರೆ । ೧೦ ದಿನಗಳು ಕಳೆಯುವವರೆಗೆ ಜ್ಞಾತಿಗಳೆಲ್ಲರೂ ಆ ಶಿಲೆಗಳಿಗೆ ತಿಲೋದಕವನ್ನು ಬಿಡಬೇಕು । ಪ್ರತಿದಿನಾ ಒಂದೊಂದು ತಿಲೋದಕವನ್ನು ಹೆಚ್ಚು ಮಾಡುತ್ತಾ, ೫೫ ತಿಲೋದಕಗಳನ್ನು ಬಿಡಬೇಕು । ಆದರೆ ಸ್ತ್ರೀಯರು ತಿಲೋದಕವನ್ನು ಬಿಡಬಾರದು । ಹೇಗೆಂದರೆ – ಮೊದಲದಿನ ೧, ಎರಡನೇದಿನ ೨ ಹಾಗೂ ಮೂರನೇದಿನ ೩ । ಹೀಗೆ ಪ್ರತಿದಿನ ಹೆಚ್ಚು ಮಾಡುತ್ತಾ ಬಿಡಬೇಕು ।

ನಂತರ ಮನೆಯು ಬಾಗಿಲಿನವುಂದೆ ಕರ್ತ್ಯವ್ಯ, ಎಲ್ಲರಿಗೂ ನಮಸ್ಕರಿಸಿ, ಆವಾಹನೆಯಾಗಿರುವ ಶಿಲೆಯನ್ನು ವಿಸರ್ಜಿಸಿ, ಎಲ್ಲರೂ ತುಪ್ಪವನ್ನು ಕುಡಿಯಬೇಕು। ಬೇವಿನಎಲೆಯನ್ನು ತಿಂದು, ಸಗಣಿ – ಚಿನ್ನ – ಅಗ್ನಿ – ಸಾಸುವೆ ಜವೇಗೋಧಿ – ದೂರ್ವೆ ಇವುಗಳನ್ನು ಮುಟ್ಟಿ। ದ್ವಾರಮಧ್ಯದಲ್ಲಿ ಗಟ್ಟಿಯಾಗಿ ಶಿಲೆಯನ್ನು ರಕ್ಷಿಸಿಟ್ಟು, ಮೆಲ್ಲಗೆ ಮನೆಯೊಳಗೆ ಕಾಲಿಟ್ಟು। ಸಣ್ಣವರಿಂದ ಮೊದಲುಗೊಂಡು ಪ್ರವೇಶಮಾಡಬೇಕು। ಎಲ್ಲ ದಿವಸವೂ ಮನೆಯೊಳಗೆ ಪ್ರವೇಶವು ಈ ದಿನಗಳಲ್ಲಿ ಹೀಗೆಯೇ। ಮನೆಯಿಂದ ಹೊರಗೆ ಸ್ಮಶಾನಕ್ಕೆ ಹೊರಡುವಾಗ ದೊಡ್ಡವರಿಂದ ಮೊದಲುಗೊಂಡು ಹೊರಡಬೇಕು। ಸ್ಮಶಾನವನ್ನು ಕೊಳ್ಳಿ ಸಹಿತವಾಗಿ ಪ್ರವೇಶಮಾಡಿ, ಕರುವನ್ನು ಮೊದಲು ಒಳಕ್ಕೆ ಕಳಿಸಿ, ಯವೋದಕದಿಂದ ಪ್ರೋಕ್ಷಿಸಿ। ಕಬ್ಬಿಣದಿಂದ ಗುಂಡಿ ತೆಗೆದು, ಮನೆಗೆ ಮಂಗಳವಾಗಲಿ, ಉಳಿದವರಿಗೂ ಮಂಗಳವಾಗಲಿ ಎಂದು ಹೇಳಿ। ಅಕ್ಕಿಯನ್ನು ಗುಂಡಿಗೆಹಾಕಿ। ನಂತರ ನಗ್ನಪ್ರಚ್ಛಾದನಶ್ರಾದ್ಧವನ್ನು ಮಾಡಬೇಕು । ಕಲ್ಲು, ಅಗ್ನಿ, ಸಗಣಿ, ಅಕ್ಷತೆ, ಎಣ್ಣೆ, ಇವುಗಳನ್ನು ಮುಟ್ಟಿ ಮನೆಯೊಳಗೆ ಪ್ರವೇಶಿಸಬೇಕು। ಸ್ಮಶಾನದಲ್ಲಿ ೨ ಪಾತ್ರೆಯಲ್ಲಿ ಒಂದರಲ್ಲಿ ನೀರು, ಇನ್ನೊಂದರಲ್ಲಿ ಹಾಲನ್ನು ತೆಗೆದುಕೊಂಡು ಬಂದು। ಈ ನೀರಲ್ಲಿ ಸ್ನಾನಮಾಡು, ಈ ಹಾಲನ್ನು ಕುಡಿ ಎಂದು ಪ್ರೇತನಿಗೆ ಇಡಬೇಕು । ನಂತರ ವಿಷಮದಿನಗಳಲ್ಲಿ(ಬೆಸ) ಅಮಂತ್ರಕವಾಗಿ ನವಶ್ರಾದ್ಧವನ್ನು ಮಾಡಬೇಕು। ೧೧ ನೇ ದಿವಸಮಾತ್ರ ಸಮಂತ್ರಕವಾಗಿ ಮಾಡಬೇಕು। ಪಿಂಡೋದಕ ಸಂಖ್ಯೆಯಿಂದಲೋ ಅಥವಾ ತಿಲೋದಕಸಂಖ್ಯೆಯಿಂದಲೋ ೧೦ ದಿನಗಳಲ್ಲಿ ೭೫ ಅಥವಾ ೫೦ ಸಂಖ್ಯೆಯಾಗುವಂತೆ ವಾಸೋದಕವನ್ನು ಕೊಡಬೇಕು। ನಂತರ ೧೧ ನೇ ದಿವಸ ಏಕೋದ್ದಿಷ್ಟಶ್ರಾದ್ಧವನ್ನು ಮಾಡಬೇಕು ।

ಮೊದಲನೇದಿನ, ಎಲ್ಲ ಜ್ಞಾತಿಗಳಿಗೂ ಒಂದುಹೊತ್ತು ಊಟ । ಕೆಲವರು ಕೇವಲ ಕರ್ತ್ಯಗಳಿಗೆ ಮಾತ್ರ ಎನ್ನುತ್ತಾರೆ। ಸ್ಮೃತಿಯ ಅಭಿಪ್ರಾಯದಲ್ಲಿ ಎಲ್ಲರಿಗೂ ಒಂದುಹೊತ್ತು ಊಟ ಹಾಗೂ ನೆಲದಲ್ಲಿ ಮಲಗುವಿಕೆ ಹಾಗೂ ಬ್ರಹ್ಮಚರ್ಯ ಹಾಗೂ ಬೇರೆಬೇರೆಯಾಗಿ ಮಲಗುವಿಕೆ ಹಾಗೂ ಪರಸ್ಪರ ಸ್ಪರ್ಶವಿಲ್ಲದಿರುವಿಕೆ ಇವೆಲ್ಲವೂ ನಿಯಮಗಳು ।

೪ ನೇ ದಿನ ಅಸ್ಥಿಸಂಚಯನ ಎಂದು ದ್ವಿಜರು ಹೇಳಿದ್ದಾರೆ । ಈ ಅಸ್ಥಿಸಂಚಯನ ಆಗುವವರೆಗೂ ಜ್ಞಾತಿಗಳು ಪರಸ್ಪರ ಸ್ಪರ್ಶ ಮಾಡಿಕೊಳ್ಳಬಾರದು । ಕರ್ತೃಗಳಾದರೋ ೧೦ ದಿನ ಕಳೆಯುವವರೆಗೂ ಸ್ಪರ್ಶ ಮಾಡಿಕೊಳ್ಳಬಾರದು । ಒಂದುವೇಳೆ ೪ ನೇದಿನ ಅಸ್ಥಿಸಂಚಯನ ಮಾಡದಿದ್ದರೂ ಕೂಡ, ಆ ದಿನದವರೆಗೆ ಮಾತ್ರ ಜ್ಞಾತಿಗಳಿಗೆ ಸ್ಪರ್ಶ ನಿಷೇಧವಷ್ಟೆ, ನಂತರವಿಲ್ಲ । ದಹನವಾದ ದಿನ ಅಡುಗೆಯನ್ನು ಮಾಡಬಾರದು, ಕೊಂಡ ಅಥವಾ ಬೇರೆಯವರು ಕೊಟ್ಟ ಅಡುಗೆಯನ್ನು ಊಟ ಮಾಡಬೇಕು ।

ಸಂಗ್ರಹದಲ್ಲಿ – ಈ ೧೦ ದಿವಸ ಉಪ್ಪು, ಖಾರ ಇವುಗಳನ್ನು ಬಿಡಬೇಕು । ಬ್ರಹ್ಮಚರ್ಯ ಪಾಲನೆ ಮಾಡಬೇಕು । ಮೃತವ್ಯಕ್ತಿಯ ಪತ್ನಿಗೆ ಮರಣಾಂತದವರೆಗೆ ಬ್ರಹ್ಮಚರ್ಯವು । ಈ ೧೦ ದಿನ ಸಿಹಿ, ಭಕ್ಷ್ಯಗಳನ್ನು ಬಿಟ್ಟು ಊಟ ಮಾಡಬೇಕು । ರೋಗಿಗಳು, ಮಕ್ಕಳು, ವೃದ್ಧರನ್ನು ಬಿಟ್ಟು ಉಳಿದವರು ೧೦ ದಿನಗಳು ನೆಲದಲ್ಲಿ ಮಲಗಬೇಕು । ತಂದೆತಾಯಿಯರ ಹಾಗೂ ಗುರುಗಳ ಮರಣದಲ್ಲಿ ಉಪವಾಸವನ್ನು ಮಾಡಬೇಕೆಂದು ಶಾಸ್ತ್ರದ ನಿರ್ಣಯವು । ಗುರುಗಳ ಮರಣವಾದರೆ, ೬ ತಿಂಗಳು ಕ್ಷೌರವಿಲ್ಲ । ಹಾಗೂ ಎಣ್ಣೆಸ್ನಾನ – ತಾಂಬೂಲಚರ್ವಣಗಳೂ ಇಲ್ಲ । ಬ್ರಹ್ಮಚರ್ಯ ನಿಯಮವು । ಅಣ್ಣ, ತಂದೆ ತಾಯಿಯರ ಮರಣದಲ್ಲಿ ಈ ಮೇಲೆ ಹೇಳಿರುವ ನಿಯಮಗಳನ್ನು ಒಂದು ವರ್ಷಕಾಲ ಮಾಡಬೇಕು ॥

****

2. ಅಸ್ಥಿ ಚ ಭೃಗ್ವಾದೌ ವಿಧಿಃ

ತಥಾ ಚ ಪುರಾಣೇ –

ದುಶ್ಚಿಕಿತ್ಸೇರ್ಮಹಾರೋಗೈಃ ಪೀಡಿತಸ್ತು ಪುಮಾನ್ ಯದಿ । ಪ್ರವಿಶೇಜ್ಜ್ವಲನಂ ದೀಪ್ತಂ ಕುರ್ಯಾತ್ ಅನಶನಂ ತಥಾ । ಅಗಾಧತೋಯ ರಾಶಿಂ ಚ ವಿಷಂ ಪೀತ್ವಾ ಚ ಕ್ರೂರತಃ । ವಿಪ್ರಾಗ್ನ್ಯುದಕ ಚಂಡಾಲ ಶೃಂಗಿ ದಂಷ್ಟ್ರ್ಯಭಿಶಸ್ತತಃ । ಅಕಾಮತೋ ಮೃತಾನಾಂ ತು ದಾಪಯೇತ್ (ಆಹರೇ) ಐಂದವದ್ವ್ಯಯಮ್ ॥

ಚಿಕಿತ್ಸೆ ಮಾಡಲು ಅಸಾಧ್ಯವಾದ ರೋಗದಿಂದ ಪೀಡಿತನಾದ ಮನುಷ್ಯನು, ಒಂದುವೇಳೆ ಅಗ್ನಿಗೆ ಬಿದ್ದರೆ ಅಥವ ಉಪವಾಸ ಇದ್ದು ಸತ್ತರೆ ಅಥವಾ ನೀರಿನಲ್ಲಿ ಸತ್ತರೆ । ಅಥವಾ ವಿಷದಿಂದ ಸತ್ತರೆ ಅಥವ ಬ್ರಾಹ್ಮಣನ ಅಗ್ನಿಯಲ್ಲಿ, ನೀರಿನಲ್ಲಿ, ಚಂಡಾಲನಿಂದ, ಕೋಡಿರುವ , ದಂತವಿರುವ ಪ್ರಾಣಿಗಳಿಂದ, ಆಕಸ್ಮಿಕವಾಗಿ ಸತ್ತರೆ, ಈ ರೀತಿಯಲ್ಲಿ ಮರಣವಾದರೆ, ೨ ಚಾಂದ್ರಾಯಣವನ್ನು ಮಾಡಿಕೊಂಡು, ಅವನ ಔರ್ಧ್ವದೈಹಿಕ ಕರ್ಮವನ್ನು ಮಾಡಬೇಕು ॥

ಅಪರಾರ್ಕೇ –

ಚಂಡಾಲಾದಗ್ನಿನಾವಾಪಿ ವಿದ್ಯುತಾ ಬ್ರಾಹ್ಮಣೇನ ವಾ । ಪಥಿ ವಾ ಪಶುನಾ ವೃಕ್ಷಾತ್ಪಾತೇನೋದ್ಬಂಧನೇನ ವಾ । ಜಲೇ ವಾ ಭೋಜನೇ ವಾಪಿ ಯಃ ಪಂಚತ್ವಮುಪಾಗತಃ । ತಸ್ಯ ಪಾಪ ವಿಶುದ್ಧ್ಯರ್ಥಂ ತಪ್ತಕೃಚ್ಛ್ರಂ ಸಮಾಚರೇತ್ । ಏತದಕೃತಚೂಡ ವಿಷಯಮ್ ॥

ಚಂಡಾಲನಿಂದ, ಅಗ್ನಿಯಿಂದ, ವಿದ್ಯುತ್‌ನಿಂದ, ಬ್ರಾಹ್ಮಣನಿಂದ । ಮಾರ್ಗದಲ್ಲಿ ಪ್ರಾಣಿಗಳಿಂದ, ಮರದಿಂದ, ಉಲ್ಕಾಪಾತಾದಿಗಳಿಂದ, ನೇಣಿಂದ, ನೀರಲ್ಲಿ । ಊಟ ಮಾಡುವ ಸಮಯದಲ್ಲಿ, ಮರಣವನ್ನು ಹೊಂದಿದರೆ, ಅವನ ಪಾಪದ ಪ್ರಾಯಶ್ಚಿತ್ತಕ್ಕಾಗಿ ತಪ್ತಕೃಚ್ಛ್ರವನ್ನು ಮಾಡಿಕೊಳ್ಳಬೇಕು । ಇದು ಚೂಡಾಕರ್ಮವಾಗದ ಶಿಶುವಿನ ವಿಷಯವಾಗಿದೆ ॥

ಬೃಹದಂಗಿರಾಃ –

ಪ್ರಮಾದಾನ್ಮ್ರಿಯತೇ ಯಸ್ತು ಭೃಗ್ವಗ್ನ್ಯನಶನಾಂಬುಭಿಃ । ತಸ್ಯ ಪಾಪ ವಿಶುದ್ಧ್ಯರ್ಥಂ ಕೃಚ್ಛ್ರಷಟ್ಕಂ ವಿಧೀಯತೇ । ಏತತ್ ಅನುಪನೀಯ ವಿಷಯಮ್ ॥

ಆಕಸ್ಮಿಕವಾಗಿ, ಪ್ರಪಾತದಲ್ಲಿ, ಅಗ್ನಿಯಲ್ಲಿ, ಉಪವಾಸದಿಂದ, ನೀರಿನಿಂದ, ಸಿಡಿಲಿನಿಂದ, ಈ ರೀತಿ ಮರಣಹೊಂದಿದರೆ, ಶುದ್ಧಿಗಾಗಿ । ೬ ಕೃಚ್ಛ್ರವನ್ನು ಮಾಡಿಕೊಳ್ಳಬೇಕು । ಇದು ಉಪನಯನವಾಗದ ವಟುವಿನ ವಿಷಯವಾಗಿದೆ ॥

****

3. ಶಿಲಾ ಲಕ್ಷಣಂ

ತತಃ ಶಿಲಾಂ ಸಮಾದಾಯ ಚತುರಂಗುಲಮಾಯತಂ । ನಾತಿಹ್ರಸ್ವಂ ನಾತಿದೀರ್ಘಂ ಸ್ಫುಟಿತಂತು ಪರಿತ್ಯಜೇತ್ । ರಕ್ತಂ ಶ್ವೇತಂ ತು ಪಾಷಾಣಂ ವರ್ಣಾನಾಂ ಉತ್ತಮೋತ್ತಮಂ । ಬಹುವರ್ಣಂ ನೀಲವರ್ಣಂ ಪಾಷಾಣಂ ತು ಪರಿತ್ಯಜೇತ್ । ಪಾಷಾಣಸ್ಯ ಪ್ರಮಾಣಂ ತು ಅರ್ಧಾಮಲಕ ಮಾತ್ರಕಂ । ನ ಚಾಧಿಕಂ ನೈವ ಹೀನಂ ಪ್ರವದಂತಿ ಮನೀಷಿಣಃ ॥

ನಂತರ ಶಿಲೆಯನ್ನು ತೆಗೆದುಕೊಂಡು, ಅದರ ಅಳತೆಯನ್ನು ಹೀಗೆ ಮಾಡಬೇಕು । ೪ ಅಂಗುಲ ಅಗಲವಿರಬೇಕು । ತುಂಬಾ ಸಣ್ಣದಿರಬಾರದು । ತುಂಬಾ ಉದ್ದವಿರಬಾರದು । ಒಡೆದಿರಬಾರದು । ಕೆಂಪು ಅಥವಾ ಬಿಳಿ ಬಣ್ಣದಶಿಲೆಯು ಅತ್ಯುತ್ತಮವು । ಅನೇಕಬಣ್ಣಗಳಿಂದ ಕೂಡಿದ ಅಥವ ನೀಲಿ ಬಣ್ಣದ ಶಿಲೆಯನ್ನು ತೆಗೆದುಕೊಳ್ಳಬಾರದು । ಶಿಲೆಯ ಪ್ರಮಾಣವು, ಅರ್ಧ ನೆಲ್ಲಿಕಾಯಿ ಗಾತ್ರದಷ್ಟು ದಪ್ಪ ಇರಬೇಕು ಎಂದು ಹೇಳುತ್ತಾರೆ ॥

****

4. ಮೃತಾಗ್ನಿಹೋತ್ರಸ್ಯ ಪ್ರಯೋಗಃ

ತೇಷ್ವೇವ ಅಗ್ನಿಷು ಪಯಸ್ಯೈವ ಹೋಮಃ । ಪ್ರಾಚೀನಾವೀತಿ ಸರ್ವಂ ಅಮಂತ್ರಕಂ ಸಾಂಗಂ ಕರೋತಿ ॥ ವಿಹಾರ(ಸ್ತು)ಸ್ಯ ದಕ್ಷಿಣತಃ ಪುತ್ರಾದಿಃ ಪ್ರಾಣಾನಾಯಮ್ಯ । ಪ್ರಾಚೀನಾವೀತಿ ದೇಶಕಾಲೌ ಸಂಕೀರ್ತ್ಯ, ಅಗ್ನಿಗುಪ್ತ್ಯರ್ಥಂ ಮೃತಾಗ್ನಿಹೋತ್ರ ವಿಧಾನೇನಾಗ್ನಿಹೋತ್ರಮಧಿವಾನ್ಯ ವತ್ಸಾಯಾಃ ಪಯಸಾ ಕೇವಲೇನ ವಾ ಗೋ ಪಯಸಾ ಹೋಷ್ಯಾಮೀತಿ ಸಂಕಲ್ಪ್ಯ । ತೂಷ್ಣೀಂ ಸಮಿಧಮಾಹೃತ್ಯ ತೂಷ್ಣೀಮಗ್ನಿಷು ನಿಧಾಯ, ಪರಿಸಮೂಹ್ಯ, ದಕ್ಷಿಣಾಗ್ರೈಃ ಪ್ರಾಗಗ್ರೈಶ್ಚ ದರ್ಭೈಃ ಪರಿಸ್ತೀರ್ಯ, ತೂಷ್ಣಿಮಭಿವಾನ್ಯವತ್ಸಾಂ ಗಾಂ ದೋಹಯಿತ್ವಾ ಪಯ ಆಹೃತ್ಯ ಗಾರ್ಹಪತ್ಯಸ್ಯ ದಕ್ಷಿಣಾರ್ಧೇಶಿತೇ ಭಸ್ಮನಿಯಮಾರ್ಧಮಧಿಶ್ರಿತ್ಯ ತೃಣೇನ ಜ್ವಲತಾವೇಕ್ಷ್ಯದೋಹನ ಸಂಕ್ಷಾಳನಂ ಸ್ರುವ ಆನೀಯತೇನ ಪರಿಷಿಚ್ಯ, ಅಪ್ರದಕ್ಷಿಣಂ ತ್ರಿಃ ಪರ್ಯಗ್ನಿಕೃತ್ವಾ ।

ಆ ಆಧಾನಮಾಡಿದ ಅಗ್ನಿಯಲ್ಲಿಯೇ, ಮೃತಾಗ್ನಿಹೋತ್ರದ ಹೋಮವನ್ನು ಹಾಲಿನಿಂದ ಮಾಡಬೇಕು । ಪ್ರಾಚೀನಾವೀತಿಯಲ್ಲಿ ಎಲ್ಲ ಅಗ್ನಿಹೋತ್ರಕರ್ಮಗಳನ್ನು ಅಮಂತ್ರಕವಾಗಿ ಸಾಂಗವಾಗಿ ಮಾಡಬೇಕು । ವಿಹಾರದ ದಕ್ಷಿಣದಕಡೆ ಮೃತನ ಮಕ್ಕಳು ಅಥವ ಬೇರೇ ಕರ್ತೃಗಳು ಪ್ರಾಣಾಯಾಮ ಮಾಡಿ । ಪ್ರಾಚೀನಾವೀತಿಯಾಗಿ ಸಂಕಲ್ಪಿಸಿ, ಮೃತಾಗ್ನಿಹೋತ್ರದ ವಿಧಾನದಿಂದ ಅಗ್ನಿಹೋತ್ರವನ್ನು ಆರಂಭಿಸಬೇಕು, ಕರುಸತ್ತ ಹಸುವಿನ ಹಾಲಿನಿಂದ ಅಥವ ಕೇವಲ ಹಸುವಿನ ಹಾಲಿನಿಂದ ಹೋಮವನ್ನು ಮಾಡಲು ಸಂಕಲ್ಪಿಸಬೇಕು । ಅಮಂತ್ರಕವಾಗಿ ಸಮಿತ್ತನ್ನು ತೆಗೆದುಕೊಂಡುಬಂದು, ಅಮಂತ್ರಕವಾಗಿ ೩ ಅಗ್ನಿಗಳಲ್ಲೂ ಹಾಕಿ, ೩ ಅಗ್ನಿವೇದಿಗಳನ್ನು ಶುದ್ಧಗೊಳಿಸಿ, ಅಲಂಕರಿಸಿ, ದಕ್ಷಿಣಾಗ್ರವಾದ, ಪ್ರಾಗಗ್ರವಾದ ದರ್ಭೆಗಳಿಂದ ೩ ಅಗ್ನಿಗಳಿಗೂ ಪರಿಸ್ತರಣ ಹಾಕಿ, ಅಮಂತ್ರಕವಾಗಿ ಕರುಸಹಿತ ಹಸುವಿನ ಹಾಲನ್ನು ಕರೆದು, ಹಾಲನ್ನು ಗಾರ್ಹಪತ್ಯದ ಹತ್ತಿರಕ್ಕೆ ತಂದು ಆ ಗಾರ್ಹಪತ್ಯದ ದಕ್ಷಿಣಾರ್ಧ ಭಸ್ಮದಮೇಲೆ ಆ ಹಾಲನ್ನು ಇಟ್ಟು, ದರ್ಭೆಯಿಂದ ಜ್ವಲತಾವೇಕ್ಷಣೆ ಮಾಡಿ, ಹಾಲುಕರೆಯಲು ಉಪಯೋಗಿಸಿದ ಪಾತ್ರೆಗೆ ಸ್ವಲ್ಪ ನೀರನ್ನು ಹಾಕಿ ನಂತರ ಅದನ್ನು ಸ್ರುವದ ಮೂಲಕ ಅಲ್ಲಿ ಇಟ್ಟಿರುವ ಹಾಲಿಗೆ ಹಾಕಬೇಕು ।

ನಂತರ ಅಪ್ರದಕ್ಷಿಣೆಯಾಗಿ ೩ ಬಾರಿ ಅಗ್ನಿಗೆ ಪರಿಷೇಚನಮಾಡಿ, ನಂತರ ಆ ಇಟ್ಟಂತಹ ಹಾಲಿಗೆ ಅಪ್ರದಕ್ಷಿಣೆಯಾಗಿ ಪರ್ಯಗ್ನಿಕರಣಮಾಡಿ ।

ದಕ್ಷಿಣತ ಉದ್ವಾಸ್ಯ, ತ್ರಿರ್ಭೂಮೌ ಪ್ರತಿಷ್ಠಾಪ್ಯ । ಸ್ರುಕ್ ಸ್ರುವಮಾದಾಯ ನಿಷ್ಪವ್ಯ, ಸಂಮೃಶ್ಯಾಗ್ನಿಹೋತ್ರಹವಣೇಂ ಅಭಿಮಂತ್ರ್ಯ । ಸಕೃದೇವೋನ್ನೀಯ ಕೂರ್ಚೇ ನಿಧಾಯ । ಹಸ್ತಂ ಪ್ರತಾಪ್ಯ, ದ್ವಿಸ್ಸಮೃಶ್ಯ । ಅತಸ್ತಾತ್ಸಮಿಧಂ ಕೃತ್ವಾ, ಉದ್ಧೃತ್ಯ, ದಕ್ಷಿಣೇನ ವಿಹಾರಂ ದಕ್ಷಿಣಾಗ್ನೇರಪಿ ದಕ್ಷಿಣತೋ ಹೃತ್ವಾ, ವೇದಿಮಧ್ಯೇ ನಿಧಾಯ, ಪುನರುದ್ಧೃತ್ಯ, ಅಪರೇಣಾಹವನೀಯಂ ಕೂರ್ಚೇ ಸಾದಯಿತ್ವಾ, ಅಪ ಉಪಸ್ಪೃಶ್ಯ । ಸಮಿಧಮಾದಾಯ, ಪ್ರಾಣಾಪಾನ್ಯ ನಿಮೀಲ್ಯಾವೇಕ್ಷ್ಯ, ಆಭಿಕ್ರಮ್ಯ, ಕಾಮನಾವರ್ಜ್ಯಂ, ಸಕೃದೇವ ಸರ್ವಂ ತೂಷ್ಣೀಂ ಜುಹುಯಾತ್ – ಪ್ರಜಾಪತಯು ಇದಂ ॥

ದಕ್ಷಿಣದಕಡೆಗೆ ಸರಿಸಿ, ೩ ಸಲ ನೆಲದಲ್ಲಿ ಇಟ್ಟು, ಸ್ರುಕ್, ಸ್ರುವಗಳನ್ನು ತೆಗೆದುಕೊಂಡು ಗಾರ್ಹಪತ್ಯದಲ್ಲಿ ಅವನ್ನು ಕಾಯಿಸಿ, ದರ್ಭೆಗಳಿಂದ ಅವಕ್ಕೆ ಸಂಮಾರ್ಜನೆ ಮಾಡಿ, ಅಗ್ನಿಹೋತ್ರಹವಣಿಯನ್ನು ಮುಟ್ಟಿ, ಒಂದುಸಲ ಸ್ರುವದಿಂದ ಹಾಲನ್ನು ಅಗ್ನಿಹೋತ್ರಹವಣಿಗೆ ಹಾಕಿ, ಕೂರ್ಚದಲ್ಲಿ ಅಗ್ನಿಹೋತ್ರಹವಣಿಯನ್ನು ಇಟ್ಟು, ತನ್ನ ಕೈಯನ್ನು ಗಾರ್ಹಪತ್ಯಾಗ್ನಿಯಲ್ಲಿ ಕಾಯಿಸಿ, ೨ ಸಲ ಆ ಅಗ್ನಿಹೋತ್ರಹವಣಿಯನ್ನು ಮುಟ್ಟಿ, ಅಗ್ನಿಹೋತ್ರದ ಕೆಳಗೆ ಸಮಿತ್ತನ್ನು ಇಟ್ಟುಕೊಂಡು ಉದ್ಧರಣಮಾಡಿ, ವಿಹಾರದ ದಕ್ಷಿಣಕ್ಕೆ ದಕ್ಷಿಣಾಗ್ನಿಗಿಂತಲೂ ದಕ್ಷಿಣಕ್ಕೆ ಹೋಗಿ, ನಂತರ ವೇದಿಮಧ್ಯದಲ್ಲಿ ಅಗ್ನಿಹೋತ್ರಹವಣಿಯನ್ನಿಟ್ಟು, ಮತ್ತೆ ಅಗ್ನಿಹೋತ್ರಹವಣಿಯನ್ನು ಎತ್ತಿಕೊಂಡು ಆಹವನೀಯದ ಬಳಿಯಿರುವ ಕೂರ್ಚದಲ್ಲಿಟ್ಟು, ಕೈತೊಳೆದು, ನಂತರ ಸಮಿತ್ತನ್ನು ತೆಗೆದುಕೊಂಡು, ಉಸಿರನ್ನು ಒಮ್ಮೆ ಹೊರಬಿಟ್ಟು, ಪುನಃ ಒಳಗೆ ತೆಗೆದುಕೊಂಡು, ಕಣ್ಣು ಮಿಟಿಕಿಸುತ್ತಾ ಅಗ್ನಿಹೋತ್ರಹವಣಿಯಲ್ಲಿರುವ ಹಾಲನ್ನು ನೋಡಿ, ಸ್ವಲ್ಪಮುಂದೆ ಸರಿದು, ಯಾವ ಕಾಮನೆಗಳನ್ನೂ ಮನಸ್ಸಿನಲ್ಲಿ ಇಟ್ಟುಕೊಳ್ಳದೇ, ಒಂದೇಸಲ ಅಗ್ನಿಹೋತ್ರಹವಣಿಯ ಎಲ್ಲಾ ಹಾಲನ್ನೂ ಅಮಂತ್ರಕವಾಗಿ ಆಹವನೀಯದಲ್ಲಿ ಹೋಮಿಸಬೇಕು । ಇದಕ್ಕೆ ಉದ್ದೇಶತ್ಯಾಗವು ಪ್ರಜಾಪತಯ ಇದಂ ನಮಮ ।

ಹುತ್ವಾ, ಮಹದಭಿವೀಕ್ಷ್ಯತೇ । ಲೇಪಂ ನಿಮೃಜ್ಯ, ಗಾರ್ಹಪತ್ಯಂ ಪ್ರತೀಕ್ಷ್ಯನೋತ್ತರಾಹುತಿಃ, ಅಪ ಉಪಸ್ಪೃಶ್ಯ । ತೂಷ್ಣೀಂ ಗಾರ್ಹಪತ್ಯೇ ಚತಸ್ರ ಆಹುತೀರ್ಹುತ್ವಾ, ದಕ್ಷಿಣಾಗ್ನಾವಪಿ ಚತಸ್ರೋಹುತ್ವಾ, ತೂಷ್ಣೀಂ ಉಪಸ್ಥಾಯ । ಸ್ರುಚಂ ಪ್ರತಿತಪ್ಯ, ನಿಧಾಯ । ತ್ರಿಷ್ವಗ್ನಿಷು ಸಮಿಧಮಾದಾಯ, ಪರಿಸ್ತರಣಾನ್ಯಪೋಹ್ಯ, ಪರಿಸಮೂಹ್ಯ । ಅಗ್ನಿಹೋತ್ರಸ್ಥಾಲ್ಯಾಂ ತೃಣಮಕ್ತ್ವಾ । ಅಪಿಪ್ರೇರಗ್ನೇ ಸ್ವಾಂತನ್ವಮಯಾತ್ । ದ್ಯಾವಾಪೃಥಿವೀ ಇಷಮೂರ್ಜಂ ಅಸ್ಮಾಸುಧತ್ತಮಿತಿ । ಆಹವನೀಯೇನುಪ್ರಹರತಿ । ದ್ಯಾವಾಪೃಥಿವೀ ದೇವತಾ ।

ಹೋಮವಾದ ನಂತರ ಹೋಮಜ್ವಾಲೆಯನ್ನು ಒಮ್ಮೆ ನೋಡಬೇಕು । ನಂತರ ಹವಿಸ್ಸಿನ ಲೇಪವನ್ನು ಕೂರ್ಚಕ್ಕೆ ಲೇಪಿಸಿ ಗಾರ್ಹಪತ್ಯವನ್ನು ಒಮ್ಮೆ ನೋಡಬೇಕು, ಎರಡನೇ ಆಹುತಿಯು ಇಲ್ಲ, ನಂತರ ಕೈತೊಳೆದು । ಅಮಂತ್ರಕವಾಗಿ ಗಾರ್ಹಪತ್ಯದಲ್ಲಿ ಹವಿಸ್ಸಿನಿಂದ ಸ್ರುವದಿಂದ ೪ ಹೋಮಗಳನ್ನು ಮಾಡಿ, ಹಾಗೆಯೇ ದಕ್ಷಿಣಾಗ್ನಿಯಲ್ಲಿಯೂ ಅಮಂತ್ರಕವಾಗಿ ಸ್ರುವದಿಂದ ೪ ಸಲ ಹೋಮಿಸಿ, ಅಮಂತ್ರಕವಾಗಿ ಉಪಸ್ಥಾನ ಮಾಡಿ । ಸ್ರುವವನ್ನು ಕಾಯಿಸಿ, ಇಟ್ಟು, ೩ ಅಗ್ನಿಗಳಿಗೂ ಸಮಿತ್ತನ್ನು ಹಾಕಿ, ಪರಿಸ್ತರಣಗಳನ್ನು ತೆಗೆದು, ಅಗ್ನಿಹೋತ್ರಸ್ಥಾಲಿಯಲ್ಲಿ ದರ್ಭೆಯನ್ನು ಮುಳುಗಿಸಿ, ಈ ಮುಂದಿನ ಮಂತ್ರದಿಂದ ಸ್ಥಾಲೀಸಹಿತವಾಗಿ ಹೋಮಿಸಬೇಕು, ಇದಕ್ಕೆ ದೇವತೆ ದ್ಯಾವಾಪೃಥಿವೀ ।

ಹವಿರಾಸಾದನ ಕೂರ್ಚಾ ತೃಣಮಾದಾಯಾಗ್ನಿಹೋತ್ರಸ್ಥಾಲ್ಯಾಂ ಅಕ್ತ್ವಾನುಪ್ರಹರತಿ । ಸಾಹ್ಯಗ್ನಿಹೋತ್ರಸ್ಯ ಸರ್ಗ್ಗಸ್ಥಿತಿಃ । ತತ್ರ ಧಾರಾಶ್ರವಣ – ಪರಿಷೆಚನ – ಉಪವೇಷ್ಟಾದಾನಾಂಗಾಪೋಹನ – ಪುನರೇವಾವೇಕ್ಷಣ – ಅಂಗಾರ ಪ್ರತ್ಯೂಹನ – ಅನುಜ್ಞಾನ – ಪ್ರಾಶನ – ಪರಾಚೀನ ನಿನಯನ – ಸ್ರುಕ್ ಪ್ರಕ್ಷಾಳನ – ಸರ್ಪಾದ್ಯುತ್ಸೇಚನ – ಅಪರೇಣಾಹವನೀಯ ನಿನಯನ – ಅಂಜಲಿನಿನಯನ – ಉನ್ನಂಯನ – ದೇಶನಿನಂಯನ – ಅಂತರ್ವೇದ್ಯಪೋ ನಿನಂಯನ – ಉತ್ತರಪರಿಷೇಚನಾನಾಂ, ಸರ್ವೇಷಾಂ ಕರ್ಮಣಾಂ ಲೋಪಃ ।

ದರ್ಭೆಯನ್ನು ಬೆರಸಿ ಹೋಮಮಾಡುವುದೆಂದರೆ, ಹವಿಸ್ಸನ್ನು ಇಡುವ ಕೂರ್ಚದ ದರ್ಭೆಗಳನ್ನು ತೆಗೆದುಕೊಂಡು, ಅಗ್ನಿಹೋತ್ರಸ್ಥಾಲಿಯಲ್ಲಿ ಅದನ್ನು ಮುಳುಗಿಸಿ,

ಸ್ಥಾಲೀಸಹಿತವಾಗಿ ಹೋಮಿಸುವುದು । ಇಲ್ಲಿಗೆ ಮೃತಾಗ್ನಿಹೋತ್ರವು ಸಮಾಪಿಗೊಳ್ಳುತ್ತದೆ। ಈ ಮೃತಾಗ್ನಿಹೋತ್ರದಲ್ಲಿ ಧಾರಾಶ್ರವಣ – ಪರಿಷೇಚನ – ಉಪವೇಷ್ಟಾದಾನ – ಅಂಗಾಪೋಹನ – ಪುನರೇವ ಅವೇಕ್ಷಣ – ಅಂಗಾರ ಪ್ರತ್ಯೂಹನ ಅನುಜ್ಞಾನ – ಪ್ರಾಶನ – ಪರಾಚೀನ ನಿನಯನ – ಸ್ರುಕ್ ಪ್ರಕ್ಷಾಳನ – ಸರ್ಪಾದ್ಯುತ್ಸೇಚನ – ಅಪರೇಣ ಆಹವನೀಯ ನಿನಯನ – ಅಂಜಲಿ ನಿನಯನ – ಉನ್ನಯನದೇಶ ನಿನಯನ – ಅಂತರ್ವೇದ್ಯಪೋ ನಿನಯನ – ಉತ್ತರ ಪರಿಷೇಚನ, ಇವಿಷ್ಟೂ ನಿತ್ಯಾಗ್ನಿಹೋತ್ರದ ಕರ್ಮಗಳು ಮೃತಾಗ್ನಿಹೋತ್ರದಲ್ಲಿ ಇಲ್ಲ ।

ಸ್ವಗೃಹೇ ದೇಶಾಂತರೇವಾ ಮೃತಸ್ಯ ಯಾವದಗ್ನಿಭಿಃ ಸಗ್ಂಸ್ಕಾರಃ ತಾವನ್ಮೃತಾಗ್ನಿಹೋತ್ರಂ ಕರ್ತವ್ಯಂ ನ್ಯಾಯತಾಲ್ಯಾತ್ । ಯತ್ರಯತ್ರ ಮೃತಾಗ್ನಿಹೋತ್ರ ಉಕ್ತಃ ತತ್ರತತ್ರ ಏವ ಕರ್ತವ್ಯಮ್ । ಅಂತಿಮೇsಗ್ನಿಹೋತ್ರಸ್ಥಾಲ್ಯಾಂ ತೃಣಮಕ್ತ್ವಾನುಪ್ರಹರತಿ । ಅಗ್ನಿಹೋತ್ರೋಚ್ಛೇಷಣಂ ನಿದಧಾತಿ । ಅಗ್ನಿಸನ್ನಿಧೌ ಮೃತಸ್ಯ ಪಾತ್ರಚಯನಂ ನಿಯತಂ ದೇಶಾಂತರ ಮೃತೇ ಪ್ರತಿಕೃತಿದಾಹೇ ಚ ಚಯನದಾನಯೋಃ ವಿಕಲ್ಪಃ । ತತಃ ಪ್ರೇತೇಮಾತ್ಯಾ ಇತ್ಯಾದಿ ಸಮಾನಮ್ ॥

ತನ್ನ ಮನೆಯಲ್ಲಿಯೋ ಅಥವಾ ದೇಶಾಂತರದಲ್ಲಿಯೋ ಮೃತನಾದವನ ಮೃತಾಗ್ನಿಹೋತ್ರವನ್ನು, ಎಲ್ಲಿಯವರೆಗೆ ಅಗ್ನಿಸಂಸ್ಕಾರವಾಗುವುದಿಲ್ಲವೋ ಅಷ್ಟೂದಿನಗಳೂ ಸಹ ಮೃತನ ಅಗ್ನಿಗಳಲ್ಲಿ ಕರ್ತೃವು ಮೃತಾಗ್ನಿಹೋತ್ರವನ್ನು ಮಾಡುತ್ತಿರಬೇಕು । ಎಲ್ಲಿ ಎಲ್ಲಿ ಮೃತಾಗ್ನಿಹೋತ್ರವನ್ನು ಹೇಳಿದೆಯೋ ಅಲ್ಲಿಮಾತ್ರ ಮಾಡಬೇಕು । ಅಗ್ನಿಹೋತ್ರದ ಶೇಷವನ್ನು ಅಲ್ಲಿ(ಶವದ ಪಕ್ಕದಲ್ಲಿ) ಇಡುತ್ತಾನೆ । ಅಗ್ನಿಸನ್ನಿಧಿಯಲ್ಲಿಯೇ ಮೃತನ ಪಾತ್ರೆಯ ಚಯನವನ್ನು ಮಾಡಬೇಕು । ದೇಶಾಂತರದಲ್ಲಿ ಮೃತನಾದರೆ ಅಥವಾ ಮೃತನ ಶರೀರವು ಸಿಗದಿದ್ದಾಗ ಈ ಪಾತ್ರಚಯನವು ಹಾಗೂ ದಾನಾದಿಗಳು ವಿಕಲ್ಪ(ಮಾಡಬಹುದು ಅಥವಾ ಬಿಡಬಹುದು) । ಇಲ್ಲಿಂದ ಮುಂದಕ್ಕೆ ಪಿತೃಮೇಧದ ಪ್ರಯೋಗದಂತೆಯೇ ಸಮಾನವಾಗಿ ಮಾಡಬೇಕು ॥

****

5. ಪುನರ್ದಹನ ಪ್ರಯೋಗಃ

ಅಥ ಪುನರ್ದಹನಸ್ಯ ಪ್ರಯೋಗೋ ವಕ್ಷ್ಯತೇ । ಸ ಚ ಸೋಮಯಾಜಿನೋ ನಿತ್ಯಃ । ಅಸೋಮಯಾಜಿನೋsನಿತ್ಯಃ । ಸೋಮಯಾಜೀಚೇನ್ಮೃಪ್ತಮುದ್ಧೃತ್ಯ ಪುನರಸ್ಥಿದಹನಂ ಕುರ್ಯುಃ । ತದಪಿ ವೈಕಲ್ಪಿಕಮಿತಿ ಕೇಚಿತ್ । ಸಂಚಯನದಿನಾತ್ ಚತುರ್ಥೇsಹನಿ ಕರ್ತವ್ಯಂ । ಪೂರ್ವಮೇವಾಗ್ನಿಹೋತ್ರ ಹವಣೀಂ । ಕೃಷ್ಣಾಜಿನಗ್ಂ ಶಮ್ಯಾಂ ದೃಷದುಪಲೇ ಚ ನ ದಹೇಯುಃ । ಸಾದನಮಾತ್ರಂ ಕುರ್ಯುಃ । ಕೇಚಿತ್ ತೇಷಾಂ ಸಾದನಮಪಿ ನೇಚ್ಛಂತಿ । ಅಸ್ಥಿಸಂಚಯನಾನಂತರಂ ಆಶ್ಮಶಾನದೇಶಾದಗ್ನಿಮಾನೀಯ ದಹನವದವಕಾಶಂ ಜೋಷಯಿತಾ ಶ್ಮಶಾನದಗ್ನಿಂ ದಕ್ಷಿಣತೋ ನಿರ್ವರ್ತ್ಯ ತಿಸ್ರೋರಾತ್ರೀರ್ಜ್ವಲಯೇತ್ । ತ್ರಿರಾತ್ರೇ ಪೂರ್ಣೇ ಚತುರ್ಥ್ಯಾಂ ಅಪರಾಹ್ಣೇ ಪುನರ್ದಹನಂ ಕುರ್ಯಾತ್ ।

ಈಗ ಪುನರ್ದಹನದ ಪ್ರಯೋಗವನ್ನು ಹೇಳುತ್ತೇವೆ । ಈ ಕರ್ಮವನ್ನು, ಸೋಮಯಾಜಿಗಳಿಗೆ ನಿತ್ಯವಾಗಿ ಮಾಡಬೇಕು । ಅಸೋಮಯಾಜಿಗಳಿಗೆ ಅನಿತ್ಯ । ಮೃತನು ಸೋಮಂಯಾಜಿಯಾಗಿದ್ದರೆ, ದಹಿಸಿದ ಶರೀರದಿಂದ ಅಸ್ಥಿಗಳನ್ನು ತೆಗೆದುಕೊಂಡು, ಪುನರ್ದಹನಕರ್ಮವನ್ನು ಮಾಡಬೇಕು । ಈ ಪುನರ್ದಹನ ಕರ್ಮವು ವಿಕಲ್ಪವೆಂದು ಕೆಲವರು ಹೇಳುತ್ತಾರೆ । ಅಸ್ಥಿಸಂಚಯನದ ದಿನದಿಂದ ೪ ನೇ ದಿನ ಈ ಪುನರ್ದಹನ ಕರ್ಮವನ್ನು ಮಾಡಬೇಕು । ಮೃತನ ದಹನಕ್ಕಿಂತ ಮೊದಲೇ, ಅಗ್ನಿಹೋತ್ರಹವಣೀ – ಕೃಷ್ಣಾಜಿನ – ಶಮ್ಯೆ – ದೃಷತ್ – ಉಪಲಾ, ಈ ಪಾತ್ರೆಗಳನ್ನು ದಹನ ಮಾಡಬಾರದು । ಕೇವಲ ಆಸಾದನಮಾತ್ರವನ್ನು ಮಾಡಬೇಕು । ಕೆಲವರು ಆಸಾದನವನ್ನೂ ಮಾಡಬೇಕಾಗಿಲ್ಲವೆಂದು ಹೇಳುತ್ತಾರೆ । ಅಸ್ಥಿಸಂಚಯನಾನಂತರ ಸ್ಮಶಾನದವರೆಗೆ ಅಗ್ನಿಯನ್ನು ತೆಗೆದುಕೊಂಡು ಬಂದು, ದಹನಕ್ಕೆ ಹೇಗೆ ಸ್ಥಳಶುದ್ಧಿಯನ್ನು ಮಾಡಬೇಕೋ ಹಾಗೆ ಸ್ಥಳಶುದ್ಧಿಯನ್ನು ಮಾಡಿಕೊಂಡು । ದಹನದಜಾಗದ ದಕ್ಷಿಣಕ್ಕೆ ಆ ಅಗ್ನಿಯನ್ನು ಇಟ್ಟುಕೊಂಡು ೩ ರಾತ್ರಿಗಳು ಜ್ವಲನ ಮಾಡಬೇಕು । ೩ ರಾತ್ರಿಗಳು ಕಳೆದನಂತರ ೪ ನೇ ದಿನ ಅಪರಾಹ್ಣದಲ್ಲಿ ಪುನರ್ದಹನ ಕರ್ಮವನ್ನು ಮಾಡಬೇಕು ।

ಪ್ರಾಣಾನಾಯಮ್ಯ । ಪ್ರಾಚೀನಾವೀತಿ । ದೇಶಕಾಲೌ ಸಂಕೀರ್ತ್ಯ । ಪಿತುರ್ಗೋತ್ರಸ್ಯ (ಗೋತ್ರಾಯಾಃ), ಶರ್ಮಣಃ(ದಾಯಾಃ), ಪ್ರೇತಸ್ಯ ಪುನರ್ದಹನಂ ಕರಿಷ್ಯೇ ಇತಿ ಸಂಕಲ್ಪ್ಯ । ಪುನರ್ದಹನದೇಶಂ ಪಾಲಾಶಶಾಖಯಾ ಅಪೇತವೀತೇತಿ ಸಂಮೃಜ್ಯ । ಉದ್ಧೃತ್ಯ ಅವೋಕ್ಷ್ಯ । ಹಿರಣ್ಯಶಕಲಂ ನಿಧಾಯ । ದಕ್ಷಿಣಾಗ್ರಾನ್ ದರ್ಭಾನ್ ಸಂಸ್ತೀರ್ಯ । ಪೂರ್ವವತ್ ದಾರುಚಿತಿಂ ಚಿತ್ವಾ ತತ್ರ ಅಗ್ನಿಂ ನಿಧಾಯ । ಪರಿಸ್ತೀರ್ಯ । ಚಿತೇಃ ಪಶ್ಚಾತ್ ದಕ್ಷಿಣಾಗ್ರಾನ್ ದರ್ಭಾನ್ ಸಂಸ್ತೀರ್ಯ । ತಸ್ಮಿನ್ ದಕ್ಷಿಣಕುಂಭಂ ಶಮ್ಯಾಂ ನಿಧಾಯ । ತತ್ರ ದೃಷದಂ ನಿಧಾಯ । ಸಂಚಿತಂ ಸರ್ವಂ ಅಸ್ಥೀನಿ ಆದಾಯ । ತಸ್ಮಿನ್ ದೃಷದಿ ನಿಧಾಯ । ಘೃತಂ ಆಸಿಚ್ಯ ಪಿನಷ್ಟಿ । ಅನಾಸಿಚ್ಯ ವಾ ಪಿನಷ್ಟಿ । ಆಜ್ಯಕುಂಭೇ ಸಂಕ್ಷಿಪ್ಯ । ಸಹ ಮಿಶ್ರಯಿತ್ವಾ । ಅಗ್ನಿಹೋತ್ರ ಹವಣ್ಯಾಂ ಅವಧಾಯ । ಅಸ್ಮಾತ್ತ್ವಂ ಅಧಿಜಾತೋಸಿ ....., ಲೋಕಾಯಸ್ವಾಹಾ ॥ ಇತಿ ಜುಹೋತಿ । ಅಗ್ನಯ ಇದಂ ನಮಮ । ಮಂತ್ರಾವೃತ್ತಿಃ ಯಾವದರ್ಥಂ ಅಗ್ನಿಹೋತ್ರಹವಣೀಂ ಕೃಷ್ಣಾಜಿನಂ ಶಮ್ಯಾಂ ದೃಷದುಪಲೇ ಚ ಅನುಪ್ರಹರಯೇಯುಃ । ಏತದಂತಮೇವ ಸೋಮಯಾಜಿನಃ ಲೋಷ್ಟಚಯನಂ ಮಹಾಗ್ನಿಚಿತ್ ಕಾಠಕಾಗ್ನಿಚಿದ್ವಾ ಯದಿಸ್ಯಾತ್ । ತಸ್ಯ ಲೋಷ್ಟಚಯನಂ ತದಾ ನಿವಪನಂ ಪುನರ್ದಹನೇ ನ ಭವತಃ । ಸಂಚಯನಂ ಕೃತ್ವಾ । ಶಮೀ ಪಲಾಶ ಶಾಖಯೋಃ ಏಕತ್ರ ನಿಧಾಯ । ಸ್ನಾನಾಂತಂ ಕೃತ್ವಾ । ಲೋಷ್ಟಚಯನಕಾಲ ಪರ್ಯಂತಂ ಅಸ್ಥಿಸಂರಕ್ಷಣಂ ಕುರ್ಯಾತ್ । ತಾಮುತ್ತರತ್ರ ವಕ್ಷ್ಯಾಮಃ । ಸೋಮಯಾಜಿ ಪತ್ನ್ಯಾಃ ಅಪಿ ನಿವಪನಾಂತಂ ಪುನರ್ದಹನಂ ಅಪಿ ಅಸ್ತೀತಿ ಕೇಚಿತ್ । ಅಗ್ನಿಚಿತ್ ಪತ್ನೀ ಚೇತ್ ಲೋಷ್ಟಚಯನಮಪಿ ಕರ್ತವ್ಯಂ ॥

ಪ್ರಾಣಾಯಾಮವನ್ನು ಮಾಡಿ । ಪ್ರಾಚೀನಾವೀತಿಯಾಗಿ ಸಂಕಲ್ಪಿಸಿ, ತಂದೆಯ ಗೋತ್ರವನ್ನು ಹೇಳಿಕೊಂಡು ಮೇಲಿನಂತೆ ಸಂಕಲ್ಪಮಾಡಬೇಕು । ಪುನರ್ದಹನದ ಜಾಗವನ್ನು ಪಲಾಶ(ಮುತ್ತುಗ) ಟೊಂಗೆಯಿಂದ, ಅಪೇತವೀತ ಎಂಬ ಮಂತ್ರದಿಂದ ಸ್ವಚ್ಛಗೊಳಿಸಿ । ಅಗೆದು, ಆ ಜಾಗಕ್ಕೆ ನೀರನ್ನು ಪ್ರೋಕ್ಷಿಸಿ, ಚಿನ್ನದ ಕಡ್ಡಿಯನ್ನು ಅಲ್ಲಿಟ್ಟು । ದಕ್ಷಿಣಾಗ್ರವಾಗಿ ದರ್ಭೆಗಳನ್ನು ಹರಡಿ, ಹಿಂದಿನಂತೆ ದಾರುಚಿತಿಯಿಂದ ಅಲ್ಲಿ ಮರದಚಿತೆಯನ್ನು ಕಲ್ಪಿಸಿ, ಅದರಮೇಲೆ ಅಗ್ನಿಯನ್ನಿಟ್ಟು । ಪರಿಸ್ತರಣವನ್ನು ಹಾಕಿ, ಆ ಚಿತೆಯ ಹಿಂದೆ, ದಕ್ಷಿಣಾಗ್ರವಾಗಿ ದರ್ಭೆಗಳನ್ನು ಹರಡಿ । ಅದರಲ್ಲಿ ದಕ್ಷಿಣದ ಕಡೆಗೆ ಮಣ್ಣಿನಮಡಿಕೆ ಹಾಗೂ ಶಮ್ಯೆಯನ್ನಿಟ್ಟು

ನಂತರ ದೃಷತ್ ಉಪಲ ಈ ಪಾತ್ರೆಗಳನ್ನಿಟ್ಟು । ಸಂಚಯನ ಮಾಡಿದ ಎಲ್ಲಾ ಅಸ್ಥಿಗಳನ್ನೂ ತೆಗೆದುಕೊಂಡು । ಆ ದೃಷತ್ ಪಾತ್ರೆಯಮೇಲಿಟ್ಟು ನಂತರ ತುಪ್ಪದಿಂದ ಆ ಅಸ್ಥಿಗಳನ್ನು ನೆನೆಸಿ । ಆ ಅಸ್ಥಿಗಳನ್ನು ಹಿಟ್ಟು ಮಾಡಬೇಕು । ತುಪ್ಪದಿಂದ ನೆನೆಸದೆಯೂ ಹಿಟ್ಟು ಮಾಡಬಹುದು । ಆ ಪುಡಿಮಾಡಿದ ಅಸ್ಥಿಗಳನ್ನು ಆಜ್ಯದ ಪಾತ್ರೆಯಲ್ಲಿ ಹಾಕಿ, ಚೆನ್ನಾಗಿ ತುಪ್ಪದಲ್ಲಿ ಕೂಡಿಸಿ, ಆ ಅಸ್ಥಿಗಳನ್ನು ಅಗ್ನಿಹೋತ್ರಹವಣಿಯಲ್ಲಿ ತೆಗೆದುಕೊಂಡು । ಅಸ್ಮಾತ್ತ್ವಮಧಿಜಾತೋಸಿ.....ಲೋಕಾಯಸ್ವಾಹಾ ॥ ಎಂಬ ಮಂತ್ರದಿಂದ ಅಗ್ನಿಯಲ್ಲಿ ಹೋಮಿಸಬೇಕು । ಮೇಲಿನಂತೆ ಉದ್ದೇಶತ್ಯಾಗವನ್ನು ಹೇಳಬೇಕು । ಆ ಅಸ್ಥಿಗಳು ಸಂಪೂರ್ಣವಾಗಿ ಮುಗಿಯುವವರೆಗೂ ಈ ಮಂತ್ರವನ್ನೇ ಆವೃತ್ತಿಮಾಡಿ ಹೋಮಿಸಬೇಕು । ನಂತರ ಅಗ್ನಿಹೋತ್ರಹವಣೀ – ಕೃಷ್ಣಾಜಿನ – ಶಮ್ಯೆ – ದೃಷತ್ – ಉಪಲ, ಈ ಪಾತ್ರೆಗಳನ್ನು ಅಗ್ನಿಯಲ್ಲಿ ಪ್ರಹರಣ ಮಾಡಬೇಕು । ಇಲ್ಲಿಯವರೆಗೆ ಸೋಮಯಾಜಿಗಳಿಗೆ ಪುನರ್ದಹನಕರ್ಮವನ್ನು ಮಾಡಬೇಕು । ಲೋಷ್ಟಚಯನವನ್ನಾದರೋ, ಮಹಾಗ್ನಿಚಯನವನ್ನು ಮಾಡಿದಂತಹ ಅಥವ ಕಾಠಕಾಗ್ನಿಚಯನವನ್ನು ಮಾಡಿದಂತಹ ಯಜಮಾನನಿಗೆ ಮಾಡಬೇಕು । ಆ ಅಗ್ನಿಚಯನವನ್ನು ಮಾಡಿದಂತಹವನಿಗೆ, ಲೋಷ್ಟಚಯನವನ್ನು ಮಾಡಿ ನಂತರ ನಿವಪನವನ್ನು ಮಾಡಿ, ಆಮೇಲೆ ಪುನರ್ದಹನವನ್ನು ಮಾಡಬೇಕು । ಅಸ್ಥಿಸಂಚಯನವನ್ನು ಮಾಡಿ, ಶಮೀಶಾಖೆ ಮತ್ತು ಪಾಲಾಶಶಾಖೆಗಳನ್ನು ಒಂದುಜಾಗದಲ್ಲಿಟ್ಟು, ಸ್ನಾನಾಂತದವರೆಗೆ ಕರ್ಮಗಳನ್ನು ಮಾಡಿ । ಲೋಷ್ಟಚಯನವನ್ನು ಮಾಡುವವರೆಗೆ ಅಸ್ಥಿಗಳನ್ನು ಸಂರಕ್ಷಣೆ ಮಾಡಬೇಕು । ಈ ಲೋಷ್ಟಚಯನದ ವಿಷಯವನ್ನು ಮುಂದೆ ಹೇಳುತ್ತೇವೆ । ಸೋಮಯಾಜಿಯ ಪತ್ನಿಗೂ ಕೂಡ, ನಿವಪನಾಂತ ನಂತರ ಪುನರ್ದಹನಗಳು ಉಂಟು ಎಂದು ಕೆಲವರು ಹೇಳುತ್ತಾರೆ । ಇನ್ನು ಕೆಲವರು ನಿವಪನಾಂತದವರೆಗೆ ಎಂದು ಹೇಳುತ್ತಾರೆ । ಅಗ್ನಿಚಯನವನ್ನು ಮಾಡಿದವನ ಪತ್ನಿಗೆ, ಲೋಷ್ಟಚಯನವನ್ನೂ ಮಾಡಬೇಕು ॥

****

6. ಸ್ಮಶಾನೇ ಶ್ರೌತಾಗ್ನೇಃ ನಾಶೇ

ಯದಿ ಶ್ಮಶಾನಾಗ್ನಿಃ ಅನುಗತಸ್ಯಾತ್ ಭಸ್ಮ ಅವ್ಯೋಕ್ಷ್ಯ । ಲೌಕಿಕಾರಣೇ ಆಹೃತ್ಯ, ಅಯಂ ತೇ ಯೋನಿಃ....., ಇತಿ ಮಂತ್ರೇಣ ಭಸ್ಮನಿ ಸಮಾರೋಪ್ಯ ಮಥಿತ್ವಾ, ಉಪಾವರೋಹ್ಯ, ನಿಧಾಯ, ಪರಿಸ್ತೀರ್ಯ, ಆಜ್ಯಂ ಸಂಸ್ಕೃತ್ಯ, ಪರಿಷಿಚ್ಯ ಜುಹುಯಾತ್ ಭೂರ್ಭುವಸ್ಸುವಃ ಸ್ವಾಹಾ ಇತಿ । ಅನಾಜ್ಞಾತ ತ್ರಯಂ ಸರ್ವಪ್ರಾಯಶ್ಚಿತ್ತಂ ಚ ಹುತ್ವಾ । ತಥಾ ತಂತ್ರಂ ಪ್ರಯೋಜಯೇತ್ ॥

ಒಂದುವೇಳೆ, ಸ್ಮಶಾನಾಗ್ನಿಯು ನಾಶವಾದರೆ ಆ ಭಸ್ಮಗಳಿಗೆ ಪ್ರೋಕ್ಷಣೆ ಮಾಡಿ । ಲೌಕಿಕ ಅರಣಿಯನ್ನು ತಂದು, ಅಯಂ ತೇ ಯೋನಿಃ ಎಂಬ ಮಂತ್ರದಿಂದ ಭಸ್ಮದ ಮೇಲಿಟ್ಟು, ಮಥನಮಾಡಿ, ಬಂದಂತಹ ಅಗ್ನಿಯನ್ನು ಉಪಾವರೋಹ, ಎಂಬ ಮಂತ್ರದಿಂದ ಉಪಾವಹರಣ ಮಾಡಿ । ಆ ಅಗ್ನಿಯನ್ನು ಇಟ್ಟು, ದರ್ಭೆಗಳಿಂದ ಪರಿಸ್ತರಣವನ್ನು ಹಾಕಿ । ಆಜ್ಯಸಂಸ್ಕಾರವನ್ನು ಮಾಡಿಕೊಂಡು, ಅಗ್ನಿಗೆ ಪರಿಷೇಚನವನ್ನು ಮಾಡಿ । ಸಮಸ್ತ ವ್ಯಾಹೃತಿಯಿಂದ, ಆಜ್ಯವನ್ನು ಹೋಮಿಸಬೇಕು । ನಂತರ ಅನಾಜ್ಞಾತಾದಿ ೩ ಮಂತ್ರಗಳನ್ನು ಮತ್ತು ವ್ಯಸ್ತ, ಸಮಸ್ತವ್ಯಾಹೃತಿಗಳಿಂದಲೂ ಹೋಮಿಸಿ । ನಂತರ ಮುಂದಿನ ಕರ್ಮಗಳನ್ನು ಮುಂದುವರೆಸಬೇಕು ॥

****

7. ಅಗ್ನಿಚಿತಃ ಮೃತಸ್ಯ ಲೋಷ್ಟಚಿತೇಃ ಪ್ರಯೋಗಃ

ಕಾತಕಾಗ್ನಿಚಿತಃ ವಾ ಮಹಾಗ್ನಿಚಿತಃ ವಾ ಮೃತಸ್ಯ ದಿಷ್ಟಗಮನಾತ್ ಅಯುಕ್ಷು ಅಹಸ್ಸು ಅಹೋರಾತ್ರ ಅರ್ಧಮಾಸ ಮಾಸ ಋತುಷು ಸಂವತ್ಸರೇ ವಾ ನಿದಧಾತಿ ಲೋಷ್ಟಚಿತಿಂ ಕರೋತಿ ಇತ್ಯರ್ಥಃ । ದಿಷ್ಟಗಮನಂ ದಶಮಮಹಃ । ತಸ್ಮಾದಾರಭ್ಯ ಅಯುಕ್ಷು ವಿಷಮೇಷು ಅಹಶ್ಶಬ್ದಃ ನ ರಾತ್ರಿಃ ಚೋಚ್ಯತೇ ತಸ್ಮಾತ್ ಏಕಾದಶಾಹ ಪ್ರಭೃತಿ ತ್ರ್ಯಹೇ ಪಂಚಾಹೇ ಸಪ್ತಾಹ ಇತಿ ಅಯುಕ್ಷುದಿನೇಷು ಅರ್ಧಮಾಸ ಪ್ರಭೃತಿಷು ಕಾಲೇಷು ಲೋಷ್ಟಚಿತಿಂ ಕುರ್ಯಾತ್ । ಕೇಚಿತ್ ದಿಷ್ಟಗಮನಂ ಮರಣದಿನಂ

ತಸ್ಮಾದಾರಭ್ಯ ಅಯುಕ್ಪು ದಿನೇಷು ಇತಿ ಉಚ್ಯತೇ ತತ್ ಅನುಪಪನ್ನಂ ದಶಾಹೇ ಅಸ್ಯಕರ್ಮ ಶ್ರವಣಾತ್ । ಅನ್ಯಚ್ಚ ವಿರುದ್ಧಂ ಧರ್ಮಶಾಸ್ತ್ರೇ ದಾನ ಪ್ರತಿಗ್ರಹಣೇ ಪ್ರತಿಷಿದ್ಧ್ಯತೇ । ತದನ್ನಭೋಜನಾದೀನಾಂ ಮಧ್ಯೇ ನಿಷೇಧಾತ್ । ತಸ್ಮಾತ್ ದಶರಾತ್ರೇತಿ ಇತಿಏವ ಕೇಚಿತ್ ಏಕಾದಶ್ಯಾಂ ಬ್ರಾಹ್ಮಣಾನ್ ಭೋಜಯಿತ್ವಾ ದ್ವಾದಶ್ಯಾ ಊರ್ಧ್ವ ದಿಷ್ಪಗಮನಮಿತಿ ತಸ್ಮಾತ್ ಅಯುಕ್ಪು ಅಹಸ್ಸು ಚತುರ್ದಶಾಹ ಪ್ರಭೃತಿ ತ್ರ್ಯಹೇ ಪಂಚಾಹೇ ಸಪ್ತಾಹ ಇತ್ಯಾದಿ ಅಯುಕ್ಪುದಿನೇಷು ಅರ್ಧಮಾಸ ಪ್ರಭೃತಿಷು ವಾ ಕಾಲೇಷು ಲೋಷ್ಟಚಿತಿಂ ಕುರ್ಯಾತ್ ।

ಕಾಠಕಾಗ್ನಿಚಯನವನ್ನು ಮಾಡಿದಂತಹ ಅಥವಾ ಮಹಾಗ್ನಿಚಯನವನ್ನು ಮಾಡಿದಂತಹ ಯಜಮಾನನು ಮೃತನಾಗಲಾಗಿ । ಮರಣದ ೧೦ ನೇ ದಿನದಿಂದ, ಬೆಸಸಂಖ್ಯೆಯ ಹಗಲಿನಲ್ಲಿ ಅಥವ ರಾತ್ರಿಯಲ್ಲಿ ಅಥವ ೧೫ ದಿನಗಳ ನಂತರ ಅಥವಾ ೩೦ ದಿನಗಳ ನಂತರ ಅಥವಾ ೬೦ ದಿನಗಳ ನಂತರ ಅಥವ ೧ ವರ್ಷದ ಒಳಗೆ ಈ ಲೋಷ್ಟಚಿತಿಯನ್ನು ಮಾಡಬೇಕೆಂದರ್ಥ । ಅಲ್ಲಿಯವರೆಗೂ ಅಸ್ಥಿಗಳನ್ನು ರಕ್ಷಿಸಬೇಕು । ದಿಷ್ಪಗಮನವೆಂದರೆ ೧೦ ನೇ ದಿನ ಎಂದರ್ಥ । ಅಲ್ಲಿಂದ ಮುಂದೆ, ಬೆಸಸಂಖ್ಯೆಯ ದಿನಗಳಲ್ಲಿ ಎಂದರೆ, ೧೧ ನೇ ದಿನವನ್ನು ಮೊದಲುಗೊಂಡು, ೩ ಅಥವ ೫ ನೇ ದಿವಸದಲ್ಲಿ ಅಥವ ೭ ನೇ ದಿವಸದಲ್ಲಿ । ಹೀಗೆ ಬೆಸಸಂಖ್ಯೆಯ ದಿನದಲ್ಲಿ ೧೫ ನೇ ದಿನದಿಂದ ಆರಂಭಿಸಿ, ಬೆಸಸಂಖ್ಯೆಯ ದಿನಗಳಲ್ಲಿ ಲೋಷ್ಟಚಿತಿಯನ್ನು ಮಾಡಬೇಕು । ಕೆಲವರು, ದಿಷ್ಪದಿನ ಎಂದರೆ ಮರಣವಾದ ದಿನ ಎಂದು ಅರ್ಥಮಾಡಿ, ಅಲ್ಲಿಂದ ಬೆಸಸಂಖ್ಯೆಯ ದಿನದಲ್ಲಿ ಎನ್ನುತ್ತಾರೆ । ಅದರೆ ಅದು ಹೊಂದುವುದಿಲ್ಲ । ಏಕೆಂದರೆ ದಶಾಹದಲ್ಲಿ ಬೇರೇಕರ್ಮಗಳನ್ನು ಹೇಳಿರುವುದರಿಂದ । ಅಷ್ಟೇಅಲ್ಲದೇ ಪರಸ್ಪರಕರ್ಮಗಳಿಗೆ ವಿರೋಧವೂ ಉಂಟಾಗುತ್ತದೆ । ಧರ್ಮಶಾಸ್ತ್ರದಲ್ಲಿ ದಾನ – ಪ್ರತಿಗ್ರಹವನ್ನು ಈ ೧೦ ದಿನಗಳಲ್ಲಿ ನಿಷೇಧಮಾಡಿದೆ । ಅಷ್ಟೇಅಲ್ಲದೇ ಕರ್ತೃವಿನ ಭೋಜನವನ್ನೂ ನಿಷೇಧಿಸಿದೆ । ಆದ್ದರಿಂದ ೧೦ ದಿವಸ ಕಳೆದಮೇಲೆ ಕೆಲವರು ೧೧ ನೇ ದಿವಸ, ಬ್ರಾಹ್ಮಣಭೋಜನ ಮಾಡಿಸಿ, ೧೨ ನೇ ದಿನಗಳಿಂದ ಮುಂದೆ ದಿಷ್ಪಗಮನ ಎಂದು ಹೇಳುತ್ತಾರೆ ।

ಆದ್ದರಿಂದ ಬೆಸಸಂಖ್ಯೆದಿನ ಎಂದರೆ, ೧೪ ನೇ ದಿನದಿಂದ ಮುಂದೆ, ೩ – ೫ – ೭ (೧೭ –೧೯ –೨೧) ಎಂಬ ಬೆಸಸಂಖ್ಯೆಯ ದಿನಗಳಲ್ಲಿ ಅಥವಾ ೧೫ ನೇ ದಿನದಿಂದ ಆರಂಭಿಸಿ ಲೋಷ್ಟಚಿತಿಯನ್ನು ಮಾಡಬೇಕು ।

ದಿಷ್ಟಗಮನದಿನಾತ್ ಆರಭ್ಯ ಪಂಚದಶಾದೂರ್ಧ್ವಂ ಅರ್ಧಮಾಸಸ್ಯ ಕಾಲಃ ವಿಜನೇ ದೇಶಾಂತರೇ ವಾ ಮೃತಸ್ಯ ಏತಸ್ಮಿನ್ ಅಹ ವಿಮೃತ ಇತಿ ಅವಿಜ್ಞಾತೇ ಯಥಾಕಾಮೀ ಉಕ್ತೇಷು ಸರ್ವೇಷುಕಾಲೇಷು ಕೇಚಿತ್ ಯಾಮಾಘ್ಯಾ ಇತ್ಯಾದಿ ಅಪ್ರಜ್ಞಾತಸ್ಯ ಏವೇತಿ ಏತಸ್ಮಿನ್‌ಪಕ್ಷೇ ಸಂವತ್ಸರಾತ್ ಊರ್ಧ್ವಮಪಿ ಲಭ್ಯತೇ ಚಂಯನಂ ಮಾಘ್ಯಾದ್ಯಮಾವಾಸ್ಯಾ ಕಾಲಸ್ಯ ಸಂವತ್ಸರಾದೂರ್ಧ್ವಂ ಅಪಿ ಸಂಭವಾತ್ ದಿಷ್ಟಗಮನಂ ದಶಮಮಹಃ ಇತ್ಯಸ್ಮಿನ್‌ಪಕ್ಷೇ ತ್ರಯೋದಶೇsಹನಿ ಚಿತಿಶ್ಚೇತ್ ಪೂರ್ವಸ್ಮಿನ್ ಏಕವ್ಯವಹಿತೇ ಅಹನಿ ಏಕಾದಶಾಹೇ ಸಂಕಲ್ಪಃ, ಪಂಚದಶೇsಹನಿ ಚಿತಿಶ್ಚೇತ್ ತ್ರಯೋದಶೇsಹನಿ ಸಂಕಲ್ಪಃ, ಸಪ್ತದಶೇsಹನಿ ಚಿತಿಶ್ಚೇತ್ ಪಂಚದಶೇsಹನಿ ಸಂಕಲ್ಪ ಇತ್ಯಾದಿ । ದ್ವಾದಶ್ಯಾ ಊರ್ಧ್ವದಿನಂ ದಿಷ್ಟಗಮನಂ ಇತ್ಯಸ್ಮಿನ್ ಪಕ್ಷೇ ಷೋಡಶೇsಹನಿ ಚಿತಿಶ್ಚೇತ್ ಚತುರ್ದಶೇsಹನಿ ಸಂಕಲ್ಪಃ, ಅಷ್ಟಾದಶೇsಹನಿ ಚಿತಿಶ್ಚೇತ್ ಷೋಡಶೇsಹನಿ ಸಂಕಲ್ಪಃ ವಿಂಶೇಹನಿ ಚಿತಿಶ್ಚೇತ್ ಅಷ್ಟಾದಶೇsಹನಿ ಸಂಕಲ್ಪ ಇತ್ಯಾದಿ ।

ಯದಿ ಧೂನನಂ ಕ್ರಿಯತೇ ತದಾ ತದನುಸಾರೇಣ ಚ ಯದಿ ನೋತ್ಕರ್ಷಃ ಏವಂ ಸರ್ವೇಷು ಚಯನಕಾಲೇಷು ದ್ರಷ್ಟವ್ಯಂ ಅತ್ರ ಧೂನನಾಭಾವ ಪಕ್ಷಮಾಶ್ರಿತ್ಯ ಪ್ರಯೋಗ ಉಚ್ಯತೇ ದಿಷ್ಟಗಮನಂ ದಶಮಮಹಃ ಇತ್ಯಸ್ಮಿನ್ ಪಕ್ಷೇ ತ್ರಯೋದಶಾಹೇ ಪಂಚದಶಾಹೇ ಸಪ್ತದಶಾಹೇ ವಾ ಅಹನಿ ಪ್ರಾತಃ ಕಾಲೇ ಅಧ್ವರ್ಯುಃ ಶುದ್ಧಾತ್ಮಾ ಶ್ಮಶಾನಾಯತನಂ ಪ್ರಾಪ್ಯ ಪಾದೌಪ್ರಕ್ಷಾಳ್ಯ ಆಚಮ್ಯ ಪ್ರಾಣಾನಾಯಮ್ಯ ದೇಶಕಾಲೌ ಸಂಕೀರ್ತ್ಯ ಪ್ರಾಚೀನಾವೀತೀ ಪಿತುರ್ಗೋತ್ರಸ್ಯ ಶರ್ಮಣಃ ಅಗ್ನಿಚಿತಃ ಮೃತಸ್ಯ ಮರಣದಿನಾದಾರಭ್ಯ ತ್ರಯೋದಶೇsಹನಿ ಪಂಚದಶೇsಹನಿ ಸಪ್ತದಶೇsಹನಿ ವಾ ಲೋಷ್ಟಚಯನಂ ಕರಿಷ್ಯೇ ಇತಿ ಸಂಕಲ್ಪಃ ॥

೧೦ ದಿನಗಳು ಕಳೆದಮೇಲೆ, ೧೫ ನೇ ದಿವಸದಿಂದ ಅರ್ಧಮಾಸದ ಕಾಲವು ಆರಂಭವಾಗುತ್ತದೆ । ಜನರಿಲ್ಲದ ಜಾಗದಲ್ಲಿ ಅಥವಾ ದೇಶಾಂತರದಲ್ಲಿ ಮರಣಹೊಂದಿದವನು, ಇಂತಹ ದಿನದಲ್ಲಿ ಮರಣಹೊಂದಿದ ಎಂದು ತಿಳಿಯದಿದ್ದಾಗ, ಮೇಲೆ ಹೇಳಿದ ಎಲ್ಲಕಾಲಗಳಲ್ಲಿ ಅಥವಾ ಯಾ ಮಾಘ್ಯಾ ಎಂದು ಆರಂಭಿಸಿ, ಮರಣಹೊಂದಿದ ದಿನ ಗೊತ್ತಿಲ್ಲದವನಿಗೆ ಹೇಳಿದಂತಹ ಕರ್ಮಗಳನ್ನು ಹೇಳಿದೆ । ಆದ್ದರಿಂದ ಈ ಅಭಿಪ್ರಾಯದಲ್ಲಿ ಸಂವತ್ಸರ ಕಳೆದಮೇಲೂ ಲೋಷ್ಟಚಿತಿಯನ್ನು ಮಾಡಬಹುದೆಂದು ತಿಳಿದುಬರುತ್ತದೆ । ಲೋಷ್ಟಚಯನವನ್ನು ಮಾಘಮಾಸದಲ್ಲಿ ಆರಂಭಿಸಿ, ಎಲ್ಲಾ ಅಮಾವಾಸ್ಯಾಕಾಲಗಳಲ್ಲೂ – ಸಂವತ್ಸರಕಳೆದಮೇಲೂ ಮಾಡಬಹುದಾಗಿದೆಯಾದ್ದರಿಂದ । ದಿಷ್ಟಗಮನ ಎಂಬುದಕ್ಕೆ, ೧೦ ನೇ ದಿನ ಎಂಬರ್ಥದ ಪಕ್ಷದಲ್ಲಿ, ೧೩ ನೇ ದಿವಸ ಲೋಷ್ಟಚಿತಿಯನ್ನು ಮಾಡಬೇಕಾದರೆ, ೧೧ ನೇ ದಿವಸದಲ್ಲಿ ಸಂಕಲ್ಪವನ್ನು ಮಾಡಬೇಕು । ೧೫ ನೇ ದಿವಸ ಲೋಷ್ಟಚಿತಿಯನ್ನು ಮಾಡುವುದಾದರೆ, ೧೩ ನೇ ದಿವಸ ಸಂಕಲ್ಪ ಮಾಡಬೇಕು । ೧೭ ನೇ ದಿನ ಮಾಡುವುದಾದರೆ, ೧೫ ನೇ ದಿನ ಸಂಕಲ್ಪ । ದಿಷ್ಟಗಮನ ಎಂದರೆ, ೧೨ ನೇ ದಿನ ಕಳೆದು ಎಂದು ಅರ್ಥ ಮಾಡುವ ಪಕ್ಷದಲ್ಲಿ, ೧೬ ನೇ ಲೋಷ್ಟಚಿತಿಯನ್ನು ಮಾಡುವಪಕ್ಷದಲ್ಲಿ ೧೪ ನೇ ದಿನ ಸಂಕಲ್ಪ ಮಾಡಬೇಕು । ೧೪ ನೇ ದಿನ ಮಾಡುವಪಕ್ಷದಲ್ಲಿ ೧೬ ನೇ ದಿನ ಸಂಕಲ್ಪ । ೨೦ ನೇ ದಿನ ಮಾಡುವಾಗ, ೧೪ ನೇ ದಿನ ಸಂಕಲ್ಪವು ।

ಒಂದುವೇಳೆ, ಧೂನನವನ್ನು ಮಾಡಿದರೆ ಅದರ ಅನುಸಾರವಾಗಿ ಮಾಡಬೇಕು । ಒಂದುವೇಳೆ ಉತ್ಕರ್ಷವನ್ನು ಮಾಡದಿದ್ದರೆ, ಆಗ ಅದಕ್ಕನುಸಾರವಾಗಿ ಮಾಡಬೇಕು । ಹೀಗೆ ಎಲ್ಲಾ ಚಯನಕಾಲದಲ್ಲೂ ಮಾಡಬೇಕೆಂದು ತಿಳಿಯಬೇಕು । ಇಲ್ಲಿ, ಧೂನನ ಅಭಾವಪಕ್ಷವನ್ನಿಟ್ಟುಕೊಂಡು ಪ್ರಯೋಗವನ್ನು ಹೇಳುತ್ತೇವೆ । ದಿಷ್ಟಗಮನ ಎಂಬುದಕ್ಕೆ ೧೦ ನೇ ದಿವಸ ಎಂಬರ್ಥದಲ್ಲಿ, ೧೩ ನೇ ದಿನ ಅಥವಾ ೧೫ನೇ ದಿನ ಅಥವ ೧೭ ನೇ ದಿನ ಬೆಳಿಗ್ಗೆ ಕರ್ತೃವಾದ ಅಧ್ವರ್ಯುವು, ಸ್ನಾನಾದಿಗಳಿಂದ ಶುಚಿಯಾಗಿ, ಸ್ಮಶಾನಜಾಗಕ್ಕೆ ಹೋಗಿ, ಕಾಲುತೊಳೆದು, ಆಚಮನ, ಪ್ರಾಣಾಯಾಮವನ್ನು ಮಾಡಿ, ಲೋಷ್ಟಚಯನಕ್ಕೆ ಸಂಕಲ್ಪವನ್ನು ಮೇಲೆ ತಿಳಿಸಿದಂತೆ ಮಾಡಬೇಕು ।

ಅಥವಾ ದ್ವಾದಶ್ಯಾಃ ಊರ್ಧ್ವದಿನಂ ದಿಷ್ಟಗಮನಂ ಇತ್ಯಸ್ಮಿನ್‌ಪಕ್ಷೇ ಚತುರ್ದಶಾಹೇ ಷೋಡಶ ಅಷ್ಟಾದಶಾಹೇ ವಾ ಪ್ರಾತಃಕಾಲೇ ಅಧ್ವರ್ಯುಃ ಪ್ರಾಣಾನಾಯಮ್ಯ ದೇಶಕಾಲೌ ಸಂಕೀರ್ತ್ಯ । ಪ್ರಾಚೀನಾವೀತೀ ಪಿತುರ್ಗೋತ್ರಸ್ಯ ಶರ್ಮಣಃ ಅಗ್ನಿಚಿತಃ ಮೃತಸ್ಯ ಮರಣದಿನಾದಾರಭ್ಯ ಷೋಡಶೇsಹನಿ ಅಷ್ಟಾದಶೇsಹನಿ ವಾ ಲೋಷ್ಟಚಿತಿಂ ಕರಿಷ್ಯೇ ಇತಿ ಸಂಕಲ್ಪಃ ॥ ಅಪ ಉಪಸ್ಪೃಸ್ಯ ಪುರಸ್ತಾದೇವ ಶ್ಮಶಾನಾಯತನಾತ್ ಸರ್ವೌಷಧೀಃ ಉದ್ಧರಂತೀತಿ ಪಾಕಾಃ ಪೃಶ್ನಿಪರ್ಣಿಕಾ ಇತ್ಯಾದಿ । ಅನ್ಯಾಶ್ಚ ಕ್ಷೀರಿಣೋವೃಕ್ಷಾಃ ಅನೂತ್ಥೀಯಾ ಅಪ ಉಪಸ್ಪೃಶ್ಯ ಅಥ ಅಭ್ರಿಃ ಅಯುಜೋಯುಜೋ ವಾ ಅಭ್ರಿಶಂಖೂನ್ ತೂಷ್ಣೀಮಾದಾಯ ದಹನದೇಶಸ್ಯ ಉತ್ತರತಃ ಲೋಷ್ಟಾನವರುದ್ಧ್ಯ ಖಾತ್ವಾ ಸ್ಥಂಡಿಲಾರ್ಥಾನ್ ಇಷ್ಟಕಾರ್ಥಾಂಶ್ಚ ಸ್ಥಂಡಿಲಾರ್ಥಂ ಅರ್ಧಲಕ್ಷಂ ಪ್ರಾದೇಶ ಪ್ರಭೃತಿಷು ಊರ್ಧ್ವಪ್ರಮಾಣೇಷು ಯಾವನ್ಮೃದಾಪೂರ್ಯತೇ ತದರ್ಧಂ ಇಷ್ಟಕಾರ್ಥಂ ಚ ಪರ್ಯಾಸ್ತಾ ಮೃದಂ ದಹನದೇಶಸ್ಯ ದಕ್ಷಿಣತಃ ದಧ್ಯಾತ್ ।

ಷಡ್ಗವಕರ್ಷಣಪಕ್ಷೇ ಷಟ್‌ಶತಾನಿ ದ್ವಾದಶಗವಪಕ್ಷೇ ದ್ವಾದಶಶತಾನಿ ಚತುರ್ವಿಂಶತಿಗವ ಪಕ್ಷೇ ಚತುರ್ವಿಂಶತಿ ಶತಾನಿ ತಾಸಾಂ ಕರಣಾನಿ ವಿಭಜ್ಯಂತೇ ಚಯನಸ್ಥಲಂ ಪಂಚಪಂಚಕ್ರಮಮಿತಂ ಪ್ರಕ್ರಮೋ ದ್ವಿಪದಃ ತ್ರಿಪದೋ ವಾ ಪದಂ ದ್ವಾದಶಾಂಗುಲಂ । ತತ್ರ ದ್ವಿಪದಪಕ್ಷೇ ಪಂಚಪ್ರಕ್ರಮ ಸ ವಿಂಶೋತ್ತರ ಶತಾಂಗುಲಯಃ । ತಸ್ಯ ಚತುರ್ವಿಂಶೋಭಾಗಃ ತ್ರಿಪಾದಂ ಪ್ರಕ್ರಮಃ ಪಂಚಾಂಗುಲಂ ಕರಣಂ ಇಷ್ಟಕಾನಾಂ ಪಾದೇಷ್ಟಕಾನಾಂ ಸಾರ್ಧದ್ವ್ಯಂಗುಲಂ ತ್ರಿಪದಪಕ್ಷೇ ಅಶೀತ್ಯುತ್ತರಶತಾಂಗುಲಯಃ ತಸ್ಯ ಚತುರ್ವಿಂಶೋಭಾಗಃ ಅರ್ಧೋ ನ ಅಷ್ಟವಮಾಂಗುಲಂ ಕರಣಂ ಪಾದೇಷ್ಟಕಾನಾಂತು ಪಾದೋನ ಚತುರಂಗುಲಂ ಕರಣಂ ಇಷ್ಟಕಾಃ ಪಂಚಶಾನಿ ಷಷ್ಟಿಃ ಅಷ್ಟೌ ಚ ಅಷ್ಟೌ ವಿಭಜ್ಯ ದ್ವಾತ್ರಿಂಶತ್ ಪಾದೇಷ್ಟಕಾಃ ಏವಂ ಷಡ್ಗವಪಕ್ಷೇ ಷಟ್‌ಶತಾನಿ ದ್ವಾದಶಗವ ಪಕ್ಷೇ ತು ಪಂಚ ಪ್ರಕ್ರಮಸ್ಯ ತ್ರಿಂಶೋಭಾಗಃ ಚತುರಂಗುಲಃ ಕರಣಂ ಇಷ್ಟಕಾನಾಂ ಪಾದೇಷ್ಟಕಾನಾಂ ದ್ವ್ಯಂಗುಲಂ ತ್ರಿಪದಪಕ್ಷೇ ಷಡಂಗುಲಂ ಕರಣಂ ಇಷ್ಟಕಾನಾಂ ಪಾದೇಷ್ಟಕಾನಾಂ ತ್ರ್ಯಂಗುಲಂ ॥

ಒಂದುವೇಳೆ ದಿಷ್ಟಗಮನ ಎಂಬುದಕ್ಕೆ ೧೨ ದಿವಸ ಕಳೆದಮೇಲೆ ಎಂದು ಅರ್ಥಮಾಡಿದರೆ, ಆಗ ೧೪ / ೧೬ ಅಥವಾ ೧೮ ನೇ ದಿನ ಬೆಳಿಗ್ಗೆ ಕರ್ತ್ಯವು, ಪ್ರಾಚೀನಾವೀತಿಯಾಗಿ ಸಂಕಲ್ಪ ಮಾಡಬೇಕು । ನಂತರ ಕೈತೊಳೆದು, ಮೊದಲೇ ಸ್ಮಶಾನಸ್ಥಳಕ್ಕೆ ಪಾಕ – ಪೃಶ್ನಿ – ಪರ್ಣಿಕಾ ಹಾಗೂ ಹಾಲಿರುವ ಮರಗಳು ಮುಂತಾದ ಎಲ್ಲ ಓಷಧಿಸಸ್ಯಗಳನ್ನೂ ತರಬೇಕು । ಕೈತೊಳೆದು, ಗುದ್ದಲಿಗಳನ್ನು ಅಮಂತ್ರಕವಾಗಿ ತಂದು, ದಹನದ ಜಾಗದ ಉತ್ತರದಲ್ಲಿ ಮಣ್ಣನ್ನು ಅಗೆದು । ಆ ಅಗೆದಮಣ್ಣಿನಲ್ಲಿ, ಹರಡಲು ಮತ್ತು ಇಟ್ಟಿಗೆ ಮಾಡಿಕೊಳ್ಳಲು ಎಂದು ವಿಭಾಗ ಮಾಡಿಕೊಂಡು । ಆ ಅಗೆದ ಗುಂಡಿಯಲ್ಲಿ ಅರ್ಧಭಾಗವನ್ನು, ೧ ಪ್ರಾದೇಶ(ಚೋಟು) ಅಳತೆಯ ಎತ್ತರವನ್ನು ಮಣ್ಣಿನಿಂದ ತುಂಬಿಸಿ । ಇಟ್ಟಿಗೆಗಾಗಿ ಇರಿಸಿರುವ ಮಣ್ಣನ್ನು, ದಹನದಜಾಗದ ದಕ್ಷಿಣದಲ್ಲಿ ಇಡಬೇಕು । ೬ ಎತ್ತುಗಳಿಂದ ಉಳುವುದಾದರೆ, ೬೦೦ ನೇಗಿಲ ಗೆರೆಗಳು ಬರುವಂತೆ ಅಥವಾ ೧೨ ಎತ್ತುಗಳಿಂದ ಉಳುವಪಕ್ಷದಲ್ಲಿ ೧೨೦೦ ಗೆರೆಗಳು ಅಥವಾ ೨೪ ಎತ್ತುಗಳಿಂದ ಉಳುವುದಾದರೆ, ೨೪೦೦ ಗೆರೆಗಳು ಬರುವಂತೆ ಉಳಬೇಕು ।

ಲೋಷ್ಟಚಯನದ ಜಾಗವು ೫ – ೫ ಪ್ರಕ್ರಮ ಅಳತೆಯು । ೨ ಅಥವ ೩ ಹೆಜ್ಜೆಗೆ ೧೨ ಅಂಗುಲವಾಗುತ್ತದೆ । ೨ ಹೆಜ್ಜೆಯ ಪಕ್ಷದಲ್ಲಿ, ೫ ಪ್ರಕ್ರಮ ಎಂದರೆ, ೧೨೦ ಅಂಗುಲಗಳು(೧ ಪ್ರಕ್ರಮ ಎಂದರೆ ೨೪ ಅಂಗುಲ) । ಅಥವಾ ೩ ಹೆಜ್ಜೆಗೆ ೧ ಪ್ರಕ್ರಮ । ಆ ೧೨೦ ಅಂಗುಲಗಳ ಇಪ್ಪತ್ತನಾಲ್ಕನೇ ಒಂದುಭಾಗ, ಅಂದರೆ ಕರ್ಣೇಷ್ಟಿಕೆಗಳು ೫ ಅಂಗುಲ ಇರಬೇಕು । ಪಾದೇಷ್ಟಿಕೆಗಳು ೨ ಅಂಗುಲ ಇರಬೇಕು । ೩ ಹೆಜ್ಜೆಯ ಪಕ್ಷದಲ್ಲಿ, ೧೮೦ ಅಂಗುಳಕ್ಕೆ ೫ ಪ್ರಕ್ರಮ । ಅದರ ಇಪ್ಪತ್ತನಾಲ್ಕನೇಒಂದುಭಾಗ ಅಂದರೆ, ಏಳುವರೆ ಅಂಗುಲ ಕರಣೇಷ್ಟಿಕೆಗಳು । ಪಾದೇಷ್ಟಿಕೆಗಳು ಮೂರೂಮುಕ್ಕಾಲು ಅಂಗುಲಗಳು । ೬೦ ಇಷ್ಟಿಕೆಗಳನ್ನು ೫ – ೫ ಆಗಿ ಭಾಗಮಾಡಬೇಕು । ೩೨ ಪಾದೇಷ್ಟಿಕೆಗಳನ್ನು ೮ – ೮ ಆಗಿ ಭಾಗ ಮಾಡಬೇಕು । ಈ ರೀತಿಯಾಗಿ ೬ ಎತ್ತನ್ನು ಉಳುವ ಪಕ್ಷದಲ್ಲಿ ೬೦೦ ಗೆರೆ । ೧೨ ಎತ್ತನ್ನು ಉಳುವ ಪಕ್ಷದಲ್ಲಿ, ೫ ಪ್ರಕ್ರಮದ ಮೂವತ್ತನೇಒಂದು ಭಾಗ ೪ ಅಂಗುಲ ಇರುವಂತೆ ಇಷ್ಟಿಕೆಗಳನ್ನು ಮಾಡಬೇಕು । ಪಾದೇಷ್ಟಿಕೆಗಳನ್ನು ೨ ಅಂಗುಲ ಮಾಡಬೇಕು । ತ್ರಿಪದ ಪಕ್ಷದಲ್ಲಿ, ೬ ಅಂಗುಲ ಇಷ್ಟಿಕೆ । ಪಾದಾಂಗುಲಗಳು ೩ ಅಂಗುಲ ಪ್ರಮಾಣ ।

ಸಂಖ್ಯಾ ಚ ಇಷ್ಟಕಾನಾಂ ತ್ರಂಯುಸ್ತ್ರಿಂಶೋತ್ತರ ತ್ರಿಶತಾಧಿಕ ಸಹಸ್ರಂ ಸಪ್ತಷಷ್ಟ್ಯುತ್ತರದ್ವಿಶತಂ ವಿಭಜ್ಯ ಷಟ್ ಷಷ್ಟ್ಯುತ್ತರಸಹಸ್ರಂ ಪಾದೇಷ್ಟಕಾಃ ಏಕಾ ಅರ್ಧೇಷ್ಟಕಾ ಏವಂ ಚತುರ್ವಿಂಶತಿಶತಾನಿ ಭವಂತಿ ಇಷ್ಟಕಾಃ ಏವಂ ಪಾದೇಷ್ಟಕಾಶ್ಚ ಕಾರ್ಯಾಃ ಊರ್ಧ್ವಪ್ರಮಾಣಂ ಇಷ್ಟಕಾನಾಂ ಜಾನೋಃ ಪಂಚಮೋನ ಕಾರಯೇತ್। ಊರ್ಧ್ವಪ್ರಮಾಣಸ್ಯ ಅನಿಯಮೋ ವಾ ಆಮಾಭವಂತೀತಿ ವಿಜ್ಞಾಯತೇ। ಆಮಾ ಅವಕ್ಯಾಃ ತತೋ ಅಪರಾಹ್ಣೇ ದಹನದೇಶಂ ಶ್ಮಶಾನಾಯತನಂ ವಿಮಿಮೀತೇ ಖಾದಿರೇಣ ದಂಡೇನ ಬಾದರೇಣ ವಾ ದ್ವಾದಶಾಂಗುಲ ದ್ವಿಪದಪ್ರಕ್ರಮೇಣ ವಾ ದಂಡೇನ ಸರ್ವತಃ ಪಂಚಪಂಚ ಪ್ರಕ್ರಮಂ ಪ್ರಸವ್ಯ ದಕ್ಷಿಣಾಪವರ್ಗಂ ನೀತ್ವಾ ಆಗ್ನೇಯಾದಿಕೋಣೇಷು ಶಂಕೂನ್ನಿಹತ್ಯ ತ್ರಿವೃತಾಮೌಂಜ್ಯಾ ಬಾಲ್ಬಜ್ಯಾ ವಾ ರಜ್ವಾ ಪ್ರಸವ್ಯಾವೃತ್ತಯಾಃ ಅಧ್ವರ್ಯುಃ ಪರ್ಯಟನ್ ಪ್ರಸವ್ಯಂ ತ್ರಿಪರ್ಯಾತನೋತಿ ಆಗ್ನೇಯಶಂಕುನಾ ಉಪಕ್ರಮಃ ತತ್ರೈವ ಚ ಸಮಾಪ್ತಿಃ ತತಃ ಅಯುಗ್ಭಿಃ ಉದಕುಂಭೈಃ ತಂ ದೇಶಂ ಸಮ್ಯಕ್ ಅವೋಕ್ಷ್ಯೇತ್ ಯಥಾ ತತ್ರತ್ಯಾಜಂವತಃ ಸರ್ವೇ ಜಲಸ್ಪರ್ಶಾನ್ ವಿಷ್ಕ್ರಾಮಂತಿ ತಥಾ ಜಲಂ ನಿನಯೇತ್। ಅನ್ಯಥಾ ದೋಷಶ್ರವಣಾತ್ ಯತ್ನೇನ ಜಲಸೇಕಃ ಕರ್ತವ್ಯಃ।

ಖಾತ್ವಾ ಪೂರ್ವಂ ಸಂಶೋಧ್ಯ ಜಂತವಃ ಯತ್ನೇನ ನಿಸ್ಸರಣೀಯಾಃ ಅಥವಾ ಅಪಿಧಾನಕೋಶ ಸಂಭಾರಾನ್ ನಿಧಾಯ ಪಲಾಶಶಾಖಾಂ ಉದುಂಬರಶಾಖಾತ್ರಯಂ ಉದಪಾತ್ರಂ ಚ ವ್ರೀಹಿಂ ಪ್ರಿಯಂಗು ಯವ ಮಾಷ ತಿಲಾಃ ಅಣವಃ ಗೋಧೂಮಾಃ ಸಪ್ತಗ್ರಾಮ್ಯಾ ಓಷಧಯಃ। ಶ್ಯಾಮಾಕಃ ಜರ್ತಿಲ ಗವೀಧುಕ ವೇಣುಃ ಗಾರ್ಮುತ ನೀವಾರ ಮರ್ಕಟಕಾಃ ಸಪ್ತ ಆರಣ್ಯಾಃ। ಶರ್ಕರಾಃ ತಿಲಮಿಶ್ರಧಾನಾಃ ಶರಾವಾಃ ಅಭಿವಾನ್ಯಾಯಾಃ ಪಯಃ ಸಕ್ತವಃ ಮಂಥನದಂಡಾಃ ವಾರಣಮಯಃ ಆಮಪಾತ್ರಂ, ಅಪಕ್ವಮೃಣ್ಮಯಪಾತ್ರಂ ಸಮೂಲದರ್ಭಾಃ ಪಲಾಶಮಯಾಃ ಪರಿಧಯಶ್ಚತ್ವಾರಃ ಕೃಷ್ಣೇಕ್ಷು ಪುಷ್ಪಾಣಿ ಪುರಾಣಸರ್ಪಿಃ ಪುರಾಣವಸ್ತ್ರಂ ಪಂಚಾಪೂಪಾಃ ಪಂಚಸ್ಥಾಲ್ಯಾಃ ತಂಡುಲಾಃ ಚರ್ವರ್ಥಾಃ ಅಭಿಘಾರಣಾರ್ಥಾನಿ ಪಂಚಘೃತ ಶ್ರಿತ ಕ್ಷೀರ ದಧಿ ಮಧೂನಿ ಸಲಿಲಾಶ್ಚಧಾನಾಃ ಸವ್ಯಧೃತಿರರ್ಜುನವೃಕ್ಷಃ ಕೃಷ್ಣಶೂಕ ಪ್ರಿಯಂಗುಸ್ತಂಬಂ ದೂರ್ವಾಸ್ತಂಬಂ ಕಾಶಸ್ತಂಬಂ ದರ್ಭಸ್ತಂಬಂ ವಾರುಣಶಾಖಾಃ ಶಮೀಶಾಖಾಃ ಯವಾಶ್ಚೇತಿ ಸಂಭಾರಾಃ। ಏತತ್ ಪ್ರಥಮೇಹನಿ ಕರ್ಮ।

೧೩೩೩ ಇಟ್ಟಿಗೆಗಳು ಹಾಗೂ ೧೦೬೬ ಪಾದೇಷ್ಟಿಕೆಗಳು । ಹಾಗೂ ಅರ್ಧೇಷ್ಟಿಕೆ ೧ ಆಗುತ್ತದೆ । ಆಗ ೧೩೩೩ + ೧೦೬೬ + ೧= ೨೪೦೦ ಒಟ್ಟು ಇಟ್ಟಿಗೆಗಳು ಆಗುತ್ತವೆ । ಪೂರ್ಣಇಟ್ಟಿಗೆಗಳ ಸಂಖ್ಯೆಯಾದ ೧೩೩೩ ನ್ನು ೨೬೭ ರಂತೆ ೫ ಭಾಗಗಳಾಗಿ ವಿಭಾಗಿಸಿ, ಪ್ರತ್ಯೇಕವಾಗಿ ಇಡಬೇಕು । ಆದರೆ ೫ ನೇ ವಿಭಾಗದಲ್ಲಿ ಮಾತ್ರ ೨೬೫ ಇಟ್ಟಿಗೆಗಳು ಬರುತ್ತವೆ । ಹೀಗೆ ಇಟ್ಟಿಗೆಗಳನ್ನು ಹಾಗೂ ಪಾದೇಟ್ಟಿಗೆಗಳನ್ನೂ ಮಾಡಬೇಕು । ಇಟ್ಟಿಗೆಗಳ ಎತ್ತರದ ಪ್ರಮಾಣ – ಕಾಲಿನ ಮಂಡಿಯ ಎತ್ತರಕ್ಕಿಂತ ೫ ಅಂಗುಲ ಕಡಿಮೆ ಇರಬೇಕು । ಅಥವಾ ಎತ್ತರಪ್ರಮಾಣಕ್ಕೆ ನಿರ್ದಿಷ್ಟ ಅಳತೆಯ ಮಿತಿಯಿಲ್ಲ । ಇಟ್ಟಿಗೆಗಳು ಪೂರ್ಣವಾಗಿ ಸುಟ್ಟಿರಬಾರದು । ನಂತರ ಅಪರಾಹ್ನದಲ್ಲಿ, ಖಾದಿರದಂಡದಿಂದ ದಹನದಜಾಗವನ್ನು ಹಾಗೂ ಸ್ಮಶಾನವನ್ನೂ ಅಳತೆ ಮಾಡಬೇಕು । ಬಾದರಮರದ ದಂಡವಾದರೂ ಆಗುತ್ತದೆ । ೧೨ ಅಂಗುಲದ ೨ ಹೆಜ್ಜೆಗಳ ಪ್ರಕ್ರಮ ಅಳತೆಯ ಪಕ್ಷವನ್ನಿಟ್ಟುಕೊಂಡು, ಆ ದಂಡದಿಂದ ಎಲ್ಲ ಕಡೆಯಲ್ಲೂ ೫ – ೫ ಪ್ರಕ್ರಮ, ಅಪ್ರದಕ್ಷಿಣೆಯಾಗಿ, ದಕ್ಷಿಣಕ್ಕೆ ಮುಗಿಯುವಂತೆ ಅಳತೆಮಾಡಿ ।

ಆಗ್ನೇಯಾದಿ ೪ ಉಪದಿಕ್ಕುಗಳಲ್ಲಿ ಗೂಟವನ್ನು ನೆಟ್ಟು । ೩ ಸುತ್ತು ಮೌಂಜಿ ಅಥವ ಬಲ್ಬಜ ಸಸ್ಯದ ಹಗ್ಗದಿಂದ ಅಪ್ರದಕ್ಷಿಣೆಯಾಗಿ ಆ ಗೂಟಗಳಿಗೆ ೩ ಸುತ್ತು ಬೇಲಿಹಾಕಬೇಕು । ಆಗ್ನೇಯದಿಕ್ಕಿನಿಂದ ಆರಂಭಿಸಿ, ಆಗ್ನೇಯಕ್ಕೇ ಮುಗಿಸಬೇಕು । ನಂತರ ಬೆಸಸಂಖ್ಯೆಯ ಕುಂಭಗಳಿಂದ ಆ ಬೇಲಿಯೊಳಗಿನ ಜಾಗವನ್ನು ಚೆನ್ನಾಗಿ ಪ್ರೋಕ್ಷಿಸಬೇಕು । ಕೊಳೆ, ತ್ಯಾಜ್ಯಗಳು ಹೋಗುವಂತೆ ನೀರನ್ನು ಹಾಕಬೇಕು, ಇಲ್ಲದಿದ್ದರೆ ದೋಷ ಬರುತ್ತದೆಯಾದ್ದರಿಂದ । ಪ್ರಯತ್ನಪೂರ್ವಕವಾಗಿ ಸ್ವಚ್ಛಗೊಳಿಸಬೇಕು । ನಂತರ ಅಗೆದು, ಶುದ್ಧಿಗೊಳಿಸಿ, ಆ ಜಾಗದಲ್ಲಿ ಕೀಟಾದಿಗಳಿದ್ದರೆ ಅವನ್ನು ಹೊರಹಾಕಬೇಕು । ಅಥವಾ ಈ ಬೇಲಿಹಾಕಿರುವ ಜಾಗವನ್ನು ಹೊರಗೆ ಕಾಣದಂತೆ ಮರೆಮಾಡಬೇಕು । ನಂತರ ೧ ಪಲಾಶಶಾಖೆ, ೩ ಉದುಂಬರಶಾಖೆ, ೧ ನೀರಿನಪಾತ್ರೆ, ವ್ರೀಹಿ(ಭತ್ತ), ಪ್ರಿಯಂಗು(ನವಣೆ), ಯವ(ಜವೇಗೋಧಿ), ಮಾಷ(ಉದ್ದು), ತಿಲ(ಎಳ್ಳು), ಅಣವ(ಸಣ್ಣಕ್ಕಿ), ಗೋಧೂಮ(ಗೋಧಿ) ಈ ೭ ಗ್ರಾಮ್ಯಧಾನ್ಯಗಳನ್ನು ಹಾಗೂ

ಶ್ಯಾಮಾಕ(ಸಾವೇಅಕ್ಕಿ), ಜರ್ತಿಲ(ಕಾಡುಎಳ್ಳು), ಗವೀಧೂಕ(ಕಾಡುಗೋಧಿ), ವೇಣು (ಬಿದರಕ್ಕಿ), ಗಾರ್ಮುತ(ಕೆಂಪಕ್ಕಿ), ನೀವಾರ(ನೆರೆಅಕ್ಕಿ), ಮರ್ಕಟಕ (ನಸುಗುನ್ನಿಕಾಯಿ), ಈ ೭ ಅರಣ್ಯ ಓಷಧಿಗಳನ್ನು ಹಾಗೂ ಶರ್ಕರ(ಸಕ್ಕರೆ), ತಿಲಮಿಶ್ರಧಾನಾ(ಎಳ್ಳುಮಿಶ್ರಿತ ಹುರಿದಗೋಧಿ), ಬಾಂಡ್ಲಿಗಳು, ಅಭಿವಾನ್ಯಾಯಾಃಪಯಃ (ಕರುಸತ್ತಹಸುವಿನ ಹಾಲು), ಸಕ್ತು(ಹಿಟ್ಟು), ಮಂಥನಕೋಲು, ವಾರಣ(ಹೊಳಲಕ್ಕಿಗಿಡ), ಆಮಪಾತ್ರ(ಕಬ್ಬಿಣದ ಪಾತ್ರೆ), ಅಪಕ್ವ ಮೃಣ್ಮಯಪಾತ್ರ (ಸುಡದಿರುವ ಮಣ್ಣಿನಪಾತ್ರೆ), ಬುಡವಿರುವ ದರ್ಭೆಗಳು, ಪಲಾಶದ ೪ ಪರಿಧಿಗಳು । ಕಪ್ಪು ಕಬ್ಬಿನ ಹೂವುಗಳು, ಹಳೇತುಪ್ಪ, ಹಳೇಬಟ್ಟೆ, ೫ ಇಡ್ಲಿ, ೫ ಪಾತ್ರೆಗಳು । ಚರುವಿಗಾಗಿ ಅಕ್ಕಿ, ಅಭಿಘಾರಕ್ಕಾಗಿ ತುಪ್ಪ, ಕಾಯಿಸಿದಹಾಲು, ಹಸಿಹಾಲು, ವೊಸರು, ಜೇನುತುಪ್ಪ । ನೀರು, ಧಾನಾ (ಹುರಿದಗೋಧಿ), ಸವ್ಯಧೃತಿರರ್ಜುನವೃಕ್ಷಃ(ಮತ್ತಿಮರ), ಕೃಷ್ಣಶೂಕ(ಮುಳ್ಳಿಇರುವ ಕಪ್ಪುಧಾನ್ಯ), ಪ್ರಿಯಂಗು(ನವಣೆ), ದೂರ್ವ, ಕಾಶಸ್ತಂಬ(ಜೊಂಡುಹುಲ್ಲು), ವಾರಣಶಾಖಾಃ(ಹೊಳಲಕ್ಕಿಮರದ ಟೊಂಗೆ), ಶಮೀಶಾಖೆ, ಜವೇಗೋಧಿ ಇವು ಪದಾರ್ಥಗಳು । ಇಲ್ಲಿಯವರೆಗೆ ವೊದಲನೇ ದಿನದ ಕರ್ಮವು ।

ತತೋ ದ್ವಿತೀಯೇಽಹನಿ ಮಾಂಸಾದಿ ಮಿಶ್ರೌದನೇನ ಕೇವಲ ಓದನೇನ ವಾ ಬ್ರಾಹ್ಮಣಾನ್ ಭೋಜಯೇತ್ । ಮಾಂಸೌದನಂ ಕಲೌ ವರ್ಜ್ಯಂ । ಸಮ್ಯಕ್ ರಾತ್ರೌ ಶ್ಮಶಾನಾಯತನಗತಂ ಶವದಾಹವಹ್ನಿಂ ಲೌಕಿಕಾರಣ್ಯೋಃ ಅಯುಂ ತೇ ಇತಿ ಸಮಾರೋಪ್ಯ ಪ್ರತ್ಯಕ್ಷೇಣ ವಾ ಭಾಂಡಾದಿಮಿತೇನ ಅಗ್ನಿನಾ ಸಹ ಗ್ರಾಮಂ ಪ್ರವಿಶಂತಿ ತತೋ ಅರ್ಧರಾತ್ರೇ ತಸ್ಮಿನ್ನಾನೀತೇ ವಾ ಅಗ್ನೌ ಕೋಶನಿಹಿತಾನುಪಂಚಸು ಸ್ಥಾಲೀಷು ತತ್ರ ನಿಹಿತೈಃ ಏವ ತಂಡುಲೈಃ ತೂಷ್ಣೀಂ ಉಪಚರಿತಾನ್ ಪಂಚಚರೂನ್ ಶ್ರಪಯತಿ । ಕೇಚಿತ್ ನ್ಯಾಯವಿದಃ ಪ್ರಧಾನತ್ವಾತ್ ಹೋಮಾದೇರ್ವಾಚ್ಯಃ ಸರ್ವಾರ್ಥತ್ವಾತ್ ಲೌಕಿಕಸ್ಯಾಗ್ನೇಃ ಪ್ರಾಪ್ತಿಃ ಯುಕ್ತೇ ಇತಿ । ಲೌಕಿಕಾಗ್ನೌ ವಾ ಪಂಚಚರೂನ್ ಶ್ರಪಯತಿ ತಸ್ಮಿನ್ ಪಕ್ಷೇ ನ ಧಾರಣಂ ಶವದಾಹವಹ್ನೇಃ ಸಂಚಯನಾದೂರ್ಧ್ವಂ ಅಸ್ಥ್ನಾಂ ಶ್ರಿತಾಂಶ್ಚರೂನ್ ಉದ್ವಾಸ್ಯ ಕೋಶನಿಹಿತೈಃ ಘೃತೇನ ಶ್ರಿತೇನ ಪಯಸಾ ಕ್ಷೀರೇಣ

ದಧ್ನಾ ಮಧುನಾ ಕ್ರಮೇಣ ಅಭಿಘಾರ್ಯ ಅಪೂಪೈಃ ಪಂಚಭಿಃ ಅಪಿಧಾಯ ಏಕದ್ವಿತ್ರಾದಿ ಕ್ರಮೇಣತ್ರಜ್ಞ್ಞಾತಾನ್ ಕೃತ್ವಾ ಸ್ಥಾಲೀಸ್ಥಾನೇ ಕೋಶೇ ನಿದಧಾತಿ । ತತೋ ಅರ್ಧರಾತ್ರಾತ್ ಊರ್ಧ್ವಂ ಯುಗಸಹಿತ ಸೀರಂವರಂ ಬಲೀವರ್ಧಾಂಶ್ಚ ಷಟ್‌ದ್ವಾದಶ ಚತುರ್ವಿಂಶತಿರ್ವಾ ಸಂಭಾವರ್ಧಮುದಕುಂಭಂ ಅಸ್ಥಿಕುಂಭಂ ಚೇತಿ ಪರಿಗೃಹ್ಯ ಪಾಕವಹ್ನಿಪುರಸ್ಸರಂ ಸಹಾವಾತ್ಯೈಃ ಅಯುಗ್ಮಾನ್ನಿರ್ಗತ್ಯ ಗ್ರಾಮಶ್ಮಶಾನಯೋಃ ಅಂತರಾಳೇ ಚಯನಸ್ಥಳ ಸಮೀಪೇ ಏವ ಪೂರ್ವಸ್ಮಿನ್ ಭಾಗೇ ತಮಗ್ನಿಂ ಶುಚೌದೇಶೇ ನಿಧಾಯ ಸಂಜ್ವಲಯೇತ್ ಆಪ್ರಭಾತಾತ್ ಏತಮಗ್ನಿಂ ಇಂಧಾನ ಆಸ್ತೇ । ಏತತ್ ದ್ವಿತೀಯೇಽಹನಿ ಕರ್ಮ ।

ನಂತರ ೨ ನೇ ದಿವಸ, ಮಾಂಸಮಿಶ್ರಿತ ಅನ್ನದಿಂದಾಗಲೀ ಅಥವಾ ಕೇವಲ ಅನ್ನದಿಂದಾಗಲೀ ಬ್ರಾಹ್ಮಣರ ಭೋಜನ ಮಾಡಿಸಬೇಕು । ಮಾಂಸಾಹಾರವು ಕಲಿಯುಗದಲ್ಲಿ ವರ್ಜ್ಯ । ರಾತ್ರಿಯಲ್ಲಿ ಸ್ಮಶಾನದ ಸ್ಥಳದಲ್ಲಿರುವ ಶವವನ್ನು ದಹಿಸಿದ ಅಗ್ನಿಯನ್ನು ಲೌಕಿಕ ಅರಣಿಯಲ್ಲಿ ಅಯಂ ತೇ, ಎಂಬ ಮಂತ್ರದಿಂದ ಸಮಾರೋಪಣ ಮಾಡಿ ಅಥವಾ ಪ್ರತ್ಯಕ್ಷವಾಗಿ ಒಂದು ಮಣ್ಣಿನಪಾತ್ರೆಯಲ್ಲಿ ಆ ಶವದಹಿಸಿದ ಅಗ್ನಿಯನ್ನು ಇಟ್ಟುಕೊಂಡು, ಗ್ರಾಮವನ್ನು ಪ್ರವೇಶಿಸಬೇಕು । ನಂತರ ಮಧ್ಯರಾತ್ರಿಯಲ್ಲಿ ಆ ಅಗ್ನಿಯಲ್ಲಿ ತನ್ನ ಚೀಲದಲ್ಲಿ ಇಟ್ಟುಕೊಂಡಿರುವ ೫ ಪಾತ್ರೆಗಳಲ್ಲಿ ಅಲ್ಲಿರುವ ಅಕ್ಕಿಯಿಂದ ಅಮಂತ್ರಕವಾಗಿ ೫ ಚರುವನ್ನು ಮಾಡಬೇಕು । ಇಲ್ಲಿ ಕೆಲವರು, ಈ ಕರ್ಮವು ಪ್ರಧಾನಹೋಮಕ್ಕೆ ಸೇರಿರುವುದರಿಂದ, ಸಮಸ್ತ ಲೋಷ್ಟಚಯನ ಕರ್ಮಕ್ಕೆ ಈ ಅಗ್ನಿಯು ಬೇಕಾಗಿರುವುದರಿಂದ, ಲೌಕಿಕಾಗ್ನಿಯಲ್ಲಿಯೇ ಚರುಗಳನ್ನು ಮಾಡಬೇಕೆಂದು ಅಭಿಪ್ರಾಯಪಡುತ್ತಾರೆ । ಹೀಗೆ ಲೌಕಿಕಾಗ್ನಿಯಲ್ಲಿ ೫ ಚರುಗಳನ್ನು ಮಾಡುವ ಪಕ್ಷದಲ್ಲಿ, ಶವದಾಹಾಗ್ನಿಯ ಧಾರಣೆ ಬೇಕಿಲ್ಲ । ಅಸ್ಥಿಸಂಚಯನಾನಂತರ ಆ ಅಸ್ಥಿಗಳಿಗಾಗಿ ಬೇಯಿಸಿದ ಚರುವನ್ನು ಉದ್ವಾಸನೆ ಮಾಡಿ, ತನ್ನ ಚೀಲದಲ್ಲಿಟ್ಟುಕೊಂಡಿರುವಂತಹ, ತುಪ್ಪ, ಕಾಯಿಸಿದಹಾಲು, ಹಸಿಹಾಲು, ಮೊಸರು, ಜೇನುತುಪ್ಪದಿಂದ ಕ್ರಮವಾಗಿ ಅಭಿಘಾರಣ ಮಾಡಿ । ೫ ಇಡ್ಲಿಗಳಿಂದ ಆ ಚರುವನ್ನು ಮುಚ್ಚಬೇಕು ।

ಆಮೇಲೆ ೧, ೨ ಮುಂತಾದ ಕ್ರಮದಿಂದ ೫ ಚರುಪಾತ್ರೆಗಳನ್ನು ಗುರುತಿಟ್ಟುಕೊಂಡು ಚೀಲದಲ್ಲಿ ಅವೆಲ್ಲವನ್ನೂ ಇಡಬೇಕು । ಆಮೇಲೆ ಅರ್ಧರಾತ್ರಿಕಳೆದ ನಂತರ ಉಳುವನೊಗಕ್ಕೆ ೬ / ೧೨ / ೨೪ ಹೋರಿ ಅಥವ ಎತ್ತುಗಳನ್ನು ಕಟ್ಟಿ । ಅರ್ಧನೀರಿರುವ ಕುಂಭ ಮತ್ತು ಅಸ್ಥಿಕುಂಭಗಳನ್ನು ತೆಗೆದುಕೊಂಡು ಚರುವನ್ನು ಬೇಯಿಸಿದ ಅಗ್ನಿಯನ್ನು ಮುಂದಿಟ್ಟುಕೊಂಡು, ಬೆಸಸಂಖ್ಯೆಯ ತನ್ನಜ್ಞಾತಿಗಳ ಜೊತೆ ಹೊರಟು, ಲೋಷ್ಟಚಯನಸ್ಥಳದ ಸಮೀಪ, ಪೂರ್ವಭಾಗದಲ್ಲಿ ಈ ಅಗ್ನಿಯನ್ನು ಶುಚಿಯಾದ ಜಾಗದಲ್ಲಿಟ್ಟು । ಸೂರ್ಯೋದಯದವರೆಗೂ ಜ್ವಲನೆ ಮಾಡಬೇಕು । ಹೀಗೆ ಅಗ್ನಿಯನ್ನು ಕಾಪಾಡಬೇಕು ॥

ತತಃ ತೃತೀಯೇಽಹನಿ ಪ್ರಭಾತೇ ಅಗ್ನಿಂ ಉಪೇಕ್ಷ್ಯ ಹರಿಣ್ಯಾ ಪಲಾಶಶಾಖಯಾ ಶಮೀಶಾಖಯಾ ವಾ ಅಪೇತವೀತ..., ಇತಿ ಸ್ಮಶಾನಾಯತನಂ ಸಂಮಾರ್ಷ್ಟಿ । ದಕ್ಷಿಣತಃ ಶಾಖಾಂ ಉದಸಿತ್ವಾ ಉಪಸ್ಪೃಶ್ಯ ಉದ್ಧತ್ಯ ಅಪ ಉಪಸ್ಪೃಶ್ಯ ಅವೋಕ್ಷ್ಯ ಹಿರಣ್ಯಶಕಲಂ ನಿಧಾಯ ಸವಿತೈತಾನಿ..., ಇತಿ ಸೀರಂ ಯುನಕ್ತಿ । ಶುನಂ ವಾಹಾಃ..., ಇತಿ ದ್ವಾಭ್ಯಾಂ ಋಗ್ಭ್ಯಂ ಷಟ್ ಸೀರಾನ್ ತಾಃಕೃಶತಿ । ಅನಿವರ್ತಯನ್ ಪ್ರಸವ್ಯಂ ಆಗ್ನೇಯಕೋಣಮಾರಭ್ಯ ತತ್ರೈವ ಚ ಸಮಾಪ್ತಿಃ । ಉದ್ಯಮ್ಯ ಲಾಂಗಲಂ ಸೀತೇ ವಂದಾಮಹೇ..., ಇತಿ ಸೀತಾಂ ಪ್ರತ್ಯವೇಕ್ಷತೇ ಏವಮಂತರತಃ ಅಂತರತಃ ಕೃಷತಿ । ಯಾವತ್ ಷಟ್ ಸೀತಾಭವಂತಿ ಕರ್ಷಣಂಮಂತ್ರಸ್ಯ ಆವೃತ್ತಿಃ । ಪ್ರತ್ಯವೇಕ್ಷಣಮಂತ್ರಸ್ಯ ವಾ ಯಾವತ್ ತಥಾ ಚ ಪ್ರತ್ಯವೇಕ್ಷಣಮಂತ್ರಸ್ಯ ಆವೃತ್ತಿಃ ಕರ್ಷಣಸ್ಯ ವಾ ಯಾವತ್ । ಅಥವಾ ಆದಾವೇವ ಕರ್ಷಣಮಂತ್ರಾಃ ಅಂತರಏವ ಸೀತಾವೇಕ್ಷಣಮಂತ್ರಃ । ಸವಿತೈತಾನಿ..., ಇತಿ ಸೀತಯೋರ್ಮಧ್ಯೇ ಅಕೃಷ್ಟದೇಶೇ ಅಸ್ಥಿಕುಂಭಂ ನಿಧಾಯ । ವಿಮುಚ್ಯಧ್ವ..., ಇತಿ ಬಲೀವರ್ದಾನ್ ವಿಮುಂಚತಿ ಬಹುವಚನಾತ್ ಸಕೃನ್ಮಂತ್ರಃ ತಾನ್ ದಕ್ಷಿಣತಃ ಪ್ರಾಂಚೋ ವಾ ಉತ್ಸೃಜ್ಯ ಅಧ್ವರ್ಯೇವೇ ದದಾತಿ । ಅಧ್ವರ್ಯೋ ಬಲೀವರ್ದಾನ್ ತೇ ದದಾಮಿ । ತಾನಧ್ವರ್ಯುಃ ರುದ್ರಾಯ ಗಾಂ ಇತಿ ಪ್ರತಿಗೃಹ್ಣಾತಿ । ಪ್ರವಾತಾವಾಂತಿ..., ಇತಿ ಉದಪಾತ್ರೇಣ ಉದುಂಬರಶಾಖಯಾ ಸಹಹಸ್ತೇನ

ಅಗ್ನ್ಯಾಯತನಂ ಆಗ್ನೇಯಕೋಣಂ ಆರಭ್ಯ ಪ್ರಸವ್ಯಂ ಸಕೃತ್ ಅವೋಕ್ಷ್ಯತಿ ತತ್ರೈವ ಸಮಾಪ್ತಿಃ ।

ನಂತರ ೩ ನೇ ದಿವಸದಲ್ಲಿ ಬೆಳಿಗ್ಗೆ ಅಗ್ನಿಸಮೀಪಕ್ಕೆ ಹೋಗಿ । ಹಸಿಯಾದ ಪಲಾಶ ಮತ್ತು ಶಮೀಶಾಖೆಯಿಂದ ಅಪೇತವೀತ.....ಅಸ್ಮೈ ॥ ಎಂಬ ಮಂತ್ರದಿಂದ ಸ್ಮಶಾನದ ಜಾಗವನ್ನು ಗುಡಿಸಿ ಸ್ವಚ್ಛಗೊಳಿಸಿ, ಗುಡಿಸಿದ ಶಾಖೆಯನ್ನು ದಕ್ಷಿಣಕ್ಕೆ ಎಸೆದು, ಕೈ ತೊಳೆದು । ಗುಡಿಸಿದ ಜಾಗವನ್ನು ಅಗೆದು, ಕೈ ತೊಳೆದು, ನೀರಿನಿಂದ ಪ್ರೋಕ್ಷಿಸಿ । ಚಿನ್ನದ ಕಡ್ಡಿಯನ್ನು ಇಟ್ಟು । ಸವ್ಯೈತ್ಯೈತಾನಿ..... ಅಘ್ನ್ಯಾಯಾಃ ॥ ಎಂಬ ಮಂತ್ರದಿಂದ ನೊಗದಿಂದ ಉಳಲು ಆರಂಭಿಸಬೇಕು । ಶುನಂ ವಾಹ.....ಸಿಂಚತಂ ॥ ಈ ೨ ಮಂತ್ರಗಳಿಂದ ನೆಲದಲ್ಲಿ ೬ ಗೆರೆಗಳು ಬರುವಂತೆ ಉಳಬೇಕು । ವಾಪಸ್ಸು ಬರದೇ, ಅಪ್ರದಕ್ಷಿಣೆಯಾಗಿ, ಆಗ್ನೇಯದಿಕ್ಕಿನಿಂದ ಆರಂಭಿಸಿ, ಆಗ್ನೇಯದಿಕ್ಕಿಗೆ ಮುಗಿಯುವಂತೆ ಉಳಬೇಕು । ನೊಗವನ್ನು ಮೇಲಕ್ಕೆತ್ತಿ, ಸೀತೇವಂದಾಮಹೇ.....ಅಸಿ ॥ ಈ ಮಂತ್ರದಿಂದ ಉತ್ತ ಜಾಗವನ್ನು ನೋಡಬೇಕು । ಹೀಗೆ ಒಮ್ಮೆ ಉತ್ತಜಾಗಕ್ಕೂ ಇನ್ನೊಮ್ಮೆ ಉಳುವ ಜಾಗಕ್ಕೂ ಸ್ವಲ್ಪ ಅಂತರವಿರಬೇಕು । ೬ ಗೆರೆಗಳು ಬರುವವರೆಗೂ ಆಯಾಯಾ ಮಂತ್ರಾವರ್ತಿಯಿಂದ ಉಳುತ್ತಿರಬೇಕು । ಹಾಗೂ ಮಂತ್ರದಿಂದ ನೋಡುತ್ತಿರಲೂಬೇಕು । ಎಲ್ಲಿಯವರೆಗೆ ಉಳುವಕರ್ಮದ ಸಮಾಪ್ತಿಯೋ, ಅಲ್ಲಿಯವರೆಗೂ ಮಂತ್ರದ ಆವೃತ್ತಿಯು ನಡೆಯಬೇಕು । ಅಥವಾ ಮೊದಲು ಉಳುವ ಮಂತ್ರ ಪೂರ್ತಿಹೇಳಿ, ನಂತರ ನೋಡುವ ಮಂತ್ರವನ್ನೂ ಹೇಳಿ, ಆಮೇಲೆ ಉಳಬಹುದು ಎಂಬುದು ಇನ್ನೊಂದು ಕ್ರಮ । ನಂತರ ಸವಿತೈತಾನಿ.....ಶಂಭವ ॥ ಮಂತ್ರದಿಂದ ಉತ್ತ ೨ ಗೆರೆಗಳ ಮಧ್ಯೆ, ಅಸ್ಥಿಕುಂಭವನ್ನಿಟ್ಟು । ವಿಮುಚ್ಯಧ್ವಂ.....ಸುವರಗನ್ಮ ॥ ಮಂತ್ರದಿಂದ ಹೋರಿ ಅಥವ ಎತ್ತನ್ನು ನೊಗದಿಂದ ಬಿಚ್ಚಬೇಕು । ಇಲ್ಲಿ ಒಂದೇಸಲ ಮಂತ್ರಹೇಳಿ, ಅಷ್ಟೂ ಎತ್ತುಗಳನ್ನೂ ಬಿಚ್ಚುವುದು । ಅವುಗಳನ್ನು ನೊಗದಿಂದ ಬಿಚ್ಚಿ, ದಕ್ಷಿಣ ಅಥವ ಪೂರ್ವಕ್ಕೆ ಕರೆದುಕೊಂಡುಹೋಗಿ । ಮುಂದೆ ಹೇಳಿದ ಅಧ್ವರ್ಯೂ....., ಮಂತ್ರದಿಂದ ಅಧ್ವರ್ಯುವಿಗೆ ದಕ್ಷಿಣೆಯಾಗಿ ಕೊಡಬೇಕು । ಅದನ್ನು ಅಧ್ವರ್ಯುವು,

ದೇವಸ್ಯತ್ವಾ.....ರುದ್ರಾಯ ಗಾಂ.....ಪ್ರತಿಗೃಹ್ಣಾಮಿ ॥ ಎಂದು ಪ್ರತಿಗ್ರಹ ಮಾಡಬೇಕು। ಪ್ರವಾತಾವಾಂತಿ..... ವತಿ ॥ ಮಂತ್ರದಿಂದ ನೀರಿನ ಪಾತ್ರೆಯಿಂದ ನೀರನ್ನು ತೆಗೆದುಕೊಂಡು, ಉದುಂಬರಶಾಖೆಯಿಂದ ಹಾಗೂ ಕೈಯಿಂದಲೂ ಅಗ್ನಿಯನ್ನು ಇಡುವಂತಹ ಜಾಗವನ್ನು, ಆಗ್ನೇಯದಿಂದ ಆರಂಭಿಸಿ, ಆಗ್ನೇಯಕ್ಕೆ ಮುಗಿಯುವಂತೆ ಪ್ರೋಕ್ಷಿಸಬೇಕು ।

ಚತುರ್ದಶ ಓಷಧೀಸ್ಸರ್ವಾಃ ಪಾತ್ರ್ಯಾ ಸಂಸೃಜ್ಯ ಸಕೃದೇವ ಉತ್ತರಯಾ ಯಥಾ ಯಮಾಯ ಹಾರ್ಮ್ಯಂ..., ಇತಿ ಚಯನದೇಶೇ ವಪತಿ । ಸಪ್ತಗ್ರಾಮ್ಯಾಃ ಕೃಷ್ಣೇನ ಸಪ್ತಾರಣ್ಯಾಃ ಅಕೃಷ್ಣಯಃ ಇತಿ ಮಹಾಗ್ನಿಚಯನವತ್ ಅತ್ರ ನಿಯಮೋ ನಾಸ್ತಿ । ಸರ್ವೌಷಧೀಃ ಸಂಯುಜ್ಯ ಇತಿ ವಚನಾತ್ ॥ ಚಿತಸ್ಥ ಪರಿಚಿತಃ..., ಇತಿ ಮಹಾನ್ನಚಯನವತ್ ಅಪರಿಮಿತಾಭಿಃ ಶರ್ಕರಾಭಿಃ ಪರಿಶ್ರಿತ್ಯ ತಿಸ್ರಃತಿಸ್ರಃ ಸಂಹಿತಾಃ । ಮಂತ್ರಾವೃತ್ತಿಃ ನ್ಯಾಯಃ । ಬಹುವಚನಾಂತತ್ವಾತ್ ಮಂತ್ರಸ್ಯ ಸಕೃನ್ಮಂತ್ರ ಇತ್ಯುಪದೇಶಃ ತ್ರಿಸಪ್ತಾಭಿಃ ಇತಿ ಲಭ್ಯತೇ । ಆಪ್ಯಾಯಸ್ವಸಮೇತು ತೇ..., ಇತಿ ಸಿಕತಾ ವ್ಯೂಹತಿ । ಸಂ ತೇ ಪಯಾಗ್ಂಸಿ..., ಇತಿ ರಾಜನ್ಯಸ್ಯ । ಅಪಾಮಸೋಮ..., ಇತಿ ವೈಶ್ಯಸ್ಯ । ಚಯನಕ್ಷೇತ್ರಾತ್ ನಿರ್ಗತಾನ್ ಲೋಷ್ಟಾನ್ ಮಹಾಗ್ನಿವತ್ ಯೇ ಅಂತರ್ವಿಧಾತ್ ಬಹಿರ್ವಿಧಾಂ ಆಪನ್ನ ಇತಿವತ್ ಕೃತ್ವಾ ಪ್ರತಿಮಂತ್ರಂ ಪ್ರತಿದಿಶಂ ಅನನ್ವೀಕ್ಷಮಾಣಃ ಪ್ರತಿಸಮಸ್ಯತಿ ಮಂತ್ರೈಃ ಅತ್ರ ನೇತ್ರೇ ನಿಮೀಲ್ಯ । ಚಯನಕ್ಷೇತ್ರಾತ್ ಕರ್ಷಣಾತ್ ನಿರ್ಗತಾಃ ಏವ ವಿಧೃತಿಲೋಷ್ಟಾಃ । ಉತ್ತೇತಭ್ನೋಮಿ..., ಇತಿ ಪುರಸ್ತಾತ್ । ಉಪಸರ್ಪ ಮಾತರಂ..., ಇತಿ ಉತ್ತರತಃ । ಏಕಂ ಲೋಷ್ಟಂ ಅವಸಿಚ್ಯ ಉಛ್ಮಂಚಸ್ವ ಪೃಥಿವಿ..., ಇತಿ ಪಶ್ಚಾತ್ । ಉಛ್ಮಂಚಮಾನಾ..., ಇತಿ ದಕ್ಷಿಣತಃ । ಇಹ ಸರ್ವೇಷು ಅಪಿ ಆಧಾನಂ । ಏಣೇರ್ಧಾನಾಃ..., ಇತಿ ತಿಲಾಃ । ಯಾಸುಕ್ಷಿಪ್ಯಂತೇ ತಾಭಿಃ ತಿಲಮಿಶ್ರಾಭಿಃ ಧಾನಾಭಿಃ ತ್ರಿಃಪ್ರಸವ್ಯಂ ಪರಿಕಿರತಿ । ಆಗ್ನೇಯಕೋಣೇ ಉಪಕ್ರಮ ಅಪವರ್ಗೌ । ಅಭಿವಾನ್ಯಾಯಾಃ ಪಯಸಿ ಕ್ಷಿಪ್ತೇ ಅರ್ಧಶರಾವ ಪರಿಮಾಣೇ ಸತ್ಯೂನೋಪ್ಯ ಪುರಾಣಕಾಷ್ಠ ಮಂಥನದಂಡೇನ ಮೌಂಜಾರ್ಯಜ್ಯಾ ತ್ರಿಃ ಪ್ರಸವ್ಯಂ ಅನ್ವಾರಭ್ಯ ಉಪಮಂಥತಿ ಲೌಕಿಕೋಪಾಯೇನ । ಕೃತ್ಸ್ನಂ ಮಥಿತಂ ಆಮಪಾತ್ರಸ್ಥಂ

ಕೃತ್ವಾ ಪಾತ್ರೇಣ ಸಹ ದಕ್ಷಿಣತಃ ಚಿತ್ಯಾಯತನ ಏವ ಉಪದಧಾತಿ । ಏಷಾತೇ ಯಮಸಾದನೇ..., ಅಸೌ ಇತಿ । ಅತ್ರ ಅಸೌ ಇತ್ಯಸ್ಮಿನ್ ಸ್ಥಾನೇ ಮೃತಸ್ಯ ನಾಮಗ್ರಹಣೇನ ಉಪದಧಾತಿ ।

೭ ಗ್ರಾಮ್ಯ ಹಾಗೂ ೭ ಅರಣ್ಯದ ಓಷಧಿಗಳನ್ನು ಒಂದುಪಾತ್ರೆಯಲ್ಲಿ ಬೆರೆಸಿ । ಒಂದೇಸಲ ಮುಂದೆಹೇಳುವ ಯಥಾಯಮಾಂಯು.....ಭಾರಂಯುಃ ॥ ಮಂತ್ರದಿಂದ ಲೋಷ್ಟಚಯನ(ಉತ್ತಿರುವ) ಜಾಗದಲ್ಲಿ ಬಿತ್ತಬೇಕು । ಮಹಾಗ್ನಿಚಯನದಲ್ಲಿರುವಂತೆ, ಉತ್ತಜಾಗದಲ್ಲಿ ೭ ಗ್ರಾಮ್ಯ ಓಷಧಿಗಳನ್ನು ಮತ್ತು ಉಳದಿರುವ ಜಾಗದಲ್ಲಿ ೭ ಅರಣ್ಯಧಾನ್ಯಗಳನ್ನು ಬಿತ್ತಬೇಕೆಂಬ ನಿಯಮವು ಇಲ್ಲಿ ಇಲ್ಲ । ಏಕೆಂದರೆ ೧೪ ಓಷಧಿಗಳನ್ನೂ ಬೆರೆಸಿ ಎಂದುಹೇಳಿರುವುದರಿಂದ । ಚಿತಸ್ಥಃ.....ಸೀದ ॥ ಮಂತ್ರದಿಂದ ಮಹಾಗ್ನಿಚಯನದಂತೆ, ಒಂದಷ್ಟು ಕಲ್ಲುಗಳಿಂದ ಚಯನಜಾಗವನ್ನು ಮರೆಮಾಡಿ । ೩ – ೩ ಕಲ್ಲುಗಳನ್ನು ಒಂದೊಂದು ಮಂತ್ರಾವರ್ತಿಯ ಸಹಿತ ಮರೆಮಾಡಲು ನಿಲ್ಲಿಸಬೇಕು । ಇಲ್ಲಿ ಮಂತ್ರಾವರ್ತಿಮಾಡುವುದು ನ್ಯಾಯವೇ ಆಗಿದೆ । ಬಹುವಚನಾಂತದಿಂದ ಹೇಳಿರುವುದರಿಂದ, ಮಂತ್ರವನ್ನು ಸಕೃತ್ಮಂತ್ರ ಎಂದು ಉಪದೇಶ ಮಾಡಿರುವುದು, ೨೧ ಮಂತ್ರವನ್ನು ಹೇಳಬೇಕೆಂದು ಇಲ್ಲಿ ತಿಳಿದುಬರುತ್ತದೆ । ಆಪ್ಯಾಯಸ್ವ.....ಸಂಗಥೇ ॥ ಮಂತ್ರದಿಂದ ಮರಳನ್ನು ಲೋಷ್ಟಚಯನದ ಜಾಗದಲ್ಲಿ ಹರಡಬೇಕು । ಕ್ಷತ್ರಿಯರಾದರೋ, ಸಂ ತೇ ಪಯಾಗ್ಂಸಿ.....ಧಿಷ್ವ ॥ ಮಂತ್ರವು । ಅಸಾಮಸೋಮ.....ಮರ್ತ್ಯಸ್ಯ ॥ ಎಂಬುದು ವೈಶ್ಯರಿಗೆ । ಚಯನದ ಜಾಗದಿಂದ ತೆಗೆದ ಮಣ್ಣನ್ನು, ಮಹಾಗ್ನಿಚಯನದಂತೆ ಯೇ ಅಂತರ್ವಿಧಾತ್, ಬಹಿರ್ವಿಧಾಂ ಆಪನ್ನಃ ಎಂಬ ಮಾತಿನಂತೆ ಮಾಡಬೇಕು । ಪ್ರತಿಯೊಂದು ಮಂತ್ರದಿಂದ, ಎಲ್ಲಾ ದಿಕ್ಕುಗಳಿಗೂ ನೋಡದೇ ಆ ಮಣ್ಣನ್ನು ಹಾಕಬೇಕು । ಮಂತ್ರಗಳನ್ನು ಹೇಳಿ, ಕಣ್ಣುಮುಚ್ಚಿಕೊಂಡು ಎಸೆಯಬೇಕೆಂದು ಅರ್ಥ । ಉತ್ತ ಲೋಷ್ಟಚಯನದ ಜಾಗದಿಂದ ಮೇಲೆಬಂದಂತಹ ಮಣ್ಣುಗಳೇ ವಿಧೃತಿಲೋಷ್ಟಗಳು । ಉತ್ತೇತಭ್ನೋಮಿ.....ಮಿನೋತು ॥ ಮಂತ್ರದಿಂದ ಪೂರ್ವಕ್ಕೆ ಕಣ್ಣುಮುಚ್ಚಿ ಮಣ್ಣನ್ನು ಹಾಕಬೇಕು । ಉಪಸರ್ಪ.....ಉಪಸ್ಥೇ ॥ ಮಂತ್ರದಿಂದ ಉತ್ತರಕ್ಕೆ ಹಾಕಬೇಕು,

ಆದರೆ ಒಂದು ಮಣ್ಣಿನ ಉಂಡೆಯನ್ನು ಉಳಿಸಿಕೊಳ್ಳಬೇಕು । ಉಚ್ಛ್ರಂಚಸ್ವ.....ವೃಣು ॥ ಮಂತ್ರದಿಂದ ಪಶ್ಚಿಮಕ್ಕೆ । ಉಚ್ಛ್ರಂಚಮಾನಾ..... ತ್ವತ್ರ ॥ ಮಂತ್ರದಿಂದ ದಕ್ಷಿಣಕ್ಕೆ । ಇಲ್ಲಿಂದ ಮುಂದಕ್ಕೆ ಉತ್ತ ಲೋಷ್ಟಚಯನದ ಜಾಗದಲ್ಲಿ, ಮುಂದೆಹೇಳುವ ವಸ್ತುಗಳನ್ನು ಹಾಕಬೇಕು । ಏಣೀರ್ಧಾನಾ.....ಸ್ಫುರಂತಿ ॥ ಮಂತ್ರದಿಂದ ಎಳ್ಳನ್ನು ಹಾಕಬೇಕು । ಅಂತಹ ಎಳ್ಳಿಗೆ ಧಾನ(ಹುರಿದಗೋಧಿ) ಎಂಬ ಧಾನ್ಯವನ್ನು ಸೇರಿಸಿ, ೩ ಸಲ ಅಪ್ರದಕ್ಷಿಣೆಯಾಗಿ ಚಯನಜಾಗದಲ್ಲಿ ಹಾಕಬೇಕು । ಆಗ್ನೇಯದಿಂದ ಆರಂಭಿಸಿ ಆಗ್ನೇಯಕ್ಕೆ ಹಾಕಬೇಕು । ಕರುಸತ್ತ ಹಸುವಿನ ಹಾಲನ್ನು, ಚಯನದ ಜಾಗಕ್ಕೆ ಹಾಕಲಾಗಿ, ಅರ್ಧಪಾತ್ರೆಯ ಅಳತೆಯುಳ್ಳ ಹಿಟ್ಟನ್ನು ಹಾಕಿ । ಹಳೇ ಮರದ ಕಡೆಯುವ ಕೋಲಿನಿಂದ, ಹಾಗೂ ಮೌಂಜಿಯಿಂದ ೩ ಸಲ ಅಪ್ರದಕ್ಷಿಣೆಯಾಗಿ ಆರಂಭಿಸಿ, ಕಡೆಯಬೇಕು ಲೌಕಿಕ ಉಪಾಯದಿಂದ । ಸಂಪೂರ್ಣ ಕಡೆದಂತಹ ಆ ಹಿಟ್ಟುಬೆರಸಿದ ಹಾಲನ್ನು, ಹಸಿಮಣ್ಣಿನಪಾತ್ರೆಯಲ್ಲಿ ಹಾಕಿ, ಆ ಪಾತ್ರೆಯೊಡನೆ ಲೋಷ್ಟಚಯನದ ಜಾಗದ ದಕ್ಷಿಣಕ್ಕೆ ಹೋಗಿ ಅಲ್ಲಿಡಬೇಕು । ಏಷಾ ತೇ.....ನಾಮ ತೇ ಯಜ್ಞಶರ್ಮನ್ । ಎಂಬ ಮಂತ್ರದಿಂದ ಮೃತನ ಹೆಸರನ್ನು ಹೇಳಿ, ದಕ್ಷಿಣಕ್ಕೆ ಇಡಬೇಕು ।

ಇದಂ ಪಿತೃಭ್ಯಃ..., ಇತಿ ಸಮೂಲಾನ್ ದರ್ಭಾನ್ ದಕ್ಷಿಣಾಗ್ರಾನ್ ದಕ್ಷಿಣಾಪವರ್ಗಂ ಆಯತನಸ್ಯ ಮಧ್ಯೇ ಸ್ತೃಣಾತಿ ನಿಬಿಡಾನ್ । ಅಸ್ಮಿನ್ ಮಂತ್ರಮಧ್ಯೇ ಸಂಬುಧ್ಯಾ ಮೃತಸ್ಯ ನಾಮಗ್ರಹಣಂ । ಮಾತ್ವಾ ವ್ಯಕ್ಷ್ಟಾ..., ಇತಿ ದ್ವಿವಚನಾತ್ ಸಕೃನ್ಮಂತ್ರಮುಕ್ತ್ವಾ ದರ್ಭಾಣಾಂ ಪುರಸ್ತಾತ್ ಪಶ್ಚಾಚ್ಚ ಪಾಲಾಶೌ ಪರಿಧೀ ದಕ್ಷಿಣಾಗ್ರೌ ಹಸ್ತದ್ವಯೇನ ಯುಗಪತ್ ಪರಿದಧಾತಿ । ಏವಂ ಉತ್ತರಯಾ ಮಾತ್ವಾ ವ್ಯಕ್ಷ್ಟಾ ಸಂಬಾಧೇಥಾಂ..., ಇತಿ ದಕ್ಷಿಣತಶ್ಚ ಉತ್ತರತಶ್ಚ ಪ್ರಾಗಗ್ರೌ ಪರಿಧೀಪರಿದಧಾತಿ । ಅಗ್ನ್ಯಾಯತನಸ್ಯ ಚತೃಷುದಿಕ್ಷು ಪರಿಧಯಃ ಇತಿ ಕೇಚಿತ್ । ಸಮೂಲದರ್ಭಃ ಪರಿನಳೇಜೋಕಾನ್ ನಿದಧಾತಿ । ನಳಂ ಪ್ಲವಂ ಆರೋಹ..., ಇತಿ ಕೃಷ್ಣೇಷು ಪುಷ್ಪಾಣಿ ದಕ್ಷಿಣಾಗ್ರಾಣಿ ನಿದಧಾತಿ । ಪಾಣ್ಯೇವ ಸರ್ಪಿಷಾ ಅಸ್ಥೀನಿ ಸ್ವಕ್ತಾನ್ಯಕ್ತ್ವಾ । ದರ್ಭಾಣಾಮುತ್ತರತಃ ಉಪವಿಶ್ಯ, ವಾಗ್ಯತಃ ಅನನ್ವೀಕ್ಷ್ಯಮಾಣಃ ದರ್ಭೇಷು ಅಸ್ಥೀನಿ ನಿವಪತಿ । ಸವಿತ್ರೈತಾನಿ

ಶರೀರಾಣಿ..., ಇತಿ ದರ್ಭೇಷು ಅಸ್ಥೀನಿ ನಿವಪತಿ । ತಾನಿ ಯಥಾಲಿಂಗಂ ಅಂಗಾನಿ ಸನ್ನಿಧಾಯ ಪುರುಷಾಕೃತಿಂ ಕೃತ್ವಾ ಅಥೈವಂ ಉಪತಿಷ್ಠತೇ ।

ಇದಂ ಪಿತೃಭ್ಯಃ.....ಯಮ್ಯಾ ಸಂವಿದಾನಃ । ಎಂಬ ಮಂತ್ರದಿಂದ ಬುಡಸಹಿತವಾಗಿರುವ ದರ್ಭೆಯನ್ನು ದಕ್ಷಿಣಾಗ್ರವಾಗಿ, ದಕ್ಷಿಣಕ್ಕೆ ಅಪ್ರದಕ್ಷಿಣೆಯಾಗಿ ಹಾಗೂ ದಕ್ಷಿಣಕ್ಕೆ ಮುಗಿಯುವಂತೆ ಅಯತನದ ಮಧ್ಯಭಾಗದಲ್ಲಿ ಒತ್ತೊತ್ತಾಗಿ ಹರಡಬೇಕು । ಈ ಮಂತ್ರದ ಮಧ್ಯದಲ್ಲಿ ಸಂಬುದ್ಧಿಯಿಂದ ಮೃತನ ಹೆಸರನ್ನು ಹೇಳಬೇಕು । ಮಾ ತ್ವಾ ವೃಕ್ಷ್ಟಾ.....ಯಮರಾಜ್ಯೇ । ಎಂಬ ಮಂತ್ರವನ್ನು ದ್ವಿವಚನದಿಂದ ಒಮ್ಮೆ ಹೇಳಿ, ಹರಡಿದ ದರ್ಭೆಗಳ ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ಪಲಾಶದ ಪರಿಧಿಯನ್ನು ದಕ್ಷಿಣಾಗ್ರವಾಗಿ, ಎರಡೂ ಕೈಗಳಿಂದ ಒಟ್ಟಿಗೆ ಇಡಬೇಕು । ಹೀಗೆಯೇ ಮಾ ತ್ವಾ ವೃಕ್ಷ್ಟಾ..... ವಿರಾಜಸಿ । ಎಂಬ ಮಂತ್ರದಿಂದ ಹರಡಿದ ದರ್ಭೆಗಳ ದಕ್ಷಿಣ ಮತ್ತು ಉತ್ತರಕ್ಕೆ ಪೂರ್ವಾಗ್ರವಾಗಿ ಎರಡೂ ಕೈಗಳಿಂದ ಒಟ್ಟಿಗೆ ಪಲಾಶದ ಪರಿಧಿಯನ್ನು ಇಡಬೇಕು । ಅಗ್ನಿ ಆಯತನದ ನಾಲ್ಕೂದಿಕ್ಕುಗಳಲ್ಲಿಯೂ ಪರಿಧಿಯನ್ನು ಇಡಬೇಕೆಂದು ಕೆಲವರ ಅಭಿಪ್ರಾಯವಾಗಿದೆ । ಸಮೂಲದರ್ಭೆಗಳ ಮೇಲೆ ಕಪ್ಪುಕಬ್ಬಿನ ಹೂವುಗಳನ್ನು ನಳಂ ಪ್ಲವಂ..... ಪ್ರತರೋತ್ತರ । ಎಂದು ದಕ್ಷಿಣಾಗ್ರವಾಗಿ ಇಡಬೇಕು । ಕೈಗಳಿಂದ ಅಸ್ಥಿಗಳನ್ನು ತುಪ್ಪದಿಂದ ಚೆನ್ನಾಗಿ ನೆನೆಯುವಂತೆ ಅದ್ದಬೇಕು । ಹರಡಿದ ದರ್ಭೆಗಳ ಉತ್ತರದಲ್ಲಿ ಕರ್ತೃವು ಮೌನವಾಗಿ ಕುಳಿತು, ಅಸ್ಥಿಗಳನ್ನು ನೋಡದೇ, ಆ ದರ್ಭೆಗಳ ಮೇಲೆ ಅಸ್ಥಿಗಳನ್ನು, ಸವಿತೈತಾನಿ.....ಶಂಭವ । ಎಂಬ ಮಂತ್ರದಿಂದ ಹಾಕಬೇಕು । ಆ ಅಸ್ಥಿಗಳನ್ನು ಪುರುಷಾಕೃತಿಯಲ್ಲಿ ಜೋಡಿಸಬೇಕು । ನಂತರ

ಷಡ್ಧೋತಾ ಸೂರ್ಯಂ ತೇ..., ಶರೀರೈಃ – ಸೂರ್ಯಂ ತೇ ಚಕ್ಷುರ್ಗಚ್ಛತು..., ಇತಿ ಅಸ್ಥಿಕುಂಭಂ ಪುರಾಣವಸ್ತ್ರೇಣ ಅಭ್ಯಂತರಂ ನಿಮೃಜ್ಯ, ಪುರುಷಾಕೃತೇಃ ಉಪರಿಷ್ಟಾತ್ ಸಮೀಪತ ಏವ ನೀತ್ವಾ । ಪರಂ ಮೃತ್ಯೋ..., ಇತಿ ದಕ್ಷಿಣತೋ ವ್ಯಸ್ಯತಿ । ಭಿನತ್ತಿ ಅಸ್ಯಕುಂಭಸ್ಯ ಕಪಾಲಾನಿ ಸುಸಂಭಿನ್ನಾನಿ ಸಂಭಿನತ್ತಿ

ಯಥಾಕಪಾಲೇಷು ಉದಕಂ ನ ತಿಷ್ಠೇತ್ । ಪುರಾಣವಸ್ತ್ರೇಣ ಏನಕುಂಭಂ ನಿಮಾರ್ಷ್ಟಿ ತೇನೈವ ವಸ್ತ್ರೇಣ ಪ್ರೇತೋದ್ದೇಶೇನ ಪುರುಷಾಕೃತಿಂ ಪ್ರಚ್ಛಾದ್ಯ । ಶಂ ವಾತಃ..., ಇತಿ ಉದಪಾತ್ರೇಣ ಉದುಂಬರಶಾಖಾಯಾಃ ಸಹ ಹಸ್ತೇನ ಪುರುಷಾಕೃತಿಂ ಅವ್ಯೋಕ್ಷತಿ ॥

ಸೂರ್ಯಂ ತೇ ಚಕ್ಷುಃ.....ಶರೀರೈಃ । ಎಂಬ ಮಂತ್ರದಿಂದ ಅಸ್ಥಿಗಳ ಉಪಸ್ಥಾನವನ್ನು ಮಾಡಬೇಕು । ಸೂರ್ಯಂ ತೇ ಚಕ್ಷುರ್ಗಚ್ಛತು.....ಶರೀರೈಃ । ಎಂಬ ಮಂತ್ರದಿಂದ ಅಸ್ಥಿಕುಂಭವನ್ನು ಹಳೆಯಬಟ್ಟೆಯಿಂದ ಒಳಗೆತಿಕ್ಕಿ, ಪುರುಷಾಕೃತಿಯ ಮೇಲೆ ಆ ಅಸ್ಥಿಕುಂಭವನ್ನಿಟ್ಟು । ಪರಂ ಮೃತ್ಯೋಃ..... ವೀರಾನ್ । ಎಂಬ ಮಂತ್ರದಿಂದ ದಕ್ಷಿಣಕ್ಕೆ ಅಸ್ಥಿಕುಂಭವನ್ನು ಚೂರುಚೂರಾಗುವಂತೆ, ಅದರಲ್ಲಿ ನೀರು ನಿಲ್ಲದಂತೆ ಒಡೆಯಬೇಕು । ಹಳೆಯಬಟ್ಟೆಯಿಂದ ಯಾವ ಕುಂಭವನ್ನು ಒರಸುತ್ತಾನೋ, ಆ ಬಟ್ಟೆಯಿಂದಲೇ ಆ ಪುರುಷಾಕೃತಿಯನ್ನು ಮುಚ್ಚಬೇಕು । ಶಂ ವಾತಃ.....ಶಗ್ಮಾಃ । ಎಂಬ ಮಂತ್ರದಿಂದ ನೀರಿನಪಾತ್ರೆಯಲ್ಲಿರುವ ನೀರನ್ನು ತೆಗೆದುಕೊಂಡು, ಅತ್ತಿಮರದ ಶಾಖೆಯಿಂದ ಹಾಗೂ ಕೈಯಿಂದಲೂ ಪುರುಷಾಕೃತಿಯನ್ನು ಪ್ರೋಕ್ಷಣೆ ಮಾಡಬೇಕು ॥

****

8. ಇಷ್ಟಕಾಚಯನಂ

ಮಯಿಗೃಹ್ಣಾಮಿ..., ಇತಿ ದ್ವಾಭ್ಯಾಂ ಆತ್ಮನಿ ಅಗ್ನಿಂ ಗೃಹೀತ್ವಾ । ಯಾಸ್ತೇ ಅಗ್ನೇ..., ಇತಿ ಸ್ವಯಂ ಚಿತ್ಯಾ ಚಿತಿದೇಶಂ ಅಭಿಮೃಶ್ಯ । ವಾಜ್ಮಆಸನ್..., ಇತಿ ಜಪಿತ್ವಾ । ಅಗ್ನಿಮಾರುಹ್ಯ ಷಡಿಷ್ಟಕಾಃ ಅನನ್ವೀಕ್ಷ್ಯಮಾಣಃ ಉಪದಧಾತಿ । ಪೃಥಿವ್ಯಾಸ್ತ್ವಾ..., ಇತಿ ಪುರಸ್ತಾದಿಷ್ಟಕಾಂ ಆದಧಾತಿ । ಅಂತರಿಕ್ಷಸ್ಯ ತ್ವಾ ಲೋಕೇಸಾದಯಾಮಿ..., ಪಿತರೋ ದೇವತಾ । ಪ್ರಜಾಪತಿಃ ತ್ವಾ..., ಸೀದ । ಇತಿ ಉತ್ತರತಃ । ದಿವಃ ತ್ವಾ ಲೋಕೇ ಸಾದಯಾಮಿ..., ಪಿತರೋ ದೇವತಾ । ಪ್ರಜಾಪತಿಸ್ತ್ವಾ..., ಸೀದ ಇತಿ ಪಶ್ಚಾತ್ । ದಿಶಾಂ ತ್ವಾ ಲೋಕೇ ಸಾದಯಾಮಿ..., ಪಿತರೋ ದೇವತಾ ।

ಪ್ರಜಾಪತಿಸ್ತ್ವಾ...., ಸೀದ ಇತಿ ದಕ್ಷಿಣತಃ । ನಾಕಸ್ಯ ತ್ವಾ ಪೃಷ್ಠೇ ಸಾದಯಾಮಿ..., ಪಿತರೋ ದೇವತಾ । ಪ್ರಜಾಪತಿಸ್ತ್ವಾ..., ಸೀದ ಇತಿ ಮಧ್ಯೇ । ಬ್ರಧ್ನಸ್ಯ ತ್ವಾ.....,ಪಿತರೋ ದೇವತಾ । ಪ್ರಜಾಪತಿಸ್ತ್ವಾ....., ಸೀದ, ಇತಿ ತಾಂ ಪಂಚಮೀಂ ದಕ್ಷಿಣೇ ಷಷ್ಠಂ । ಏವಂ ಚರೂನ್ ಷಷ್ಠವರ್ಜಂ । ಪ್ರಸವ್ಯ ಪ್ರತಿದಿಶಂ । ಅಪೂಪವಾನ್ ಘೃತವಾಗ್ಗ್ ಶ್ಚರು....., ಗೃಹೇಸೌ । ದಶಾಕ್ಷರಾ ತಾಂ....., ಧ್ರುವಾಸೀದ ಇತಿ ಘೃತಪೂರಿತ ಚರುಂ ಸಾಪೂಪಾಪಿಧಾನಂ ಪುರಸ್ತಾದುಪದಧಾತಿ । ಏವಂ ಶೃತಾಭಿಪೂರಿತಂ । ಅಪೂಪವಾನ್ಘೃತವಾಗ್ಗ್ ಶ್ಚರುರೇಹ.....,ಶೃತಭಾಗಾ ಇಹಸ್ಥ । ಏಷಾ ತೇ.....,ಪಿತರೋ ದೇವತಾ ಸೀದ, ಇತಿ ಉತ್ತರತಃ । ಅಪೂವಾನ್ ಕ್ಷೀರವಾಗ್ಗ್ ಶ್ಚರುರೇಹಸೀದ.....,ಕ್ಷೀರಭಾಗಾ ಇಹಸ್ಥ । ಏಷಾ ತೇ.....,ಧ್ರುವಾಸೀದ, ಇತಿ ಕ್ಷೀರಪೂರಿತಂ ಚರುಂ ಪಶ್ಚಾತ್ । ಅಪೂಪವಾನ್ ದಧಿವಾಗ್ಗ್ ಶ್ಚರುರೇಹ....., ದಧಿಭಾಗಾ ಇಹಸ್ಥ । ಏಷಾ ತೇ.....,ಧ್ರುವಾಸೀದ, ಇತಿ ದಧಿಪೂರಿತಂ ಚರುಂ ದಕ್ಷಿಣತಃ । ಅಪೂಪವಾನ್ ಮಧು.....,ಮಧುಭಾಗಾ ಇಹಸ್ಥ । ಏಷಾ ತೇ....., ಧ್ರುವಾಸೀದ, ಇತಿ ಮಧುಪೂರಿತಂ ಚರುಂ ಮಧ್ಯೇ ।

ಮಯಿಗೃಹ್ಣಾಮಿ.....ಪರಾಗಾತ್ । ಈ ೨ ಮಂತ್ರಗಳಿಂದ ಅಗ್ನಿಯನ್ನು ಕರ್ತೃವು ಆತ್ಮಸಮಾರೋಪಣದ ಮೂಲಕ ಹಿಡಿದುಕೊಂಡು । ಯಾಸ್ತೇ ಅಗ್ನೇ.....ಪ್ರಜಾನನ್ । ಎಂಬ ಮಂತ್ರದಿಂದ ತಾನೇ ಚಯನ ಮಾಡುವ ಜಾಗವನ್ನು ಮುಟ್ಟಬೇಕು । ವಾಜ್ಮ ಆಸನ್..... ಹಿಗ್ಂಸೀಃ । ಎಂಬ ಮಂತ್ರವನ್ನು ಜಪಿಸಿ, ಆ ಚಯನದ ಜಾಗವನ್ನು ಹತ್ತಿ, ೬ ಇಟ್ಟಿಗೆಗಳನ್ನು ನೋಡದೆಯೇ ಇಡಬೇಕು । ಪೃಥಿವ್ಯಾಸ್ತ್ವಾ.....ಧ್ರುವಾಸೀದ । ಎಂಬ ಮಂತ್ರದಿಂದ ಪೂರ್ವದಿಕ್ಕಿಗೆ ೧ ಇಟ್ಟಿಗೆಯನ್ನು ಇಡಬೇಕು । ಅಂತರಿಕ್ಷಸ್ಯತ್ವಾ..... ಸೀದ । ಮಂತ್ರದಿಂದ ಉತ್ತರಕ್ಕೆ ಚಿತಿಯಮೇಲೆ ೧ ಇಟ್ಟಿಗೆಯನ್ನು ಇಡಬೇಕು । ದಿವಸ್ತ್ವಾಲೋಕೇ.....ಸೀದ । ಮಂತ್ರದಿಂದ ಪಶ್ಚಿಮದಲ್ಲಿ ೧ ಇಟ್ಟಿಗೆ ಇಡಬೇಕು । ದಿಶಾಂ ತ್ವಾ.....ಸೀದ । ಮಂತ್ರದಿಂದ ದಕ್ಷಿಣಕ್ಕೆ ಇಡಬೇಕು । ನಾಕಸ್ಯತ್ವಾ.....ಸೀದ । ಮಂತ್ರದಿಂದ ಮಧ್ಯದಲ್ಲಿ ೧ ಇಟ್ಟಿಗೆ ಇಡಬೇಕು । ಬ್ರಧ್ನಸ್ಯ ತ್ವಾ.....ಸೀದ । ಮಂತ್ರದಿಂದ

೬ ನೇ ಇಟ್ಟಿಗೆಯನ್ನು ಐದೂ ಇಟ್ಟಿಗೆಗಳ ದಕ್ಷಿಣಭಾಗದಲ್ಲಿ ಇಡಬೇಕು । ಈ ರೀತಿಯಾಗಿಯೇ ಚರುವನ್ನೂ ಸಹಾ, ೬ ನೇ ಇಟ್ಟಿಗೆಯನ್ನು ಬಿಟ್ಟು, ಉಳಿದ ೫ ಇಟ್ಟಿಗೆಗಳಮೇಲೆ ಅಪ್ರದಕ್ಷಿಣೆಂಯಾಗಿ ಇಡಬೇಕು । ಹೇಗೆಂದರೆ – ಅಪೂಪವಾನ್.....ಘೃತಭಾಗ.....ಗೃಹೇಸೌ.....ಸೀದ ॥ ಎಂಬ ಮಂತ್ರದಿಂದ ತುಪ್ಪಮಿಶ್ರಿತ ಚರುವನ್ನು ಮತ್ತು ಇಡ್ಲಿಯನ್ನು ಮತ್ತು ಧಾನಾ(ಹುರಿದಗೋಧಿ) ಇವುಗಳನ್ನು ಪೂರ್ವದ ಇಟ್ಟಿಗೆಯಮೇಲೆ ಇಡಬೇಕು ।

ಅಪೂಪವಾನ್ ಶೃತವಾನ್.....ಸೀದ ॥ ಎಂಬ ಮಂತ್ರದಿಂದ ಉತ್ತರದ ಇಟ್ಟಿಗೆಯಮೇಲೆ ಕಾಯಿಸಿದ ಹಾಲನ್ನು ಸೇರಿಸಿದ ಚರು, ಇಡ್ಲಿ, ಧಾನ(ಹುರಿದಗೋಧಿ), ಇವನ್ನು ಇಡಬೇಕು ।

ಅಪೂಪವಾನ್ ಕ್ಷೀರವಾನ್.....ಸೀದ । ಎಂದು ಹಸಿಹಾಲುಮಿಶ್ರಿತವಾದ ಚರು, ಇಡ್ಲಿ, ಧಾನಾ(ಹುರಿದಗೋಧಿ) ವನ್ನು ಪಶ್ಚಿಮದ ಇಟ್ಟಿಗೆಯ ಮೇಲೆ ಹಾಕಬೇಕು ।

ಅಪೂಪವಾನ್ ದಧಿವಾನ್.....ಸೀದ । ಮಂತ್ರದಿಂದ ಮಜ್ಜಿಗೆ ಸೇರಿಸಿದ ಚರು, ಇಡ್ಲಿ, ಜವೇಗೋಧಿಗಳನ್ನು ದಕ್ಷಿಣದ ಇಟ್ಟಿಗೆ ಮೇಲೆ ಇಡಬೇಕು ।

ಅಪೂಪವಾನ್ ಮಧುಮಾನ್.....ಸೀದ । ಎಂಬ ಮಂತ್ರದಿಂದ ಜೇನುತುಪ್ಪಸೇರಿಸಿದ ಚರು, ಇಡ್ಲಿ, ಜವೇಗೋಧಿಗಳನ್ನು ಮಧ್ಯದ ಇಟ್ಟಿಗೆ ಮೇಲೆ ಇಡಬೇಕು ।

ಅಸೌ ಇತಿ ಸರ್ವತ್ರ ಸಂಬುದ್ಧ್ಯಾ ಮೃತಸ್ಯ ನಾಮ ನಿರ್ದೇಶಃ । ಏತಾಸ್ತೇ ಸ್ವಧಾ....., ಇತಿ ತಿಲಮಿಶ್ರಾಭಿಃ ಧಾನಾಭಿಃ ತ್ರಿಃ ಪ್ರಸವ್ಯಂ ಉಪಹಿತಾನಾಂ ಇಷ್ಟಕಾನಾಂ ಬಹಿಃ ಪರಿಕಿರತಿ । ಪೂರ್ವವತ್ ಉಪಕ್ರಮ ಅಪವರ್ಗೌ । ಓಷಧಿಸ್ತಂಬಾನ್ ಪ್ರತಿದಿಶಂ ಅನನ್ವೀಕ್ಷ್ಯಮಾಣಃ ಮಂತ್ರೈಃ ಉಪದಧಾತಿ । ತೇಷಾಂ ಮಂತ್ರಲಿಂಗೈಃ ದ್ರವ್ಯನಿಯಮಃ । ತ್ವಾಮರ್ಜುನೌಷಧೀನಾಂ....., ಧಾತವೇ, ಇತಿ ಅರ್ಜುನವೃಕ್ಷಂ ಸಮೂಲಂ ಆಹೃತ್ಯ, ಪುರಸ್ತಾದುಪದಧಾತಿ । ಕೇಚಿತ್ ಅರ್ಜು ಇತಿ ವೃಕ್ಷಃ ಕೃಷ್ಣಶೂಕ ಪ್ರಿಯಂಗುಸ್ತಂಬಃ ಪುರಸ್ತಾದುಪದಧಾತಿ ಇತಿ ವದಂತಿ । ದೂರ್ವಾಣಾಂ.....,ಇತಿ ದೂರ್ವಾಸ್ತಂಬಂ

ಉತ್ತರತಃ । ಕಾಶಾನಾಗ್ಂ....., ಇತಿ ಕಾಶಸ್ತಂಬಂ ಪಶ್ಚಾತ್ । ದರ್ಭಾಣಾಂ....., ಇತಿ ದರ್ಭಸ್ತಂಬಂ ದಕ್ಷಿಣತಃ । ಅವಶಿಷ್ಟಂ ಅಗ್ನಿಂ ಲೋಕಂ ಪೃಣಾಭಿಃ ಪ್ರಚ್ಛಾದಯತಿ । ಲೋಕಂಪೃಣ....., ಅಸೀಷದನ್ । ತಯಾ ದೇವತಯಾ....., ದ್ರುವಾಸೀದ, ಇತಿ ಅವಶಿಷ್ಟಾಃ ಇಷ್ಟಕಾಃ ಉಪದಧಾತಿ ಉಕ್ತಮಿಷ್ಟಕಾಸಂಖ್ಯಾ ಪರಿಮಾಣಂ । ಸರ್ವಂ ಅಗ್ನಿಂ ಚತುರ್ವಿಂಶಾಭಿಃ ಪ್ರಚ್ಛಾದಯಿತ್ವಾ । ಪಾದೇಷ್ಟಕಾಭಿಃ ಸಂಖ್ಯಾಂ ಪೂರಯೇತ್ ಉತ್ತರಯಾ । ತಾ ಆಸ್ಯ ಸೂದದೋಹಸಃ.....,ಇತಿ ದ್ವ್ಯಂಗುಳಾ ತ್ರ್ಯಂಗುಳಾದಿ ಅಚ್ಛೈದಾನುಸಾರೇಣ ಪರಿಮಾಣೇನ ಪೂರಯೇತ್ । ಸ್ಮಶಾನಚಿತಃ ಊರ್ಧ್ವಪ್ರಮಾಣಂ ದ್ವ್ಯಂಗುಳಂ ತ್ರ್ಯಂಗುಳಂ ಚತುರಶ್ರಂ ಪ್ರಾದೇಶಂ ವಿತಸ್ತೇಃ ಜಾನುದಘ್ನಂ ಊರುದಘ್ನಂ ವಾ ಶ್ಫಿಗ್ದಘ್ನಂ ವಾ ಅಸ್ಥಿಕುಂಭ ಪ್ರದೇಶಃ । ಶ್ಫಿಕ್ ಇತ್ಯುಕ್ತೇ ಕಟಿಪ್ರದೇಶಃ ಏತೇಷಾಂ ಅನ್ಯತಮ ಪರಿಮಾಣಂ ಯಥಾಭವತಿ ತಥಾ ಪೂರ್ವಹೃತಯಾ ಮೃದಾಪೂರಯೇತ್ । ಶ್ಫಿಗ್ದಘ್ನಂ ವಾ ಏಷಾ ಉತ್ತಮಾಮಾತ್ರಾ । ಸ್ಮಶಾನಸ್ಯ ಉತ್ತಮಾಂ ಮಾತ್ರಾಂ ನಾಧ್ಯಾಪ್ನುಯಾತ್ ಅಥವಾ ಯಾವತ್ ಪುರಸ್ತಾತ್ ತಾವತಃ ಅನಂತರಂ ಪಶ್ಚಾದಿತಿ ಯಾವದುಚ್ಛ್ರಿತಂ ಪುರಸ್ತಾದಗ್ನೇಃ ತತೋನಂತರಂ ಪಶ್ಚಾದಿತಿ ಯಾವತ್ । ಉಚ್ಛ್ರಿತಂ ಪುರಸ್ತಾದಗ್ನೇಃ ತತೋನಂತರಂ ಅವರೋಹಃ ।

ಮಂತ್ರದಲ್ಲಿರುವ 'ಅಸೌ' ಎಂಬ ಪದದ ಜಾಗದಲ್ಲಿ, ಮೃತನನ್ನು ಸಂಬೋಧನೆಯಿಂದ ನಿರ್ದೇಶಿಸಬೇಕು । ಏತಾಸ್ತೇಸ್ವಧಾ.....ಕರೋತು । ಎಂಬ ಮಂತ್ರದಿಂದ ಎಳ್ಳುಮಿಶ್ರಿತ ಜವೇಗೋಧಿಯಿಂದ ೩ ಸಲ ಅಪ್ರದಕ್ಷಿಣೆಯಾಗಿ ಮಂತ್ರಪೂರ್ವಕವಾಗಿಟ್ಟ ಇಟ್ಟಿಗೆಯ ಹೊರಭಾಗದಸುತ್ತಲೂ ಅಪ್ರದಕ್ಷಿಣೆಯಾಗಿ ಹಾಕಬೇಕು । ಹಿಂದಿನಂತೆ ಆಗ್ನೇಯದಿಂದ ಆರಂಭ, ಆಗ್ನೇಯಕ್ಕೇ ಸಮಾಪ್ತಿ । ಓಷಧಿಸಸ್ಯಗಳ ಹುಲ್ಲುಗಳನ್ನು ಎಲ್ಲಾ ದಿಕ್ಕಿಗೂ ನೋಡದೇ, ಮುಂದೆ ಹೇಳುವ ಮಂತ್ರದಿಂದ ಇಡಬೇಕು । ಆ ಮಂತ್ರದಲ್ಲಿ ಹೇಳುವ ಗುರುತಿನಿಂದಲೇ, ಆ ದ್ರವ್ಯವನ್ನು ಹಾಕಬೇಕೆಂಬುದು ನಿಯಮವು ।

ತ್ವಾಮರ್ಜುನೌಷಧೀನಾಂ.....ಧಾತವೇ । ಎಂಬ ಮಂತ್ರದಿಂದ ಅರ್ಜುನಸಸ್ಯದ ಬುಡಸಹಿತ ಟೊಂಗೆಯನ್ನು ಪೂರ್ವದಿಕ್ಕಿಗೆ ಇಡಬೇಕು । ಅರ್ಜುನಸಸ್ಯ ಎಂದರೆ, ಮತ್ತಿಮರ ।

ದೂರ್ವಾಣಾಗ್.....ವಿರೋಹತು । ಮಂತ್ರದಿಂದ ದೂರ್ವೆಹುಲ್ಲನ್ನು ಉತ್ತರಕ್ಕೆ ಇಡಬೇಕು ।

ಕಾಶಾನಾಗ್.....ಪುನಃ । ಮಂತ್ರದಿಂದ ಕಾಶಹುಲ್ಲನ್ನು(ಜೊಂಡುಹುಲ್ಲು) ಪಶ್ಚಿಮಕ್ಕೆ ಇಡಬೇಕು ।

ದರ್ಭಾಣಾಗ್.....ಫಲಮ್ । ಮಂತ್ರದಿಂದ ದರ್ಭೆಯನ್ನು ದಕ್ಷಿಣಕ್ಕೆ ಇಡಬೇಕು । ಉಳಿದ ಇಟ್ಟಿಗೆಗಳನ್ನು ಲೋಕಂ ಪೃಣ.....ಸೀದ । ಎಂಬ ಮಂತ್ರಗಳಿಂದ ಮುಚ್ಚಬೇಕು । ಹಾಗೂ ಉಳಿದ ಇಟ್ಟಿಗೆಗಳನ್ನು ಲೋಕಂ ಪೃಣ ಮಂತ್ರದಿಂದಲೇ ಇಡಬೇಕು । ಇಟ್ಟಿಗೆಗಳ ಸಂಖ್ಯೆಯನ್ನು ಈ ಮೊದಲೇ ಹೇಳಿದ್ದೇವೆ । ಸಂಪೂರ್ಣ ಚಯನದ ಇಟ್ಟಿಗೆಗಳನ್ನು ೨ಳ ಮಂತ್ರಗಳಿಂದ ಇಟ್ಟು, ಮುಚ್ಚಿ, ಪಾದೇಷ್ಟಿಕೆಗಳಿಂದ ಉಳಿದ ಸಂಖ್ಯೆಯನ್ನು ಮುಂದೆ ಹೇಳುವ ಮಂತ್ರಗಳಿಂದ ಪೂರ್ತಿಗೊಳಿಸಬೇಕು । ತಾ ಅಸ್ಯ.....ದಿವಃ । ಮಂತ್ರದಿಂದ ದ್ವ್ಯಂಗುಳ ಅಥವಾ ತ್ರ್ಯಂಗುಳ ಪಕ್ಷವನ್ನು ಅನುಸರಿಸಿ ಸಂಖ್ಯಾಪೂರ್ತಿ ಮಾಡಬೇಕು । ಸ್ಮಶಾನಚಿತಿಗಿಂತ ಹೆಚ್ಚಿನ ಪ್ರಮಾಣದಿಂದ ಕೂಡಿದ ದ್ವ್ಯಂಗುಳ ಹಾಗೂ ತ್ರ್ಯಂಗುಳ ರೀತಿಯಿಂದ, ೧ ಮಳ ಅಳತೆಯ ಪ್ರಾದೇಶಮಾತ್ರವಾದ ಚತುರಶ್ರ(ಚೌಕ)ದ ಮೇಲೆ, ಮಂಡಿಯ ಎತ್ತರಕ್ಕೆ ಅಥವಾ ತೊಡೆಯ ಎತ್ತರಕ್ಕೆ ಅಥವಾ ಸೊಂಟದ ಎತ್ತರಕ್ಕೆ ಅಸ್ಥಿಕುಂಭವನ್ನು ಇಡಬೇಕು ।

ಸ್ಫಿಕ್ ಎಂದರೆ ಸೊಂಟ ಎಂದರ್ಥ । ಈ ೩ ಎತ್ತರ ಪ್ರಮಾಣದಲ್ಲಿ ಯಾವುದಾದರೂ ಒಂದು ಪ್ರಮಾಣವನ್ನು ಸ್ವೀಕರಿಸಿ, ಆ ಎತ್ತರಕ್ಕೆ ಮೊದಲು ತಂದ ಮಣ್ಣನ್ನು ತುಂಬಬೇಕು । ಸೊಂಟಕ್ಕಿಂತ ಎತ್ತರವಾದ ಅಳತೆಯಲ್ಲಿ ಚಿತಿಯನ್ನು ಮಾಡಬಾರದು । ಏಕೆಂದರೆ, ಸೊಂಟದ ಎತ್ತರವೇ ಸ್ಮಶಾನದಲ್ಲಿ ಅಂತಿಮ ಎತ್ತರವಾಗಿ ವಿಧಿಸಿದೆ । ಅಥವಾ ಪೂರ್ವಕ್ಕೆ ಎಷ್ಟು ಎತ್ತರವೋ, ಅಷ್ಟೇಎತ್ತರವನ್ನು ಉಳಿದ ದಿಕ್ಕಗಳಿಗೂ ಅಪ್ರದಕ್ಷಿಣೆಯಾಗಿ ಮಾಡಬೇಕು । ಪೂರ್ವಕ್ಕೆ ಚಿತಿಯು ಎಷ್ಟು ಎತ್ತರವೋ ಅದಕ್ಕಿಂತ ಸ್ವಲ್ಪಕಡಿಮೆ ಎತ್ತರವಿರಬೇಕು, ಚಿತಿಯ ಉಳಿದ ದಿಕ್ಕುಗಳ ಭಾಗಗಳು ।

ಕ್ರಮೇಣ ಯತ್ಪರಿಮಾಣಮುಚ್ಯತೇ ತತ್ಪಶ್ಚಾತ್ ಊರ್ಧ್ವಪರಿಮಾಣಂ ಭವತಿ । ಯದಾ ಸ್ಫಿಗ್ದಘ್ನಂ ಪೂರ್ವತಃ ತದಾ ಊರುದಘ್ನಂ ಪಶ್ಚಾತ್ । ಯದಾ ಊರುದಘ್ನಂ ಪೂರ್ವತಃ ತದಾ ಜಾನುದಘ್ನಂ ಪಶ್ಚಾತ್ । ಯದಾ ಜಾನುದಘ್ನಂ ಪೂರ್ವತಃ ತದಾ ವಿತಸ್ತಿಃ ಪಶ್ಚಾತ್ ಇತ್ಯಾದಿ ಏವಂ ಸರ್ವತ್ರ । ಯದಿ ದ್ಯಂಗುಳಂ ಪುರಸ್ತಾತ್ ಏಕಾಂಗುಳಂ ಪಶ್ಚಾತ್ ಸಂಭವತಿ । ಅಪಿ ವಾ ದ್ವ್ಯಂಗುಳಂ ಪುರಸ್ತಾತ್ ಸಮಂಭೂಮಿಂ ಪಶ್ಚಾತ್ ಇತ್ಯೇಕೇ ಮನ್ಯಂತೇ । ಏತೇನೈವ ಪರಿಮಾಣೇನ ತತಃ । ಶಂ ವಾತಃ....., ಇತಿ ಉದಪಾತ್ರೇಣ ಉದುಂಬರಶಾಖಯಾ ಸಹ ಹಸ್ತೇನ ಚಿತಿಂ ಅವೋಕ್ಷತಿ । ವಾಜ್ಮ ಆಸನ್.....,ಇತಿ ಪ್ರತ್ಯವರೋಹಣಂ ಜಪಿತ್ವಾ ಅವರೋಹ್ಯ ಇದಮೇವ ಮೇತೋಪರಾಂ.....,ಇತಿ ಚಿತಿರೂಪಂ ಅಗ್ನಿಂ ಉಪತಿಷ್ಠತೇ । ವರಣೋವಾರಯಾ....., ಇತಿ ವಾರುಣಶಾಖಾಂ ಪುರಸ್ತಾತ್ ನಿದಧಾತಿ । ವಿಧೃತಿರಸಿ....., ಇತಿ ವಿಧೃತಿಲೋಷ್ಟಂ ಉತ್ತರತಃ । ಶಿಷ್ಟಂ ಅಪನಮಸ್ಯತಿ । ಶಮಿಶಮಯಾ....., ಇತಿ ಶಮೀಶಾಖಾಂ ಪಶ್ಚಾನ್ನಿದಧಾತಿ । ಯವಯವಯಾಸ್ಮತ್.....,ಇತಿ ಯವಾಂ ದಕ್ಷಿಣತೋ ನಿದಧಾತಿ । ಅಥೈನಮುಪತಿಷ್ಠತೇ ಚಿತಿರೂಪಂ ಅಗ್ನಿಂ ।

ಕ್ರಮವಾಗಿ ಎಷ್ಟು ಎತ್ತರದ ಚಿತಿಯನ್ನು ಹೇಳಿದೆಯೋ, ಅದಕ್ಕನುಗುಣವಾಗಿ ಉಳಿದ ದಿಕ್ಕುಗಳ ಎತ್ತರವನ್ನು ವಿಧಿಸಿದೆ । ಒಂದುವೇಳೆ ಸೊಂಟದ ಎತ್ತರಕ್ಕೆ ಚಿತಿಯ ಪೂರ್ವಭಾಗವನ್ನು ಮಾಡಿದರೆ, ತೊಡೆಯಎತ್ತರಕ್ಕೆ ಚಿತಿಯ ಪಶ್ಚಿಮಭಾಗವನ್ನು ಮಾಡಬೇಕು । ಒಂದುವೇಳೆ ಚಿತಿಯಪೂರ್ವಭಾಗವನ್ನು ತೊಡೆಯ ಎತ್ತರಕ್ಕೆ ಮಾಡಿದರೆ, ಆಗ ಚಿತಿಯ ಪಶ್ಚಿಮಭಾಗವನ್ನು ಮಂಡಿಯ ಎತ್ತರಕ್ಕೆ ಮಾಡಬೇಕು । ಒಂದುವೇಳೆ ಚಿತಿಯ ಪೂರ್ವಭಾಗವನ್ನು ಮಂಡಿಯ ಎತ್ತರಕ್ಕೆ ಮಾಡಿದರೆ, ಆಗ ಚಿತಿಯಪಶ್ಚಿಮಭಾಗವನ್ನು ಒಂದು ಮಳದಷ್ಟು ಎತ್ತರ ಮಾಡಬೇಕು । ಈ ರೀತಿಯಾಗಿ ಎತ್ತರಗಳನ್ನು ಮಾಡಬೇಕು । ಒಂದುವೇಳೆ ದ್ವ್ಯಂಗುಳ ಅಳತೆಯನ್ನು ಚಿತಿಯ ಪೂರ್ವದಲ್ಲಿ ಮಾಡಿದರೆ, ೧ ಅಂಗುಳ ಪ್ರಮಾಣವನ್ನು ಪಶ್ಚಿಮಭಾಗದಲ್ಲಿ ಮಾಡಬೇಕು । ಅಥವಾ ದ್ವ್ಯಂಗುಳವನ್ನು ಪೂರ್ವದಲ್ಲಿ ಮಾಡಿದರೆ, ಭೂಮಿಗೆಸಮವಾಗಿ ಪಶ್ಚಿಮಭಾಗದಲ್ಲಿ ಮಾಡಬೇಕೆಂದು ಕೆಲವರ ಅಭಿಪ್ರಾಯ । ಈ ಅಳತೆಗಳಿಂದಲೇ ಚಿತಿಯನ್ನು ನಿರ್ಮಿಸಬೇಕು ।

ಶಂ ವಾತಃ.....ಸರ್ವಾಃ । ಈ ಮಂತ್ರದಿಂದ ನೀರಿನಪಾತ್ರೆಯಿಂದ ನೀರನ್ನು ತೆಗೆದುಕೊಂಡು, ಅತ್ತಿಮರದ ಟೊಂಗೆ ಮತ್ತು ಕೈಗಳಿಂದ ಪ್ರೋಕ್ಷಿಸಬೇಕು । ನಂತರ ವಾಜ್ಮ.....ಹಿಗ್ಂಸೀಃ । ಈ ಮಂತ್ರವನ್ನು ಹೇಳಿ, ಚಿತಿಯಿಂದ ಕೆಳಗಿಳಿಯಬೇಕು । ಇದಮೇವ.....ವರುಣೇನ ಚ । ಈ ಮಂತ್ರದಿಂದ ಚಿತಿರೂಪವಾದ ಅಗ್ನಿಯ ಉಪಸ್ಥಾನವನ್ನು ಮಾಡಬೇಕು । ವರುಣೋವಾರಯಾತ್.....ವನಸ್ಪತಿಃ । ಈ ಮಂತ್ರದಿಂದ ವಾರುಣಮರದ(ಹೊಳಲಕ್ಕಿಗಿಡ) ಶಾಖೆಯನ್ನು ಚಿತಿಯ ಪೂರ್ವಭಾಗದಲ್ಲಿ ಇಡಬೇಕು । ವಿಧೃತಿರಸಿ.....ದ್ವೇಷಾಗ್ಂಸಿ । ಈ ಮಂತ್ರದಿಂದ ವಿಧೃತಿಲೋಷ್ಟ(ಮಣ್ಣು)ವನ್ನು ಚಿತಿಯ ಉತ್ತರಕ್ಕೆ ಇಡಬೇಕು । ಶಮಿಶಮಯ.....ದ್ವೇಷಾಗ್ಂಸಿ । ಈ ಮಂತ್ರದಿಂದ ಶಮೀಮರದ ಶಾಖೆಯನ್ನು ಚಿತಿಯ ಪಶ್ಚಿಮಕ್ಕೆ ಇಡಬೇಕು । ಯವಯವಯ.....ದ್ವೇಷಾಗ್ಂಸಿ । ಈ ಮಂತ್ರದಿಂದ ಗೋಧಿಯನ್ನು ಚಿತಿಯ ದಕ್ಷಿಣದಲ್ಲಿ ಇಡಬೇಕು । ನಂತರ ಚಿತಿಯ ಉಪಸ್ಥಾನವನ್ನು,

ಪೃಥಿವೀಂ ಗಚ್ಛ....., ಇತ್ಯೇತೈಃ ಮಂತ್ರೈಃ ಇತಿ ಭಾಷ್ಯಕಾರಂ । ಪೃಥಿವೀಂಗಚ್ಛ ಇತ್ಯಾದಿ ಪ್ರತಿತಿಷ್ಠಾ ಶರೀರೈಃ ಇತ್ಯಂತಂ ಏಕೋಮಂತ್ರ ಇತಿ ಕೇಚಿತ್ । ಜಘನೇನ ಚಿತ್ಯಗ್ನಿಂ ಪ್ರತ್ಯಗಪವರ್ಗಂ ಉದಗಾಯತಾಃ ತಿಸ್ರಃ ಕರ್ಷೂಃ ಖಾತ್ವಾ ತಾಸು ಅಶ್ಮಭಿಃ ಸಿಕತಾಭಿಶ್ಚ ಉಪಕೀರ್ಯ ಅಯುಗ್ಭಿಃ ಉದಕುಂಭೈಃ ಅಪಃಪರಿಪ್ಲಾವ್ಯ ತಾಸು ಜ್ಞಾತಯಃ ಸಂಗಾಹಂತೇ ಅಶ್ಮನ್ವತೀ ರೇವತೀರಿತ್ಯೃಚಾ । ಜಘನೇನ ಕರ್ಷೂಃ ಪಲಾಶಶಾಖೇ ಶಮೀಶಾಖೇ ವಾ ದಕ್ಷಿಣೋತ್ತರೇ ತೋರಣವತ್ ನಿಖಾಯ ತಯೋಃ ಅಗ್ರೇ ದರ್ಭಮಯೇನ ಶುಲ್ಬೇನ ಬದ್ಧ್ವಾ, ಯದ್ವೈ ದೇವಸ್ಯ ಸವಿತುಃ,,, ಇತಿ ಋಚಾ ತಯೋರ್ಮಧ್ಯೇ ಸರ್ವೇಗಚ್ಛಂತಿ । ಅಧ್ವರ್ಯುಃ ಪಶ್ಚಾತ್ ಗಚ್ಛನ್ ಯಾ ರಾಷ್ಟ್ರಾದಿತಿ ಶಾಖೇ ವ್ಯುದಸ್ಯತಿ । ಅಪ ಉಪಸ್ಪೃಶೇತ್ । ಸರ್ವೇ ಜ್ಞಾತಯಃ ಅಧ್ವರ್ಯುಸಹಿತಾಃ ಯಜ್ಞೋಪವೀತಿನಃ ಉದ್ವಯಂ ತಮಸಸ್ಪರಿ ಇತಿ ಋಚಾ ಆದಿತ್ಯಂ ಉಪಸ್ಥಾಯ ಅನವೇಕ್ಷಮಾಣಾಃ ಚಿತ್ಯಗ್ನಂ ಅಪೋವಗಾಹಂತೇ ಧಾತಾ ಪುನಾತು ಸವಿತಾ ಪುನಾತು....., ಇತಿ ಮೃದಾಸ್ನಾತೀತ್ಯೇಕೇ ಅಗ್ನಿಚಿತಃ ಪತ್ಯ್ನಾ ಅಪಿಏವಂ ಸ್ವಾಮಿತ್ವ ಅವಿಶೇಷಾತ್ । ತತ ಉತ್ತಮ ಏವ ಅಹಃ ದ್ರವ್ಯತ್ಯಾಗ ಇತಿ । ಕರ್ಮಸಮೃದ್ಧ್ಯರ್ಥಂ

ಋದ್ಧ್ಯರ್ಥಂ ಚ ಬ್ರಾಹ್ಮಣಾನ್ ಭೋಜಯಿತ್ವಾ ತೇಭ್ಯೋ ದಕ್ಷಿಣಾಂ ಯಥಾಶಕ್ತಿ ದತ್ವಾ ಪುಣ್ಯಾಹಂ ವಾಚಯೇತ್ ॥ ಇತಿ ಸಮಾಪ್ತಂ ಲೋಷ್ಟಚಯನಂ ॥

ಪೃಥಿವೀಂಗಚ್ಛ..... ಈ ಮಂತ್ರದಿಂದ ಮಾಡಬೇಕೆಂಬುದು ಭಾಷ್ಯಕಾರರ ಅಭಿಪ್ರಾಯವು। ಪೃಥಿವೀಂಗಚ್ಛ.....ಶರೀರೈಃ । ಇದು ಒಂದೇ ಮಂತ್ರವೆಂದು ಕೆಲವರ ಅಭಿಪ್ರಾಯವಾಗಿದೆ। ಚಿತಿಯಹಿಂದೆ ಪಶ್ಚಿಮಕ್ಕೆ ಮುಗಿಯುವಂತೆ, ದಕ್ಷಿಣೋತ್ತರಕ್ಕೆ ಅಗಲವಾಗಿರುವಂತೆ ೩ ಗುಂಡಿಗಳನ್ನು ಮಾಡಿ । ಅದರಲ್ಲಿ ಕಲ್ಲು ಮತ್ತು ಮರಳನ್ನು ಹಾಕಿ । ಬೆಸಸಂಖ್ಯೆಯ ಕುಂಭಗಳಿಂದ ಆ ಗುಂಡಿಗೆ ನೀರನ್ನು ಹಾಕಿ । ಅದರಲ್ಲಿ ಜ್ಞಾತಿಗಳು, ಅಶ್ಮನ್ವತೀ ಮಂತ್ರದಿಂದ ಮುಳುಗು ಸ್ನಾನವನ್ನು ಮಾಡಬೇಕು । ಆ ಗುಂಡಿಯಹಿಂದೆ, ಮುತ್ತುಗ ಅಥವ ಬನ್ನಿಯ ಶಾಖೆಯಿಂದ ದಕ್ಷಿಣೋತ್ತರವಾಗಿ ತೋರಣವನ್ನು ಕಟ್ಟಿ । ಆ ಶಾಖೆಯ ತುದಿಯನ್ನು ದರ್ಭೆಯದಾರದಿಂದ ಕಟ್ಟಿ । ಯದ್ವೈ ದೇವಸ್ಯ ಮಂತ್ರದಿಂದ ಆ ತೋರಣದ ಅಡಿಯಲ್ಲಿ ಎಲ್ಲಾ ಜ್ಞಾತಿಗಳೂ ನುಗ್ಗಿಹೋಗಬೇಕು । ಕೊನೆಯಲ್ಲಿ ಹೋಗುವವನು, ಯಾ ರಾಷ್ಟ್ರಾತ್ ಮಂತ್ರದಿಂದ ಆ ತೋರಣವನ್ನು ಹಿತ್ತು ಹಾಕಿ, ಕೈ ತೊಳೆಯಬೇಕು । ನಂತರ ಎಲ್ಲರೂ ಕರ್ತೃವಿನ ಸಹಿತ ಉಪವೀತಿಗಳಾಗಿ ಆದಿತ್ಯನ ಉಪಸ್ಥಾನವನ್ನು ಉದ್ವಯಂ ಮಂತ್ರದಿಂದ ಮಾಡಬೇಕು । ನಂತರ ಚಿತಿಯನ್ನು ನೋಡದೇ ಸ್ಮಶಾನದಿಂದ ಹೊರಬಂದು, ಕೆರೆ ಮುಂತಾದವುಗಳಲ್ಲಿ ಸ್ನಾನ ಮಾಡಬೇಕು ।

ಕೆಲವುಜನರು ಧಾತಾಪುನಾತು ಮಂತ್ರದಿಂದ ಮಣ್ಣನ್ನು ತಿಕ್ಕಿಕೊಂಡು ಸ್ನಾನಮಾಡಬೇಕೆಂದು ಹೇಳುತ್ತಾರೆ। ಹೀಗೆ ಅಗ್ನಿಚಯನ ಮಾಡಿದವನಿಗೆ ಲೋಷ್ಟಚಯನವನ್ನು ಮಾಡಬೇಕು ಹಾಗೂ ಅವನ ಪತ್ನಿಗೂ ಹೀಗೇ ಮಾಡಬೇಕು । ಅವಳೂ ಇದಕ್ಕೆ ಸಮಾನ ಅಧಿಕಾರವುಳ್ಳವಳಾಗಿರುವುದರಿಂದ । ನಂತರ ಕೊನೆಯದಿನವೇ ದಕ್ಷಿಣೆ, ದಾನಗಳನ್ನು ಮಾಡಬೇಕು । ಈ ಕರ್ಮಸಮೃದ್ಧಿಗಾಗಿ, ಬ್ರಾಹ್ಮಣರ ಭೋಜನವನ್ನು ಮಾಡಿಸಿ, ಯಥಾಶಕ್ತಿ ದಕ್ಷಿಣೆ ಕೊಟ್ಟು, ಪುಣ್ಯಾಹವನ್ನು ಮಾಡಬೇಕು । ಇಲ್ಲಿಗೆ ಲೋಷ್ಟಚಯನ(ಇಷ್ಟಕಾಚಯನ)ವು ಮುಗಿಯಿತು ॥

****

9. ಬ್ರಹ್ಮಮೇಧ ಸಂಗ್ರಹ ಕಾರಿಕಾಃ

ಬ್ರಹ್ಮಮೇಧವಿಧಿಂ ವಕ್ಷ್ಯೇ ಸರ್ವಂ ತು ಪಿತೃಮೇಧವತ್ । ವಿಶೇಷೋ ವಕ್ಷ್ಯತೇ । ಹುತ್ವಾ ಪರೇಯುವಾಗ್ಂ ಸಂ ಇತ್ಯಥಃ ಸಗ್ರಹಾನ್ ದಶಹೋತ್ರಾದೀನ್ ಸರ್ವಾಂಶ್ಚ ಜುಹುಯಾತ್ತತಃ । ಪೂಷಾತ್ವಾದಿಷು ಭರ್ತಾಸನ್ ಭ್ರಿಯಮಾಣೋ ಅನುವಾಕತಃ ಪ್ರೇತಾನುಮಂತ್ರಣಂ ಕುರ್ಯಾದಿಯಂ ನಾರೀತ್ಯೃಚಾ । ತತಃ ಸೇನೇಂದ್ರಸ್ಯ ಅನುವಾಕೇನ ಪತ್ನೀಂ ಚ ಪರಿಪಾತಯೇತ್ । ಸುವರ್ಣಮಿತಿ ಸಂಮೃಜ್ಯ ದೇವಸ್ಯತ್ವೇತಿ ಅನುವಾಕತಃ । ಅಸವಾನೇನ ಸಂಮಾರ್ಗಃ ಕರಂಜೋಃ ಕಾಂಚನೇನತು । ಹಿರಣ್ಯಶಕಲಾನ್ಯೇತು ಸುವರ್ಣಮಿತಿ ಮಂತ್ರತಃ । ಬ್ರಹ್ಮೇಂದ್ರಮಿತಿ ಚ ಆಸ್ಯಕೊಣ್ಣೋಃ ಶತಂನಿಯುತ ಕರ್ಣಯೋಃ । ಸುವರ್ಣಂ ಕೋಶಮಿತ್ಯಸ್ಯ ಘ್ರಾಣೇ ದಕ್ಷಿಣಃ ಕ್ಷಿಪೇತ್ । ಇಂದ್ರೋರಾಜೇತಿ ಸರ್ವೇ ಚ ಅನುವಾಕಸ್ಯ ಶೇಷತಃ । ಅಗ್ನಿರ್ಯಜುರ್ಭಿಃ ಇತಿ ಅಂಗೇಷು ಅಧಪಾತ್ರಾಣಿ ಸಾದಯೇತ್ ।

ಬ್ರಹ್ಮಮೇಧದ ವಿಧಿಯನ್ನು ಹೇಳುತ್ತೇವೆ, ಎಲ್ಲ ವಿಧಿಗಳೂ ಪಿತೃಮೇಧದಂತೆಯೇ ಸಮ । ಆದರೆ ಬ್ರಹ್ಮಮೇಧದ ವಿಶೇಷ ಮಂತ್ರಗಳನ್ನು ಹೇಳುತ್ತೇವೆ । ಪರೇಯುವಾಗ್ಂ ಸಂ, ಎಂಬ ಮಂತ್ರಗಳಿಂದ ಹೋಮಿಸಿ, ಅದರ ಜೊತೆಯಲ್ಲಿಯೇ ಗ್ರಹಸಹಿತವಾದ ದಶಹೋತೃಮಂತ್ರಗಳಿಂದಲೂ ಹೋಮಿಸಬೇಕು (ಚಿತ್ತಿಸ್ರುಕ್ – ಪೃಥಿವೀಹೋತಾ ಅಗ್ನಿಹೋರ್ತಾ – ಸೂರ್ಯಂ ತೇ ಚಕ್ಷುಃ – ಮಹಾಹವಿಹೋರ್ತಾ – ವಾಗ್ಘೋತಾ) । ಪೂಷಾ ತ್ವಾ, ಎಂಬ ಮಂತ್ರಗಳ ಜೊತೆ ಭರ್ತಾಸನ್, ಎಂಬ ಅನುವಾಕವನ್ನು ಹೇಳಿ, ಅಲ್ಲಿ ಹೇಳಿರುವ ವಿಧಿಯನ್ನು ಮಾಡಬೇಕು, ಹಾಗೆಯೇ ಇಯಂ ನಾರೀ, ಎಂಬ ೩ ಮಂತ್ರಗಳಿಂದ ಪ್ರೇತನ ಅನುಮಂತ್ರಣ ಮಾಡಬೇಕು । ಹಾಗೆಯೇ ಸೇನೇಂದ್ರಸ್ಯ, ಎಂಬ ಅನುವಾಕವನ್ನು ಹೇಳಿ, ಮೃತನ ಪತ್ನಿಯನ್ನು ಶವದ ಪಕ್ಕ ಮಲಗಿಸಬೇಕು । ಸುವರ್ಣಂ, ಎಂಬ ಹಾಗೂ ಅದರಜೊತೆ ದೇವಸ್ಯತ್ವಾ, ಎಂಬ ಅನುವಾಕದಿಂದ ಸತ್ತವನ ಕೈಯನ್ನು ಚಿನ್ನದಿಂದ ಸವರಬೇಕು । ಚಿನ್ನದ ಕಡ್ಡಿಗಳನ್ನು ಸುವರ್ಣಂ, ಎಂಬ ಮಂತ್ರದಿಂದ ಹಾಕಬೇಕು । ಬ್ರಹ್ಮೇಂದ್ರಮಗ್ನಿಂ, ಎಂಬ ಮಂತ್ರದಿಂದ ಮೃತನ ಮುಖ, ಕಣ್ಣುಗಳಿಗೆ

ಹಾಗೂ ಶತಂ ನಿಯುತಃ, ಎಂಬ ಮಂತ್ರದಿಂದ ೨ ಕಿವಿಗಳಿಗೆ ಚಿನ್ನವನ್ನು ಹಾಕಬೇಕು। ಸುವರ್ಣಂಕೋಶಂ, ಎಂಬ ಮಂತ್ರದಿಂದ ಬಲಮೂಗಿಗೆ ಹಾಕಬೇಕು। ಇಂದ್ರೋರಾಜ, ಎಂಬ ಮಂತ್ರವನ್ನು ಅನುವಾಕ ಪೂರ್ತಿಹೇಳಿ, ಎಡಮೂಗಿಗೆ ಹಾಕಬೇಕು । ಅಗ್ನಿರ್ಯಜುರ್ಭಿಃ, ಎಂಬ ಮಂತ್ರಾನುವಾಕದಿಂದ ಉಳಿದ ಎಲ್ಲಾ ಅಂಗಗಳಮೇಲೂ ಅಗ್ನಿಹೋತ್ರದ ಮತ್ತು ಇಷ್ಟಿಯ ಪಾತ್ರೆಗಳನ್ನು ಕೆಳಮುಖವಾಗಿ ಮೃತನ ದೇಹದಮೇಲೆ ಇಡಬೇಕು ।

ಏಕೈಕ್ಯೇನತು ವಾಕ್ಯೇನ ಯಥೋಕ್ತಂ ಪಾತ್ರಸಾದನಂ। ಪಾತ್ರಾಣಾಂ ಪರಿಶಿಷ್ಟಾನಾಂ ಪುನರಾವರ್ತಯೇತ್ಕ್ರಮಾತ್ । ಮೈನಾದೀನಾ ದಹೇತ್ ಪೂರ್ವಂ ಜ್ಯೋತಿಷ್ಮತೀಭಿರಂತತಃ। ಸೂರ್ಯಂತ ಇತಿ ಉಪಸ್ಥಾಯ ಸಹಸ್ರಾದ್ಭ್ಯಸ್ಸಮಿತ್ಯಥ। ಉಪಸ್ಥಾಯಾನುವಾಕಾಭ್ಯಾಂ ಅಜೋಭಾಗದ್ವಯೇನ ತು। ಅನುಮಂತ್ರೈಕ ಹೋತಾ ಚ ಅಗ್ನಯೇ ಚಿತ್ತಮಿತ್ಯಥ । ಹವಿರಾಹುತಿಂ ಚ ಜುಹುಯಾತ್ ತತಃ ಪಶ್ಚಾತ್ ಸ್ರುವಾಹುತಿಃ। ಯ ಏತಸ್ಯೇತಿ ಹುತ್ವಾಥ ಪ್ರಯಾಸಾಯಾನುವಾಕತಃ। ಪ್ರಕೇತುನೇತಿ ಶಂಸಿತ್ವಾ ಹರಿಗ್ಂ ಹರಂತಂ ಇತ್ಯಥ। ಅಶ್ಮನ್ವತೀಃ ಆಪ್ಯಾಯಸ್ವಮೇತಿ ಸಂಗಾಹನಂ ತತಃ। ಉದ್ವಯಂ ತರಣೇತ್ಯಾಭ್ಯಾಂ ಉಪಸ್ಥಾಯ ದಿನೇಶ್ವರಂ। ಧಾತಾತು ತ್ವಷ್ಟ ಇತ್ಯುಕ್ತ್ವಾ ಸ್ನಾನಮನ್ಯತ್ ಸಮಂಭವೇತ್ ॥

ಹೇಗಿಡಬೇಕೆಂದರೆ, ಈ ಅಗ್ನಿರ್ಯಜುರ್ಭಿಃ, ಎಂಬ ಅನುವಾಕದ ಒಂದೊಂದು ವಾಕ್ಯದಿಂದ ಒಂದೊಂದು ಪಾತ್ರೆಯನ್ನು ಇಡಬೇಕು। ಒಂದುವೇಳೆ ಮಂತ್ರಕ್ಕಿಂತ ಪಾತ್ರೆಗಳು ಹೆಚ್ಚಿದ್ದರೆ, ಕ್ರಮವಾಗಿ ಮಂತ್ರಗಳನ್ನು ಪುನಃ ಆವೃತ್ತಿಮಾಡಿ ಉಳಿದ ಪಾತ್ರೆಗಳನ್ನು ಇಡಬೇಕು । ಮೈನಮಗ್ನೇ, ಎಂಬ ಮಂತ್ರದಿಂದ ಮೊದಲು ದಹನ ಮಾಡಬೇಕು, ಹಾಗೂ ಜ್ಯೋತಿಷ್ಮತೀ, ಎಂಬ ಮಂತ್ರಗಳಿಂದ ದಹನಕ್ರಿಯೆಯನ್ನು ಪೂರ್ತಿಗೊಳಿಸಬೇಕು। ಸೂರ್ಯಂತೇ, ಎಂಬ ಮಂತ್ರದಿಂದ ಚಿತೆಯ ಅಗ್ನಿಯನ್ನು ಉಪಸ್ಥಾನ ಮಾಡಬೇಕು, ಹಾಗೆಯೇ ಸಹಸ್ರಶೀರ್ಷ ಮತ್ತು ಅದ್ಭ್ಯಸ್ಸಂಭೂತ, ಎಂಬ ಮಂತ್ರಗಳಿಂದಲೂ ಉಪಸ್ಥಾನ ಮಾಡಬೇಕು। ಅಜೋಭಾಗ ಎಂಬ ೨ ಮಂತ್ರಗಳಿಂದಲೂ ಮಾಡಬೇಕು। ಬ್ರಾಹ್ಮಣ

ಏಕಹೋತಾ, ಮತ್ತು ಚಿತ್ತಗ್ಂ, ಎಂಬ ಅನುವಾಕದಿಂದಲೂ ಶವವನ್ನು ಹವಿಸ್ಸನ್ನಾಗಿ ಅಗ್ನಿಗೆ ಹೋಮಿಸಬೇಕು । ನಂತರ ಸ್ರುವಾಹುತಿಗಳನ್ನು ಕೊಡಬೇಕು । ಯ ಏತಸ್ಯ, ಹಾಗೂ ಪ್ರಯಾಸಾಯ, ಎಂಬ ಮಂತ್ರಗಳಿಂದ ಹೋಮಿಸಬೇಕು । ಪ್ರಕೇತುನಾ, ಹಾಗೂ ಹರಿಗ್ಂ, ಎಂಬ ಮಂತ್ರಗಳಿಂದಲೂ ಮತ್ತೂ ಅಶ್ಮನ್ವತೀ ರೇವತೀ, ಮತ್ತು ಆಪ್ಯಾಯಸ್ವ, ಮಂತ್ರಗಳಿಂದಲೂ ಸಹ ಮುಳುಗುಸ್ನಾನ ಮಾಡಬೇಕು । ನಂತರ ಉದ್ವಯಂ, ಮತ್ತು ತರಣಿರ್ವಿಶ್ವದರ್ಶತಃ, ಎಂಬ ೨ ಮಂತ್ರಗಳಿಂದಲೂ ಸೂರ್ಯನ ಉಪಸ್ಥಾನ ಮಾಡಬೇಕು । ಧಾತಾದದಾತು, ಮತ್ತು ತ್ವಷ್ಟ ಯೋ, ಎಂಬ ಮಂತ್ರಗಳನ್ನು ಹೇಳಬೇಕು ॥

****

10. ಅಗ್ನಿಗುಪ್ತಿ ಹೋಮಃ

ಏವಮಾ ಶರೀರಸ್ಯಾಗ್ನಿಭಿಃ ಸಗ್ಂಸ್ಪರ್ಶನಾತ್ । ಶರೀರಾನಯನಾದರ್ವಾಕ್ಕಾಲ ಸನ್ನಿಪಾತೇಪಿ ಯಾವಜ್ಜೀವ ಶ್ರುತೇಸ್ತಸ್ಯ ನಿತ್ಯಾನಿವರ್ತಂತೇ ದರ್ಶಪೂರ್ಣಮಾಸಾದೀನಿ – ಅಗ್ನಿಹೋತ್ರಹೋಮಸ್ತು ಕರ್ತವ್ಯಃ ಅಗ್ನಿರಕ್ಷಣಾರ್ಥತ್ವಾತ್ । ಅಗ್ನೇಸ್ಸಕಾಶೇ ಮೃತಸ್ಯಾಪಿ ಅಸಂಸ್ಕಾರಾದೇವಂ ಅಗ್ನಿಹೋಮಃ ಕರ್ತವ್ಯಃ । ಏವಮಗ್ನಿಹೋತ್ರೇ ಹೂಯಮಾನೇ ಸನ್ನಿಹಿತ ದೇಶಾಂತರ ಮೃತಸ್ಯಾಹಿತಾಗ್ನೇಶ್ಶರೀರಂ ತೈಲದ್ರೋಣ್ಯಾಂ ಸಮವಧಾಯ ಶಕಟೇನಾಹರಂತಿ । ದೂರದೇಶೇತು ಲೌಕಿಕಾರಣಿಭ್ಯಾಮಗ್ನಿಂ ಮಥಿತ್ವಾ ತೇನ ದಗ್ಧ್ವಾ ಕೃಷ್ಣಾಜಿನೇsಸ್ತೀನುಪನಹ್ಯ ಅಹತೇನ ವಾಸಸಾ ಸಂವೇಷ್ಟ್ಯ ದೀರ್ಘವಂಶೇ ಪ್ರಬಧ್ಯ ಅನಡ್ವಾನಿ ದಧಾನಾಹ । ಪ್ರಯಾತಾ ಮೃಣ್ಮಯಪಾತ್ರೇಷು ಭುಂಜಾನಾ ಆಹೃತ್ಯ ಯಜಮಾನಗ್ರಾಮ ಸೀಮ್ನಿತಾನಿ ಪ್ರತಿಷ್ಠಾಪಯಂತಿ ।

ಈ ರೀತಿಯಾಗಿ, ಶರೀರಕ್ಕೆ ಅಗ್ನಿಗಳಿಂದ ಸ್ಪರ್ಶ ಮಾಡುವವರೆಗೆ ಶರೀರವನ್ನು ಮೃತಸ್ಥಳದಿಂದ ತರುವುದಕ್ಕಿಂತ ಮೊದಲಿನ ಕಾಲದಲ್ಲಿ, ದರ್ಶಪೂರ್ಣಮಾಸೇಷ್ಟಿಗಳು

ಸನ್ನಿಹಿತವಾದರೆ ನಿತ್ಯಕರ್ಮವಾದ್ದರಿಂದ ಅದನ್ನು ಮಾಡಲೇಬೇಕು। ಅಗ್ನಿಹೋತ್ರವನ್ನು ಆ ಕಾಲದಲ್ಲಿ ಅಗ್ನಿರಕ್ಷಣೆಗಾಗಿ ಮಾಡಬೇಕು। ಅಗ್ನಿಯ ಬಳಿಯಲ್ಲಿಯೇ ಅಗ್ನಿಹೋತ್ರಿಯು ಮೃತನಾದರೆ, ಸಂಸ್ಕಾರವಿಲ್ಲದೆ ಅಗ್ನಿಹೋಮವನ್ನು ಮಾಡಬೇಕು। ಈ ರೀತಿಯಾಗಿ ಅಗ್ನಿಹೋತ್ರವನ್ನು ಮಾಡುವಾಗ ಅದರ ಸಮೀಪದ ಜಾಗದಲ್ಲಿ ಅಗ್ನಿಹೋತ್ರಿಯು ಮೃತನಾದರೆ, ಅವನ ಶರೀರವನ್ನು ತೈಲದಲ್ಲಿ ಮುಳಿಗಿಸಿಟ್ಟು, ವಾಹನದಲ್ಲಿ ತರಬೇಕು। ಇನ್ನೊಂದು ವಿಧಾನದಲ್ಲಿ ಬಹಳದೂರದೇಶದಲ್ಲಿ ಮೃತನಾದರೆ, ಲೌಕಿಕಾರಣಿಯಿಂದ ಅಗ್ನಿಯನ್ನು ಕಡೆದು ಅದರಿಂದ ಶರೀರವನ್ನು ದಹಿಸಿ, ಕೃಷ್ಣಾಜಿನದಲ್ಲಿ ಆಹಿತಾಗ್ನಿಯ ಅಸ್ಥಿಗಳನ್ನು ಇಟ್ಟು, ಹೊಸದಾದ ಬಟ್ಟೆಯಿಂದ ಅದನ್ನು ಸುತ್ತಿ, ಒಂದು ಉದ್ದವಾದ ಕೋಲಿಗೆ ಅದನ್ನು ಕಟ್ಟಿ, ಕೆಳಗಿಡದೇ। ಪ್ರಯಾಣಮಾಡುತ್ತಾ, ಪ್ರಯಾಣಕಾಲದಲ್ಲಿ ದಿವಸಗಳು ಕಳೆಯುವುದಾದರೆ, ಆಗ ಮೃಣ್ಮಯ ಪಾತ್ರೆಯಲ್ಲಿ ಕರ್ತೃವು ಊಟಮಾಡುತ್ತಾ, ಅದನ್ನು ತಂದು ಮೃತನ ಗ್ರಾಮದ ಗಡಿಯಲ್ಲಿ ಇಡಬೇಕು।

ಆಗತೇ ಪ್ರತಿಷ್ಠಾಪಿತೇ ಶರೀರೇ ಪತ್ನೀ ಬ್ರಾಹ್ಮಣೇಭ್ಯಃ ಸರ್ವಯಜ್ಞಪಾತ್ರಾಣಿ ದತ್ವಾ, ಅಯಸ್ಮಯಾನಿ ಚ ಮೃಣ್ಮಯಾನ್ಯಪ್ಸು ಪ್ರಕ್ಷಿಪ್ಯ ದೃಷದುಪಲೇ ಪುತ್ರಾಯದತ್ವಾ। ಗೃಹಸ್ಥಿತಾನಗ್ನೀನ್ ಪ್ರತ್ಯಕ್ಷೀಣ ಪೈತೃಮೇಧಿಕ ಸಂಸ್ಕಾರಾರ್ಥಂ ನೀತ್ವಾऽಸ್ಥಿಸನ್ನಿಧಾವಾಯತನಾನಿ ಕಲ್ಪಯಿತ್ವಾ ತೇಷ್ವಗ್ನೀನ್ ಪ್ರತಿಷ್ಠಾಪ್ಯ। ಷಡ್ಗುಣಿತ ಷಡಬ್ದ ಪ್ರಾಯಶ್ಚಿತ್ತಂ ವಾ ಕೃತ್ವಾ, ಉತ್ಕ್ರಾಂತಿ ಗೋದಾನಾದಿ ಪಾತ್ರಚಯನ ವರ್ಜಂ ಪೈತೃಮೇಧಿಕಂ ಕುರ್ಯಾತ್। ಅಸ್ಮಿನ್ಪಕ್ಷೇ ಪಾತ್ರಾಣಾಂ ಚ ಯಾನ ದಾನಯೋರ್ವಿಕಲ್ಪಃ। ದದಾತ್ಯೇವಾಯಸ್ಮಯಾನಿ ಮೃಣ್ಮಯಾನ್ಯಪೋಭ್ಯವಹರಂತಿ। ಪುತ್ರಾಯ ದೃಷದುಪಲೇ ದದ್ಯಾತ್। ಅಗ್ನಿಸನ್ನಿಧೌ ಮೃತಸ್ಯ ಪಾತ್ರಚಯನಂ ನಿತ್ಯಂ॥

ನಂತರ ಪತ್ನಿಯು ಬ್ರಾಹ್ಮಣರಿಗೆ ಮೃತನ ಎಲ್ಲಾ ಯಜ್ಞಪಾತ್ರೆಗಳನ್ನೂ ಕೊಟ್ಟು, ಲೋಹ ಮತ್ತು ಮಣ್ಣಿನ ಯಜ್ಞಪಾತ್ರೆಗಳನ್ನೂ ನೀರಿಗೆ ಹಾಕಿ, ದೃಷತ್ – ಉಪಲ ಎಂಬ ಎರಡು ಪಾತ್ರೆಗಳನ್ನು ಮೃತನ ಮಗನಿಗೆ ಕೊಟ್ಟು। ಮನೆಯಲ್ಲಿ ಇರುವ ಮೃತನ

ತ್ರೇತಾಗ್ನಿಯನ್ನು ಪ್ರತ್ಯಕ್ಷವಾಗಿ ಪೈತೃಮೇಧಿಕ ಸಂಸ್ಕಾರವನ್ನು ಮಾಡುವುದಕ್ಕಾಗಿ ಕೊಂಡೊಯ್ದು, ಅಸ್ಥಿಯ ಬಳಿಯಲ್ಲಿ ವೇದಿ ಮತ್ತು ವಿಹಾರಗಳನ್ನು ನಿರ್ಮಿಸಿ, ಅದರಲ್ಲಿ ಮೂರು ಅಗ್ನಿಗಳನ್ನೂ ಸ್ಥಾಪಿಸಬೇಕು । ನಂತರ ಷಡಬ್ದಪ್ರಾಯಶ್ಚಿತ್ತವನ್ನು ಆರುಪಟ್ಟು ಹೆಚ್ಚು ಮಾಡಿಕೊಂಡು, ಉತ್ಕ್ರಾಂತಿ ಗೋದಾನಗಳನ್ನೂ ಮಾಡಿಕೊಳ್ಳಬೇಕು, ಪಾತ್ರಚಯನವನ್ನು ಬಿಟ್ಟು ಉಳಿದ ಎಲ್ಲಾ ಪೈತೃಮೇಧಿಕ ವಿಧಿಗಳನ್ನೂ ಮಾಡಬೇಕು । ಈ ಮೇಲೆ ಹೇಳಿದ ಪಕ್ಷದಲ್ಲಿ, ಪಾತ್ರೆಗಳನ್ನು ಕೊಂಡೊಯ್ಯುವುದು ಅಥವಾ ದಾನ ಮಾಡುವುದು ವಿಕಲ್ಪವಾಗಿದೆ । ಲೋಹದ ಯಜ್ಞಪಾತ್ರೆಗಳನ್ನು ದಾನ ಮಾಡಬೇಕು, ಮಣ್ಣಿನ ಪಾತ್ರೆಗಳನ್ನು ನೀರಿನಲ್ಲಿ ಹಾಕಬೇಕು । ಮೃತನ ಮಗನಿಗೆ ದೃಷತ್ – ಉಪಲ ಪಾತ್ರೆಗಳನ್ನು ಕೊಡಬೇಕು । ಅಗ್ನಿಸನ್ನಿಧಿಯಲ್ಲಿ, ಮೃತನ ಶರೀರವವನ್ನು ಸಂಸ್ಕಾರ ಮಾಡುವಾಗ ಪಾತ್ರಚಯನವು ನಿತ್ಯವು ॥

****

11. (ಪಲಾಶವಿಧಿಃ) ಪ್ರತಿಕೃತ ದಾಹಕ್ರಮಃ

ದೇಶಾಂತರಮೃತೇ ಪ್ರತಿಕೃತಿದಾಹೇ ಚಯನದಾನಯೋರ್ವಿಕಲ್ಪಃ । ಪತ್ನ್ಯ ಅಪ್ಯೇವಂ ಸ್ವಾಮಿತ್ವಾವಿಶೇಷಾತ್ । ಶರೀರಾಸ್ಥ್ನೋರಭಾವೇ ಪಲಾಶವೃಂತಾನಾಂ । ಪಲಾಶಪರ್ಣಾನ್ಯೇಷು ತಿಷ್ಠಂತಿ ತೇ ಪಲಾಶವೃಂತಾಃ । ತೇಷಾಂ ಷಷ್ಟ್ಯುತ್ತರಶತಾನ್ಯಾಹೃತ್ಯ ತೈಃ ಕೃಷ್ಣಾಜಿನೇ ಪುರುಷಾಕೃತಿಂ ಕರೋತಿ । ಪಲಾಶವಲ್ಕೈಃ ಕುಶೈರ್ವಾ ಸಂಧಿಷು ಸಂವೇಷ್ಟ್ಯ । ಚತ್ವಾರಿಗ್ಂಶತಾಶಿರಃ ಪ್ರಕಲ್ಪಯತೇ ದಶಭಿಃ ಗ್ರೀವಾಂ, ಪಂಚಾಶತ ಪಂಚಾಶತ್ಯೈಕೈಕಂ ಬಾಹುಂ ತೇಷಾಮೇವ ಪಂಚಭಿಃ ಪಂಚಭಿರಂಗುಲೀರುಪಕಲ್ಪಯತೇ । ತ್ರಿಂಶತ್ಯೋದರಂ, ಅಷ್ಟಾಭಿಶ್ಶಿಶ್ನಂ, ದ್ವಾದಶಭಿರ್ವೃಷಣೌ, ಸಪ್ತತ್ಯಾಸಪ್ತತ್ಯೈಕೈಕಂ ಪಾದಂ, ತೇಷಾಮೇವ ಪಂಚಭಿಃ ಪಂಚಭಿರಂಗುಲೀಃ ಪಾದಯೋರುಪಕಲ್ಪಯೇತ್ ॥

ದೇಶಾಂತರದಲ್ಲಿ ಅಗ್ನಿಹೋತ್ರಿಯು ಮೃತನಾಗಲಾಗಿ, ಅವನ ಪ್ರತಿಕೃತಿಯನ್ನು ದಹನ ಮಾಡುವ ಪ್ರಸಂಗ ಬಂದರೆ, ಪಾತ್ರಚಯನ ಮತ್ತು ದಾನವು ವಿಕಲ್ಪವು । ಏಕೆಂದರೆ

ಪತ್ನಿಗೂ ಕೂಡ ಮೃತ ಯಜಮಾನನಷ್ಟೇ ಸಮಾನವಾದ ಅಧಿಕಾರವು ಇರುವುದರಿಂದ। ಮೃತನ ದೇಹ ಅಥವ ಅಸ್ಥಿಗಳೂ ಸಿಗದಿದ್ದಾಗ, ಪಲಾಶ(ಮುತ್ತುಗ) ಮರದ ಎಲೆಯು ಯಾವುದರಿಂದ ನಿಂತಿದೆಯೋ ಅದೇ ಪಲಾಶವೃಂತಗಳು। ಆ ಪಲಾಶವೃಂತಗಳನ್ನು ೧೬೦ ಸಂಖ್ಯೆಯಲ್ಲಿ ತಂದು, ಅವುಗಳಿಂದ ಕೃಷ್ಣಾಜಿನದ ಮೇಲೆ ಮೃತಪುರುಷನ ಆಕೃತಿಯನ್ನು ಮಾಡಬೇಕು। ಪಲಶವಲ್ಕಗಳಿಂದ(ತ್ವಗಟೆ) ಅಥವಾ ದರ್ಭೆಗಳಿಂದ ಪುರುಷಾಕೃತಿಯ ಖಾಲಿಜಾಗಗಳಲ್ಲಿ, ಅದನ್ನು ಇಟ್ಟು, ತುಂಬಬೇಕು। ೪೦ ಪಲಾಶವೃಂತಗಳಿಂದ ಆ ಆಕೃತಿಯಲ್ಲಿ ತಲೆಯನ್ನು ನಿರ್ಮಿಸಬೇಕು, ೧೦ ಸಂಖ್ಯೆಯ ವೃಂತಗಳಿಂದ ಕುತ್ತಿಗೆಯನ್ನೂ, ೫೦ – ೫೦ ವೃಂತಗಳಿಂದ ೨ ಬಾಹುಗಳನ್ನೂ, ಆ ೨ ಬಾಹುಗಳಿಗೆ ೫ ೫ ವೃಂತಗಳಿಂದ ಬೆರಳುಗಳನ್ನು ನಿರ್ಮಿಸಬೇಕು। ೩೦ ವೃಂತಗಳಿಂದ ಉದರವನ್ನೂ, ೮ ವೃಂತಗಳಿಂದ ಶಿಶ್ನವನ್ನೂ, ೧೨ ವೃಂತಗಳಿಂದ ವೃಷಣವನ್ನೂ, ೭ – ೭ ವೃಂತಗಳಿಂದ ೨ ಪಾದಗಳನ್ನೂ, ೫ – ೫ ವೃಂತಗಳಿಂದ ೨ ಕಾಲುಗಳ ಬೆರಳುಗಳನ್ನೂ ನಿರ್ಮಿಸಬೇಕು।

ಪಲಾಶವೃಂತಾಭಾವೇ ಕುಶೈರ್ವಾ ಮೃತಪ್ರತಿಕೃತಿಂ ಕೃತ್ವಾ। ತಾಂ ಸ್ನಾಪಯಿತ್ವಾ, ಅಲಂಕೃತ್ಯ, ಅಂತರ್ವೇದ್ಯಾಂ ಕೃಷ್ಣಾಜಿನಂ ದಕ್ಷಿಣಾಗ್ರೀವಂ ಅಧರಲೋಮಮಾಸ್ತೀರ್ಯ ತಸ್ಮಿನ್ನೇವಮುತ್ತಾನಂ ನಿಪಾತ್ಯ। ಪತ್ತ್ರೋದಶೇನಾಹತೇನ ವಾಸಸಾ ಪ್ರಚ್ಛಾದ್ಯ, ಬಾಂಧವಾಃ ಸರ್ವತಃ ಪರ್ಯುಪವಿಶ್ಯ । ಅಯಮುಸಿ ನಾರಾಯಣಶರ್ಮಾ....., ಯಸ್ಯತ ಇಮೇ ಅಗ್ನಯ ಇತಿ ಮಂತ್ರೇಣಾಭಿಮೃಶಂತಿ, ತತಃ ಪ್ರೇತೇಮಾತ್ಯಾ ಇತ್ಯಾದಿ ಕರ್ಮ ಪ್ರತಿಪದ್ಯತೇ। ಉತ್ಕ್ರಾಂತಿ ಗೋದಾನಾದಿ ಸಮಾನಂ। ಪುನರಸ್ಥ್ನಾಂ ಲಾಭೇ। ಪುನಶ್ಚೇ ಚ ನ ಲಭ್ಯೇರನ್ ಅಸ್ಥೀನಿ ಚ ಕದಾಚನ ತದಭಾವೇ ಪಲಾಶಸ್ಯ ಸಂಭವೇ ಹಿ ಪುನಃ ಕ್ರಿಯಾ ಇತಿ। ತದಭಾವೇ, ಅಸ್ಥ್ನಾಂ ಅಭಾವೇ ಪಲಾಶವಿಧಿಃ ಕಾರ್ಯಃ ಸಂಭವೇ ಹಿ ಇತಿ। ಪುನರಸ್ಥ್ನಾಂ ಲಾಭೇ ಪುನರ್ದಾಹಃ ಕರ್ತವ್ಯಃ ಇತ್ಯರ್ಥಃ। ಸತ್ಯಾನ್ನ ಅಪ್ಯೇವಂ ಸ್ವಾಮಿತ್ವಾವಿಶೇಷಾತ್ ॥

ಪಲಾಶವೃಂತಗಳು ಸಿಗದಿದ್ದಾಗ, ದರ್ಭೆಗಳಿಂದ ಮೃತನ ಪ್ರತಿಕ್ರಿತಿಯನ್ನು ಮಾಡಬೇಕು। ಆ ಆಕೃತಿಗೆ ಸ್ನಾನಮಾಡಿಸಿ, ಅಲಂಕಾರ ಮಾಡಿ, ಅಂತರ್ವೇದಿಯಲ್ಲಿ,

ಕೃಷ್ಣಾಜಿನವನ್ನು ದಕ್ಷಿಣಾಭಿಮುಖವಾಗಿ, ಅದರ ಕೂದಲುಗಳು ಕೆಳಮುಖವಾಗಿರುವಂತೆ ಇಟ್ಟು । ಅದರಲ್ಲಿ ಈ ಪುರುಷಾಕೃತಿಯನ್ನು ಮೇಲ್ಮುಖವಾಗಿಟ್ಟು, ಪಾದದಿಂದ ಮುಖದವರೆಗೆ ಹೊಸದಾದ ಬಟ್ಟೆಯನ್ನು ಹೊದಿಸಿ, ಬಾಂಧವರೆಲ್ಲರೂ ಅದರ ಸುತ್ತ ಕುಳಿತು । ನಂತರದ ವಿಧಿಗಳನ್ನೂ (ಪ್ರೇತೇ ಅಮಾತ್ಯಾ ಇತ್ಯಾದಿ) ಮಾಡಬೇಕು । ಉತ್ಕ್ರಾಂತಿ ಗೋದಾನಾದಿಗಳೆಲ್ಲವೂ ಸಮಾನವೇ । ಈ ಕರ್ಮಗಳನ್ನು ಮಾಡಿದ ನಂತರದ ದಿನಗಳಲ್ಲಿ ಅಸ್ಥಿ / ದೇಹ ಸಿಕ್ಕಿದರೆ, ಆಗ ಮೊದಲಿನಿಂದ ದಾಹಾದಿ ಎಲ್ಲಾ ವಿಧಿಗಳನ್ನೂ ಪುನ: ಮಾಡಬೇಕು । ಒಂದುವೇಳೆ ಅಸ್ಥಿ ಅಥವ ದೇಹ ಸಿಗದಿದ್ದರೆ, ಆಗ ಪಲಾಶಸಮಿತ್ತುಗಳಿಂದ ಪುನರ್ದಾಹಾದಿ ಕರ್ಮಗಳನ್ನು ಮಾಡಬೇಕು । ತದಭಾವೇ ಎಂಬ ಪದಕ್ಕೆ, ಅಸ್ಥಿ ಅಥವ ದೇಹ ಸಿಗದಿದ್ದಾಗ ಎಂದರ್ಥ । ಸಂಭವೇ ಹಿ ಇತಿ ಎಂಬ ಪದಕ್ಕೆ, ಮತ್ತೆ ಅಸ್ಥಿ ಅಥವ ದೇಹ ಸಿಕ್ಕಿದರೆ, ಪುನರ್ದಾಹಾದಿಗಳನ್ನೂ ಮಾಡಬೇಕು ಎಂದರ್ಥ । ಏಕೆಂದರೆ ಲಾಭ – ಅಲಾಭಗಳಿಗೆ ಸ್ವಾಮಿತ್ವ ಮತ್ತು ಕರ್ತೃತ್ವವು ಸಮಾನವಾಗಿರುತ್ತವೆಯಾದ್ದರಿಂದ ॥

****

12. ಅಜ್ಞಾನಮೃತೌ (ಕಕ್ಷದಹನಂ)

ಅಜ್ಞಾನಮೃತೌ । ಯದಿ ಯಜಮಾನಃ ಪ್ರೋಷಿತೋ ಮೃತಃ ಕ್ವ ಮೃತ ಇತಿ ನ ಜ್ಞಾಯೇತ ತತೋ ಯಾಂ ದಿಶಂ ಪ್ರತಿಪ್ರಸ್ಥಿತೋ ಭವತಿ ತಸ್ಯಾಂ ದಿಶಿ ಯಃ ಕಕ್ಷಃ ಆಕೃಷ್ಣ ತೃಣ ಸಂಪನ್ನಭೂಮಿಃ, ಕಚ್ಯ ಇತ್ಯುಚ್ಯತೇ । ತಾಂ ಭೂಮಿಂ ತತ್ರಸ್ಥ ತೃಣಾನಿ ವಾಹನ್ಯಾಗ್ನಿಭಿಃ ತೂಷ್ಣೀಂ ದಹೇತ್ । ನ ಪಿತೃಮೇಧ ವಿಧಿನಾ । ಅಪಿ ವಾ ಪಲಾಶವೃಂತೈಃ ಪುರುಷಾಕೃತಿಂ ಕೃತ್ವಾ । ಪಿತೃಮೇಧವಿಧಿನಾ ತಾಂ ದಹೇತ್ । ಕಕ್ಷದಹನೇ ಪುರುಷಾಕೃತಿ ದಹನೇ ಚ ಉದಕದಾನಾದಿ ಸಮಾನಮ್ ॥

ಒಂದುವೇಳೆ ಮರಣಹೊಂದಿದ್ದು ಗೊತ್ತಾಗದೇ ಇದ್ದರೇ, ಎಂದರೆ – ಒಂದುವೇಳೆ ಯಜಮಾನನು ಪ್ರವಾಸಕ್ಕೆ ಹೋಗಿ, ಮರಣಹೊಂದಿದರೆ, ಹಾಗೂ ಎಲ್ಲಿ ಮರಣಹೊಂದಿದ ಎಂದು ಗೊತ್ತಾಗದಿದ್ದರೆ, ಆಗ ಅವನು ಯಾವ ದಿಕ್ಕಿಗೆ ಪ್ರವಾಸ

ಹೋದನೋ, ಆ ದಿಕ್ಕಿನಲ್ಲಿ ಕಪ್ಪುಹುಲ್ಲುಗಳನ್ನು ತುಂಡರಿಸಿದಂತಹ ಭೂಮಿಯನ್ನು ಕಕ್ಷ್ಯ ಅಥವಾ ಕಚ್ಯ ಎನ್ನುತ್ತಾರೆ । ಆ ಭೂಮಿಯನ್ನು ಹಾಗೂ ಅಲ್ಲಿರುವಂತಹ ಹುಲ್ಲುಗಳನ್ನು ದಾಹಾಗ್ನಿಯಿಂದ ಅಮಂತ್ರಕವಾಗಿ ಸುಡಬೇಕು । ಪಿತೃಮೇಧ ವಿಧಿಯಿಂದ ಅಲ್ಲ । ಅಥವಾ ಪಾಲಾಶ ಕಾಂಡ(ಕಡ್ಡಿ)ಗಳಿಂದ ಪುರುಷಾಕೃತಿಯನ್ನು ಮಾಡಿ, ಪಿತೃಮೇಧವಿಧಿಯಿಂದ ದಹನ ಮಾಡಬೇಕು । ಕಕ್ಷದಹನ ಮತ್ತು ಪುರುಷಾಕೃತಿ ದಹನಗಳಲ್ಲಿ, ಉದಕದಾನಾದಿಗಳು ಸಮಾನವಾಗಿವೆ ॥

****

13. ಪಿತೃಮೇಧ ಸಂಸ್ಕಾರಲೋಪಃ

ಪಕ್ಷದ್ವಯೇಪಿ ಸರ್ವಪಾತ್ರಾಣಾಂ ದಾಹಂ ಮೃಣ್ಮಯಾನ್ಯಪ್ಸು ಪ್ರಕ್ಷಿಪೇತ್ । ಸರ್ವತ್ರ ಪ್ರತಿಕೃತಿದಾಹೇ ಅಯಮಸ್ಯ ಸೋಯಸ್ಯತ ಇಮೇ ಅಗ್ನಯ ಇತಿ ಮಂತ್ರೋ ನಿಯತಃ ॥

ಕಕ್ಷದಹನ ಮತ್ತು ಪುರುಷಾಕೃತಿ ದಹನ ಈ ಎರಡು ವಿಧಾನಗಳಲ್ಲೂ ಎಲ್ಲಾ ಯಜ್ಞಪಾತ್ರೆಗಳ ದಾಹ ಹಾಗೂ ಮಣ್ಣಿನಪಾತ್ರೆಗಳನ್ನು ನೀರಿನಲ್ಲಿ ಹಾಕುವುದೂ ಸಮಾನ ವಿಧಾನವೇ । ಪ್ರತಿಕೃತಿದಾಹದಲ್ಲಿ, ಈ ಮೇಲಿನ ಮಂತ್ರವನ್ನು ಹೇಳಿ, ದಹಿಸಬೇಕು ॥

ಅಸ್ಮಿನ್ನೇವವಿಷಯೇ ವಿಶೇಷಃ –

ಯಸ್ಯಾಗ್ನಯೋ ವಿನಷ್ಟಾ: ನಾಂತರಾಗ್ನಿಸ್ಸಂಚರತಿ । ಯದಿ ಪೂರ್ವೋನುಗತಃ ಸಂಚರ್ಯಂ ಪಶ್ಚಾತ್ತರ್ಹಿ ಗತ ಇತಿನ್ಯಾಯೇನ ವಿಷ್ಟಾಗ್ನಯಸ್ತಂ । ಯಜಮಾನಂ ಪ್ರವಿಶಂತಿ ಅತ ಏವ ಶ್ರುತಿಃ ಆಧಾನಪ್ರಭೃತಿ ಯಜಮಾನ ಏವಾಗ್ನಯೋ ಭವಂತೀತಿ । ಔಪಾಸನೋ ಯಜಮಾನ ಇತಿ ಲಿಂಗಾಚ್ಚ । ಯಜಮಾನೋ ವಾ ಅಗ್ನೇರ್ಯೋನಿರಿತಿ ಶ್ರುತೇಶ್ಚ । ಯಸ್ಯಾಗ್ನಯೋ ನಧ್ರಿಯಂತೇ ಶರೀರಾಸ್ಥ್ನೋರಭಾವೇ ಪ್ರತಿಪತ್ಯರ್ಧ ಮನೋನ್ಯಸ್ಯಾಪೇಕ್ಷಿತತ್ವಾತ್ ಪ್ರೇತಾಧಾನೇನ ಅಗ್ನ್ಯುತ್ಪತ್ತೇರಶಕ್ಯತ್ವಾತ್ ಪಿತೃಮೇಧ

ಸಂಸ್ಕಾರಸ್ಯ ಲೋಪಃ ॥ ಕಿಂ ತು ಉದಕದಾನಾದ್ಯೇವ ಭವತಿ ॥ ಪಿತುಃ ಪುತ್ರೇಣ ಕರ್ತವ್ಯಾಃ ಪಿಂಡದಾನೋದಕ ಕ್ರಿಯಾ ಇತಿ ಸ್ಮೃತೇಃ ॥

ಯಾರ ಅಗ್ನಿಗಳು ನಷ್ಟವಾಗಿವೆಯೋ ಅವನು ಅಗ್ನಿಗಳ ನಡುವೆ ಸಂಚರಿಸುವುದಿಲ್ಲ । ಮೊದಲೇ ಅಗ್ನಿಗಳು ನಾಶವಾಗಿದ್ದರೆ, ಸಂಚರಿಸಬೇಕಾದಂತಹ ಅಗ್ನಿಗಳು ಆ ಯಜಮಾನನ ದೇಹದಲ್ಲಿಯೇ ಪ್ರವಿಷ್ಟವಾಗಿವೆಯೆಂದು ನ್ಯಾಯದಿಂದ ಪ್ರವಿಷ್ಟಾಗ್ನಿಗಳುಳ್ಳವನಾಗುತ್ತಾನೆ । ಅಂತಹ ಯಜಮಾನನನ್ನು ಆಧಾನದಿಂದ ಆರಂಭಿಸಿ, ಯಜಮಾನನೇ ಅಗ್ನಿಸ್ವರೂಪನಾಗಿರುತ್ತಾನೆ ಎಂದು ವೇದವೇ ಹೇಳಿದೆ । ಔಪಾಸನಾಗ್ನಿಯ ಸ್ವರೂಪನು ಯಜಮಾನನು ಎಂಬ ಲಿಂಗವಿರುವುದರಿಂದ । ಹಾಗೂ ಯಜಮಾನನು ಅಗ್ನಿಗಳ ಕಾರಣನು, ಎಂಬ ಶ್ರುತಿಯಿರುವುದರಿಂದ । ಯಾರು ಅಗ್ನಿಯನ್ನು ಧಾರಣೆ ಮಾಡಿರುವುದಿಲ್ಲವೋ, ಅವನ ಮೃತ ಶರೀರ + ಅಸ್ಥಿಗಳು ಸಿಗದಿದ್ದಾಗ, ಅವನಿಗೆ ಪಿತೃಮೇಧಕರ್ಮವನ್ನು ಮಾಡಲು ಅಶಕ್ಯವಾಗಿರುವುದರಿಂದ, ಮತ್ತು ಇದರಿಂದ ಪ್ರಯೋಜನವೂ ಇಲ್ಲದಿರುವುದರಿಂದ, ಹಾಗೂ ಪ್ರೇತಾಧಾನವನ್ನೂ ಮಾಡಲೂ ಸಾಧ್ಯವಿಲ್ಲದ್ದರಿಂದ ಮೊದಲೆರಡುದಿನಗಳ ಲೋಪವು ಆಗುತ್ತದೆ ॥ ಆದರೆ ಉದಕದಾನಾದಿಗಳು ಉಂಟು । ಮಗನಿಂದ ತಂದೆಗೆ ಪಿಂಡದಾನ + ಉದಕಕ್ರಿಯೆಗಳು ಅವಶ್ಯವಾಗಿ ಮಾಡಲ್ಪಡಬೇಕು, ಇದು ಕರ್ತವ್ಯವು ಎಂದು ಸ್ಮೃತಿಯಿರುವುದರಿಂದ ॥

ಅಥೋದಕ ಕ್ರಿಯಾ । ಶಿಲಾಂ ಸಂಪಾದ್ಯ ಉದಕದಾನಾದ್ಯೌರ್ಧ್ವದೈಹಿಕಂ ಕರ್ತವ್ಯಂ ತಥಾ ಚ ಸ್ಮೃತಿಃ ॥ ಅಗ್ನೌತಿಸ್ಯಾದಥ ದೇಹತೃಪ್ತಿರಸ್ಥ್ಯಸ್ಥಿಚೇದಗ್ನಿರಪೇಕ್ಷಣೀಯಃ । ಅಸ್ಥ್ನಾಮಭಾವೇತ್ವತು ಶರೀರಕಸ್ಯ ವಿನಷ್ಟ ವಹ್ನೇರುದಕಕ್ರಿಯೈವ ಇತಿ ॥ ಇದಂ ವಚನಂ ಶರೀರಾಗ್ನ್ಯತ್ಪತ್ತಿ ನಿರಾಸಾರ್ಥಮಿತಿ ತ್ರೈವಿದ್ಯ ವೃದ್ಧೇನ ತಾಲವೃತಂ ನಿವಾಸಿನೋಕ್ತಂ । ಪತ್ನ್ಯಾ ಅಪ್ಯೇವಂ ಸ್ವಾಮಿತ್ವಾವಿಶೇಷಾತ್ । ಬ್ರಾಹ್ಮಣೇಭ್ಯ ಸರ್ವಪಾತ್ರಾಣಿ ದತ್ವಾ ಮೃಣ್ಮಯಾನ್ಯಪ್ಸು ಪ್ರಕ್ಷಿಪೇತ್ । ಪ್ರತಿಗೃಹೀತುರಪಿತೈಃ ಪಾತ್ರೈಃ ಸ್ವಕರ್ಮಾನುಷ್ಠಾನೇತು ನ ದೋಷಃ । ದಾನ ವಿಧಾನ ಸಾಮರ್ಥ್ಯತ್ ॥

ಇನ್ನು ಉದಕಕ್ರಿಯೆಯ ಬಗ್ಗೆ ಹೇಳುತ್ತೇವೆ । ಶಿಲೆಯನ್ನು ಸಂಪಾದಿಸಿ, ಉದಕದಾನಾದಿ ಔರ್ಧ್ವದೈಹಿಕ ಕರ್ಮವನ್ನು ಮಾಡಬೇಕೆಂದು ಸ್ಮೃತಿಯಲ್ಲಿದೆ ॥ ಶರೀರವು ಸಿಕ್ಕಿದರೆ, ಅಗ್ನಿದಾಹದಿಂದಲೇ ಶರೀರಕ್ಕೆ ತೃಪ್ತಿಯು, ಅಥವಾ ಅಸ್ಥಿಗಳು ಸಿಕ್ಕಿದರೂ ಅಗ್ನಿಯ ಅಪೇಕ್ಷೆಯುಂಟು । ಶರೀರವೂ ಅಸ್ಥಿಯೂ ಎರಡೂ ಸಿಗದಿದ್ದಾಗ, ಯಜಮಾನನ ಅಗ್ನಿಯ ನಾಶವಾಗುತ್ತದೆಯಾದ್ದರಿಂದ, ಅಲ್ಲಿ ಅಗ್ನಿಸಂಬಂಧವಾದ ಕರ್ಮಗಳು(ದಹನ – ಸಂಚಯನ) ಇರುವುದಿಲ್ಲ, ತರ್ಪಣಾದಿಗಳು ಉಂಟು । ಶರೀರ, ಅಸ್ಥಿಗಳ ಅಭಾವವು, ಅಗ್ನಿಯ ಉತ್ಪತ್ತಿಯನ್ನು ಬಾಧಿಸುತ್ತದೆಯೆಂದು, ಅಂಗಸಹಿತವಾಗಿ ಮೂರುವೇದಗಳನ್ನೂ ಅಧ್ಯಯನ ಮಾಡಿದ ಜ್ಞಾನಿಗಳು ಈ ಮಾತನ್ನು ಹೇಳಿದ್ದಾರೆ, ಹಾಗಾಗಿ ಇದೇ ನಿಯಮವು ಅನ್ವಯಿಸುತ್ತದೆ । ಪತ್ನಿಗೂ ಇದೇರೀತಿ ಅಗ್ನಿಯ ಅಧಿಕಾರವು ಸಮಾನವಾಗಿರುವುದರಿಂದ । ಆಗ ಬ್ರಾಹ್ಮಣರಿಗೆ ಎಲ್ಲಾ ಯಜ್ಞಪಾತ್ರೆಗಳನ್ನು ಕೊಟ್ಟು, ಮಣ್ಣಿನಪಾತ್ರೆಗಳನ್ನು ನೀರಿಗೆ ಹಾಕಬೇಕು । ದಾನಕೊಟ್ಟ ಪಾತ್ರೆಗಳಿಂದ ತನ್ನ ನಿತ್ಯಕರ್ಮಾನುಷ್ಠಾನವನ್ನು ದಾನತೆಗೆದುಕೊಂಡವನು ಮಾಡುವುದು ದೋಷವಲ್ಲ । ಏಕೆಂದರೆ ದಾನವನ್ನು ವಿಧಿಸಿದೆಯಾದ್ದರಿಂದ, ಹೀಗೂ ಮಾಡಬಹುದು ॥

****

14. ಆಹಿತಾಗ್ನೇರ್ದುರ್ದರಣ ವಿಷಯಃ

ಯದ್ಯಾಹಿತಾಗ್ನಿಃ ಪತಿತಸ್ಸನ್ ಔರ್ಧ್ವದೈಹಿಕ ಕ್ರಿಯಾನರ್ಹಸ್ಯಾತ್ । ತದಾಗ್ನೀನಪ್ಸು ಪ್ರಾಸ್ಯಾವಸಂಧ್ಯಂ ಚತುಷ್ಪದೇ ತ್ಯಕ್ತ್ವಾ, ಲೌಕಿಕಾಗ್ನಿನಾ ಪಾತ್ರಾಣಿ ದಹೇತ್ ।

ಆಹಿತಾಗ್ನಿಯು ಪತಿತನಾಗಿದ್ದರೆ, ಅವನು ಔರ್ಧ್ವದೈಹಿಕಕರ್ಮಕ್ಕೆ ಅಯೋಗ್ಯನಾಗುತ್ತಾನೆ । ಅಂತಹವನು ಸತ್ತಾಗ, ಅವನ ತ್ರೇತಾಗ್ನಿಗಳಿಗೆ ನೀರಿನ್ನು ಹಾಕಿ, ಅದನ್ನು ೪ ದಾರಿಗಳು ಸೇರುವಲ್ಲಿ ಹಾಕಬೇಕು, ನಂತರ ಲೌಕಿಕಾಗ್ನಿಯಿಂದ ಪಾತ್ರೆಗಳನ್ನು ದಹಿಸಬೇಕು ॥

ತಥಾ ಚ ಸ್ಮೃತಿಃ –

ವೈತಾನಂ ಪ್ರಕ್ಷಿಪೇದಪ್ಸ್ವಾವಸಥ್ಯಂ ಚತುಷ್ಪದೇ । ಪಾತ್ರಾಣಿ ತು ದಹೇದಗ್ನೌ ಯಜಮಾನೇ ವೃಥಾಮೃತ ಇತಿ ॥

ಅವನ ಶರೀರವನ್ನು ದಹಿಸುವ ಅಗ್ನಿಯನ್ನು ನೀರಿನಲ್ಲಿ ಹಾಕಿ, ೪ ರಸ್ತೆಗಳು ಕೂಡುವ ಜಾಗದಲ್ಲಿ ಬಿಡಬೇಕು । ಪಾತ್ರೆಗಳನ್ನು ಲೌಕಿಕಾಗ್ನಿಯಿಂದ ದಹಿಸಿ, ಅಪ್ರಯೋಜಕ ಯಜಮಾನ ಸತ್ತನೆಂದು ಭಾವಿಸಬೇಕು ॥

ಬ್ರಾಹ್ಮೇ ಚ –

ಪತಿತಾನಾಂ ನ ದಾಹಸ್ಯಾನ್ನಾಂತ್ಯೇಷ್ಟಿರ್ನಾಸ್ಥಿಸಂಚಯಃ । ಅಶ್ರುಪಾತ ಪಿಂಡೋ ವಾ ಕಾರ್ಯಂ ಶ್ರಾದ್ಧಾದಿ ಕ್ವಚಿತ್ ॥ ಏತಾನಿ ಪತಿತಾನಾಂ ತು ಯಃ ಕರೋತಿ ವಿಮೋಹಿತಃ । ತಪ್ತಕೃಚ್ಛ್ರದ್ವಯೇನೈವ ತಸ್ಯಶುದ್ಧಿರ್ನಚಾನ್ಯಥಾ ॥

ಪತಿತರಿಗೆ, ದಹನ ಅಂತ್ಯೇಷ್ಟಿ ಅಸ್ಥಿಸಂಚಯನಗಳು ಇಲ್ಲ । ಅವರಿಗಾಗಿ ಕಣ್ಣೀರಿಡುವುದಾಗಲೀ – ಪಿಂಡದಾನಗಳಾಗಲೀ – ಶ್ರಾದ್ಧಾದಿಗಳಾಗಲೀ ಇವುಗಳೂ ಇಲ್ಲ ॥ ಪತಿತರಿಗೆ ಈ ಎಲ್ಲಾ ಕರ್ಮಗಳನ್ನು ಯಾರು ಮಾಡುತ್ತಾರೋ । ಅವರಿಗೆ ೨ ತಪ್ತಕೃಚ್ಛ್ರಗಳಿಂದ ಮಾತ್ರವೇ ಶುದ್ಧಿಯು, ಬೇರೆ ವಿಧಾನಗಳಿಂದ ಶುದ್ಧಿಯಿಲ್ಲ ॥

ಸ್ಮೃತಿಚಂದ್ರಿಕಾಯಾಂ ತು –

ಆತ್ಮನಸ್ತ್ಯಾಗಿನಾಂ ನಾಸ್ತಿ ಪತಿತಾನಾಂ ತಥಾಕ್ರಿಯಾ । ತೇಷಾಮಪಿ ತಥಾ ಗಂಗಾತೋಯೇ ಸಂಸ್ಥಾಪನಂ ಮತಮ್ ॥ ಶರೀರಸ್ಯೇತಿ ಶೇಷಃ ॥ ಪತಿತಾನಾಂ ನ ದಾಹಸ್ಯಾತ್ ನ ಆಶೌಚಂ ನಾನ್ಯಕರ್ಮ ಚ । ನ ಚಾಶ್ರುಪಾತಃ ಪಿಂಡೋ ವಾ ಕಾರ್ಯಂ ಶ್ರಾದ್ಧಾದಿಕಂ ನ ಚ । ತೇಷಾಂ ಶರೀರಂ ಗಂಗಾಯಾಂ ಮಹಾನದ್ಯಾಂ ವಿನಕ್ಷಿಪೇತ್ ।

ಆತ್ಮಹತ್ಯೆ ಮಾಡಿಕೊಂಡವರಿಗೆ ಮತ್ತು ಪತಿತರಿಗೆ, ಔರ್ಧ್ವದೈಹಿಕಕ್ರಿಯೆ ಇಲ್ಲ । ಅಂತಹವರ ಮೃತಶರೀರವನ್ನು ಗಂಗಾನದಿಯಲ್ಲಿ ಬಿಡುವುದು ಸಮ್ಮತವು ॥ ಪತಿತರ(ಪಾತಕಿಗಳಿಗೆ) ಮರಣದಲ್ಲಿ, ದಾಹ – ಅಶೌಚ – ಔರ್ಧ್ವದೈಹಿಕ ಕರ್ಮಗಳೂ ಇಲ್ಲ । ಹಾಗೂ ಅಳುವುದೂ – ಪಿಂಡಕರ್ಮಗಳೂ – ಶ್ರಾದ್ಧಾದಿಗಳೂ ಇಲ್ಲ । ಅವರ ಮೃತದೇಹವನ್ನು ಗಂಗೆಯಲ್ಲೋ, ಬೇರೇ ಮಹಾನದಿಗಳಲ್ಲೋ ಹಾಕಬೇಕು ।

ತ್ರೇತಾಗ್ನಿನಪ್ಸು ನಿಕ್ಷಿಪ್ಯ, ಗೃಹ್ಯಾಗ್ನಿಂ ಚ ಚತುಷ್ಪದೇ । ದಹೇತ್ತು ಯಜ್ಞಪಾತ್ರಾಣಿ ಶವಾನಾಂ ಸ್ಪರ್ಶನೇ ಕೃತೇ । ಮಹಾಸಾಂತಪನಾಚ್ಛುದ್ಧಿರ್ಜ್ಞಾನಾತ್ತಪ್ತಂ ವಿಶೋಧನಂ ॥

ತ್ರೇತಾಗ್ನಿಗಳನ್ನು ನೀರಿನಲ್ಲಿ ಬಿಟ್ಟು, ಔಪಾಸನಾಗ್ನಿಯನ್ನು ಳ ದಾರಿ ಸೇರುವಲ್ಲಿ ಬಿಡಬೇಕು । ಯಜ್ಞಪಾತ್ರೆಗಳನ್ನು ಲೌಕಿಕಾಗ್ನಿಯಿಂದ ಸುಡಬೇಕು, ಹೇಗೆಂದರೆ – ಲೌಕಿಕಾಗ್ನಿಯಿಂದ ಶವಕ್ಕೆ ಅಗ್ನಿಸ್ಪರ್ಶ ಮಾಡಿದನಂತರ ಯಜ್ಞಪಾತ್ರೆಗಳನ್ನು ದಹಿಸಬೇಕು । ಪತಿತನ ಕರ್ಮವನ್ನು ಮಾಡಿದರೆ, ಕರ್ತೃವಿಗೆ ಮಹಾಸಾಂತಪನ ಕೃಚ್ಛ್ರದಿಂದ ಶುದ್ಧಿಯು, ತಿಳಿದೂ ಮಾಡಿದರೆ, ತಪ್ತಕೃಚ್ಛ್ರದಿಂದ ಶುದ್ಧಿಯು ॥

ತ್ರಿಕಾಂಡಿಃ –

ಪಿತುರ್ನ ನಾಮನಿರ್ದೇಶ್ಯಂ ಮಹಾಪಾತಕದೋಷಿನಃ । ಆವಾಹನಾದಿಕಾಲೇಷು ಕಿಂತು ತತ್ಪರಭಾವಿನಾಂ ॥ ಪಿತಾಮಹ ಪುರೋಗಾಣಾಂ ತ್ರಯಾಣಾಂ ನಾಮನಿರ್ದಿಶೇತ್ । ಪಿತಾಮಹೋಪಿ ದುಷ್ಪಶ್ಚೇತ್ ಪ್ರಪಿತಾಮಹಪೂರ್ವಕಾಃ ॥ ನಿರ್ದೇಷ್ಟವ್ಯಾಃ ತ್ರಯೋಮರ್ತ್ಯಾಃ ಶಿತಸ್ಮಿನ್ನಪಿ ವಿದೂಷಿತೇ । ಪ್ರಪಿತಾಮಹ ಪಿತ್ರಾದ್ಯಾಸ್ತ್ರಯೋವಾಚ್ಯಾ ಯಥಾಕ್ರಮಮ್ ॥ ದುಷ್ಪಶ್ಚೇನ್ಮಧ್ಯಮಃ ಕಶ್ಚಿತ್ತದ್ವರ್ಜ್ಯಾನ್ ಪೂರ್ವಪಶ್ಚಿಮಾನ್ । ತ್ರೀನೇವ ನಿರ್ದಿಶೇನ್ಮರ್ತ್ಯಾನ್ ಕಿಂ ತ್ವತ್ರೈತದ್ವಿಶಿಷ್ಯತೇ ॥

ತ್ರಿಕಾಂಡಿಗಳು ಹೀಗೆ ಹೇಳುತ್ತಾರೆ । ಮೃತನು ಮಹಾಪಾತಕಿಯಾಗಿದ್ದರೆ(ಬ್ರಹ್ಮಹತ್ಯ – ಸುರಾಪಾನ – ಗುರುತಲ್ಪಗಮನ – ಸ್ವರ್ಣಸ್ತೇಯ(ಚಿನ್ನವನ್ನು ಕದಿಯುವುದು) – ಇವರುಗಳ ಜೊತೆ ಧಾರ್ಮಿಕಸಂಬಂಧಪಿಟ್ಟುಕೊಳ್ಳುವವನು) । ಅವನ ಹೆಸರನ್ನು

ಆವಾಹನಾದಿ ಕಾಲದಲ್ಲಿ ಕರ್ತೃವು ಹೇಳಬಾರದು । ಈ ಮೃತನ ಮುಂದಿನ ೩ ತಲೆಗಳನ್ನು ಹೇಳಬೇಕು ॥ ಅಜ್ಜನಿಂದ ಮುಂದಿನ ೩ ತಲೆಯನ್ನು ಹೇಳಬೇಕು । ಅಜ್ಜನೂ ಮಹಾಪಾತಕಿಯಾಗಿದ್ದರೆ, ಆಗ ಅವನನ್ನೂ ಬಿಟ್ಟು, ಅವನಿಂದ ಮುಂದಿನ ೩ ತಲೆಗಳನ್ನು ಹೇಳಬೇಕು ॥ ಸಾಮಾನ್ಯವಾಗಿ ದೂಷಿತರಲ್ಲದಿದ್ದರೆ, ಮುತ್ತಜ್ಜನಿಂದ ತಂದೆಯವರೆಗಿನ ೩ ತಲೆಗಳನ್ನು ಕ್ರಮವಾಗಿ ಹೇಳಬೇಕು । ಮಧ್ಯಮ ಪಾತಕಿಯಾಗಿದ್ದರೆ, ಅವನನ್ನು ಬಿಟ್ಟು ಹಿಂದು-ಮುಂದಿನವರನ್ನು ಹೇಳಬೇಕು । ಒಟ್ಟಾರೆ ಹೇಗಾದರೂ ಮಹಾಪಾತಕಿಗಳಲ್ಲದ ೩ ಜನರನ್ನು ಕ್ರಮವಾಗಿ ಹೇಳಬೇಕು ಕರ್ಮದಲ್ಲಿ । ಇಲ್ಲಿ ಈ ವಿಷಯದಲ್ಲಿ ನಾವು ಹೇಳಿದ ರೀತಿಯನ್ನು ಅನುಸರಿಸಬೇಕು ॥

ವಿಜ್ಞಾನೇಶ್ವರೀಯೇ –

ಪಾಷಂಡಾದಿಹತೇ ತಾತೇ ಪತಿತೇ ಸಂಗವರ್ಜಿತೇ । ವ್ಯತ್ಯಕ್ರಮಾಚ್ಛಮೃತೇದೇಯಂ ಏಭ್ಯ ಏವ ದದಾತ್ಯಸೌ । ಪುತ್ರಃ ಪತಿತಸ್ಯ ಪಿತಾದಿಭ್ಯ ಏವಕುರ್ಯಾದಿತಿ । ಸಂಗವರ್ಜಿತಃ – ಸನ್ಯಾಸೀ, ಅಸೌ ಸನ್ಯಾಸಾತ್ಪೂರ್ವಂ ಪಾತಿತ್ಯಾಪೂರ್ವಂ ವಾ । ಏಭ್ಯ ಏವ ಪಿತ್ರಾದಿಭ್ಯಃ ಕರೋತಿ ತತ್ಪುತ್ರೋಪಿ ಸನ್ಯಾಸಾತ್ಪರತೇ ಭರಏವ ಪಿತ್ರಾದಿಭ್ಯಃ ದರ್ಶಶ್ರಾದ್ಧಂ ತರ್ಪಣಂ ಚ ಕುರ್ಯಾತ್ ॥

ಪಾಷಂಡಾದಿ(ಜಗಳ – ಕೊಲೆ – ಅನ್ಯಜಾತಿಯುವರಿಂದ ಸಾಯುವಿಕೆ,,, ಇವುಗಳಿಂದ)ಗಳಿಂದ ಸತ್ತರೆ ಅಥವಾ ಪತಿತನಾಗಿದ್ದರೆ ಅಥವ ಸಂಗವರ್ಜಿತನಾಗಿದ್ದರೆ । ವ್ಯತ್ಯಕ್ರಮದಿಂದ ಸತ್ತರೆ, ಇವರುಗಳಿಗೂ ಸಹಾ ಮೇಲೆ ಹೇಳಿದಂತೆಯೇ ಮಾಡಬೇಕು । ಪತಿತನಾದ ಮಗನು ಸತ್ತರೂ, ಅವನಿಗೂ ತಂದೆಯೇ ಮುಂತಾದವರು ಹೀಗೆಯೇ ಮಾಡಬೇಕು । ಸಂಗವರ್ಜಿತರು ಯಾರೆಂದರೆ – ಸನ್ಯಾಸೀ, ಸನ್ಯಾಸ ಮಾಡುವುದಕ್ಕಿಂತ ಮುಂಚೆ ಸನ್ಯಾಸಕ್ಕೆ ಸಾಧನೆ ಮಾಡುತ್ತಿರುವವನು ಹಾಗೂ ಪಾತಕಕೆಲಸಗಳನ್ನು ಮಾಡದೇ ಇರುವವನು । ಪಿತ್ರ್ಯಾದಿಗಳಿಗೆ ದರ್ಶಶ್ರಾದ್ಧ, ತರ್ಪಣಾದಿಗಳನ್ನು ಯಾರು ಮಾಡುತ್ತಾನೋ ಅವನೇ ನಿಜವಾದ ಮಗನು ಎಂಬ ಸ್ಮೃತಿವಾಕ್ಯವಿರುವುದರಿಂದ, ತನ್ನ ತಂದೆಯು ಸನ್ಯಾಸಿಯಾದರೂ ಕೂಡ ಅವರಿಗೂ ದರ್ಶಶ್ರಾದ್ಧ, ತರ್ಪಣಾದಿಗಳನ್ನು ಮಾಡಬೇಕು ।

ಸ್ಮೃತ್ಯಂತರೇ ಚ –

ವೃದ್ಧೇಪಿತರಿ ಸನ್ಯಸ್ತೇ ತಾತೇ ಚ ಪತಿತೇ ಸತಿ ಏಭ್ಯ ಏವ ಪಿತಾದದ್ಯಾತ್ತೇಭ್ಯೋ ದದ್ಯಾತ್ ಸ್ವಯಂ ಸುತಃ ॥

ತಂದೆಯು ಜೀವಿಸಿರಲಾಗಿ, ಅಥವಾ ತಂದೆಯು ಸನ್ಯಾಸಿಯಾಗಿ ಇರಲಾಗಿ ಅಥವ ತಂದೆಯು ಪತಿತನಾಗಿದ್ದರೆ, ಆಗ ತಂದೆಯು ಯಾರಿಗೆ ನಾಂದೀಶ್ರಾದ್ಧವನ್ನು(ಅಜ್ಜ – ಮುತ್ತಜ್ಜ – ತಾತಜ್ಜ) ಮಾಡುತ್ತಿರುತ್ತಾನೋ ಅವರಿಗೇ ಮಾಡಬೇಕು ॥

****

15. ದುರ್ಮರಣ ಪ್ರಾಯಶ್ಚಿತ್ತಂ

ದುರ್ಮೃತಸ್ಯ ಆಹಿತಾಗ್ನೇಃ ಸ್ಮಾರ್ತಪ್ರಾಯಶ್ಚಿತ್ತಂ ಧರ್ಮಶಾಸ್ತ್ರೋಕ್ತ ಪ್ರಕಾರೇಣ ಕೃತ್ವಾ । ಶ್ರೌತಪ್ರಾಯಶ್ಚಿತ್ತಂ ಚ ಕೃತ್ವಾ । ಪೈತೃಮೇಧಿಕಂ ಚ ಕುರ್ಯಾತ್ ॥ ಅಗ್ನಿಹೋತ್ರಾರ್ಥಂ ವಿಹೃತ ಆಹವನೀಯೇ ಜುಹುಯಾತ್ । ಸರ್ವತ್ರ ಚತುರ್ಗೃಹೀತವೇವ । ಯದ್ಯಾಹಿತಾಗ್ನಿರಶನಿಹತೋ ವ್ರಿಯೇತ ತದಾ ಅಗ್ನಿರ್ಮೂರ್ಧಾ....., ಭುವೋ ಯಜ್ಞಸ್ಯೇತಿ....., ದ್ವೇ ಚತುರ್ಗೃಹೀತೇ ಜುಹುಯಾತ್ । ಅಗ್ನಯ ಇದಂ ॥ ಯದಿ ಸರ್ಪ ವೃಶ್ಚಿಕಾದಿಭಿರ್ಮೃತಃ – ನಮೋ ಅಸ್ತು ಸರ್ಪೇಭ್ಯಃ...,, ಯೇ ದೋ ರೋಚನೇ...,, ಯಾ ಇಷವೋ...,, ಇತಿ ತ್ರಿಶ್ಚತುರ್ಗೃಹೀತಾಜ್ಯಾಹುತೀರ್ಜುಹುಯಾತ್ ॥

ದುರ್ಮರಣ ಹೊಂದಿದ ಆಹಿತಾಗ್ನಿಗೆ, ಧರ್ಮಶಾಸ್ತ್ರ ಹೇಳಿದ ರೀತಿಯಲ್ಲಿ, ಸ್ಮಾರ್ತಪ್ರಾಯಶ್ಚಿತ್ತವನ್ನು ಮಾಡಿ । ಶ್ರೌತಪ್ರಾಯಶ್ಚಿತ್ತವನ್ನೂ ಮಾಡಿ । ಪೈತೃಮೇಧಿಕಕರ್ಮವನ್ನು ಮಾಡಬೇಕು । ಹೇಗೆಂದರೆ – ಅಗ್ನಿಹೋತ್ರಕ್ಕಾಗಿ ಪ್ರಣಯನ ಮಾಡಿದ ಆಹವನೀಯದಲ್ಲಿ ಹೋಮಿಸಬೇಕು । ಎಲ್ಲಾ ಕಡೆಗಳಲ್ಲೂ ಚತುರ್ಗೃಹೀತವೇ । ಆಹಿತಾಗ್ನಿಯು ಒಂದುವೇಳೆ ಸಿಡಿಲಿನಿಂದ ಸತ್ತರೆ – ಆಗ ಅಗ್ನಿರ್ಮೂರ್ಧಾ..., ಮತ್ತು ಭುವೋಯಜ್ಞಸ್ಯ..., ಮಂತ್ರಗಳಿಂದ ಚತುರ್ಗೃಹೀತಾಜ್ಯದಿಂದ ಹೋಮಿಸಬೇಕು ।

ಅಗ್ನಯ ಇದಂ ಎಂದು ಉದ್ದೇಶತ್ಯಾಗವು । ಒಂದುವೇಳೆ ಹಾವು–ಚೇಳು ಮುಂತಾದ ವಿಷಗಳಿಂದ ಆಹಿತಾಗ್ನಿಯು ಸತ್ತರೆ – ನವೋ ಅಸ್ತು..., ಮುಂತಾದ ೩ ಮಂತ್ರಗಳಿಂದ ಹೋಮಿಸಬೇಕು ।

ಸರ್ವೇಭ್ಯ ಇದಂ । ಯದ್ಯಪ್ಸು ಮೃತಃ ಇಮಂ ಮೇ ವರುಣ..., ತತ್ತ್ವಾಯಾಮೀತಿ ದ್ವೇ..., ಚತುರ್ಗೃಹೀತೇನ ಜುಹುಯಾತ್, ವರುಣಾಯೇದಂ । ಯದಿ ವ್ಯಾಘ್ರೈರಸ್ಸಿಂಹೈರ್ಮೃತಃ, ಸಿಗ್ಂ ಹೇ ವ್ಯಾಘ್ರಃ.....ದುಂದುಭಾವಿತಿ ದ್ವೇ ಚತುರ್ಗೃಹೀತೇ ಜುಹುಯಾತ್, ತ್ವಿಷ್ಯಾ ಇದಂ । ಯದಿ ವರಾಹಾದಿಭಿರ್ಮೃತಃ, ದರ್ಗ್ಂ ಷ್ಟ್ರಾಭ್ಯಾಂ.....ಮಲಿಮ್ಲೂನ್ ಜಂಭ್ಯೈಃ, ಯೇ ಜನೇಷು ಮಲಿಮ್ಲುಚ ಇತಿ ದ್ವೇ ಚತುರ್ಗೃಹೀತೇ ಜುಹುಯಾತ್, ಅಗ್ನಯ ಇದಂ । ಯದಿ ಪಶುಭಿರ್ಹತಃ, ಆಗಾವೋ ಅಗ್ಮನ್.....ಇಂದ್ರೋ ಯಜ್ವನ ಇತಿ ದ್ವೇ ಚತುರ್ಗೃಹೀತೇ ಜುಹುಯಾತ್, ಗೋಭ್ಯ ಇದಂ । ಉಕ್ತೇಷು ಸರ್ವೇಷು ದುರ್ಮರಣೇಷು ಇಮಾನ್ಯೇವ ಪ್ರಾಯಶ್ಚಿತ್ತಾನಿ ಏತದೇವಾಸ್ಯ ಪ್ರಾಯಶ್ಚಿತ್ತಂ ಭವತೀತಿ ವಿಜ್ಞಾಯತ ಇತಿ ಸಂಕಲ್ಪ್ಯ । ಸೂತ್ರೇ – ಪೌನಃಪುಣ್ಯೇನ ಅಭಿದಾನಾತ್ । ನ ನು ಪ್ರಾಯಶ್ಚಿತ್ತಕಾಂಡೇ ಏಕಸ್ಮಿನ್ ದೋಷೇ ಶ್ರೂಯಮಾಣಾನಿ ಪ್ರಾಯಶ್ಚಿತ್ತಾನಿ ಸಮುಭ್ಯುಚ್ಚೀಯೇರನ್ ಇತಿ ಸಮುಚ್ಚಯಸ್ಯೋಕ್ತತ್ವಾತ್ ಶೌತಸ್ಮಾರ್ತಯೋಃ ಸಮುಚ್ಚಯ ಇತಿ ಚೇತ್ ಸತ್ಯಂ ।

ಶ್ರುತಿಲಕ್ಷಣಯೋರೇವ ಸಮುಚ್ಚಯಃ ನ ಶ್ರುತಿಸ್ಮೃತಿ ಲಕ್ಷಣಯೋಃ । ಕುತ್ರ ಶ್ರುತಿಲಕ್ಷಣಂ ಪ್ರಾಯಶ್ಚಿತ್ತಮಿತ್ಯುಪಕ್ರಮ್ಯ ಶ್ರೂಯಮಾಣಾನಿ ಪ್ರಾಯಶ್ಚಿತ್ತಾನಿ ಸಮಭ್ಯುಚ್ಚೀಯೇರನ್ನಿತ್ಯುಪಸಂಹಾರಾತ್ ಶ್ರೌತಾನಾಮೇವ ಸಮುಚ್ಚಯಃ । ನ ಸ್ಮಾರ್ತಾನಾಂ ಯಥಾ ಪಥಿಕೃದ್ವೈಶ್ವಾನರಯೋಃ । ನನ್ವಭಿನಿಮ್ರುಕ್ತಾಭ್ಯುದಿತ ಪ್ರಾಯಶ್ಚಿತ್ತಾದಿಷು ಭಾಷ್ಯಕಾರಾದಿಭಿಃ ಶ್ರೌತಸ್ಮಾರ್ತ ಸಮುಚ್ಚಯಸ್ಯೋಕ್ತತ್ವಾತ್ ಅತ್ರಾಪಿ ಸಮುಚ್ಚಯ ಇತಿಚೇತ್ ಮೈವಂ ತತ್ರ ಹಿ – ಅಭಿನಿಮ್ರುಕ್ತಾಭ್ಯುದಿತ ಕುನಖೀಶ್ಯಾವದನ್ನಗ್ರದಿಧಿಷೂ ಪರ್ಯಾಹಿತ ಪರಿವಿಷ್ಟ ಪರಿವಿತ್ತ ಪರಿವಿನ್ನ ಪರಿವಿವಿದಾನಾಂ ವಾ ಜುಹುಯಾತ್ ಅವಧಾರಣ ವಚನಸ್ಯಾಶ್ರವಣಾತ್ । ಅತ್ರ ತು

ಏತದೇವಾಸ್ಯೇತ್ಯವಧಾರಣ ಪುನರ್ವಚನಸ್ಯ ಪರಿಸಂಖ್ಯಾನಾತ್ತಸ್ಯೈವ ನ್ಯಾಯ್ಯತ್ವಾತ್ । ಕಿಂ ಚ ಶ್ರೌತಸ್ಮಾರ್ತಯೋಃ ವಿರೋಧೇ ಶ್ರುತಿರ್ಬಲೀಯಸ್ತ್ವಾದಿತ್ಯಲಂ ಕೇಚಿನ್ನ್ಯಾಯವಿದಃ ಸಮುಚಿನ್ವಂತಿ ತಥೈವ ಯುಕ್ತಿವಿಧಃ ಕಥಮಮೀಶಾಮಪಿ ಪುರುಷಾ ಪರಾಧತ್ವಾತ್ ಕರ್ಮಾಪರಾಧೇ ಶ್ರುತಿಲಕ್ಷಣಂ ಪುರುಷಾಪರಾಧೇತು ದ್ವಯಮಪೇಕ್ಷಣೀಯಂ । ತಥಾ ಶತದ್ವಯೀ ವ್ಯಾಖ್ಯಾಕಾರೋ ವ್ಯಾಚಕ್ಷೌ । ಸಮುಚ್ಚಯ ಪಕ್ಷೇ ಸ್ಮಾರ್ತಪ್ರಾಯಶ್ಚಿತ್ತಂ ।

ಆಹಿತಾಗ್ನಿ ಮತ್ತು ಅನಾಹಿತಾಗ್ನಿಗಳೆಲ್ಲರಿಗೂ ಈ ಮುಂದೆ ಹೇಳುವ ವಿಷಯವು ಸಮಾನವು । ಒಂದುವೇಳೆ ನೀರಿನಲ್ಲಿ ಮರಣಹೊಂದಿದರೆ, ಅದಕ್ಕೆ ಪ್ರಾಯಶ್ಚಿತ್ತವಾಗಿ ಇಮಂ ಮೇ ವರುಣ..., ಮತ್ತು ತತ್ತ್ವಾಯಾಮಿ ಎಂಬ ೨ ಮಂತ್ರಗಳಿಂದ ಚತುರ್ಗೃಹೀತಾಜ್ಯದಿಂದ ಹೋಮಿಸಬೇಕು । ಒಂದುವೇಳೆ ದುಷ್ಟಮೃಗಗಳಿಂದ ಮರಣಿಸಿದರೆ, ಸಿಗ್ಂ ಹೇ ವ್ಯಾಘ್ರ..., ಯಾ ರಾಜನ್ಯೇ..., ಎಂಬ ೨ ಮಂತ್ರಗಳಿಂದ ಚತುರ್ಗೃಹೀತಾಜ್ಯದಿಂದ ಹೋಮಿಸಬೇಕು । ತಿಷ್ಯಾ ಇದಂ ನಮಮ ಎಂಬುದು ಉದ್ದೇಶತ್ಯಾಗ । ಒಂದುವೇಳೆ ಹಂದಿ ಮುಂತಾದ ದಂತವಿರುವ ಪ್ರಾಣಿಗಳಿಂದ ಮರಣಿಸಿದರೆ, ದಗ್ಷ್ಟ್ರಾಭ್ಯಾಂ, ಯೇ ಜನೇಷು ಎಂಬ ೨ ಮಂತ್ರಗಳಿಂದ ಹೋಮಿಸಬೇಕು । ಅಗ್ನಿ ದೇವತೆಯು । ಹಸುಗಳಿಂದ ಮರಣಿಸಿದರೆ, ಆಗಾವ್ಯೋ, ಇಂದ್ರೋ ಯಜ್ವನೇ ಎಂಬ ೨ ಮಂತ್ರಗಳಿಂದ ಹೋಮಿಸಬೇಕು । ಗೋಭ್ಯ ಇದನಮಮ ।

ಹೇಳಿದ ಈ ಎಲ್ಲಾ ದುರ್ಮರಣಗಳಲ್ಲಿ ನಾವು ಹೇಳಿದಂತಹ ಪ್ರಾಯಶ್ಚಿತ್ತವನ್ನೇ ಮಾಡಿಕೊಳ್ಳಬೇಕು । ಇವುಗಳಿಗೆ ಇದೇ ಪ್ರಾಯಶ್ಚಿತ್ತಗಳೆಂದು ಸ್ಮೃತಿಗಳಲ್ಲಿ ತಿಳಿದುಬಂದಿದೆ । ಸೂತ್ರದಲ್ಲಿ ಈ ಮಂತ್ರಗಳನ್ನೇ ಹೇಳಿರುವುದರಿಂದ ಇವೇ ಪ್ರಾಯಶ್ಚಿತ್ತಗಳು । ಪ್ರಾಯಶ್ಚಿತ್ತ ಕಾಂಡದಲ್ಲಿ ಒಂದು ದೋಷಕ್ಕೆ ಕೇಳಿಬರುವ ಪ್ರಾಯಶ್ಚಿತ್ತಗಳನ್ನು ಶ್ರೌತಸ್ಮಾರ್ತ ಕರ್ಮಗಳಲ್ಲಿ ಸಮುಚ್ಚಯಮಾಡಿ ಹೇಳಬೇಕು ಎಂದು ಹೇಳಿದೆಯಲ್ಲಾ ಎಂಬ ಸಂಶಯಕ್ಕೆ ಉತ್ತರವು ಹೀಗಿದೆ । ಶ್ರುತಿ ಮತ್ತು ಲಕ್ಷಣಗಳಿಗೆ ಮಾತ್ರ ಸಮುಚ್ಚಯವೇ ಹೊರತು, ಶ್ರುತಿಸ್ಮೃತಿಗಳಿಗಲ್ಲ । ಎಲ್ಲಿ ಶ್ರುತಿಲಕ್ಷಣವಾದಂತಹ ಪ್ರಾಯಶ್ಚಿತ್ತವನ್ನು ಆರಂಭಿಸಿ

ಪ್ರಾಯಶ್ಚಿತ್ತಗಳನ್ನು ಹೇಳಿದರೆ, ಆ ಶ್ರುತಿಲಕ್ಷಣವಾದಂತಹ ಶ್ರೌತ ಪ್ರಾಯಶ್ಚಿತ್ತಗಳಿಗೆ ಪರಸ್ಪರ ಸಮುಚ್ಚಯವು । ಏಕೆಂದರೆ ಅವುಗಳನ್ನು ಸಮುಚ್ಚಯ ಮಾಡಬೇಕೆಂದು ಉಪಸಂಹಾರ ಮಾಡಿರುವುದರಿಂದ । ಸ್ಮಾರ್ತಲಕ್ಷಣಗಳಿಗೆ ಪಥಿಕೃತ್ ವೈಶ್ವಾನರ ಇಷ್ಟಿಯಂತೆ ಪರಸ್ಪರ ಸಮುಚ್ಚಯವು ಇರುವುದಿಲ್ಲ । ಇಲ್ಲಿ ಸೂರ್ಯಾಸ್ತಸಮಯದಲ್ಲಿ ಮಲಗುವವನು(ಅಭಿನಿಮ್ಲುಕ್ತ), ಸೂರ್ಯೋದಯಕಾಲದಲ್ಲಿ ಮಲಗುವವನು (ಅಭ್ಯುದಿತ) ಇವರಿಬ್ಬರಿಗೆ ಪ್ರಾಯಶ್ಚಿತ್ತಗಳನ್ನು ಭಾಷ್ಯಕಾರ ಮುಂತಾದವರು, ಶ್ರೌತಸ್ಮಾರ್ತ ಲಕ್ಷಣಗಳನ್ನು ಸಮುಚ್ಚಯ ಮಾಡಿ ಹೇಳಿದ್ದಾರಲ್ಲಾ ?, ಹಾಗೆಯೇ ಇಲ್ಲೂ ಕೂಡ ಸಮುಚ್ಚಯವಾಗಬೇಕಲ್ಲವೇ?, ಎಂಬ ಪ್ರಶ್ನೆಗೆ, ಹಾಗಲ್ಲ–, ಅಭಿನಿಮ್ಲುಕ್ತ ಅಭ್ಯುದಿತ – ಕುನಖಿ – ಶ್ವಾಪದ – ಅದ್ರಿದಿಧಿಷೂ – ಪರ್ಯಾಹಿತ – ಪರಿವಿಷ್ಟ – ಪರಿವಿತ್ತ – ಪರಿವಿನ್ನ – ಪರಿವಿವಿದ ಈ ದೋಷವುಳ್ಳವರಿಗೆ ಹೋಮ ಮಾಡಬೇಕು ಎಂದು ನಿಶ್ಚಯಗೊಳಿಸುವ ಮಾತು ಇಲ್ಲಿ ಕೇಳಿಬರದೇ ಇರುವುದರಿಂದ, ಇಲ್ಲಿ ಸಮುಚ್ಚಯವು ಆಗಿಲ್ಲ । ಈ ದೋಷಕ್ಕೆ ಇದೇ ಪ್ರಾಯಶ್ಚಿತ್ತ ಎಂದು ನಿಶ್ಚಯಗೊಳಿಸುವ ಪುನರ್ವಚನವು ಶ್ರೌತ ಲಕ್ಷಣಗಳಲ್ಲಿ ತೋರಿಬರುತ್ತಿರುವುದರಿಂದ, ಅದನ್ನೇ ಸಮುಚ್ಚಯ ಮಾಡುವುದು ನ್ಯಾಯಯುತವಾಗಿರುತ್ತದೆ । ಶ್ರೌತಸ್ಮಾರ್ತಗಳಿಗೆ ವಿರೋಧಬಂದರೆ, ಶ್ರೌತವೇ ಬಲವತ್ತರವಾಗುತ್ತದೆಯಾದ್ದರಿಂದ, ನ್ಯಾಯವಿದರು ಹೀಗೆ ನಿರ್ಣಯ ಮಾಡಿದ್ದಾರೆ । ಹಾಗೆಯೇ ಯುಕ್ತಿಗಳಲ್ಲೂ ಲಕ್ಷಣಗಳಲ್ಲೂ ಶ್ರೌತಕ್ಕೇ ಬಲವು । ಹೇಗೆತಾನೇ ಈ ಪುರುಷನ ಅಪರಾಧದಿಂದ ಕರ್ಮದದೋಷವು ಉಂಟಾಗಲಾಗಿ, ಶ್ರುತಿಲಕ್ಷಣವು ಈ ಹಿಂದೆ ಹೇಳಿದ ೨ ದೋಷಗಳಲ್ಲಿ ಅಪೇಕ್ಷಣೀಯವಾದೀತು ? । ಹೀಗೆಯೇ ಶತದ್ವಯೀ ವ್ಯಾಖ್ಯಾನಕಾರರು ವ್ಯಾಖ್ಯಾನ ಮಾಡಿರುತ್ತಾರೆ । ಸಮುಚ್ಚಯಪಕ್ಷದಲ್ಲಿ ಸ್ಮಾರ್ತಪ್ರಾಯಶ್ಚಿತ್ತವನ್ನು ಮಾಡುತ್ತಾರೆಂದು ಸ್ಮೃತಿಚಂದ್ರಿಕೆಯಲ್ಲಿ ಹೇಳಿದೆ ।

ಸ್ಮೃತಿಚಂದ್ರಿಕಾಯಾಂ –

ಪಾಷಂಡಮಾಶ್ರಿತಾಸ್ತೇನಾಭರ್ತೃಘ್ನಃ ಕಾಮುಗೋಳಿಕಾಃ । ಸುರಾಪ್ಯ ಆತ್ಮತ್ಯಾಗಿನ್ಯೋನಾಶೌಚೋದಕ ಭಾಗಿನಃ ॥

ವರ್ಣಾಶ್ರಮಧರ್ಮಗಳನ್ನು ಬಿಟ್ಟವರಾದ, ಗಂಡನನ್ನು ಸಾಯಿಸಿದವರು ಮತ್ತು ವೇಶ್ಯಾವೃತ್ತಿಯನ್ನು ಮಾಡುವವರು । ಹೆಂಡ ಕುಡಿಯುವವರು, ಆತ್ಮಹತ್ಯೆ ಮಾಡಿಕೊಂಡವರು, ಇವರೆಲ್ಲರಿಗೂ ಆಶೌಚ ಮತ್ತು ಉದಕಾದಿಗಳನ್ನು ಮಾಡಬಾರದು ॥

ಮನುಃ –

ವೃಧಾಸಂಕರ ಜಾತಾನಾಂ ಪ್ರವ್ರಕಾನುಚ ತಿಷ್ಠತಾಂ । ಆತ್ಮನಸ್ತ್ಯಾಗಿನಾಂ ಚೈವ ನಿವರ್ತೇತೋದಕಕ್ರಿಯಾಃ । ಪಾಷಂಡಮಾಶ್ರಿತಾನಾಂ ಚ ಚರಂತೀನಾಂ ಚ ನಾಮತಃ । ಗರ್ಭಭರ್ತ್ಯದ್ರುಹಾಂ ಚೈವ ಸುರಾಪಿನಾಂ ಚ ಯೋಷಿತಾಮಿತಿ । ಚಂಡಾಲಾತ್ ಉದಕಾತ್ ಸರ್ವಾದ್ಬ್ರಾಹ್ಮಣಾದ್ವೈದ್ಯುತಾತ್ತಥಾ । ದಂಷ್ಟ್ರಿಭ್ಯಶ್ಚ ಪಶುಭ್ಯಶ್ಚ ಮರಣಂ ಪಾಪಕರ್ಮಣಾಂ । ಉದಕಂ ಪಿಂಡಂ ದಾನಂ ಚ ಪ್ರೇತೇಭ್ಯೋ ಯತ್ಪ್ರದೀಯತೇ । ನೋಪತಿಷ್ಠಂತಿ ತತ್ಸರ್ವಮಂತರಿಕ್ಷೇ ವಿನಶ್ಯತಿ । ನಾಶೌಚಂ ನೋದಕಂ ತೇಷಾಂ ನ ದೇಹಾದ್ಯಂತ ಕರ್ಮ ಚ । ಬ್ರಹ್ಮದಂಡ ಹತಾನಾಂ ಚ ನಕುರ್ಯಾತ್ ಕಟಿಧಾರಣಂ ।

ಶೂದ್ರಪುರುಷನಲ್ಲಿ ಬೇರೇಜಾತಿಯ ಹೆಂಗಸರಿಗೆ ಹುಟ್ಟಿದವರು ಮತ್ತು ಸನ್ಯಾಸಿಗಳಿಗೆ ಹುಟ್ಟಿದವರು । ಆತ್ಮಹತ್ಯೆ ಮಾಡಿಕೊಂಡವರು ಇವರಿಗೆ ನಿತ್ಯವಿಧಿ, ಆಶೌಚ, ತರ್ಪಣ, ಶ್ರಾದ್ಧಾದಿಗಳನ್ನು ಮಾಡಬಾರದು । ನಾಸ್ತಿಕವೃತ್ತಿಯನ್ನು ಆಚರಿಸುತ್ತಾ ಕೇವಲ ಹೆಸರಿಗೆ ಬ್ರಾಹ್ಮಣನಾದ, ತನ್ನ ಗಂಡನಿಗೆ ದ್ರೋಹ ಮಾಡಿದ, ಹಾಗೂ ಹೆಂಡವನ್ನು ಕುಡಿಯುವ, ಇಂತಹ ಸ್ತ್ರೀಯರಿಗೆ ಹಾಗೂ ಚಂಡಾಲನಿಗೆ ಹಾಗೂ ವೈದ್ಯವೃತ್ತಿಯನ್ನು ಆಶ್ರಯಿಸಿದವನಿಗೆ ಹಾಗೂ ದಂತವಿರುವಂತಹ ಪ್ರಾಣಿಗಳಿಂದ ತಮ್ಮ ಪಾಪಗಳಿಂದ ಸಾಯುವವರು । ಇವರೆಲ್ಲರಿಗೂ ಆಶೌಚ, ತರ್ಪಣ ಹಾಗೂ ಪ್ರೇತಕರ್ಮ ಯಾವುದನ್ನೂ ಮಾಡಬಾರದು । ಒಂದುವೇಳೆ ಮಾಡಿದರೂ, ಯಾವುದೂ ಫಲಿಸುವುದಿಲ್ಲ । ಅಂತಹವರಿಗೆ ಆಶೌಚವನ್ನು ಮತ್ತು ತರ್ಪಣ ಹಾಗೂ ಔರ್ಧ್ವದೈಹಿಕ ಕರ್ಮಗಳನ್ನೂ ಮಾಡಬಾರದು । ಬ್ರಹ್ಮದಂಡದಿಂದ(ರಾಜಾಜ್ಞೆಯಿಂದ) ಸತ್ತವರಿಗೂ ಶ್ರಾದ್ಧಾದಿಗಳನ್ನು ಮಾಡಬಾರದು ॥

ಆಪಸ್ತಂಬಃ –

ವ್ಯಾಪಾದಯೇತ್ ಯಥಾತ್ಮಾನಂ ಸ್ವಯಂ ಯೋಪ್ಸು ಉದಕಾದಿಭಿಃ ।
ವಿಹಿತತಸ್ಯನಾಶೌಚಂ ನಾಪಿಕಾರ್ಯೋದಕಕ್ರಿಯಾ ।

ಯಾರು ನೀರಿನಲ್ಲಿ ಮುಳುಗಿ ಆತ್ಮಹತ್ಯೆಯನ್ನು ಆಡಿಕೊಳ್ಳುತ್ತಾನೋ । ಅವನಿಗೆ ಆಶೌಚ, ತರ್ಪಣಾದಿಗಳು ಇಲ್ಲ ॥

ವಿಷ್ಣುಃ –

ಆತ್ಮನಸ್ತ್ಯಾಗಿನೋ ಯೇ ಚ ನಾಶೌಚೋದಕಭಾಗಿನಃ ।

ಆತ್ಮಹತ್ಯೆ ಮಾಡಿಕೊಂಡವನಿಗೆ ಆಶೌಚ, ತರ್ಪಣಾದಿಗಳು ಇಲ್ಲ ॥

ಗೌತಮಃ –

ಗೋ ಬ್ರಾಹ್ಮಣಹತಾನಾಂ ಅನುಕ್ಷಣಂ ರಾಜಕ್ರೋಧಾಚ್ಛಾಯುಧ ಪ್ರಾಯೋನಶನ ಶಸ್ತ್ರಾದಿ ವಹ್ನಿವಿಶೋದಕೋದ್ಬಂಧನ ಗಿರಿ ಪ್ರಪತನೈಶ್ಚೇಚ್ಛತಾಮಿತಿ । ಕ್ರೋಧಾತ್ಪ್ರಾಯಂ ವಿಷಂ ವಹ್ನಿಂ ಶಸ್ತ್ರಮುದ್ಬಂಧನಂಜಲಂ । ಗಿರಿವೃಕ್ಷ ಪ್ರಪಾತಂ ವಾ ಯೇ ಕುರ್ವಂತಿ ನರಾಧಮಾಃ । ಪತಿತಾನಾಂ ನ ದಾಹಸ್ಸ್ಯಾತ್ ನಾಶೌಚಂ ನಾಂತ್ಯಕರ್ಮ ಚ । ನಚಾಶ್ರುಪಾತಃ ಪಿಂಡೋ ವಾ ಕಾರ್ಯಂ ಶ್ರಾದ್ಧಾದಿಕಂ ಚ ನ । ಮಹಾಪಾತಕಿನೋ ಯೇ ಚ ಪತಿತಾಸ್ತೇ ಪ್ರಕೀರ್ತಿತಾಃ । ಪಾಷಂಡ್ಯಾದೀನಾಂ ಪ್ರಪತನಾಂ ತೈರ್ಬುದ್ಧಿಪೂರ್ವಕಮಾತ್ಮಘಾತುಕಾನಾಂ ಪುತ್ರಾದೇಶ್ಯವದರ್ಶನಂ ಆಶೌಚಂ । ನ ತು ದಹನಾದಿ ಪರ್ಯಂತಂ ವಿಧಿವದ್ದಹನಾದಿಕಂ ನ ಕುರ್ಯಾತ್ ಇತ್ಯರ್ಥಃ । ನನ್ವಯಂ ಚಂಡಾಲಾದಿ ಹತಾನಾಮಗ್ನಿಸಂಸ್ಕಾರ ನಿಷೇಧೋ ನಾಹಿತಾಗ್ನಿ ವಿಷಯಃ । ಆಹಿತಾಗ್ನಿ ವಿಷಯೇ ತು ಆಹಿತಾಗ್ನಿಮಗ್ನಿಭಿರ್ದಹತಿ ಯಜ್ಞಪಾತ್ರೈಶ್ಚ ದಹೇದಿತಿ ಶ್ರುತಿವಿಹಿತಾಗ್ನಿ ಯಜ್ಞಪಾತ್ರೈಃ ಪ್ರತಿಪತ್ತಿಲೋಪ ಪ್ರಸಂಗಾತ್ ।

ಗೋವಿನಿಂದ, ಬ್ರಾಹ್ಮಣನಿಂದ, ರಾಜನಕ್ರೋಧದಿಂದ, ಆಯುಧಗಳಿಂದ,

ಉಪವಾಸದಿಂದ, ಶಸ್ತ್ರಾದಿಗಳಿಂದ, ಅಗ್ನಿಯಿಂದ, ವಿಷ, ನೀರು, ನೇಣು, ಪರ್ವತದಿಂದ ಬಿದ್ದು ಈ ರೀತಿ ಮರಣ ಮತ್ತು ಆತ್ಮಹತ್ಯೆ ಮಾಡಿಕೊಂಡಂತಹ, ಬ್ರಾಹ್ಮಣರಿಗೆ ಅನುಕ್ಷಣ ಆಶೌಚಾದಿಗಳು ತರ್ಪಣಾದಿಗಳು ಇರುವುದಿಲ್ಲ। ಕೋಪದಿಂದ, ಉಪವಾಸ, ವಿಷ, ಬೆಂಕಿ, ಶಸ್ತ್ರ, ನೇಣು, ನೀರು, ಪ್ರಪಾತ, ಮರ, ಇವುಗಳಿಂದ ಆತ್ಮಹತ್ಯೆ ಮಾಡಿಕೊಂಡ ನರಾಧಮರಿಗೆ ಹಾಗೂ ಪತಿತರಿಗೆ(ದೊಡ್ಡ ಅಪರಾಧ ಮಾಡಿದವರಿಗೆ) ದಾಹಾದಿ ಔರ್ಧ್ವದೈಹಿಕ ಕರ್ಮಗಳು ಮತ್ತು ಆಶೌಚ ಹಾಗೂ ಶ್ರಾದ್ಧಾದಿಗಳನ್ನು ಮಾಡಬಾರದು । ಕಣ್ಣೀರನ್ನೂ ಸಹ ಸುರಿಸಬಾರದು । ಪಿಂಡಶ್ರಾದ್ಧಾದಿಗಳನ್ನೂ ಮಾಡಬಾರದು। ಈ ಮೇಲೆ ಹೇಳಿದ ವಿಷಯಗಳು ಚಂಡಾಲಾದಿಗಳ ಮರಣವಾದರೆ ಮಾಡುವಂತಹ ವಿಧಿಗಳು । ಆಹಿತಾಗ್ನಿಗೆ ಹೇಳಿದ ವಿಧಿಯಲ್ಲ । ಆಹಿತಾಗ್ನಿ ವಿಷಯದಲ್ಲಾದರೋ, ಅವನು ಹೇಗೆ ಮರಣಹೊಂದಿದರೂ ಕೂಡ, ಯಜ್ಞಪಾತ್ರೆಗಳ ಜೊತೆಗೆ ವಿಧಿಯಂತೆಯೇ ಕರ್ಮವನ್ನು ಮಾಡಬೇಕು। ಇಲ್ಲದಿದ್ದರೆ ಪ್ರತಿಪತ್ತಿ ಲೋಪವು ಬರುತ್ತದೆ ॥

ಸ್ಮೃತ್ಯಂತರೇ –

ಚಂಡಾಲಾಗ್ನಿ ಸಂಬಂಧಿನಾಮಗ್ನಿನಾಂ ಯಜ್ಞಪಾತ್ರಾಣಾಂ ಚ ಪ್ರತಿಪತ್ಯಂತರ ವಿಧಾನಾತ್ । ವೈತಾನಂ ಪ್ರಕ್ಷಿಪೇದಪ್ಸು ಹ್ಯಾವಸತ್ಯಂ ಚತುಷ್ಪಥೇ । ಪಾತ್ರಾಣಿ ಚ ದಹೇದಗ್ನೌ ಯಜಮಾನೇ ವೃಥಾಮೃತೇ । ಆತ್ಮನಸ್ತ್ಯಾಗಿನಾಂ ನಾಸ್ತಿ ಪತಿತಾನಾಂ ತಥಾಕ್ರಿಯಾ । ತೇಷಾಮಪಿ ತಥಾ ಗಂಗಾತೋಯೇ ಸಂಸ್ಥಾಪನಂ ಮತಮ್ ॥

ಬೇರೇಸ್ಮೃತಿಗಳಲ್ಲಿ ಚಂಡಾಲಾಗ್ನಿಗೆ ಮತ್ತು ಯಜ್ಞಪಾತ್ರೆಗಳಿಗೆ ಬೇರೇಒಂದು ವಿಶೇಷವಿಧಿಯನ್ನು ಹೇಳಿರುವುದರಿಂದ । ಹಾಗೂ ವೈತಾನಾಗ್ನಿಯನ್ನು ನೀರಿನಲ್ಲಿ ಬಿಡಬೇಕು । ಆವಸಥ್ಯ ಅಗ್ನಿಯನ್ನು ೪ ದಾರಿ ಸೇರುವ ದಾರಿಯಲ್ಲಿ ಬಿಡಬೇಕು । ಹಾಗೂ ಯಜಮಾನನು ಆತ್ಮಹತ್ಯೆ ಮಾಡಿಕೊಂಡರೆ, ಆಗ ಅವನ ಯಜ್ಞಪಾತ್ರೆಗಳನ್ನು ಅಗ್ನಿಯಲ್ಲಿ ದಹಿಸಬೇಕು। ಆತ್ಮಹತ್ಯೆಯನ್ನು ಮಾಡಿಕೊಂಡವರಿಗೆ ಹಾಗೂ ಪತಿತರಿಗೆ

ಔರ್ಧ್ವದೈಹಿಕ ಕ್ರಿಯೆಯು ಇಲ್ಲ । ಆದರೆ ಗಂಗಾನದಿಯಲ್ಲಿ ಅವರನ್ನು ಬಿಡುವುದು ಸಮ್ಮತವು ॥

ಬ್ರಹ್ಮಪುರಾಣೇ –

ಪಾಷಂಡಪತಿತಾನಾಂ ಚ ಚಂಡಾಲಾದ್ಯೈರ್ಹತಸ್ಯ ಚ । ಶೃಂಗಿದಂಷ್ಟ್ರ್ಯಗ್ನಿ ಸರ್ವಾದ್ಯೈರ್ಮೃತಾನಾಂ ಬುದ್ಧಿಪೂರ್ವಕಾತ್ । ನ ಕುರ್ಯಾತ್ ದಹನಾಶೌಚಂ ಕೃತಂ ಚೇನ್ನೋಪತಿಷ್ಠತಿ । ತೇಷಾಂ ಶರೀರಂ ಗಂಗಾಯಾಂ ಮಹಾನದ್ಯಾಂ ವಿನಿಕ್ಷಿಪೇತ್ । ತ್ರೇತಾಗ್ನೀನಪ್ಸುನಿಕ್ಷಿಪ್ಯ ಗೃಹ್ಯಾಗ್ನಿಂ ಚ ಚತುಷ್ಪದೇ । ದಹೇತ್ತು ಯಜ್ಞಪಾತ್ರಾಣಿ ಶವಾನಾಂ ಸ್ಪರ್ಶನೇಕೃತೇ । ಸ್ನಾನಾಲಂಕಾರ ವಸ್ತ್ರಾರ್ಥಂ ರಜ್ಜುಚ್ಛೇದಾಶ್ರುಪಾತನೇ । ಮಹಾಸಾಂತಪನಾಚ್ಛುದ್ಧಿರ್ಜ್ಞೇಯಾತಪ್ತ ವಿಶೋಧನಮ್ । ಮತ್ಯಾಭ್ಯಾಂ ಸೇತು ಚಾಂದ್ರಂ ಚ ಪರಾಕಂಚಾದಿ ಕೃಚ್ಛ್ರಕಂ । ಏತೇಷ್ವೇಕೈಕ ಕರಣೇ ಪಾದಕೃಚ್ಛ್ರಂ ವಿಶೋಧನಂ । ಅಜ್ಞಾನಾತ್ ಉಪವಾಸಸ್ಯಾತ್ ಸಚೇಲಸ್ನಾನಮೇವ ಚ ।

ತಸ್ಮಾತ್ ಸರ್ವೇಷಾಮಾತ್ಮಘಾತಕಾದೀನಾಮಪಿ ವಿಶೇಷೇಣ ದಾಹೋದಕ ಪಿಂಡಶ್ರಾದ್ಧಾದಿ ನಿಷೇಧೋ ಯಾವದ್ವತ್ಸರಂ ಪೂರ್ಣೇ ಸಂವತ್ಸರೇ ಪುತ್ರಾದಿಃ ಪ್ರೇತಸ್ಯ ಮಂತ್ರವದ್ದಾಹಾದಿಕಂ ಕುರ್ಯಾತ್ । ಚಂಡಾಲಾದೀನಿ ಹತಾನಾಂ ವಿಶೋದ್ಬಂಧನ ಶಸ್ತ್ರಾದ್ಯೈರಾತ್ಮತ್ಯಾಗಿನಾಮಪಿ ವಿಧಿಂ ವಿನೈವಾಶನಿತೋ ಯಾಜ್ಞಿಪತನ್ಯೈರಪ್ಯೂರ್ಧ್ವಂ ಸಂವತ್ಸರಾತ್ ಕುರ್ಯಾತ್ ಔರ್ಧ್ವದೈಹಿಕಂ ನಾರಾಯಣಬಲಿಸ್ತು ಪ್ರೇತಶುದ್ಧ್ಯರ್ಥತ್ವಾತ್ ದುರ್ಮರಣ ಪ್ರಾಯಶ್ಚಿತ್ತಾನಂತರಂ ಸಂಸ್ಕಾರಾತ್ ಪ್ರಾಗೇವಕಾರ್ಯಃ । ಬಾಂಧವೈಸ್ತು ಯಥಾನ್ಯಾಯಂ ದ್ವಿತೀಯೇ ಸಂಚಯಸ್ಮೃತಃ । ತೃತೀಯೇತೂದಕಂ ದತ್ವಾ ಚತುರ್ಥೇ ಶ್ರಾದ್ಧಮಾಚರೇದಿತಿ ತ್ರಿರಾತ್ರಾಶೌಚಂ ಆಹಿತಾಗ್ನಿ ಮಾತಾಪಿತೃ ವ್ಯತಿರಿಕ್ತ ವಿಷಯಂ ॥

ನಾಸ್ತಿಕರು ಮತ್ತು ಮಹಾಪಾತಕಗಳನ್ನು ಮಾಡಿದವರು, ಚಂಡಾಲಾದಿಗಳಿಂದ ಮರಣಹೊಂದಿದವರು, ಪ್ರಾಣಿಗಳಿಂದ ಹಾಗೂ ಅಗ್ನಿಯಿಂದ ಈ ವಿಧಾನಗಳಲ್ಲಿ ಪ್ರಯತ್ನದಿಂದ(ಬುದ್ಧಿಪೂರ್ವಕವಾಗಿ) ಸತ್ತವರು । ಇಂತಹವರಿಗೆ ದಹನ ಮತ್ತು

ಆಶೌಚಾದಿಗಳನ್ನು ಮಾಡಬಾರದು । ಮಾಡಿದರೂ ಫಲವಿಲ್ಲ । ಅವರ ಶರೀರವನ್ನು ಗಂಗೆ ಮುಂತಾದ ಮಹಾನದಿಗಳಲ್ಲಿ ಬಿಡಬೇಕು । ಒಂದುವೇಳೆ ಮೃತರು ಆಹಿತಾಗ್ನಿಗಳಾಗಿದ್ದರೆ, ಅವರ ತ್ರೇತಾಗ್ನಿಗಳನ್ನು ನೀರಿನಲ್ಲಿ ಬಿಡಬೇಕು । ಹಾಗೂ ಔಪಾಸನಾಗ್ನಿಯನ್ನು ಳ ದಾರಿ ಸೇರುವಜಾಗದಲ್ಲಿ ಬಿಡಬೇಕು । ಯಜ್ಞಪಾತ್ರೆಗಳನ್ನು ಶವಕ್ಕೆ ಮುಟ್ಟಿಸಿ, ಸುಡಬೇಕು । ಶವಕ್ಕೆ ಸ್ನಾನ, ಅಲಂಕಾರ, ಹೊಸಬಟ್ಟೆ ಹಾಕುವುದು, ರಜ್ಜುಚ್ಛೇದ ಹಾಗೂ ಈ ಮೃತನಿಗಾಗಿ ಕಣ್ಣೀರಿಡುವುದು, ಇವುಗಳನ್ನು ತಿಳಿಯದೇ ಮಾಡಿದರೂ ಅದು ದೋಷವೇ । ಈ ದೋಷದ ಪರಿಹಾರಕ್ಕೆ ಮಹಾಸಾಂತಪನ ಕೃಚ್ಛ್ರ ಮತ್ತು ತಪ್ತಕೃಚ್ಛ್ರಗಳನ್ನು ಮಾಡಬೇಕು । ಮೇಲೆ ತಿಳಿಸಿದ ನಿಷೇಧಗಳನ್ನು ಮಾಡಬಾರದೆಂದು ಗೊತ್ತಿದ್ದೂ ಮಾಡಿದರೆ, ಆಗ ಅದರ ದೋಷದ ಪರಿಹಾರಕ್ಕೆ, ಸೇತುಸ್ನಾನ, ಚಾಂದ್ರಾಯಣ ಹಾಗೂ ಪರಾಕ ಕೃಚ್ಛ್ರಗಳಿಂದ ಶುದ್ಧಿ ಮಾಡಿಕೊಳ್ಳಬೇಕು । ಮೇಲೆ ತಿಳಿಸಿದ ನಿಷೇಧ ಕಾರ್ಯಗಳಲ್ಲಿ ಯಾವುದಾದರೂ ಒಂದನ್ನು ಮಾಡಿದರೆ, ಪಾದಕೃಚ್ಛ್ರದಿಂದ ಶುದ್ಧಿಯು । ಅಜ್ಞಾನದಿಂದ ಮಾಡಿದರೆ, ೧ ದಿನ ಉಪವಾಸ ಮತ್ತು ಬಟ್ಟೆಸಹಿತ ಸ್ನಾನ ಮಾಡಿ ದೋಷವನ್ನು ಕಳೆದುಕೊಳ್ಳಬೇಕು । ಆದ್ದರಿಂದ ಮೇಲೆ ಹೇಳಿದ ವಿಧಾನಗಳಲ್ಲಿ ಬುದ್ಧಿಪೂರ್ವಕವಾಗಿ ಆತ್ಮಹತ್ಯೆ ಮಾಡಿಕೊಂಡರೆ, ಅಂತಹವರಿಗೆ ದಹನ – ಸಂಚಯನ – ನಿತ್ಯಕರ್ಮ – ಶ್ರಾದ್ಧಗಳನ್ನು ಮಾಡಬಾರದು ।

ಆದರೆ ಒಂದುವೇಳೆ ತಂದೆತಾಯಿಗಳು ಹೀಗೆ ಮಾಡಿಕೊಂಡರೆ,, ಒಂದುವರ್ಷ ಕಳೆದ ನಂತರ ಇವರ ದಹನಾದಿ ಪ್ರೇತಕರ್ಮಗಳನ್ನು ಪ್ರತಿಕೃತಿದಾಹ ವಿಧಿಯಿಂದ ಮಾಡಬೇಕು । ಚಂಡಾಲಾದಿಗಳಿಂದ ಸತ್ತರೆ – ವಿಷದಿಂದ – ನೇಣಿನಿಂದ – ಶಸ್ತ್ರದಿಂದ – ಸಿಡಿಲಿನಿಂದ – ಅಗ್ನಿಯಿಂದ, ಆತ್ಮಹತ್ಯೆ ಮಾಡಿಕೊಡು ತಂದೆತಾಯಿಗಳು ಸತ್ತರೆ । ಆಗ ೧ ವರ್ಷ ಕಳೆದ ನಂತರ ಔರ್ಧ್ವದೈಹಿಕ ಕರ್ಮವನ್ನು ಪ್ರತಿಕೃತಿದಾಹ ವಿಧಾನದಿಂದ ಮಾಡಬೇಕು । ನಾರಾಯಣಬಲಿಯನ್ನಾದರೋ, ಮೃತನ ಶುದ್ಧಿಗಾಗಿ ಮಾಡುವುದರಿಂದ ಹಾಗೂ ದುರ್ಮರಣ ಪ್ರಾಯಶ್ಚಿತ್ತವೂ ಇದು ಆಗಿರುವುದರಿಂದ, ನಾರಾಯಣಬಲಿಯನ್ನು ಮೊದಲು ಮಾಡಿ ನಂತರ ಔರ್ಧ್ವದೈಹಿಕ ಕರ್ಮವನ್ನು ಮಾಡಬೇಕು । ಬಂಧುಗಳಾದರೋ, ೨ ನೇ ದಿನ ಅಸ್ಥಿಸಂಚಯನ ಮಾಡಿ, ೩ ನೇದಿನ ತಿಲೋದಕ, ೪ ನೇ ದಿನ ಶ್ರಾದ್ಧವನ್ನು

ಮಾಡಬೇಕು । ಇಂತಹವರಿಗೆ ೩ ದಿನ ಆಶೌಚವನ್ನು ಮಾಡಬೇಕು । ಆದರೆ ತಂದೆತಾಯಿ ಹಾಗೂ ಆಹಿತಾಗ್ನಿಗಳ ವಿಷಯದಲ್ಲಿ ೧೦ ದಿನ ಆಶೌಚ ಮಾಡಬೇಕು ॥

****

16. ದಾಹಾದ್ಯಾಶೌಚಂ

ಆಹಿತಾಗ್ನೇಃ ಸಂಸ್ಕಾರಮಾರಭ್ಯ ಆಶೌಚಗ್ರಹಣಂ ಕಾರ್ಯಂ । ಅನಾಹಿತಾಗ್ನೇರ್ಮರಣ ಪ್ರಭೃತಿ । ಅನಗ್ನಿಮತ ಉತ್ಕ್ರಾಂತೇಸ್ಸಾಗ್ನೇಃ ಸಂಸ್ಕಾರಕರ್ಮಣಃ । ಶುದ್ಧಿಸ್ಸಂಚಯನಂ ದಾಹಾನ್ಮೃತಾಹಸ್ತು ಯಥಾವಿಧಿ । ಸಂಸ್ಕಾರಕರ್ಮಣ ಇತಿ ಶ್ರವಣದಿನಾದಾಹಿತಾಗ್ನೌ ಪಿತರಿ ದೇಶಾಂತರೇಮೃತೇ ಪುತ್ರಾದೀನಾಂ ಯಾವದ್ವಿಧಿನಾ ಸಂಸ್ಕಾರಸ್ತಾವತ್ ಸಂಧ್ಯಾದಿ ಲೋಪೋ ನಾಸ್ತ್ಯೇವ । ಅನೇನ ವಚನೇನ ಆಹಿತಾಗ್ನೇಃ ವಿಧಿವತ್ ದಹನಾಭಾವೇ ಆಶೌಚಗ್ರಹಣಂ ನಾಸ್ತ್ಯೇವೇತ್ಯನು ಸಂಧೇಯಂ । ದಾಹಾದಾರಭ್ಯೇತಿ ವಚನಾತ್ ॥

ಆಹಿತಾಗ್ನಿಯ ಸಂಸ್ಕಾರವು ಆರಂಭವಾದಮೇಲೆ, ಆಶೌಚವು ಬಂದೊದಗುತ್ತದೆ । ಅನಾಹಿತಾಗ್ನಿಯ ಮರಣದಲ್ಲಿ,, ಮರಣದಿಂದಲೇ ಆಶೌಚವು ಆರಂಭ । ಅಗ್ನಿ ಇಲ್ಲದವನು ಮೃತನಾದಾಗ, ಅವನ ಉತ್ಕ್ರಾಂತಿಯ ಸ್ಥಿತಿಯಿಂದಲೇ ಆಶೌಚವು । ತ್ರೇತಾಗ್ನಿಯನ್ನು ಇಟ್ಟವನ ವಿಷಯದಲ್ಲಿ, ಮೃತಸಂಸ್ಕಾರದ ಆರಂಭದಿಂದ ಆಶೌಚವು । ಮೃತದಿನದಲ್ಲಾದರೋ ಮೃತನ ದಹನದಿಂದ ಹಾಗೂ ಸಂಚಯನದಿಂದ ಶುದ್ಧಿಯು । ಸಂಸ್ಕಾರಕರ್ಮಣಃ = ಸಂಸ್ಕಾರಕರ್ಮದಿಂದ ಆಶೌಚವು ಬರುತ್ತದೆ ಎಂದು ಹೇಳಿರುವುದರಿಂದ,, ಆಹಿತಾಗ್ನಿಯಾದ ತಂದೆಯು ದೇಶಾಂತರದಲ್ಲಿ ಮೃತರಾದರೆ, ಪುತ್ರಾದಿಗಳಿಗೆ ಎಲ್ಲಿಯವರೆಗೆ ಕರ್ಮದ ವಿಧಿಯು ಆರಂಭವಾಗುವುದಿಲ್ಲವೋ, ಅಲ್ಲಿಯವರೆಗೂ ಸಂಧ್ಯಾದಿಗಳ ಲೋಪವಿಲ್ಲ । ಈ ವಚನವಿರುವುದರಿಂದ, ಆಹಿತಾಗ್ನಿಗೆ ವಿಧಿಪೂರ್ವಕ ದಹನವು ಆಗದಿದ್ದರೆ, ಆಶೌಚವು ಯಾರಿಗೂ ಬರುವುದಿಲ್ಲವೆಂದು ತಿಳಿಯಬೇಕು । ಏಕೆಂದರೆ ದಹನದಿಂದ ಆಶೌಚದ ಆರಂಭ ಎಂದು ಹೇಳಿರುವುದರಿಂದ ॥

****

17. ದುರ್ಮೃತಸ್ಯ ದಾಹದ್ಯಾಶೌಚಂ

ಅನಗ್ನಿಮತ ಉತ್ಕ್ರಾಂತೇರಾಶೌಚಂ ಹಿ ದ್ವಿಜಾತಿಷು । ದಾಹಾದಗ್ನಿಮತೋ ವಿದ್ಯಾದ್ವಿದೇಶಸ್ಥೇ ಮೃತೇಸತಿ । ಯಥಾ ವಿದೇಶಸ್ಥೇ ಮೃತೇ ಯಾವದ್ವಿಧಿನಾ ನೈವ ಸಂಸ್ಕೃತಿಃ । ಪುತ್ರಾದೀನಾಂ ತು ಸಂಧ್ಯಾದಿ ಕರ್ಮಲೋಪೋ ನ ವಿದ್ಯತೇ । ಆಹಿತಾಗ್ನೇಸ್ತು ವಿಧಿವದ್ದಾಹಾಂತಂ ನಾಸ್ತಿ ಚೇತ್ ತದಾ । ಆಶೌಚಗ್ರಹಣಂ ನಾಸ್ತಿದಾಹಾದ್ಯಾಶೌಚಂ ಇಷ್ಯತೇ ।

ಆಹಿತಾಗ್ನಿಯಲ್ಲದವನು ಸತ್ತರೆ, ಆ ಕ್ಷಣದಿಂದಲೇ ಬ್ರಾಹ್ಮಣರಿಗೆ ಆಶೌಚವು । ಅಗ್ನಿಹೋತ್ರಿಯು ಸತ್ತರೆ, ಅವನ ದಹನದಿಂದ ಮುಂದೆ ಆಶೌಚವು, ಈ ನಿಯಮವು ಸ್ವಗ್ರಾಮವನ್ನು ಬಿಟ್ಟು ಬೇರೆಡೆಯಲ್ಲಿ ಮೃತರಾದವರಿಗೆ ಸಂಬಂಧಿಸಿದ್ದು । ಬೇರೇ ಪ್ರದೇಶದಲ್ಲಿ ಸತ್ತ ಆಹಿತಾಗ್ನಿಗೆ, ಅವನ ವಿಧಿಪೂರ್ವಕ ಸಂಸ್ಕಾರ ಆಗುವವರೆಗೆ ಅವನ ಮಕ್ಕಳು ಮುಂತಾದವರಿಗೆ ಸಂಧ್ಯಾದಿ ನಿತ್ಯಕರ್ಮಗಳ ಲೋಪವಿಲ್ಲ । ಆಹಿತಾಗ್ನಿಗೆ, ವಿಧಿಯಂತೆ ದಹನವಾಗುವವರೆಗೆ ಆಶೌಚವಿಲ್ಲ । ದಹನವಾದಮೇಲೆ ಆಶೌಚವು ಆರಂಭ ॥

ಪಾರಸ್ಕರಃ –

ಆಹಿತಾಗ್ನೇಸ್ತು ದಹನಾದ್ದಶಾಹಾಶೌಚಂ ಇಷ್ಯತೇ । ಅನಾಹಿತಾಗ್ನೇಃ ಮರಣಾತ್ಪುನರ್ದಾಹೋ ಯದಾ ಭವೇತ್ । ಆಶೌಚವರ್ತಮಾನೇ ಚೇತ್ ತಚ್ಛೇಷೇಣ ವಿಶುದ್ಧ್ಯತಿ । ಗತೇತ್ವಾಶೌಚ ದಿವಸೇ ಪುನರ್ದಾಹೋ ಯದಾ ಭವೇತ್ ॥

ಆಹಿತಾಗ್ನಿಗೆ ದಹನವಾದಮೇಲೆ ಅವನ ದಾಯಾದಿಗಳಿಗೆ ೧೦ ದಿನಗಳ ಆಶೌಚ । ಅನಾಹಿತಾಗ್ನಿಯು ಮರಣವಾದರೆ, ಮರಣದಿಂದಲೇ ಆಶೌಚವು ಆರಂಭ । ಒಂದುವೇಳೆ ಮರಣದಿನದಿಂದ ಮುಂದಿನ ದಿನಗಳಲ್ಲಿ ದಹನವನ್ನು ಮಾಡುವುದಾದರೂ, ಆಶೌಚವನ್ನು ಮರಣದಿನದಿಂದಲೇ ಲೆಕ್ಕ ಮಾಡುಬೇಕು । ಒಂದುವೇಳೆ ೧೦ ದಿನಗಳ ನಂತರ ದಹನ ಮಾಡುವ ಸಂದರ್ಭ ಬಂದರೆ, ಆಗ ದಹನ ಮತ್ತು ಸಂಚಯನಾದಿ ವಿಧಿಗಳನ್ನು ಮಾಡಬೇಕೇ ಹೊರತು, ಆಶೌಚದ ಆಚರಣೆ ಇರುವುದಿಲ್ಲ ॥

****

18. ದುರ್ಮೃತಸ್ಯ ಸಂಸ್ಕಾರ ವಿಶೇಷಃ

ದುರ್ಮೃತಸ್ಯಾಹಿತಾಗ್ನೇರ್ವಿಶೇಷಮಾಹ ಪಾರಸ್ಕರಃ । ಚಂಡಾಲೇನಶ್ವಪಾಕೇನ ಗೋಭಿಃ ವಿಪ್ರೈರ್ಹತೋ ಯದಿ । ಆಹಿತಾಗ್ನಿರ್ಹತೋ ವಿಪ್ರೋ ವಿಷೇಣಾಕರ್ಷತೋಪಿವಾ । ದಹೇತ್ತಂ ಬ್ರಾಹ್ಮಣಂ ವಿಪ್ರೋ ಲೋಕಾಗ್ನೌ ಮಂತ್ರವರ್ಜಿತಂ । ದಗ್ಧಮಸ್ಥಿ ಪುನರ್ಗೃಹ್ಯಾಕ್ಷೀರೇ ಪ್ರಕ್ಷಾಳಯೇತ್ತತಃ । ಪುನರ್ದಹೇತ್ಸ್ವಾಗ್ನಿನಾತು ಸ್ವತಂತ್ರೇಣ ಯಥಾವಿಧಿ । ಸ್ವತಂತ್ರೇಣ ಸ್ವಶಾಖೋಕ್ತೇನ ॥

ದುರ್ಮರಣಕ್ಕೀಡಾದ ಆಹಿತಾಗ್ನಿಗೆ, ವಿಶೇಷವನ್ನು ಪಾರಸ್ಕರಮುನಿಗಳು ಹೇಳಿದ್ದಾರೆ । ಚಂಡಾಲನಿಂದ, ಹಸು ಮುಂತಾದ ಪ್ರಾಣಿಗಳಿಂದ, ವಿಷದಿಂದ, ನೇಣಿನಿಂದ, ಹಾಗೆಯೇ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಂದ, ಆಹಿತಾಗ್ನಿಯು ದುರ್ಮರಣಕ್ಕೀಡಾದರೆ, ಅವರನ್ನು ಲೌಕಿಕಾಗ್ನಿಯಲ್ಲಿ ಅಮಂತ್ರಕವಾಗಿ ದಹಿಸಿ । ನಂತರ ಸುಟ್ಟ ಅಸ್ಥಿಗಳನ್ನು ತೆಗೆದುಕೊಂಡು ಹಾಲಿನಲ್ಲಿ ತೊಳೆದು ಮತ್ತೆ ಅವನ ತ್ರೇತಾಗ್ನಿಗಳಲ್ಲಿ, ತನ್ನ ಶಾಖೆಯಲ್ಲಿ ಹೇಳಿರುವಂತೆ ದಹನಾದಿ ಔರ್ಧ್ವದೈಹಿಕಕರ್ಮವನ್ನು ಮಾಡಬೇಕು ॥

ಹಾರೀತಃ –

ಬ್ರಾಹ್ಮಣೋದ್ಬಂಧನಂ ಪ್ರಾಪ್ತಶ್ಚಂಡಾಲಸ್ಯ ಕರೇಣ ವಾ । ಆತ್ಮನಾ ಶಸ್ತ್ರಘಾತೇನ ಶೂದ್ರವದ್ದಾಹಯೇತ್ ದ್ವಿಜಂ । ದಗ್ಧಮಸ್ತಿ ಪುನರ್ಗೃಹ್ಯ ವಿಪ್ರಾಣಾಮನುಶಾಸನಾತ್ । ಕ್ಷೀರ ಪ್ರಕ್ಷಾಳನಂ ಕೃತ್ವಾ ತದಸ್ಥಿ ಪ್ರೇತವದ್ದಹೇತ್ । ಪುನರ್ದಹನ ಮಂತ್ರೈಶ್ಚ ಯಥಾವಿಧಿ ಸಮಾಚರೇತ್ । ಏವಮೇವವಿಧಿಂ ಕುರ್ಯಾನ್ಮರಣೇ ಗರ್ಹಿತಸ್ಯ ಚ । ಪ್ರಾಜಾಪತ್ಯ ತ್ರಯಂ ಕುರ್ಯಾತ್ ಪುತ್ರಾದಿಃ ಪ್ರೇತ ಶುದ್ಧಯೇ । ಪ್ರಕ್ಷಾಳ್ಯ ಸ್ನಾಪಯಿತ್ವಾತು ಶವ ಧರ್ಮೇಣ ದಾಹಯೇತ್ । ಕುಶೈಃ ಪಲಾಶೈರ್ಬಧ್ವಾತಂ ಪ್ರಚ್ಛಾದ್ಯೈವಚವಾಸಸಾ । ನೀತ್ವಾ ಶ್ಮಶಾನಂ ಕುರ್ವೀತ ಪಾತ್ರಸಂಚಯನಾದಿಕಂ । ಇದಂ ಕೃಚ್ಛ್ರತ್ರಯಂ ಪ್ರಮಾದ ದುರ್ಮೃತಸ್ಯಾತ್ಯಂತಾಶಕ್ತ ಪುತ್ರಾದಿ ವಿಷಯಂ ।

ಶಕ್ತಸ್ಯತು । ಬ್ರಾಹ್ಮಣಾದುದಕಾತ್ ಸರ್ಪಾದ್ಗೋಭಿಃ ಪಶುಮೃಗಾದಿಭಿಃ । ಉದ್ಬಂಧನೋದಕ ವಿಷೈಸ್ಸರ್ವಾದ್ಯುಪಲಪ್ಯೈದ್ಯುತ್ತೈಃ । ಪ್ರಮಾದಾನ್ಮರಣೇ ಚಾಂದ್ರಂ

ತಪ್ತ ಕೃಚ್ಛ್ರ ತ್ರಯಂ ತಥಾ । ಯದ್ವಾ ಷಣ್ಮಾಸ ಕೃಚ್ಛ್ರಾಣಿ ಗಾಂ ದದ್ಯಾದ್ದಶಪಂಚ ವಾ । ವಿಧಿವದ್ದಹನಂ ಕುರ್ಯಾದುದಕಂ ಶ್ರಾದ್ಧಮೇವಚೇತಿ । ಪುತ್ರಾದಿಭಿಃ ಕೃತ್ವೇತಿ ಶೇಷಃ । ಇತ್ಯಾದಿ ದುರ್ಮೃತೌ ಪ್ರಾಯಶ್ಚಿತ್ತ ಬಹುವಚನ ವಿರೋಧಾದ್ವಿಕಲ್ಪಃ ॥

ಬ್ರಾಹ್ಮಣನು, ನೇಣಿನಿಂದ – ಚಂಡಾಲನಿಂದ – ಶಸ್ತ್ರಾದಿಗಳಿಂದ ಸತ್ತರೆ । ಶೂದ್ರನನ್ನು ದಹಿಸುವಂತೆ ಅಮಂತ್ರಕವಾಗಿ ಮಾಡಬೇಕು । ನಂತರ ಸುಟ್ಟ ಅಸ್ಥಿಗಳನ್ನು ತೆಗೆದುಕೊಂಡು, ಬ್ರಾಹ್ಮಣರ ಅನುಜ್ಞೆಪಡೆದು । ಆ ಅಸ್ಥಿಗಳನ್ನು ಹಾಲಿನಲ್ಲಿ ತೊಳೆದು ಅದನ್ನೇ ಪುನಃ ಪುನರ್ದಹನ ಮಂತ್ರಗಳಿಂದ ದಹಿಸಬೇಕು ।

ಪತಿತಾದಿಗಳಿಗೂ ಈ ರೀತಿಯಾಗಿಯೇ ಶವಧರ್ಮದಿಂದ ದಹನವನ್ನು ಮಾಡಬೇಕು । ಹೇಗೆಂದರೆ – ಈ ಮೇಲೆಹೇಳಿದ ರೀತಿಗಳಲ್ಲಿ ಸತ್ತಾಗ, ಪ್ರಾಜಾಪತ್ಯತ್ರಯ ಕೃಚ್ಛ್ರವನ್ನು ಮೃತನ ಶುದ್ಧಿಗಾಗಿ ಪುತ್ರಾದಿಗಳು ಮಾಡಿಕೊಂಡು, ನಂತರ ಶವವನ್ನು ತೊಳೆದು, ಸ್ನಾನ ಮಾಡಿಸಿ, ದರ್ಭೆ ಮತ್ತು ಮುತ್ತಗದ ಟೊಂಗೆಗಳಿಂದ ಮೃತನನ್ನು ಕಟ್ಟಿ । ಹೊಸಬಟ್ಟೆಯಿಂದ ಮುಚ್ಚಿ, ಸ್ಮಶಾನಕ್ಕೆ ತೆಗೆದುಕೊಂಡುಹೋಗಿ । ಪಾತ್ರಸಂಚಯನ ಇತ್ಯಾದಿಗಳನ್ನು ಮಾಡಿ, ನಂತರ ದಹನ ಮಾಡಬೇಕು । ಈ ಪ್ರಾಜಾಪತ್ಯಕೃಚ್ಛ್ರತ್ರಯವು ಪ್ರಮಾದದಿಂದ ದುರ್ಮರಣಕ್ಕೀಡಾಗಿ, ಅವನ ಮಗನು ಔರ್ಧ್ವದೈಹಿಕ ಕರ್ಮವನ್ನು ಮಾಡಲು ಅಶಕ್ತನಾಗಿದ್ದರೆ, ಈ ಕ್ರಮವನ್ನು ಹೇಳಿದೆ ।

ಒಂದುವೇಳೆ ಸಾಮರ್ಥ್ಯವುಳ್ಳವನಾಗಿದ್ದರೆ, ಅಂತಹ ಮಗನು, ಬ್ರಾಹ್ಮಣರಿಂದ / ನೀರಿನಿಂದ / ನೀರಿನ ಹಾವುಗಳಿಂದ / ಪ್ರಾಣಿಗಳಿಂದ / ದುಷ್ಟಪ್ರಾಣಿಗಳಿಂದ / ನೇಣಿನಿಂದ / ವಿಷದಿಂದ / ಸಿಡಿಲಿಂದ ತಂದೆತಾಯಿಗಳು ಸತ್ತರೆ । ಆಗ ಚಾಂದ್ರಾಯಣವನ್ನು, ತಪ್ತಕೃಚ್ಛ್ರತ್ರಯವನ್ನೂ ಹಾಗೂ ಷಣ್ಮಾಸಕೃಚ್ಛ್ರಗಳನ್ನೂ ಮಾಡಿಕೊಂಡು ೧೦ ಅಥವ ೧೫ ಗೋದಾನವನ್ನು ಮಾಡಿ । ನಂತರ ಯಥಾವಿಧಿಯಾಗಿ ದಹನ, ತರ್ಪಣಾದಿಗಳನ್ನೂ ಮಾಡಬೇಕು । ಈರೀತಿಯಾಗಿ ದುರ್ಮರಣಕ್ಕೀಡಾದವನಿಗೆ ಪ್ರಾಯಶ್ಚಿತ್ತವನ್ನು ಬಹುವಚನದಲ್ಲಿ ಹೇಳುವುದು ವಿರೋಧವಾಗುವುದರಿಂದ, ವಿಕಲ್ಪವೆಂದು ಅರ್ಥಮಾಡಿಕೊಳ್ಳಬೇಕು ॥

****

19. ಬುದ್ಧಿಪೂರ್ವೇ

ಹಸ್ತಾಮಲಕೇ –

ಯಸ್ತು ದ್ವಿಜಾತಿರಾತ್ಮಾನಂ ಖಡ್ಗಾದಿಭಿರ್ಹಂತಿ ಅಸಾಸ್ವಪುತ್ರಾದಿಭಿಃ ಕೃತ ಪ್ರಾಜಾಪತ್ಯಕೃಚ್ಛ್ರ ಶತತ್ರಯಾಚರಣಾತ್ ಶುದ್ಧ್ಯತಿ ॥

ಯಾವ ಬ್ರಾಹ್ಮಣನು, ತನ್ನನ್ನು ಬುದ್ಧಿಪೂರ್ವಕವಾಗಿ ಕತ್ತಿ ಮುಂತಾದವುಗಳಿಂದ ಹತ್ಯೆ ಮಾಡಿಕೊಂಡರೆ । ಅವನ ಮಕ್ಕಳು ಮುಂತಾದವರು ೩೦೦ ಪ್ರಾಜಾಪತ್ಯಕೃಚ್ಛ್ರಗಳನ್ನು ಮಾಡಿಕೊಂಡು ಶುದ್ಧಿಯನ್ನು ಮಾಡಿಕೊಳ್ಳಬೇಕು ॥

ವಸಿಷ್ಠಃ –

ವಿಷಾಗ್ನ್ಯುದ್ಬಂಧ ಶಸ್ತ್ರಾದ್ಯೈರಾತ್ಮಾನಂ ಯಸ್ತು ಘಾತಯೇತ್ । ತಸ್ಯ ಪಾಪವಿಶುದ್ಧ್ಯರ್ಥಂ ಪ್ರಾಜಾಪತ್ಯಶತತ್ರಯಂ । ಆದಿಶಬ್ದಾತ್ ಭೃಗುಪಾತ ಜಲಪ್ರವೇಶಾನಶನ ದೀಕ್ಷಾ ವೃಕ್ಷಶೂಲರೋಹಣ ತಾಡನ ಜಿಹ್ವಾಚ್ಛೇದನಾನಿ ಗೃಹ್ಯಂತ ಇತ್ಯೇತದಬುದ್ಧಿಪೂರ್ವಕ ವಿಷಯಂ । ಜಲಾಗ್ನಿಶಸ್ತ್ರಪಾತಾದ್ಯೈಃ ಪ್ರಮಾದಾದ್ಯೈ ಮೃತಾದ್ವಿಜಾಃ । ಚಾಂದ್ರಾಯಣೇನ ಶುದ್ಧ್ಯಂತಿ ತಪ್ತಕೃಚ್ಛ್ರದ್ವಯೇನ ಚ । ಏತತ್ ಜ್ಞಾತಿಮಾತ್ರವಿಷಯಮಿತಿ ಕೇಚಿತ್ ॥

ಬುದ್ಧಿಪೂರ್ವಕವಾಗಿ, ವಿಷ / ಅಗ್ನಿ / ನೇಣು / ಶಸ್ತ್ರಾದಿಗಳಿಂದ ತನ್ನನ್ನು ತಾನು ಹತ್ಯೆ ಮಾಡಿಕೊಂಡರೆ । ಆ ಮೃತನ ಪಾಪಶುದ್ಧಿಗಾಗಿ ೩೦೦ ಪ್ರಾಜಾಪತ್ಯಕೃಚ್ಛ್ರವನ್ನು ಅವನ ಮಕ್ಕಳು ಮಾಡಿಕೊಳ್ಳಬೇಕು ।

ಇಲ್ಲಿ ಆದಿಶಬ್ದದಿಂದ, ಪರ್ವತದಿಂದ ಬಿದ್ದು / ನೀರಿನಲ್ಲಿ ಮುಳುಗಿ / ಉಪವಾಸದಿಂದ / ಮರದಿಂದಬಿದ್ದು / ಶೂಲಕ್ಕೇರಿ / ಹೊಡೆತದಿಂದ / ಅಗ್ನಿಯಿಂದ / ಶಸ್ತ್ರದಿಂದ / ನಾಲಿಗೆಯ ಕತ್ತರಿಸುವಿಕೆಯಿಂದ,, ಮರಣವನ್ನು ಹೊಂದಿದರೆ ಎಂದು ಅರ್ಥವನ್ನು ಮಾಡಿಕೊಳ್ಳಬೇಕು । ಈ ರೀತಿಯಲ್ಲಿ ಅಕಸ್ಮಾತ್ತಾಗಿ ಬ್ರಾಹ್ಮಣನು ಸತ್ತರೆ, ಅವನ ಶುದ್ಧಿಗಾಗಿ ಚಾಂದ್ರಾಯಣ ಮತ್ತು ೨ ತಪ್ತಕೃಚ್ಛ್ರಗಳನ್ನು ಮಕ್ಕಳು ಮಾಡಿಕೊಳ್ಳಬೇಕು ॥

****

20. ಅಶಕ್ತೌತು

ಚಾಂದ್ರಾಯಣ ಪರಾಕ ಕೃಚ್ಛ್ರಾತಿಕೃಚ್ಛ್ರಾಸ್ತು ಪ್ರಾಜಾಪತ್ಯತ್ರಯಾತ್ಮಕಾಃ । ಅತ್ರಾಪವಾದೋಽಪಿ ಪುರಾಣೇ ದರ್ಶಿತಃ । ಪ್ರಮಾದಾದಿ ನಿಶ್ಶಂಕಮಕಸ್ಮಾತ್ ಮೃತ್ಯುನಾಮೃತಃ । ಶೃಂಗಿ ದಂಷ್ಟ್ರಿ ನಖಿ ವ್ಯಾಳ ವಿಷ ವಿದ್ಯುಜ್ಜಲಾದಿಭಿಃ । ಚಂಡಾಲೈರಥವಾಚೋರೈರ್ಹತೋ ಯತ್ರಕುತ್ರಚಿತ್ । ತಸ್ಯ ದಾಹಾದಿಕಂ ಕಾರ್ಯಂ ಯಸ್ಮಾನ್ನ ಪತಿತಸ್ತುಸಃ ॥

ಚಾಂದ್ರಾಯಣ, ಪರಾಕ, ಅತಿಕೃಚ್ಛ್ರಗಳು ಎಂದರೆ – ೩ ಪ್ರಾಜಾಪತ್ಯಕೃಚ್ಛ್ರಕ್ಕೆ ಸಮ । ಇದಕ್ಕೆ ಅಪವಾದವನ್ನೂ ಪುರಾಣದಲ್ಲಿ ತೋರಿಸಿದೆ । ಪ್ರಮಾದದಿಂದ ಶಂಕೆಯಿಲ್ಲದೇ ಅಕಸ್ಮಾತ್ತಾಗಿ, ಕೋಡಿರುವ ಪ್ರಾಣಿಗಳಿಂದ / ಹಲ್ಲಿರುವ ಪ್ರಾಣಿಗಳಿಂದ / ಉಗುರಿನಿಂದ / ವಿಷದಿಂದ / ವಿದ್ಯುತ್ ನಿಂದ / ನೀರಿನಿಂದ / ಚಂಡಾಲನಿಂದ / ಕಳ್ಳರಿಂದ, ಸತ್ತರೆ । ಅವನ ದಾಹಾದಿಕಗಳನ್ನು ಮಂತ್ರಪೂರ್ವಕವಾಗಿ ಮಾಡಬೇಕು, ಅವನು ಪತಿತನಲ್ಲದಿದ್ದರೆ ಮಾತ್ರ ॥

ಅಂಗಿರಾಃ –

ಯದಿ ಕಶ್ಚಿತ್ ಪ್ರಮಾದೇನ ಮ್ರಿಯತೇಽಗ್ನ್ಯುದಕಾದಿಭಿಃ । ತಸ್ಯಾಶೌಚಂ ವಿಧಾತವ್ಯಂ ದದ್ಯಾತ್ ಪಿಂಡೋದಕಕ್ರಿಯಾಂ । ತತ್ರಾಪಿ ಪ್ರಾಯಶ್ಚಿತ್ತೋತ್ತರ ಕಾಲಮೇವ ॥

ಬ್ರಾಹ್ಮಣನು ಅಕಸ್ಮಾತ್ತಾಗಿ, ಅಗ್ನಿ / ನೀರು / ಮುಂತಾದವುಗಳಿಂದ ಸತ್ತರೆ, ಅವನಿಗೆ ಆಶೌಚವನ್ನೂ ಕೊಳ್ಳಬೇಕು । ಪಿಂಡ, ತರ್ಪಣಾದಿಗಳನ್ನೂ ಮಾಡಬೇಕು । ಇವೆಲ್ಲವನ್ನೂ ಪ್ರಾಯಶ್ಚಿತ್ತಾನಂತರವೇ ಮಾಡಬೇಕು ॥

ಗೌತಮಃ –

ಯಸ್ಯ ತು ಪ್ರಾಣಾಂತಿಕಂ ಪ್ರಾಯಶ್ಚಿತ್ತಂ ಸ ಮೃತ ಶುದ್ಧ್ಯೇತ್ । ಸರ್ವಾಣ್ಯೇವೋದಕಾದೀನಿ ಪ್ರೇತಕೃತ್ಯಾನಿ ಕುರ್ಯುಃ ॥

ಯಾರಿಗೆ ಪ್ರಾಣಾಂತಿಕವಾದ ಪ್ರಾಯಶ್ಚಿತ್ತವನ್ನು ಹೇಳಿದೆಯೋ, ಅವನು ಮರಣದಿಂದಲೇ ಶುದ್ಧನಾಗುವನು । ಅವನಿಗೂ ದಹನ, ತರ್ಪಣ, ಪ್ರೇತಕಾರ್ಯಗಳನ್ನೂ ಮಾಡಬೇಕು ॥

ಶಾತಾತಪಃ –

ವೃಥಾಶೌಚ ಕ್ರಿಯಾಲುಪ್ತಃ ಪ್ರತ್ಯಾಖ್ಯಾಯ ಭಿಷಕ್ಕ್ರಿಯಾಃ । ಆತ್ಮಾನಂ ಘಾತಯೇದ್ಯಸ್ತು ಭೃಗ್ವಗ್ನ್ಯನಶನಾಂಬುಭಿಃ । ತಸ್ಯ ತ್ರಿರಾತ್ರಮಾಶೌಚಂ ದ್ವಿತೀಯೇಹ್ನ್ಯಸ್ಥಿಸಂಚಯಃ । ತೃತೀಯೇತೂದಕಂ (ಪಿಂಡಂ) ದತ್ವಾ ಚತುರ್ಥೇ ಶ್ರಾದ್ಧಮಾಚರೇತ್ ॥

ಇಲ್ಲದ ಆಶೌಚವನ್ನು ತೆಗೆದುಕೊಂಡು ಹಾಗು ನಿತ್ಯಕರ್ಮವನ್ನು ಮಾಡದೇ ಕ್ರಿಯಾಲೋಪವನ್ನು ಮಾಡಿದವನು । ಮತ್ತೂ ಚಿಕಿತ್ಸೆಯಿಂದಲೂ ವಾಸಿಯಾಗದ ರೋಗದಿಂದ ಬಳಲಿದವನು, ತನ್ನನ್ನು ತಾನು ಬುದ್ಧಿಪೂರ್ವಕವಾಗಿ ಪರ್ವತ / ಅಗ್ನಿ / ಉಪವಾಸ / ವಿದ್ಯುತ್ ಗಳಿಂದ ಹತ್ಯೆ ಮಾಡಿಕೊಂಡರೆ, ಇದಕ್ಕೆ ೩ ದಿನಗಳ ಆಶೌಚವನ್ನು ಆಚರಿಸಬೇಕು । ಇದರಲ್ಲಿ ಮೊದಲದಿನ ದಹನ, ೨ ನೇದಿನ ಅಸ್ಥಿಸಂಚಯನ, ೩ ನೇ ದಿನ ತರ್ಪಣ, ೪ ನೇ ದಿನ ಶ್ರಾದ್ಧವು ॥

****

21. ಬುದ್ಧಿಪೂರ್ವಕ ಮರಣೇ

ಅಷ್ಟೌ ಕೃಚ್ಛ್ರಾಣಿ ವಾ ಕುರ್ಯಾತ್ ಚಾಂದ್ರಾಯಣಮಥಾಪಿ ವಾ । ತಸ್ಯ ಪಾಪ ವಿಶುದ್ಧ್ಯರ್ಥಂ ಅಂಗಿರಾಮುನಿರಬ್ರವೀತ್ । ಅಥ ಕಶ್ಚಿತ್ಪ್ರಮಾದೇನ ಮ್ರಿಯೇತಾಗ್ನ್ಯುದಕಾದಿಭಿಃ । ಚಂಡಾಲೈರಂತ್ಯಜೈಶ್ಚೈವ ವ್ಯಾಪ್ರ ಸರ್ಪಾದಿನಾ ತಥಾ । ಪಶುಭಿಶ್ಚ ತಥಾ ಚೋರೈಃ ವಿಷೋದ್ಬಂಧನ ಶಸ್ತ್ರಕೈಃ । ತಸ್ಯ ಪಾಪ ವಿಶುದ್ಧ್ಯರ್ಥಂ ಷಾಣ್ಮಾಸಂ ಕೃಚ್ಛ್ರಮಾಚರೇತ್ । ಏತತ್ ಅನುಪನೀಯು ವಿಷಯುಮ್ ॥

ಮೇಲೆ ತಿಳಿಸಿದ ರೀತಿಗಳಲ್ಲಿ ಬುದ್ಧಿಪೂರ್ವಕವಾಗಿ ಮರಣಹೊಂದಿದರೆ, ಅವನ ಶುದ್ಧಿಗಾಗಿ ೮ ಕೃಚ್ಛ್ರ ಅಥವ ಚಾಂದ್ರಾಯಣವನ್ನು ಮಾಡಿಕೊಳ್ಳಬೇಕು । ಪ್ರಮಾದದಿಂದ ಅಗ್ನಿ,

ನೀರು, ಅಂತ್ಯಜ, ಹುಲಿ, ಹಾವು, ಪ್ರಾಣಿ, ಕಳ್ಳರಿಂದ, ವಿಷದಿಂದ, ನೇಣು, ಶಸ್ತ್ರಗಳಿಂದ ಮರಣಹೊಂದಿದರೆ ಅವನ ಪಾಪದಶುದ್ಧಿಗಾಗಿ ೬ ಮಾಸಗಳ ಕೃಚ್ಛ್ರವನ್ನು ಮಾಡಿಕೊಳ್ಳಬೇಕು । ಇದು ಉಪನಯನವಾಗದ ಬಾಲಕನ ವಿಷಯವು ॥

****

****

6. ಪಿತೃಮೇಧಸಂಸ್ಕಾರದ ಮಂತ್ರಗಳಿಗೆ ಸಾಯಣಾಚಾರ್ಯರ ಭಾಷ್ಯಾರ್ಥ ಮತ್ತು ಮಂತ್ರವಿನಿಯೋಗ

ಮೊದಲದಿನದ ಕರ್ಮಗಳಲ್ಲಿ ಬಳಸುವ ಮಂತ್ರಗಳು

* ಮಂತ್ರ –

1. ಓಂ ಆಯಾಹಿ ಪ್ರೇತ(ಪ್ರೇತೇ) ಸೋಮ್ಯಾ ಗಂಭೀರೈಃ ಪಥಿಭಿಃ ಪೂರ್ವ್ಯೈಃ । ಪ್ರಜಾಮಸ್ಮಭ್ಯಂ ದದತೋ ರಯಿಂ ಚ ದೀರ್ಘಾಯುತ್ವಂ ಚ ಶತಶಾರದಂ ಚ ॥

ವಿನಿಯೋಗ –

ಮಹಾಪಿತೃಯಜ್ಞದಲ್ಲಿ, ಪಿತೃಗಳನ್ನು ಈ ಮಂತ್ರದಿಂದ ಆಹ್ವಾನಮಾಡಬೇಕು ॥

ಅರ್ಥ –

ಎಲೈ ಪಿತೃದೇವತೆಗಳೇ, ಶಾಂತಮನಸ್ಕರಾಗಿ ನಮಗೆ ಪ್ರೀತಿಯನ್ನು, ಸಮೃದ್ಧಿಯನ್ನೂ ಉಂಟುಮಾಡುತ್ತಾ, ನಮ್ಮ ಪೂರ್ವಜರಾದ ಋಷಿಮುನಿಗಳು ಬಂದಂತಹ ಉತ್ತಮಮಾರ್ಗದಲ್ಲಿ ನೀವೂ ಬನ್ನಿರಿ । ಅಂತಹಾ ಮಾರ್ಗದಲ್ಲಿ ಬಂದವರಾಗಿ, ನಮಗೆ ಪ್ರಜೆಗಳನ್ನೂ, ಸಂಪತ್ತನ್ನೂ, ದೀರ್ಘಾಯುವನ್ನೂ ಕೊಡುವವರಾಗಿ ಬನ್ನಿ ॥

* ಮಂತ್ರ –

2. ಪೃಥಿವೀ ತೇ ಪಾತ್ರಂ ದ್ಯೌರಪಿಧಾನಂ ಬ್ರಹ್ಮಣಸ್ತ್ವಾ ಮುಖೇ ಜುಹೋಮಿ ಬ್ರಾಹ್ಮಣಾನಾಂ ತ್ವಾ ಪ್ರಾಣಾಪಾನಯೋರ್ಜುಹೋಮ್ಯಕ್ಷಿತಮಸಿ ಮಾಸ್ಯ (ಮಾಸ್ಯಾಃ) ಕ್ಷೇಷ್ಠಾ ಅಮುತ್ರಾಮುಷ್ಮಿನ್ ಲೋಕೇ ॥

ವಿನಿಯೋಗ –

ಈ ಮಂತ್ರದಿಂದ, ಪಿತೃಗಳ ಹವಿಸ್ಸನ್ನು ಸ್ಪರ್ಶ ಮಾಡಬೇಕು ॥

ಅರ್ಥ –

ಎಲೈ ಹವಿಸ್ಸೇ, ಪೃಥಿವಿಯೇ ನಿನಗೆ ಪಾತ್ರೆಯು । ದ್ಯುಲೋಕವೇ ನಿನಗೆ ಮುಚ್ಚುವ ತಟ್ಟೆಯು । ಬ್ರಾಹ್ಮಣನ ಮುಖದಲ್ಲಿ ನಿನ್ನನ್ನು ಹೋಮ ಮಾಡುತ್ತಿದ್ದೇನೆ । ಇಲ್ಲಿ ಬ್ರಾಹ್ಮಣನೆಂದರೆ, ಪಿತೃದೇವತಾರೂಪವಾಗಿ ಆವಾಹನೆ ಮಾಡಲ್ಪಟ್ಟವರು । ಬ್ರಾಹ್ಮಣರ ಪ್ರಾಣ, ಅಪಾನಗಳ ತೃಪ್ತಿಗಾಗಿ ಆ ಪ್ರಾಣಾಪಾನಗಳಲ್ಲಿ ಈ ಹವಿಸ್ಸನ್ನು ಹೋಮಿಸುತ್ತಿದ್ದೇನೆ । ಎಲೈ ಅನ್ನರೂಪವಾದ ಹವಿಸ್ಸೇ, ನೀನು ಅಕ್ಷಯ್ಯ ಸ್ವರೂಪವಾಗಿದ್ದೀಯೇ । ಆದ್ದರಿಂದ ಈ ಆವಾಹಿತ ಪಿತೃದೇವತೆಗಳನ್ನು ಹಾಗೂ ಆವಾಹಿಸಲ್ಪಟ್ಟಂತಹ ಈ ಬ್ರಾಹ್ಮಣರನ್ನು ಕ್ಷಯವಾಗದಂತೆ ಕಾಪಾಡು । ಈ ಲೋಕದಲ್ಲಿ ಮಾತ್ರವಲ್ಲ, ಪರಲೋಕವಾದ ಪಿತೃಲೋಕದಲ್ಲೂ ಅಕ್ಷಯರೂಪದಿಂದ ಕಾಪಾಡು ।

* ಮಂತ್ರ –

3. ಇದಂ ವಿಷ್ಣುರ್ವಿಚಕ್ರಮೇ ತ್ರೇಧಾ ನಿದಧೇಪದಂ । ಸಮೂಢಮಸ್ಯಪಾಗ್ಂ ಸುರೇ ॥

ವಿನಿಯೋಗ –

ವೇದಿಯನ್ನು ಸ್ಫ್ಯ ದಿಂದ ಅಗೆದು, ಈ ಮಂತ್ರದಿಂದ ಪ್ರೋಕ್ಷಣೆಮಾಡಿ ಹೋಮ ಮಾಡಬೇಕು ॥

ಅರ್ಥ –

ವಿಷ್ಣುವು ತ್ರಿವಿಕ್ರಮರೂಪವನ್ನು ತಾಳಿ, ತನ್ನ ೩ ಪಾದಗಳಿಂದ ಸಕಲ ಮೂರು ಲೋಕಗಳನ್ನೂ ಆಕ್ರಮಿಸಿಕೊಂಡನು । ಆ ೩ ಲೋಕಗಳೂ ಕೂಡ ಇವನ ಪಾದಧೂಳಿಯಲ್ಲಿ

ಸಂಪೂರ್ಣವಾಗಿ ಅಡಕವಾಗಿವೆ । ಎಂದರೆ – ಭಗವಂತನ ಪಾದಧೂಳಿಯೇ ಈ ೩ ಲೋಕಗಳು ॥

* ಮಂತ್ರ –

4. ಊರ್ಜ್ಜಂ ವಹಂತೀರಮೃತಂ ಘೃತಂ ಪಯಃ ಕೀಲಾಲಂ ಪರಿಸ್ರುತಂ ಸ್ವಧಾಸ್ತ ತರ್ಪಯತ ಮೇ ॥ (ಪ್ರೇತಂ) ॥

ಅರ್ಥ –

ಎಲ್ಲೈ ಪಿತೃದೇವತೆಗಳೇ, ನೀವು ಬಲ ಮತ್ತು ಓಜಸ್ಸುಳ್ಳವರಾಗಿದ್ದೀರಿ । ಅಂತಹ ನಿಮಗೆ ಬಲ ಮತ್ತು ಓಜಸ್ಸಿನಿಂದ ಕೂಡಿದ ಅಮೃತಸ್ವರೂಪವಾದಂತಹ ಅತ್ಯಂತರುಚಿಕರವಾದ ನೀರಿನಂತಿರುವ ತುಪ್ಪದಿಂದ ಅಥವಾ ತುಪ್ಪದಂತಿರುವ ನೀರಿನಿಂದ ಕೂಡಿದಂತಹ ನಮ್ಮ ಜೀವನ ರೂಪವಾದ ನೀರನ್ನು ನಿಮಗೆ ತೃಪ್ತಿಯನ್ನುಂಟು ಮಾಡಲು ಇದನ್ನು ಅರ್ಪಿಸುತ್ತಿದ್ದೇನೆ । ಇದು ಜಗತ್ತಿನ ಎಲ್ಲಕಡೆಯಲ್ಲೂ ವ್ಯಾಪ್ತವಾಗಿದೆ । ಇದನ್ನು ತಾವು ಸ್ವೀಕರಿಸಿ ನಮಗೆ ತೃಪ್ತಿಯನ್ನೂ, ಸಮೃದ್ಧಿಯನ್ನೂ ಕೊಡುವವರಾಗಿರಿ ॥

ಎರಡನೇದಿನದ ವಿಧಿಗಳಲ್ಲಿ ಬಳಸುವ ಮಂತ್ರಗಳು

* ಅಸ್ಥಿಸಂಚಯನ(ಮೂಳೆಸಂಗ್ರಹ) ಮಂತ್ರಗಳು –

1. ಓಂ ಯಂ ತೇ ಅಗ್ನಿಮಮಂಥಾಮ ವೃಷಭಾಯೇವ ಪಕ್ತವೇ । ಇಮಂತಗ್ಂ ಶಮಯಾಮಸಿ ಕ್ಷೀರೇಣ ಚೋದಕೇನ ಚ ॥

ವಿನಿಯೋಗ (ಅನಾಹಿತಾಗ್ನಿ) –

ದಹನದಿನದಿಂದ, ೨ ನೇ – ೩ ನೇ – ೫ ನೇ ಅಥವಾ ೭ ನೇ ದಿನಗಳಲ್ಲಿ, ಅಸ್ಥಿಸಂಚಯನವನ್ನು ಮಾಡಬೇಕು. ಆ ಸಂಪೂರ್ಣವಾಗಿ ಸುಟ್ಟ ಶರೀರದ(ಬೂದಿ)

ಮೇಲೆ, ಹಾಲುಮಿಶ್ರಿತ ನೀರಿನಿಂದ, ಅತ್ತಿಮರದ ಎಲೆಯಿರುವ ಕಡ್ಡಿಯಿಂದ ಚೆನ್ನಾಗಿ ಪ್ರೋಕ್ಷಿಸಬೇಕು, ಈ ೫ ಮಂತ್ರಗಳಿಂದ ॥

ಅರ್ಥ –

ಎಲೈ ಮೃತ ಶರೀರವೇ, ನಿನ್ನ ಪಕ್ವತೆಗಾಗಿ ಹೇಗೆ ಹೋರಿಯನ್ನು ಪಶುಬಂಧಯಾಗದಲ್ಲಿ ಪಕ್ವಮಾಡಲು(ಆಹುತಿಗಾಗಿ), ಅಗ್ನಿಯ ಮಥನ(ಜ್ವಾಲೆಯನ್ನು) ಮಾಡುತ್ತೇವೆಯೋ (ಬೇಯಿಸುವುದಕ್ಕಾಗಿ) ಹಾಗೇ, ಈ ಅಗ್ನಿಯನ್ನು ಈ ಹಾಲುಮಿಶ್ರಿತ ನೀರಿನಿಂದ ಶಮನಗೊಳಿಸುತ್ತೇವೆ(ವಿಲೋಮ ಉದಾಹರಣೆ) ॥

* ಮಂತ್ರ –

2. ಓಂ ಯಂ ತ್ವಮಗ್ನೇ ಸಮದಹಸ್ತ್ವಮುನಿರ್ವಾಪಯಾ ಪುನಃ । ಕ್ಯಾಂಬೂರತ್ರ ಜಾಯತಾಂ ಪಾಕದೂರ್ವಾ ವ್ಯಲ್ಕಶಾ ॥

ಅರ್ಥ (ಅನಾಹಿತಾಗ್ನಿ) –

ಎಲೈ ಅಗ್ನಿಯೇ, ಯಾವ ನೀನು ಮೃತ ದೇಹವನ್ನು ಚೆನ್ನಾಗಿ ಸುಟ್ಟಿದ್ದೀಯೋ ಅಂತಹಾ ನೀನೇ ಈ ದಹನಸ್ಥಾನದಿಂದ ಮತ್ತೆ ಹಿಂತಿರುಗಿ ಹೋಗು. ಈ ಸ್ಥಾನದಲ್ಲಿ ನೀರಿನಿಂದ ಕೂಡಿದ ಕೆಲವು ಸಸ್ಯಗಳು ಹಾಗೂ ಸಣ್ಣದೂರ್ವೆಗಳಿಂದ ಕೂಡಿದ, ಸಸ್ಯಗಳು ಹಾಗೂ ವಿವಿಧ ಶಾಖೆಗಳಿಂದ ಕೂಡಿದ ಮರಗಳು ಹುಟ್ಟಿಕೊಳ್ಳಲಿ ॥

* ಮಂತ್ರ –

3. ಓಂ ಶೀತಿಕೇ ಶೀತಿಕಾವತಿ ಹ್ಲಾದುಕೇ ಹ್ಲಾದುಕಾವತಿ । ಮಂಡೂಕ್ಯಾ ಸುಸಂಗಮಯೇಮಗ್ನ್ಸ್ವಗ್ನಿಗ್ಂ ಶಮಯ ॥

ಅರ್ಥ (ಅನಾಹಿತಾಗ್ನಿ) –

ಶೀತವಾದ ನೀರಿನಿಂದ ಕೂಡಿದ ಭೂಭಾಗವು, ಶೀತಿಕೆಯು । ಆಹ್ಲಾದಕರವಾದ ಹಾಲಿನಿಂದ ಕೂಡಿದ ಭೂಭಾಗವು ಹ್ಲಾದಿಕೆಯು । ಅಂತಹ ಶೀತಿಕ ಭೂಮಿಯೇ

ಶೀತಿಕಾಯುಕ್ತವಾದ ಸ್ಥಾನದಲ್ಲಿ ಹಾಗೆಯೇ ಎಲೈ ಹ್ಲಾದುಕೆಯೇ ಹ್ಲಾದಯುಕ್ತವಾದ ಸ್ಥಾನದಲ್ಲಿ ಕಪ್ಪೆಯು ಈಜುವುದಕ್ಕೆ ಯೋಗ್ಯವಾದ ನೀರಿನಲ್ಲಿ (ಅಷ್ಟು ಪ್ರಮಾಣದ ನೀರನ್ನು ಅಲ್ಲಿ ಹಾಕಬೇಕು)ಈ ಪ್ರೇತದೇಹವನ್ನು ಒಂದುಗೂಡಿಸು. ಹಾಗೂ ಈ ಅಗ್ನಿಯನ್ನು ಚೆನ್ನಾಗಿ ಶಾಂತಿಗೊಳಿಸು ॥

* ಮಂತ್ರ –

4. ಓಂ ಶಂ ತೇ ಧನ್ವನ್ಯಾ ಆಪಃಶಮುತೇ ಸಂತ್ವನೂಕ್ಯಾಃ । ಶಂ ತೇ ಸಮುದ್ರಿಯಾ ಆಪಃಶಮುತೇ ಸಂತು ವರ್ಷ್ಯಾಃ ॥

ಅರ್ಥ(ಅನಾಹಿತಾಗ್ನಿ) –

ಎಲೈ ಮೃತನೇ, ಮರುದೇಶದಲ್ಲಿ, ಇರುವ ಧನ್ವತೀ ಎಂಬ ಹೆಸರಿನ ಅಪ್(ನೀರು), ನಿನಗೆ ಅಗ್ನಿಯ ತಾಪವನ್ನು ಹೋಗಲಾಡಿಸಿ, ಸುಖವನ್ನು ಉಂಟುಮಾಡಲಿ । ಎಲೈ ಮೃತನೇ ಅನೂಪದೇಶದ ಅನೂಕೀ ಎಂಬ ನೀರು ನಿನಗೆ ಸುಖವನ್ನುಂಟುಮಾಡಲಿ । ಹಾಗೆಯೇ ಸಮುದ್ರದರೂಪವಾಗಿರುವ ನೀರು ನಿನಗೆ ಸುಖವನ್ನುಂಟುಮಾಡಲಿ. ಹಾಗೆಯೇ ಮಳೆಯ ನೀರೂ ನಿನಗೆ ಸುಖವನ್ನುಂಟುಮಾಡಲಿ ॥

* ಮಂತ್ರ –

5. ಓಂ ಶಂ ತೇ ಸ್ರವಂತೀಸ್ತನುವೇ ಶಮು ತೇ ಸಂತು ಕೂಪ್ಯಾಃ । ಶಂ ತೇ ನೀಹಾರೋ ವರ್ಷತು ಶಮು ಪೃಷ್ವಾsವಶೀಯತಾಮ್ ॥

ಅರ್ಥ (ಅನಾಹಿತಾಗ್ನಿ) –

ನದಿಗಳ ನೀರು, ಎಲೈ ಮೃತನೇ ನಿನಗೆ ಸುಖವನ್ನುಂಟುಮಾಡಲಿ, ಬಾವಿಗಳ ನೀರು ನಿನಗೆ ಸುಖವನ್ನುಂಟುಮಾಡಲಿ. ಹಿಮರೂಪವಾದ ನೀರು ನಿನಗೆ ಮಳೆಯಂತೆ ಸುಖಕ್ಕಾಗಿ ಸುರಿಯಲಿ, ಜಲಬಿಂದುಗಳು, ನಿನ್ನ ಸುಖಕ್ಕಾಗಿ ಕೆಳಗೆ ಬೀಳಲಿ ॥

* ಮಂತ್ರ –

6. ಓಂ ಅವಸೃಜ ಪುನರಗ್ನೇ ಪಿತೃಭ್ಯೋ ಯಸ್ತ ಆಹುತಶ್ಚರತಿ ಸ್ವಧಾಭಿಃ ।
ಆಯುರ್ವಸಾನಉಪಯಾತು ಶೇಷಗ್ಂ ಸಂಗಚ್ಛತಾಂ ತನುವಾ ಜಾತವೇದಃ ॥

ವಿನಿಯೋಗ(ಅನಾಹಿತಾಗ್ನಿ) –

ಆ ಅಸ್ಥಿಗಳ ಮೇಲಿರುವ ಆರಿದಕೆಂಡಗಳನ್ನು ದಕ್ಷಿಣಕ್ಕೆ ಸರಿಸಿ, ೩ ಸ್ರುವಾಹುತಿಗಳನ್ನು ಈ ಕೆಳಗಿನ ೩ ಮಂತ್ರಗಳಿಂದ ಕೊಡಬೇಕು ॥

ಅರ್ಥ –

ಎಲೈ ಅಗ್ನಿಯೇ, ಯಾವ ಮೃತ ಯಜಮಾನನು ಚಿತೆಯಲ್ಲಿ ಮಂತ್ರಪೂರ್ವಕವಾಗಿ ಹವಿಸ್ಸಿನ ರೂಪದಲ್ಲಿ ಅರ್ಪಿತನಾಗಿದ್ದಾನೋ, ಆ ಮೃತಯಜಮಾನನು ಸ್ವಧಾಕಾರದಿಂದ ಕೊಟ್ಟ ನೀರಿನ ಜೊತೆ ಇರುತ್ತಾನೆ. ಆ ಮೃತ ಯಜಮಾನನನ್ನು ಪಿತೃಗಳ ಜೊತೆ ಸೇರಲು ಮತ್ತೆ ಪ್ರೇರೇಪಿಸು. ಈ ಮೃತನು ಆಯಸ್ಸಿನಿಂದ ಮುಚ್ಚಲ್ಪಟ್ಟವನಾಗಿ, ಉಳಿದ ಭೋಗಗಳನ್ನು ಎಲೈ ಜಾತವೇದನೇ(ಅಗ್ನಿ), ಬೇರೇ ಶರೀರದಲ್ಲಿ ಸೇರಿಕೊಂಡು, ಅನುಭವಿಸುವಂತಾಗಲಿ ॥

* ಮಂತ್ರ –

7. ಓಂ ಸಂಗಚ್ಛಸ್ವ ಪಿತೃಭಿಸ್ಸಗ್ಂ ಸ್ವಧಾಭಿಸ್ಸಮಿಷ್ಟಾಪೂರ್ತೇನ ಪರಮೇ ವ್ಯೋಮನ್ ।
ಯತ್ರ ಭೂಮ್ಯೈ ವೃಣಸೇ ತತ್ರ ಗಚ್ಛ ತತ್ರ ತ್ವಾ ದೇವಸ್ಸವಿತಾ ದಧಾತು ॥

ಅರ್ಥ(ಅನಾಹಿತಾಗ್ನಿ) –

ಎಲೈ ಮೃತ ಯಜಮಾನನೇ ನೀನು ಪಿತೃಗಳ ಜೊತೆ ಒಂದಾಗು. ಹಾಗೂ ಸ್ವಾಧಾಕಾರದಿಂದ ಕೊಟ್ಟ ಹವಿಸ್ಸುಗಳ ಜೊತೆ ಒಂದಾಗು. ಉತ್ಕೃಷ್ಟವಾದಂತಹ ಶ್ರೌತಸ್ಮಾರ್ತಗಳ ಫಲರೂಪವಾದ ಸ್ವರ್ಗವನ್ನು ಹೊಂದು. ಭೂಮಿಯಲ್ಲಿ ಯಾವ

ದೇಶದಲ್ಲಿ(ಸ್ಥಾನದಲ್ಲಿ) ಹುಟ್ಟಲು ಇಚ್ಛೆಪಡುತ್ತೀಯೋ ಅದು ನಿನಗೆ ಪ್ರಾಪ್ತವಾಗಲಿ. ಸವಿತೃದೇವನು ಆ ಸ್ಥಾನವನ್ನು ನಿನಗೆ ಉಂಟಾಗುವಂತೆ ಮಾಡಲಿ ॥

* ಮಂತ್ರ –

8. ಓಂ ಯತ್ತೇ ಕೃಷ್ಣಶ್ಶಕುನ ಆ ತುತೋದ ಪಿಪೀಲಸ್ಸರ್ಪ ಉತ ವಾ ಶ್ವಾಪದಃ ।
ಅಗ್ನಿಷ್ಟದ್ವಿಶ್ವಾದನೃಣಂ ಕೃಣೋತು ಸೋಮಶ್ಚ ಯೋ ಬ್ರಾಹ್ಮಣಮಾವಿವೇಶ ॥

ಅರ್ಥ –

ಎಲೈ ಮೃತ ಯಜಮಾನನೇ, ನಿನ್ನ ದೇಹದಲ್ಲಿ ಪಕ್ಷಿವಿಶೇಷವು ಸ್ವಲ್ಪ ನೋವನ್ನು ಉಂಟುಮಾಡಿದೆಯೋ, ಅಥವಾ ಇರುವೆ ಮುಂತಾದವುಗಳು ಅಥವಾ ಸರ್ಪ ಮುಂತಾದವುಗಳು ಏನು ನೋವುಂಟು ಮಾಡಿವೆಯೋ, ಅಥವಾ ಬೇರೇ ಪ್ರಾಣಿಗಳು ನಿನ್ನ ದೇಹವನ್ನು ತಿನ್ನಲು ಬಯಸಿ, ಏನು ನೋವುಂಟು ಮಾಡಿವೆಯೋ, ಅದೆಲ್ಲವನ್ನೂ ಈ ಅಗ್ನಿದೇವನು ನಿನ್ನ ನೋವಾದ ಅಂಗಗಳಿಂದ ನೋವನ್ನು ಪರಿಹರಿಸಿ, ನೋವಿಲ್ಲದಂತೆ ಮಾಡಲಿ. ಯಾವ ಸೋಮನು ಈ ಬ್ರಾಹ್ಮಣನ ಶರೀರದಲ್ಲಿ ಯಾಗಕಾಲದಲ್ಲಿ ಪ್ರವೇಶಮಾಡಿದ್ದಾನೋ ಅವನೂ ಕೂಡ ನಿನ್ನ ಎಲ್ಲಾ ಅಂಗಗಳ ನೋವನ್ನು ಹೋಗಲಾಡಿಸಲಿ ॥

* ಮಂತ್ರ –

9. ಓಂ ಉತ್ತಿಷ್ಠಾತಸ್ತನುವಗ್ಂ ಸಂಭರಸ್ವ ಮೇಹ ಗಾತ್ರಮವಹಾ ಮಾ ಶರೀರಮ್ ।
ಯತ್ರ ಭೂಮ್ಯೈ ವೃಣಸೇ ತತ್ರ ಗಚ್ಛ ತತ್ರ ತ್ವಾ ದೇವಸ್ಸವಿತಾ ದಧಾತು ॥

ವಿನಿಯೋಗ –

ನಂತರ ಸಂಪೂರ್ಣಸುಟ್ಟಂತಹ ಈ ಮೃತನನ್ನು, ಕರ್ತೃವು ತನಗೆ ಪ್ರೋಕ್ಷಿಸಿಕೊಂಡಂತಹ ಈ ಉದಕುಂಭಗಳಿಂದ(ನೀರಿನಪಾತ್ರೆ) ನೀರನ್ನು ಪ್ರೋಕ್ಷಿಸಿ, ಯಾವ ಈ

ಮೃತನಿಗೆಸಂಬಂಧಪಟ್ಟ ಸ್ತ್ರೀಯರಲ್ಲಿ ಯಾರು ಮುಖ್ಯಳೋ, ಅವಳು ಎಡಕೈಯಲ್ಲಿ ನೀಲಿ, ಕೆಂಪು ದಾರಗಳನ್ನು ಕಟ್ಟಿಕೊಂಡು, ಕಲ್ಲಿನ ಮೇಲೆ ನಿಂತುಕೊಂಡು(ಅಸ್ಥಿಗಳನ್ನು ಆಯುವ ಜಾಗದಲ್ಲಿ ಕಲ್ಲುಗಳನ್ನು ಹಾಕಿಕೊಂಡು ಅದರಮೇಲೆ ನಿಂತು), ಉತ್ತರಣೆ ಕಡ್ಡಿಗಳಿಂದ ಒಮ್ಮೆ ಗುಡಿಸಿ, ಮೃತನ ಹಲ್ಲಿನಿಂದ ಅಥವಾ ತಲೆಯಿಂದಲೋ ಕ್ರಮವಾಗಿ ಈ ೨ ಮಂತ್ರಗಳಿಂದ ಅಸ್ಥಿಗಳನ್ನು ಸಂಗ್ರಹಿಸಬೇಕು ॥

ಅರ್ಥ –

ಎಲೈ ಮೃತನೇ, ಈ ದಹನಸ್ಥಾನದಿಂದ ಮೇಲೇಳು, ಎದ್ದು ಶರೀರವನ್ನು ಸಂಪಾದಿಸಿಕೋ. ಈ ದಹನದೇಶದಲ್ಲಿ ಒಂದು ಅಂಗವನ್ನೂ ಬಿಡಬೇಡ. ಹಾಗೆಯೇ ಶರೀರವನ್ನೂ ಬಿಡದಂತೆ ಶರೀರವನ್ನು ಸಂಪಾದಿಸಿಕೋ. ಭೂಮಿಯಲ್ಲಿ ಯಾವ ಸ್ಥಳವಿಶೇಷದಲ್ಲಿ ಹುಟ್ಟಲು ಇಚ್ಛೆಪಡುತ್ತೀಯೋ, ಆ ಸ್ಥಳವನ್ನು ಹೊಂದು. ಸವಿತೃದೇವನು ಆ ಸ್ಥಳಕ್ಕೆ ಹೋಗುವಂತೆ ಪ್ರೇರೇಪಿಸಲಿ ॥

* ಮಂತ್ರ –

10. ಓಂ ಇದಂ ತ ಏಕಂ ಪರ ಊತ ಏಕಂ ತೃತೀಯೇನ ಜ್ಯೋತಿಷಾ ಸಂವಿಶಸ್ವ ।
ಸಂ ವೇಶನಸ್ತನುವೈ ಚಾರುರೇಧಿ ಪ್ರಿಯೋ ದೇವಾನಾಂ ಪರಮೇ ಸಧಸ್ಥೇ ॥

ಅರ್ಥ –

ಎಲೈ ಮೃತನೇ, ನಿನಗೆ ಸಂಬಂಧಿಸಿದ ಈ ಒಂದು ಅಸ್ಥಿಯು ಮತ್ತು ಮುಂದಿರುವಂತಹ ನಿನಗೆ ಸಂಬಂಧಿಸಿದ, ಇನ್ನೊಂದು ಅಸ್ಥಿಯು ಹಾಗೂ ಈ ಎರಡು ಅಸ್ಥಿಗಳ ಸಂಖ್ಯೆಯನ್ನು ಅನುಸರಿಸಿ, ನಿನಗೆ ಸಂಬಂಧಿಸಿದ ೩ ನೇ ಅಸ್ಥಿಯಿದೆಯೋ, ಇವುಗಳಿಂದ ಒಡಗೂಡಿ ನೀನು, ಜ್ಯೋತಿರೂಪವಾದಂತಹ ಸೂರ್ಯನಲ್ಲಿ ಒಂದಾಗು.ಇನ್ನೊಂದು ಶರೀರವನ್ನು ಪಡೆಯಲು ಈ ಎಲ್ಲಾ ಅಸ್ಥಿಗಳನ್ನೂ ಒಂದುಗೂಡಿಸುವವನಾಗಿ, ಸುಂದರವಾಗಿ ಶರೀರವನ್ನು ಪಡೆದುಕೋ. ಅತ್ಯುನ್ನತವಾದಂತಹ ಸ್ಥಾನವನ್ನು ಪಡೆದು, ದೇವತೆಗಳಿಗೆ ಪ್ರಿಯನಾಗು ॥

* ಮಂತ್ರ –

11. ಓಂ ಉತ್ತಿಷ್ಠ ಪ್ರೇಹಿ ಪ್ರದ್ರವೌಕಃ ಕೃಣುಷ್ವ ಪರಮೇ ವ್ಯೋಮನ್ । ಯಮೇನ ತ್ವಂ ಯಮ್ಯಾ ಸಂವಿದಾನೋತ್ತಮಂ ನಾಕಮಧಿರೋಹೇಮಮ್ ॥

ವಿನಿಯೋಗ –

ನಂತರ, ಈ ಸಂಗ್ರಹಿಸಿದ ಅಸ್ಥಿಗಳನ್ನು ನೀರಿನಿಂದ ತೊಳೆದು, ಕಲಶದಲ್ಲೋ ಅಥವಾ ಬಟ್ಟೆಯಲ್ಲೋ ಸುತ್ತಿ, ಅದನ್ನು ಕೆಳಗಿನ ಮಂತ್ರದಿಂದ ತೆಗೆದುಕೊಂಡು ನದೀ ಬಳಿಗೆ ಹೋಗಬೇಕು ॥

ಅರ್ಥ –

ಎಲೈ ಮೃತನೇ ಈ ದಹನಸ್ಥಾನದಿಂದ ಮೇಲೆದ್ದು, ಅತ್ಯಂತ ವೇಗದಿಂದ ಹೋಗು. ಹೋಗಿ ಉತ್ಕೃಷ್ಟವಾದಂತಹ ಸ್ವರ್ಗವನ್ನು ಸೇರು. ಯಮ ಮತ್ತು ಯಮಪತ್ನಿಯರೊಡನೆ ಐಕ್ಯಮತ್ಯವನ್ನು ಹೊಂದಿದವನಾಗಿ ಈ ಉತ್ತಮ ಸ್ವರ್ಗಲೋಕದ ಭೋಗವನ್ನು ಅನುಭವಿಸು ॥

* ಮಂತ್ರ –

12. ಓಂ ಅಶ್ಮನ್ವತೀ ರೇವತೀರ್ಯದ್ವೈ ದೇವಸ್ಯ ಸವಿತುಃ ಪವಿತ್ರಂ ಯಾ ರಾಷ್ಟ್ರಾತ್ಪನ್ನಾದುದ್ವಯಂ ತಮಸಸ್ಪರಿ ಧಾತಾ ಪುನಾತು ॥

ವಿನಿಯೋಗ –

ಬನ್ನಿಮರದ ಶಾಖೆಯಲ್ಲೋ, ಅಥವಾ ಪಲಾಶಶಾಖೆಯಲ್ಲೋ ಆ ಅಸ್ಥಿಕಲಶವನ್ನಿಟ್ಟು, ಆ ಅಸ್ಥಿಕಲಶದ ಹಿಂದೆ ೩ ಗುಂಡಿಗಳನ್ನು ಅಗೆದು, ಅದರಲ್ಲಿ ಕಲ್ಲು, ಮರಳನ್ನು ಹಾಕಿ, ನೀರನ್ನು ತುಂಬಿಸಿ, ಮಣ್ಣನ್ನು ದೇಹಕ್ಕೆ ತಿಕ್ಕಿಕೊಂಡು ಈ ಹಿಂದೆ ಹೇಳಿರುವಂತಹ ೫ ಮಂತ್ರಗಳಿಂದ ಸ್ನಾನ ಮಾಡಬೇಕು ಎಂದು ಕೆಲವರು ಹೇಳುತ್ತಾರೆ ॥

* ಮಂತ್ರ –

13. ಓಂ ಅಸ್ಮಾತ್ತ್ವಮಧಿಜಾತೋಽಸ್ಯಯಂ ತ್ವದಧಿಜಾಯಾತಾಂ । ಅಗ್ನಯೇ ವೈಶ್ವಾನರಾಯ ಸುವರ್ಗಾಯ ಲೋಕಾಯ ಸ್ವಾಹಾ ॥

ವಿನಿಯೋಗ –

ಸೋಮಯಾಜಿಗಳಿಗೆ ಪುನರ್ದಹನಾಂತವಾಗಿ ಕರ್ಮವನ್ನು ಮಾಡಬೇಕು । ಪುನರ್ದಹನಕರ್ಮವೆಂದರೆ – ಸುಟ್ಟದೇಹದ ಮೇಲಿರುವ ಅಂಗಾರ(ಕೆಂಡ)ಗಳನ್ನು ದಕ್ಷಿಣಕ್ಕೆ ಸರಿಸಿ, ೩ ರಾತ್ರಿ ಅಗ್ನಿಯನ್ನು ಉರಿಸಿ, ನಂತರ ದಹನದಂತೆ ಕರ್ಮ ಮಾಡಬೇಕು । ಆಮೇಲೆ ಅಗ್ನಿಯನ್ನು ಉಪಸಮಾಧಾನ(ಉರಿಸಿ) ಮಾಡಿ, ಅಗ್ನಿಗೆ ಪರಿಸ್ತರಣವನ್ನು ಹಾಕಿ, ಅಗ್ನಿಯ ಹಿಂದೆ ದರ್ಭೆಗಳನ್ನು ಹಾಕಿ, ಅದರಮೇಲೆ ಕೃಷ್ಣಾಜಿನವನ್ನು ಶಮ್ಯೆ ಮತ್ತು ದೃಷದುಪಲ ಇವುಗಳಿಂದ ಮೃತಶರೀರನ ಅಸ್ಥಿಗಳನ್ನು ಚೂರುಚೂರಾಗಿ(ಹಿಟ್ಟಾಗಿ) ಮಾಡಿ ಆಜ್ಯಕುಂಭದಲ್ಲಿ ಅದನ್ನು ಸೇರಿಸಿ, ಅಗ್ನಿಹೋತ್ರಹವಣಿಯಿಂದ ಈ ಮಂತ್ರದಿಂದ ಹೋಮಿಸುತ್ತಾನೆ ॥

ಅರ್ಥ –

ಎಲೈ ಅಗ್ನಿಯೇ, ಈ ಮೃತಯಜಮಾನನಿಂದ ನೀನು ಉತ್ಪತ್ತಿಯಾಗಿದ್ದೀಯೇ(ಈ ಮೃತಯಜಮಾನನು, ಜೀವಿಸಿದಾಗ ಮಾಡಿದ ಕರ್ಮಾನುಷ್ಠಾನದಿಂದ ನಿನ್ನನ್ನು ಸ್ವಾಮಿಯಾಗಿ ಪಡೆದಿದ್ದಾನೆ), ಆದ್ದರಿಂದ ಫಲವನ್ನು ಕೊಡುವ ಸಮಯದಲ್ಲಿ ಈ ಯಜಮಾನನು ಮತ್ತೆ ನಿನ್ನಿಂದ ಉತ್ಪತ್ತಿಯನ್ನು ಹೊಂದಲಿ(ಈ ಸ್ವರ್ಗಲೋಕದಲ್ಲಿ ಯಜಮಾನನನ್ನು ಉತ್ಪತ್ತಿಮಾಡು) । ಈ ಉತ್ಪತ್ತಿಗಾಗಿ ಎಲ್ಲಾ ಮನುಷ್ಯರಿಗೂ ಹಿತವನ್ನುಂಟುಮಾಡುವ ವೈಶ್ವಾನರಾಗ್ನಿಯಾದ ನಿನಗೆ ಈ ಹವಿಸ್ಸು ಅರ್ಪಿತವಾಗಲಿ ॥

ಮಂತ್ರ –

14. ಓಂ ಯದ್ವೈ ದೇವಸ್ಯ ಸವಿತುಃ ಪವಿತ್ರಗ್ಂ ಸಹಸ್ರಧಾರಂ ವಿತತಮಂತರಿಕ್ಷೇ ।
ಯೇನಾಪುನಾದಿಂದ್ರಮನಾರ್ತಮಾರ್ತ್ಯೇ ತೇನಾಹಂ ಮಾಗ್ಂ ಸರ್ವತನುಂ ಪುನಾಮಿ ॥

ವಿನಿಯೋಗ –

ಅಗೆದ ಗುಂಡಿಗಳ ಹಿಂದೆ, ಎಲೆಯಿರುವ ಕೋಲುಗಳನ್ನು ಹುದುಗಿಸಿ, ಗಟ್ಟಿಯಲ್ಲದ ಹಗ್ಗವನ್ನು ತೋರಣದಂತೆ ಕಟ್ಟಿ, ಅದರೊಳಗೆ ಜ್ಞಾತಿಗಳು ಈ ಮಂತ್ರದಿಂದ ನುಸುಳಿ ಹೋಗಬೇಕು ॥

ಅರ್ಥ –

ಪ್ರೇರಕನಾದ ಸೂರ್ಯದೇವನಿಗೆ ಸಂಬಂಧಪಟ್ಟ, ಶುದ್ಧಿಗೆ ಕಾರಣವಾದ ಈ ಹಗ್ಗವೇನಿದೆಯೋ, ಅದು ಸಾವಿರಾರು ರಂಧ್ರಗಳಿರುವ ಆಕಾಶದಲ್ಲಿ ಹರಡಿಕೊಂಡಿದೆ. ಸೂರ್ಯರೂಪನಾದ ಈ ತೋರಣರೂಪದ ಹಗ್ಗದಿಂದ, ಇಂದ್ರನು ಬಹಳ ಹಿಂದಿನ ಕಾಲದಲ್ಲಿ ದುಃಖದಿಂದ ಮತ್ತೆ ದುಃಖವನ್ನು ಹೊಂದದಂತೆ ಪವಿತ್ರಗೊಳಿಸಲ್ಪಟ್ಟನು. ಅಂತಹ ಈ ತೋರಣರೂಪವಾದ ಹಗ್ಗದಿಂದ ಮೃತನ ಜ್ಞಾತಿಯಾದ ನಾನು ಸಂಪೂರ್ಣಶರೀರದಿಂದ ಶುದ್ಧಿಗೊಳಿಸಲ್ಪಡುವೆನು ॥

ಮಂತ್ರ –

15. ಓಂ ಯಾ ರಾಷ್ಟ್ರಾತ್ಪನ್ನಾದಪಯಂತಿ ಶಾಖಾ ಅಭಿಮೃತಾ ನೃಪತಿಮಿಚ್ಛಮಾನಾಃ ।
ಧಾತುಸ್ತಾಸ್ಸರ್ವಾಃ ಪವನೇನ ಪೂತಾಃ ಪ್ರಜಂಯಾಸ್ಮಾನ್ರಯ್ಯಾ ವರ್ಚಸಾ ಸಗ್ಂ
ಸೃಜಾಥ ॥

ವಿನಿಯೋಗ –

ಈ ಮಂತ್ರದಿಂದ, ಅಧ್ವರ್ಯುಕ್ರಮದಿಂದ ಎಲ್ಲರೂ ಕ್ರಮವಾಗಿ ಆ ತೋರಣದಲ್ಲಿ ನುಸುಳಿ ಹೋಗಬೇಕು(ಸ್ಮಶಾನಕ್ಕೆ ಬಂದಂತಹ ಎಲ್ಲರೂ), ಹಾಗೂ ಹಗ್ಗದ, ಒಳಗೆ ಯಾವ ಜ್ಞಾತಿಗಳು ನುಸುಳಿಹೋಗುತ್ತಾರೋ, ಅವರಲ್ಲಿ ಕೊನೆಯವನಾಗಿ ನುಸುಳಿಹೋಗುವ ದಹನ ಕರ್ತೃವು(ಮೃತನ ಮಗನು), ಎರಡು ಶಾಖೆಗಳನ್ನು ತೋರಣಸಹಿತವಾಗಿ ನುಸುಳಿದ ನಂತರ ಎಸೆಯಬೇಕು ॥

ಅರ್ಥ –

ಅನುಕ್ರಮವಾಗಿ, ಈ ಹಿಂದೆ ಸಮಾಜದಲ್ಲಿ ಮೃತರಾದ ಎಲ್ಲಾ ಮನುಷ್ಯರು, ತಮ್ಮ ಪಾಲನೆಯನ್ನು ಮತ್ತೂ ಯಜಮಾನಿಕೆಯನ್ನು ಇಚ್ಛೆಪಡುತ್ತಾ ಜೀವನವನ್ನು ನಡೆಸಿ, ಪ್ರಾಪ್ತವಾದ ರಾಷ್ಟ್ರದಿಂದ(ಪ್ರಾಂತ್ಯ/ಊರು), ತಮ್ಮ ಮರಣದ ಕಾರಣದಿಂದ, ಯಾವ ಶಾಖೆಗಳನ್ನು ತೊಲಗಿಸುತ್ತಾರೋ(ಎಸೆಯುತ್ತಾರೋ), ಆ ಶಾಖೆಗಳು ಶುದ್ಧಿಗೆ ಕಾರಣವಾದ ವಾಯುವಿನಿಂದ, ಪವಿತ್ರಗೊಳಿಸಲ್ಪಟ್ಟಿವೆ । ಅಂತಹಾ ಎಲ್ಲೈ ಶಾಖೆಗಳೇ ನಮ್ಮನ್ನು ನಮ್ಮ ಪ್ರಜೆಗಳಜೊತೆ ಒಂದುಗೂಡಿಸಿ ॥

ಮಂತ್ರ –

16. ಓಂ ಉದ್ವ್ಯಂ ತಮ॑ಸಸ್ಪರಿ ಪಶ್ಯಂ॑ತೋ ಜ್ಯೋ॒ತಿರು॑ತ್ತರಂ । ದೇ॒ವಂ ದೇ॒ವತ್ರಾ ಸೂ॒ರ್ಯಮ॑ಗ್ನ್ಮ ಜ್ಯೋ॒ತಿರು॑ತ್ತಮಮ್ ॥

ವಿನಿಯೋಗ –

ಈ ಮಂತ್ರವನ್ನು ಸೂರ್ಯನನ್ನು (ನೋಡುತ್ತಾ)ಉಪಸ್ಥಾನ ಮಾಡುತ್ತಾ ಹೇಳಬೇಕು ॥

ಅರ್ಥ –

ನಾವೆಲ್ಲರೂ, ಕತ್ತಲೆಯ(ಅಜ್ಞಾನ) ಆಚೆಗಿರುವ ಮತ್ತು ಕತ್ತಲೆಯನ್ನು(ಅಜ್ಞಾನವನ್ನು)

ನಾಶಪಡಿಸುವ ಉತ್ತಮವಾದ ಸೂರ್ಯನಿಗೆ ಸಂಬಂಧಪಟ್ಟ, ಆ ಜ್ಯೋತಿಯನ್ನು ನೋಡುತ್ತಾ, ದೇವತೆಗಳ ಮಧ್ಯೇ ಉತ್ತಮನಾದ ಸೂರ್ಯನ ಸಾಯುಜ್ಯವನ್ನು ಹೊಂದೋಣ ॥

ಮಂತ್ರ –

17. ಓಂ ಧಾತಾ ಪುನಾತು ಸವಿತಾಪುನಾತು । ಅಗ್ನೇಸ್ತೇಜಸಾ ಸೂರ್ಯಸ್ಯ ವರ್ಚಸಾ ॥

ವಿನಿಯೋಗ –

ಸ್ಮಶಾನ ಮತ್ತು ಚಿತೆಗಳನ್ನು ನೋಡದೇ, ಎಲ್ಲರೂ ಈ ಮಂತ್ರದಿಂದ ಸ್ನಾನ ಮಾಡುತ್ತಾರೆ ॥

ಅರ್ಥ –

ಜಗತ್ತಿನ ಸೃಷ್ಟಿಕರ್ತನಾದ ಪ್ರಜಾಪತಿಯು, ಅಗ್ನಿಗೆ ಸಂಬಂಧಿಸಿದ ತೇಜಸ್ಸಿನಿಂದ ನಮ್ಮನ್ನು ಶುದ್ಧಿಗೊಳಿಸಲಿ । ಹಾಗೆಯೇ ಪ್ರೇರಕದೇವನಾದ ಸವಿತೃದೇವನು ಸೂರ್ಯನಿಗೆ ಸಂಬಂಧಿಸಿದ ತೇಜಸ್ಸಿನಿಂದ ನಮ್ಮನ್ನು ಶುದ್ಧಿಗೊಳಿಸಲಿ ॥

****

****

ಅಪರಕರ್ಮದ ೧೦ – ೧೧ – ೧೨ ನೇ ದಿನಗಳ ದಶಾಃ, ಏಕೋದಿಷ್ಟ ಮತ್ತು ಸಪಿಂಡೀಕರಣ ಕರ್ಮಗಳ ವಿಚಾರಗಳನ್ನು ಮುಂದಿನ ಸಂಚಿಕೆಯಲ್ಲಿ ಕೊಡಲಾಗುತ್ತದೆ.

****

****

ಪ್ರತಿಗಳು ದೊರೆಯುವ ಸ್ಥಳಗಳು

1. **ಎ.ಸಿ. ಶಕ್ತಿಧರ ಶರ್ಮಾ**
   ಮೊ. : 9686497982, ಈ-ಮೇಲ್: acs.shimoga@gmail.com
   Karnataka Bank A/c. No. : 7322500102385001
   ಶಂಕರಮಠ ಶಾಖೆ, ಶಿವಮೊಗ್ಗ
   IFSC Code : KARB 0000745

2. **ವೇದಾಂತ ಬುಕ್‌ಹೌಸ್**
   ಉಮಾಟಾಕೀಸ್ ಪಕ್ಕ, ಬೆಂಗಳೂರು

3. **ಪ್ರಚೇತಾ ಬುಕ್‌ಹೌಸ್**
   ಹೋಟೆಲ್ ಶಾಂತಿಸಾಗರ್ ಬಿಲ್ಡಿಂಗ್, ಬುಲ್‌ಟೆಂಪಲ್ ರಸ್ತೆ, ಬೆಂಗಳೂರು

4. **ಶೃಂಗೇರಿ ಶಂಕರ ಮಠ**
   ಉಮಾಟಾಕೀಸ್ ಹತ್ತಿರ, ಶಂಕರಪುರಂ, ಬೆಂಗಳೂರು

5. **ರಾಜಾರಾಮ್ ಬುಕ್‌ಹೌಸ್**
   ಶಿವಮೊಗ್ಗ

6. **ಉಡುಪಿ ಸ್ಟೋರ್ಸ್**
   ಗಾಂಧಿನಗರ, ಶಿವಮೊಗ್ಗ

ಈ ಗ್ರಂಥದಲ್ಲಿರುವ, ಅಪರಸೂತ್ರಗಳಾಗಲೀ – ಭಾಷ್ಯಗಳಾಗಲೀ – ವೈದ್ಯನಾಥೀಯಸ್ಮೃತಿಯಾಗಲೀ – ಯಲ್ಲಾಜೀಯಧರ್ಮಶಾಸ್ತ್ರವಾಗಲೀ ಮತ್ತು ಸಾಯಣಾಚಾರ್ಯರ ಮಂತ್ರಭಾಷ್ಯವಾಗಲೀ, **ನಮ್ಮ ಕನ್ನಡಭಾಷೆಗೆ** ಈವರೆಗೂ ಸಹಾ ಬಂದಿರಲಿಲ್ಲ. ಮತ್ತೊಂದು ದಾಖಲೆಯೆಂದರೆ, ಇವಿಷ್ಟೂ ಅಮೂಲ್ಯ ವಿಷಯಗಳು **"ಒಂದೇ ಗ್ರಂಥ ಕೈಪಿಡಿಯಲ್ಲಿ"** ಪ್ರಪಂಚದ ಯಾವುದೇ ಭಾಷೆಗಳಲ್ಲಿಯೂ ಪ್ರಕಟವಾಗಿಲ್ಲ. ಈ ದೃಷ್ಟಿಯಲ್ಲಿ ನಮ್ಮ ಈ ಗ್ರಂಥರತ್ನವು ಅತ್ಯಂತ ಮಹತ್ವಪೂರ್ಣದ್ದಾಗಿದ್ದು, ಸಾರಸ್ವತ ವಿದ್ವತ್ ಲೋಕದಲ್ಲಿ ಅತಿದೊಡ್ಡ ಮೈಲಿಗಲ್ಲಾಗಿದೆ.

ಎರಡುವರ್ಷಗಳ ಹಿಂದೆ, ನಮ್ಮದೇ ಪ್ರಕಟಣೆಯಾದ ಸಂಸ್ಕಾರತರಂಗಿಣೀ 12 + 13 ನೇ ಪುಷ್ಪಗಳು ಈ ವಿಷಯಗಳ ಮೊದಲನೆಯ ಭಾಗವಾಗಿದ್ದು, ಇದೀಗ ಸಂಸ್ಕಾರತರಂಗಿಣೀ ಸರಣಿಯ 15ನೆಯ ಸಂಚಿಕೆಯಲ್ಲಿ **"ಪಿತೃಮೇಧಕಾಂಡ"** ಎಂಬ ಹೆಸರಿನಿಂದ 2 ನೆಯ ಭಾಗವಾಗಿ ಹೊಸ ವಿಷಯಗಳೊಂದಿಗೆ ಈ ಗ್ರಂಥರತ್ನವು ಪ್ರಕಟಗೊಳ್ಳುತ್ತಿದೆ.

ಇಂತಹ ಅವಕಾಶವನ್ನು ನಮಗೆ ದೊರಕಿಸಿಕೊಟ್ಟಂತಹ ಪೂಜ್ಯ ಅವಧೂತ ಮಹಾತ್ಮರಾದ ಶ್ರೀ ವೆಂಕಟಾಚಲ ಸದ್ಗುರುಗಳ ಸಂಕಲ್ಪವೇ ಈ ಎಲ್ಲಾ ಆಗುಹೋಗುಗಳಿಗೂ ಮೂಲ ಕಾರಣವು.

ಇಂತಹ ಗ್ರಂಥವನ್ನು ಜ್ಞಾನಮಾರ್ಗದ ಜಿಜ್ಞಾಸುಗಳು, ಋಷಿವಾಕ್ಯದಲ್ಲಿ ಗೌರವವನ್ನು ಹೊಂದಿರುವವರು ಹಾಗೂ ಆಸಕ್ತರು ಸಂಗ್ರಹಿಸಿ ತನ್ಮೂಲಕ ಜ್ಞಾನಮಾರ್ಗದ ಈ ಕೆಲಸಕ್ಕೆ ಸಹಕರಿಸ ಬೇಕಾಗಿ ವಿನಂತಿಸುತ್ತೇವೆ.

ಶ್ರೀ ಚೈತನ್ಯ ಗುರುನಾಥ ಪ್ರಕಾಶನ
ವೇದಬ್ರಹ್ಮ ಶ್ರೀ ಎ.ಸಿ. ಭಕ್ತಿಧರ ಶರ್ಮಾ
ಸಂಪಾದಕರು, ಅನುವಾದಕರು ಮತ್ತು ಪ್ರಕಾಶಕರು

ಶಿವಮೊಗ್ಗ
ಮೊ : 9686497982

₹ 210/-